ಪುಸ್ತಕ ಪ್ರಪಂಚ

ಅಕ್ಟೋಬರ್ ೧೯೮೭



ದಾಸ್ತೋವಸ್ಕಿ : ವಿಶೇಷ ಸಂಚಿಕೆ

ಪುಸ್ತಕ ಪ್ರಪಂಚ
ಮಾಸಿಕ

ಪರಿವಿಡಿ

ಪುಸ್ತಕ ವಿಭಾಗ

ಸಂಪುಟ : ೪೨ ಸಂಚಿಕೆ–೩

PUSTAKA PRAPANCHA : Monthly

Published and printed by Karnataka State Adult Eductaion Council, Mysore-4 Pages 128. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 004

ದಾಸ್ತೋವಸ್ಕಿ: ಅಪರಾಧ ಮತ್ತು ಶಿಕ್ಷೆ

ಪ್ರೊ|| ಪೋಲಂಕಿ ರಾಮಮೂರ್ತಿ

ದಾಸ್ತೋವಸ್ಕಿ ಸತ್ತು ಬದುಕಿದವ.

ಇನ್ನೇನು ಅವನನ್ನು ಫೈರಿಂಗ್ ಸ್ಕ್ವಾಡ್‌ನವರು ಗುಂಡಿಕ್ಕಿ ಕೊಲ್ಲಬೇಕು, ಗಕ್ಕನೆ ರಾಜಮನ್ನಣೆ ಬಂತು, ಬದುಕಿಬಿಟ್ಟ.

ತನ್ನ ಸೋದರನಿಗೆ ಈ ಪವಾಡವನ್ನು ಕುರಿತು ದಾಸ್ತೋವಸ್ಕಿ ಹೀಗೆ ಬರೆಯುತ್ತಾನೆ:

"ಅವರು ನಮ್ಮ ತಲೆಯ ಮೇಲೆ ಕತ್ತಿಗಳನ್ನು ಬೀಸಿದರು, ನಮ್ಮ ಮೇಲೆ ಮರಣದಂಡನೆಗೆ ಗುರಿಯಾದವರಿಗೆ ಹೊದಿಸುವ ಬಿಳಿಯ ಬಟ್ಟೆ ಹೊದಿಸಿದರು. ನಮ್ಮನ್ನು ಒಂದು ಬಾರಿಗೆ ಮೂವರಂತೆ ಕಂಬಕ್ಕೆ ಬಿಗಿದರು. ಮೂರನೆಯವನಾದ ನಾನು ಇನ್ನೇನು ನನಗೆ ಕೆಲವೇ ಘಳಿಗೆಗಳುಳಿದಿವೆ ಎಂದು ತಿಳಿದೆ. ಆಗ ನಾನು ನಿನ್ನನ್ನು, ನಿನ್ನ ಆತ್ಮೀಯರನ್ನು ನೆನೆದೆ; ಹಾಗೂ ಹೀಗೂ ನನ್ನ ಅಕ್ಕಪಕ್ಕದ ಪ್ಲೆಸ್ಟ್‌ಚೀವ್ ಮತ್ತು ಡೂರೋವ್‌ರನ್ನ ಕೊನೆಯ ಬೀಳ್ಕೊಡುಗೆಗಾಗಿ ಮುತ್ತಿಟ್ಟೆ. ಇದ್ದಕ್ಕಿದ್ದಂತೆ ಪಡೆ ನಗಾರಿ ಬಾರಿಸಿತು, ನಮ್ಮನ್ನು ಬಂಧನದಿಂದ ಬಿಚ್ಚಿತು, ಸಾರುವೆ ಮೇಲಕ್ಕೆ ತಂದು ನಿಲ್ಲಿಸಿ, 'ಇಗೋ, ರಾಜ ನಿಮ್ಮನ್ನು ಮನ್ನಿಸಿದ್ದಾನೆ' ಎಂದಿತು."

ಈ ನಂಬಲಾರದ ಸುದ್ದಿಯ ಷಾಕಿಗೆ ಒಬ್ಬ ಬಂಧಿ, ಗ್ರಿಗೋರೀವ್ ಕೂಡಲೇ ಹುಚ್ಚನಾಗಿಬಿಟ್ಟ, ಹುಚ್ಚನಾಗಿಯೇ ಸತ್ತು ಹೋದ.

ಇಂಥಾ ಸತ್ತುಬದುಕಿದ ಪವಾಡದ ಪುರುಷ ದಾಸ್ತೋವಸ್ಕಿ.

ಹೀಗೆ ಸತ್ತರೇನೆ ಬದುಕಿನ ಪವಾಡ ಅರಿಯುತ್ತದೆ ಎಂಬುದನ್ನು ತನ್ನ ಬರವಣಿಗೆಗಳಲ್ಲೆಲ್ಲಾ ಸಾಬೀತು ಮಾಡಿತೋರಿಸಿದ ಪ್ರವಾದಿ ದಾಸ್ತೋವಸ್ಕಿ.

ದಾಸ್ತೋವಸ್ಕಿಯ ಹಾಗೆ ಮನಸ್ಸಿನ ಅಂತರಾಳಕ್ಕೆ ಧುಮುಕಿ ಎದ್ದು ಬಂದ ಎಚ್ಚರದ ಕಾದಂಬರಿಕಾರರು ಹಿಂದೆ ಇದ್ದವರಿಲ್ಲ.

ಒಂದು ರೀತಿಯಲ್ಲಿ ದಾಸ್ತೋವಸ್ಕಿಯ ಈ ಮಾನಸಿಕ ಗೀಳು ಒಂದು ಹುಚ್ಚೇ. ಕೆಲವರು ರಾಮಕೃಷ್ಣ ಪರಮಹಂಸರಂತೆ ದೇವರಿಗೆ ಹುಚ್ಚರಾಗುತ್ತಾರೆ; ಕೆಲವರು ಲೈಲಾ ಮಜ್ನುರಂತೆ ಒಲವಿಗೆ ಹುಚ್ಚರಾಗುತ್ತಾರೆ; ಇನ್ನೂ ಕೆಲವರು ದಾಸ್ತೋವಸ್ಕಿಯಂತೆ ದುಃಖಕ್ಕೆ, ಬಡಬಗ್ಗರ ಕಷ್ಟಕಾರ್ಪಣ್ಯಗಳಿಗೆ ಮಮ್ಮಲಮರುಗುವ ಹುಚ್ಚರಾಗುತ್ತಾರೆ.

ಈ ನೋವಿನ, ಕರುಳುತುಯ್ಯುವ ಹುಚ್ಚು ಮುಖ್ಯವಾಗಿ ದಾಸ್ತೋವಸ್ಕಿಯ 'ಬ್ರದರ್ಸ್ ಕರಮಾರ್ಝೊವ್'ನಲ್ಲೂ ಹಾಗೂ 'ಕ್ರೈಮ್ ಅಂಡ್ ಪನಿಷ್‌ಮೆಂಟ್'ನಲ್ಲೂ ಕಂಡುಬರುತ್ತದೆ.

ದಾಸ್ತೋವಸ್ಕಿಯ 'ಕ್ರೈಮ್ ಅಂಡ್ ಪನಿಷ್‌ಮೆಂಟ್', ಅಂದರೆ 'ಅಪರಾಧ ಮತ್ತು ಶಿಕ್ಷೆ' ಅನ್ನುವ ಕಾದಂಬರಿ ಯಾವ ಮಹತ್ತರದ ಕೃತಿಯೆಂದರೆ ಇದನ್ನು ವಿಮರ್ಶಕರು ಷೇಕ್ಸ್‌ಪಿಯರಿನ 'ಮ್ಯಾಕ್‌ಬೆತ್' ನಾಟಕಕ್ಕೆ ಹೋಲಿಸುತ್ತಾರೆ.

ಮ್ಯಾಕ್‌ಬೆತ್ ಒಬ್ಬ ಮುದಿಯ ರಾಜನನ್ನು ಕೊಲೆ ಮಾಡಿ ಆ ಕೊಲೆಯ ಮಹಾಪರಾಧಕ್ಕೆ ನೊಂದು ನೊಂದು ನಿದ್ದೆಯಿಲ್ಲದೆ ದಿಕ್ಕೆಟ್ಟು, ತನ್ನಂತೆ ಅಪರಾಧಿಯಾಗಿದ್ದ, ನೊಂದು ನೊಂದು ಹುಚ್ಚು ಹಿಡಿದು ಸಾವಿಗೀಡಾದ ಹೆಂಡತಿಯನ್ನು ಕಳಕೊಂಡು, ಒಬ್ಬಂಟಿಗನಾಗಿ ಕೊನೆಗೆ ಕದನದಲ್ಲಿ ಕಾದು ಸತ್ತುಹೋಗುತ್ತಾನೆ.

ದಾಸ್ತೋವಸ್ಕಿಯ ರಾಸ್ಕೋಲ್ ನಿಕೋವ್ ಕೂಡಾ, ಒಬ್ಬ ಗಿರಿವಿ ವ್ಯಾಪಾರದ ಮುದಿ ವಿಧವೆಯನ್ನು ಮ್ಯಾಕ್‌ಬೆತ್‌ನಂತೆ ಕೊಂದು, ಮ್ಯಾಕ್‌ಬೆತ್‌ನಂತೆ ನೊಂದು ನೊಂದು, ಮ್ಯಾಕ್‌ಬೆತ್‌ನಂತೆ ಅರೆಹುಚ್ಚನಾಗಿ, ಕೊನೆಗೆ ಅದೃಷ್ಟವಶಾತ್ ಒಬ್ಬ ದೇವತಾ ಸಮಾನಳಾದ ಸೋನ್ಯಾ ಎನ್ನುವ ವೇಶ್ಯೆಯ ಪ್ರಭಾವಕ್ಕೆ ಸಿಕ್ಕಿ, ಅವಳ ಪ್ರಭಾವದಿಂದ ತನ್ನ ಅಪರಾಧವನ್ನು ಪೋಲೀಸಿನವರಲ್ಲಿ ಒಪ್ಪಿಕೊಂಡು, ಖೈದಿಯಾಗಿ ತನ್ನ ಎಂಟು ವರ್ಷದ ಬಂಧನವನ್ನು ಸೈಬೀರಿಯಾದಲ್ಲಿ ಕಳೆಯುತ್ತಾ, ತನ್ನೊಡನೆ ಬಂದು ಸಮೀಪದ ಹಳ್ಳಿಯಲ್ಲಿ ಖೈದಿಗಳ ಸೇವೆ ಮಾಡುತ್ತಾ ಕರುಣಾಮಯಿಯೆಂದು ಹೆಸರಾದ ಸೋನ್ಯಾಳ ಪ್ರೇಮದಲ್ಲಿ ಭಾಗಿಯಾಗುತ್ತಾನೆ.

ಇದೊಂದು ಮನುಷ್ಯನ ಮಹಾ ಪರಿವರ್ತನೆಯ ಮಹಾ ಸಂಶಯಗಳ ಮಹಾ ಗಾಥ.

ಒಂದು ವಿಶೇಷ ರೀತಿಯಲ್ಲಿ ಇದು ದಾಸ್ತೋವಸ್ಕಿಯ ಆತ್ಮಕತೆಯೇ.

ಬಾಳಿನುದ್ದಕ್ಕೂ ದಾಸ್ತೋವಸ್ಕಿ ನಂಬುಗೆ ಮತ್ತು ಸಂಶಯಗಳೊಡನೆ ತೊಳಲಾಡಿದವ. ಅವನಿಗೆ ಕ್ರೈಸ್ತ ಧರ್ಮದಲ್ಲಿ ಅತೀವವಾದ ಆಸಕ್ತಿ ಭಕ್ತಿಗಳಿದ್ದರೂ ಅವನ ವೈಚಾರಿಕತೆ ಅದನ್ನು ಕೊನೆಯವರೆಗೂ ಪ್ರಶ್ನಿಸುತ್ತಲೇ ಇತ್ತು.

ಹಾಗೆ ನಂಬುಗೆ ವೈಚಾರಿಕತೆಗಳ ಮಧ್ಯೆ ತೊಳಲಾಡಿದವ, ಕೊನೆಗೆ ಶರಣಾದವ ರಾಸ್ಕೋಲ್ ನಿಕೋವ್.

ದಾಸ್ತೋವಸ್ಕಿ ತನಗಾಗಿ ಕಂಡುಕೊಂಡಿದ್ದ ಒಂದು ಸತ್ಯ—ಪಾಪಕ್ಕೆ ಪರಿಹಾರ ನೋವು. ನೋಯುವ, ನರಳುವ ಸಂಕಷ್ಟವೇ ಮನುಷ್ಯನನ್ನು ಶೋಧಿಸುತ್ತದೆ, ಪುನೀತನನ್ನಾಗಿ ಮಾಡುತ್ತದೆ.

ಹಾಗಾಗಿ ದಾಸ್ತೋವಸ್ಕಿಯಲ್ಲಿ ನೋವು, suffering, ದುಃಖಾನುಭವ,

ಬಾಳಿನ ಪರಮ ಮೌಲ್ಯ. ದುಃಖದ ಮೂಸೆಯಲ್ಲಿ ಮಾನವನ ಪಶುತ್ವ, ರಾಕ್ಷಸತ್ವಗಳು ಕರಗಿ, ಮಾನವೀಯತೆ, ಪ್ರೇಮ, ತಾರುಣ್ಯಗಳು ಹೊರಬೀಳುತ್ತವೆ: ಪಾಪಿ ಪುನೀತನಾಗುತ್ತಾನೆ, ಸಂತನಾಗುತ್ತಾನೆ.

ಅದೇ 'ಕ್ರೈಂ ಅಂಡ್ ಪನಿಷ್‌ಮೆಂಟ್' ಕಾದಂಬರಿಯ ತಿರುಳು. ಒಬ್ಬ ಕೊಲೆಗಡುಕ ನೋವಿನಲ್ಲಿ ನರಳಿ ಪಶ್ಚಾತ್ತಾಪಗೊಂಡು, ತನ್ನ ಅಪರಾಧವನ್ನು ಒಪ್ಪಿಕೊಂಡು, ಜೈಲುವಾಸ ಅನುಭವಿಸುತ್ತಾ ತನ್ನ ಪಾಪ ಕಳೆದುಕೊಳ್ಳುತ್ತಾನೆ; ಒಬ್ಬ ಅಮಾಯಕಿ ಹೆಣ್ಣು ತನ್ನ ಸಂಸಾರದ ಬಡತನಕ್ಕೆಂದೇ ತನ್ನ ದೇಹವನ್ನು ಕಾಮುಕರಿಗೆ ಬಲಿಗೊಡುತ್ತಾ ವೇಶ್ಯೆಯಾದ ನೋವಿನ ನರಳುವಿಕೆಯಲ್ಲೇ ಸಂತಳಾಗುತ್ತಾಳೆ. ಸೋನ್ಯಾ ಎನ್ನುವ ಈ ಅಮಾಯಕಿ ವೇಶ್ಯೆಯೇ ಆ ರಾಸ್ಕೋಲ್ ನಿಕೋವ್ ಎನ್ನುವ ಕೊಲೆಗಡುಕನ ಪರಿವರ್ತನೆಗೆ ಕಾರಣಳಾಗಿ ಸಂತಳಾಗುತ್ತಾಳೆ.

ರಾಸ್ಕೋಲ್ ನಿಕೋವ್ ಒಬ್ಬ ಪ್ರತಿಭಾವಂತ ವಿದ್ಯಾರ್ಥಿ. ತುಂಬ ಬಡತನದಲ್ಲಿದ್ದವ. ಅವನ ತಾಯಿ ಮತ್ತು ತಂಗಿ ಅವನ ವಿದ್ಯಾಭ್ಯಾಸಕ್ಕಾಗಿ ಹಾತೊರೆಯುವ, ಆದಕ್ಕಾಗಿ ಏನಾದರೂ ತ್ಯಾಗ ಮಾಡಲು ಸಿದ್ಧರಿರುವ ಆತ್ಮೀಯರು. ಕಷ್ಟದಲ್ಲಿದ್ದೂ ಅವನ ವಿದ್ಯಾಭ್ಯಾಸಕ್ಕೆ ಹಣ ಕಳುಹಿಸಿಕೊಡುತ್ತಿದ್ದ ತ್ಯಾಗಿಗಳು.

ರಾಸ್ಕೋಲ್ ನಿಕೋವ್‌ಗೆ ತನ್ನ ಬಡತನದ ನೋವು ತನ್ನಂತೆ ಬಡತನದಲ್ಲಿ ನರಳುತ್ತಿದ್ದ ಎಲ್ಲಾ ಹತಭಾಗಿಗಳ ನೋವನ್ನು ಪಾಲ್ಗೊಳ್ಳುವಂತೆ ಮಾಡುತ್ತದೆ. ದುಃಖ ರಾಸ್ಕೋಲ್ ನಿಕೋವನ್ನು ವಿಶ್ವಬಂಧುವನ್ನಾಗಿ ಮಾಡುತ್ತದೆ. ಈ ಬಡತನದ ನಂಟೇ ಅವನನ್ನು ಬಡತನದ, ಅಂದರೆ ಶೋಷಣೆಯಿಂದಲೇ ಒದಗಿಬಂದ ದಾರಿದ್ರ್ಯದ, ಪರಿಹಾರದ ಉಪಾಯವನ್ನು ಕಂಡುಕೊಳ್ಳುವಂತೆ ಮಾಡುತ್ತದೆ.

ಶೋಷಕರು ಒಬ್ಬಿಬ್ಬರು ; ಆದರೆ ಶೋಷಿತರು ಅಸಂಖ್ಯಾತರು. ಇದರಿಂದ ನಾವು ಈ ಅಪಾರ ದುಃಖಕ್ಕೆ ಕಾರಣನಾದ ಒಬ್ಬಿಬ್ಬರು ರಾಕ್ಷಸರನ್ನು ಕೊಲ್ಲಬಾರದೇಕೆ? ಒಂದು ಸಂಸಾರಕ್ಕಾಗಿ ಒಬ್ಬನನ್ನು, ಒಂದು ಊರಿಗಾಗಿ ಒಂದು ಸಂಸಾರವನ್ನು ಬಲಿಕೊಟ್ಟರೆ ಅದು ಒಳ್ಳೆಯದೇ ಅಲ್ಲವೇ? ಅನೇಕ ಮಾನವರ ಉಳಿವಿಗಾಗಿ, ಕೇವಲ ಬಾಳುವೆ ಮಾಡುವ ಹಕ್ಕಿಗಾಗಿ ಕೆಲವು ಮಾನವರ ಕೊಲೆ ಮಾಡಬಾರದೇಕೆ?

'ಹೌದು, ಹಾಗೆ ಕೊಲೆಮಾಡುವ ಹಕ್ಕು ಮಹಾಮಾನವರಿಗಿದೆ. ಅಸಾಧಾರಣ ಮಾನವರಿಗೆ, ಪ್ರತಿಭಾವಂತರಿಗೆ, genius ಆದವರಿಗೆ ಕಾದಿಟ್ಟದೆ. ಒಬ್ಬ ಪೋಲಿಯನ್, ಒಬ್ಬ ಮಹಮ್ಮದ್ ಅಂತಹ ಅಸಾಧಾರಣ ವ್ಯಕ್ತಿಗಳಾಗಿದ್ದರು. ಅವರು ಅನೇಕರ ಕಲ್ಯಾಣಕ್ಕೆ ಕೆಲವರನ್ನು ಕೊಲ್ಲಬಲ್ಲವರಾಗಿದ್ದರು. ಅಂತಹ ಎಂಟೆದೆ ಅಂತಹ ಮಹಾ ಮಾನವರಿಗಿದೆ. ಅವರು ಏನು ಮಾಡಿದರು ಅದು ಮಾನವೀಯತೆಗಾಗಿ ಕ್ಷಮ್ಯವೇ.

ಇದೀಗ ರಾಸ್ಕೋಲ್‌ನಿಕೋವಿನ ವಿಚಾರಧಾರೆ. ಇದನ್ನು ಅವನು ತುಂಬಾ ಕಳಕಳಿಯಿಂದ ಬರೆದನಾದರೂ, ಅದನ್ನು ಅಷ್ಟೇ ಆತ್ಮೀಯತೆಯಿಂದ ತನ್ನಲ್ಲಿ ಸಾಕ್ಷಾತ್ಕರಿಸಿ ಕೊಳ್ಳಲು ತುಂಬಾ ಹೆಣಗಾಡುತ್ತಾನೆ.

ತಾನು ನೆಪೋಲಿಯನ್ನಿನಂತಹ ವಿಭೂತಿಪುರುಷನೇ, ಅತಿಮಾನವನೇ? ತನಗೆ ಆ ಸಾಮರ್ಥ್ಯವಿದೆಯೇ? ಇವು ಅವನ ತಲೆ ತಿನ್ನುತ್ತವೆ.

ಅವನೆದುರಿಗೆ ಇದ್ದ ಒಬ್ಬ ಶೋಷಕಿ, ತನಗೂ, ತನ್ನಂತೆ ಅನೇಕ ಬಡವರಿಗೂ ಗಿರವಿಗೆ ಸಾಲಕೊಡುತ್ತಿದ್ದ, ಬಡ್ಡಿ ವ್ಯವಹಾರದ ಒಬ್ಬ ಮುದಿ ವಿಧವೆ. ಅವಳೊಬ್ಬಳನ್ನು ಕೊಲೆಮಾಡಿದರೆ ಅವಳಿಂದಾಗಿ ನರಳುತ್ತಿದ್ದ ಅನೇಕರ ಬಿಡುಗಡೆಯಾಗುತ್ತದೆ, ಬಂಧ ವಿಮೋಚನೆಯಾಗುತ್ತದೆ. ಅವಳನ್ನೇಕೆ ಕೊಂದುಬಿಡಬಾರದು?

ಆ ಗಿರವಿ ಮುದಿ ವಿಧವೆಯನ್ನು ಕೊಲ್ಲುವುದು ಶೋಷಣೆಯನ್ನು ಕೊಲ್ಲುವ ಸಂಕೇತ. ತಾನೇಕೆ ಆ ಸಾಂಕೇತಿಕ ಕೊಲೆ ಮಾಡಬಾರದು? ಅದೀಗ ರಾಸ್ಕೋಲ್ ನಿಕೋವನ್ನು ಕಾಡುತ್ತಿದ್ದ ಪ್ರಶ್ನೆ.

ಅವನ ಪ್ರಶ್ನೆಗೆ ಕುಮ್ಮಕ್ಕುಕೊಡುವಂತೆ ಅಲ್ಲಿನ ಹೋಟೆಲುಗಳಲ್ಲಿ ತಿಂಡಿತಿನ್ನುತ್ತಿದ್ದ ವಿದ್ಯಾರ್ಥಿಗಳಲ್ಲೊಬ್ಬ, ಗಿರವಿ ಆ ಮುದುಕಿಯನ್ನು ಕೊಲ್ಲುವುದು ಎಂತಹ ಸಮಾಜಸೇವೆ ಎಂದುಬಿಡುತ್ತಾನೆ. ಅದಕ್ಕಿಂತ ಹೆಚ್ಚಾಗಿ ರಾಸ್ಕೋಲ್ ನಿಕೋವ್‌ಗೆ ಒಂದು ಮಹಾ ಭಯಂಕರವಾದ ಕನಸು ಬೀಳುತ್ತದೆ.

ಕನಸಿನಲ್ಲಿ ಒಬ್ಬ ತಂದೆ ಅವನ ಪುಟ್ಟಮಗ ನಡೆದುಹೋಗುತ್ತಿದ್ದಾರೆ. ಒಬ್ಬ ಮಿಕೋಲ್ಕಾ ಎನ್ನುವ ಕುದುರೆ ಗಾಡಿಯವ ತನ್ನ ಗಾಡಿತುಂಬ ತನ್ನ ಬಡಕಲು ಹೆಣ್ಣು ಕುದುರೆ ಎಳೆಯಲಾರದಷ್ಟು ಜನರನ್ನು ಬಲವಂತವಾಗಿ ತುಂಬಿದ್ದಾನೆ. ಅವನಿಗೇನು ಜಂಬ ವೆಂದರೆ ಅವನನ್ನು ಹೀಯಾಳಿಸುತ್ತಿದ್ದ ಈ ಎಲ್ಲರ ಮುಂದೆ ತನ್ನ ಬಡಕಲು ಕುದುರೆನ್ನು ಎಳೆಯುವಂತೆ ಮಾಡುವುದು. ಅದಕ್ಕಾಗಿ ಅವನು ಆ ಬಡಕಲು ಮುದಿಕುದುರೆಯನ್ನು ಸಿಕ್ಕಾಪಟ್ಟೆ ಹೊಡೆಯುತ್ತಾನೆ. ಅದು ತಾಳಲಾರದೆ ಮುಗ್ಗರಿಸಿದಾಗ, ಎಳೆಯದೇ ಇದ್ದಾಗ ಒಂದು ಕಬ್ಬಿಣದ ಸರಳಿನಿಂದ ಅದನ್ನು ಹೊಡೆದು ಕೊಲೆಮಾಡಿಬಿಡುತ್ತಾನೆ. ಇದನ್ನು ನೋಡುತ್ತಿದ್ದ ಪುಟ್ಟ ಮಗು ಆ ಮುದಿ ಹೆಣ್ಣು ಕುದುರೆಯ ಮುಖವನ್ನು ತಬ್ಬಿ ಕೊಂಡು ಅಳಲಾರಂಭಿಸುತ್ತದೆ. ಆ ಹುಡುಗನ ರೋದನಕ್ಕೆ ರಾಸ್ಕೋಲ್ ನಿಕೋವ್ ಕನಸಿನಿಂದ ತಿಳಿದೇಳುತ್ತಾನೆ. ಅವನ ಮೈಯೆಲ್ಲಾ ಬೆವತುಬಿಡುತ್ತದೆ, ಭಯದಲ್ಲಿ ಒದ್ದೆ ಯಾಗಿ ಬಿಡುತ್ತದೆ.

ಈಗ ಆ ಮುದಿ ಹೆಣ್ಣು ಕುದುರೆಯನ್ನು ಆ ಗಾಡಿಯವ ಕೊಂದಂತೆ ತಾನು ಆ ಮುದಿ ಗಿರವಿ ಹೆಣ್ಣನ್ನು ಕೊಲ್ಲಬಲ್ಲೆನೇ ಎಂಬುದು ಅವನನ್ನು ಅಂತರಿಕವಾಗಿ ಕಾಡುತ್ತದೆ. ಇದೀಗ ಅವನ ಸತ್ವಪರೀಕ್ಷೆಯ ಸಮಯ. ತಾನು ನೆಪೋಲಿಯನ್ನನಂತೆ ಅಸಾಧಾರಣ ನಾದ ಮಹಾಮಾನವನೇ? ಅವನ ಎಂಟೆದೆ ತನಗಿದೆಯೇ?

ಸರಿ, ಈ ಎಲ್ಲಾ ಕಾರಣಗಳಿಂದ ರಾಸ್ಕೋಲ್ ನಿಕೋವ್ ಕೊನೆಗೆ ಆ ಗಿರವಿ ವಿಧವೆಯನ್ನು ಒಂದುಸಾರಿ ಕೊಡಲಿಯಿಂದ ಕೊಂದುಬಿಡುತ್ತಾನೆ. ಆ ಸಮಯದಲ್ಲಿ ಅಕಸ್ಮಾತ್ತಾಗಿ ಬಂದ ಆ ಮುದುಕಿಯ ತಂಗಿಯ ಸಂಬಂಧದವಳೊಬ್ಬಳನ್ನು ಕೊಂದು ಬಿಡುತ್ತಾನೆ. ಆ ಗಾಬರಿಯಲ್ಲಿ ಮುದುಕಿಯ ಆಭರಣಗಳನ್ನಷ್ಟೇ ಕದ್ದು, ಆ ಆಭರಣ ಗಳನ್ನು ಒಂದು ದೂರದ ಕಲ್ಲಿನಡಿಯಲ್ಲಿ ಬಚ್ಚಿಟ್ಟುಬಿಡುತ್ತಾನೆ.

ಇನ್ನು ರಾಸ್ಕೋಲ್ ನಿಕೋವ್‌ಗೆ ಭಯ ಕಳವಳಗಳು ಷುರುವಾಗಿ ಬಿಡುತ್ತವೆ. ಸಾಲದ್ದಕ್ಕೆ ಅವನಿಗೆ ಪೊಲೀಸಿನವರು ಸ್ಟೇಷನ್ನಿಗೆ ಹೇಳಿಕಳಿಸುತ್ತಾರೆ. ಅವನು ಅಲ್ಲಿ ಹೋದ ಕೂಡಲೇ ಅವರು "ನೀನು ಆ ಮುದುಕಿಗೆ ಕೊಡಬೇಕಾಗಿದ್ದ ಬಡ್ಡಿ ತೀರಿಸಿದೆಯಾ?

ಎಂದಷ್ಟೇ ಕೇಳುತ್ತಾರೆ. ಆದರಿಂದ ಅವನಿಗಾದ ಈ ಆಕಸ್ಮಾತ್ ಪರಿಹಾರ ಅವನಿಗೆ ಶಾಕಾಗಿ ಅವನು ಕುಸಿದೇಬಿದ್ದುಬಿಡುತ್ತಾನೆ. ಅಲ್ಲಿಂದ ಅವನಿಗೆ ಕನವರಿಕೆ, ಜ್ವರ, ಪ್ರಜ್ಞೆ ತಪ್ಪಿದ ಮಾತು ಷುರುವಾಗುತ್ತವೆ. ಆದರೆ ಅವನ ಪರಮಮಿತ್ರನಾದ ರಾಜಮಿಖಿನ್ ಅವನ ಬೆಂಬಲಿಗನಾಗಿದ್ದು, ಅವನ ಇತರ ಮಿತ್ರರೆಲ್ಲಾ ಅವನ ಶುಶ್ರೂಷೆ ನಡೆಸಿ ಅವನು ನಿಧಾನವಾಗಿ ಚೇತರಿಸಿಕೊಳ್ಳುವಂತೆ ಮಾಡುತ್ತಾರೆ.

ಈ ಮಧ್ಯೆ ಅವನಿಗೆ ಒಬ್ಬ ಮಾಜಿ ಗುಮಾಸ್ತ ಮಾರ್ಮೆಲಾಡವ್‌ನ ಪರಿಚಯ ವಾಗುತ್ತದೆ. ಅವನೊಬ್ಬ ಕೆಲಸ ಕಳೆದುಕೊಂಡ ದೊಡ್ಡ ಸಂಸಾರದ ಹತಭಾಗಿ. ಮಕ್ಕಳು ಉಪವಾಸ ಬೀಳುವುದನ್ನು ತಾಳಲಾರದೆ ಅವನ ಮೊದಲ ಹೆಂಡತಿಯ ಮಗಳಾದ ಸೋನ್ಯಾ ವೇಶ್ಯಾವೃತ್ತಿಗೆ ಇಳಿಯುತ್ತಾಳೆ. ಇಂತಹ ಪಾಪಕ್ಕೆ ಕಾರಣನಾದ ಮಾರ್ಮೆ ಲಾಡವ್ ಯಾವ ದಿಕ್ಕೂ ತೋರದೆ ಈ ದುಃಖವನ್ನು ತಡೆಯಲಾರದೆ ಸುಮ್ಮನೇ ಕುಡಿಯುತ್ತಿರುತ್ತಾನೆ. ಒಮ್ಮೆ ಅವನು ನಡೆದು ಬರುತ್ತಿದ್ದಾಗ ಗಾಡಿಯೊಂದು ಅವನ ಮೇಲೆ ಹಾಯ್ದು ಮರಣಕ್ಕೀಡಾಗುತ್ತಾನೆ. ಇವನ ದಾರುಣಕತೆಯನ್ನು ಕಂಡುಂಡ ರಾಸ್ಕೋಲ್ ನಿಕೋವ್ ಅವನ ವಿಧವೆ ಹೆಂಡತಿಗೆ ತನ್ನ ತಾಯಿ ತನ್ನ ವಿದ್ಯಾಭ್ಯಾಸಕ್ಕೆಂದು ಕಳಿಸಿದ್ದ ಹಣದಲ್ಲಿ ಸ್ವಲ್ಪವನ್ನು ಕೊಟ್ಟುಬಿಡುತ್ತಾನೆ. ಇದರಿಂದ ಅವನಿಗೆ ವೇಶ್ಯೆಯಾಗಿದ್ದ ಎಳೆಯ ಅಮಾಯಕಿ ಸೋನ್ಯಾಳ ಪರಿಚಯವಾಗುತ್ತದೆ. ಆ ಮುಗ್ಧೆಯ ಮಹಾ ಬಲಿದಾನಕ್ಕೆ ಅವನ ಹೃದಯದ ಅಂತಃಕರಣ ತುಂಬಿಬರುತ್ತದೆ.

ಇತ್ತ ಅವನ ಸೋದರಿ ದೂನ್ಯಾ ತನ್ನ ಅಣ್ಣನ ವಿದ್ಯಾಭ್ಯಾಸಕ್ಕೆ ಅನುಕೂಲ ವಾಗಲೆಂದು ತನಗೆ ಇಷ್ಟವಿಲ್ಲದಿದ್ದ, ಲೂರ್ಝಿನ್ ಎನ್ನುವ ಒಬ್ಬ ವ್ಯಾಪಾರೀ ಮನೋ ಭಾವದ ಅಲ್ಪನನ್ನು ಅವಳು ಮದುವೆಯಾಗಲು ಒಪ್ಪುತ್ತಾಳೆ. ಲೂರ್ಝಿನ್ ಅಣ್ಣನಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡುತ್ತಾನೆಂಬ ಭರವಸೆಯೇ ಅವಳ ಒಪ್ಪಿಗೆಗೆ ಕಾರಣ ವಾಗುತ್ತದೆ. ಆದರೆ ರಾಸ್ಕೋಲ್ ನಿಕೋವ್ ಅವನನ್ನು ನೋಡಿದೊಡನೆ ಅವನ ಬಗ್ಗೆ ಅತ್ಯಂತ ತುಚ್ಛಭಾವ ಬಂದುಬಿಡುತ್ತದೆ. ಅಷ್ಟರಲ್ಲಿ, ಅದೃಷ್ಟವಶಾತ್ ತನ್ನ ಆಪ್ತ ಮಿತ್ರನಾದ ರಾಜಮಿಖಿನನ್ನೇ ತನ್ನ ತಂಗಿಯನ್ನು ಕಂಡು, ಅವಳಲ್ಲಿ ಕೂಡಲೇ ಪ್ರೇಮ ವನ್ನ ಕಂಡುಕೊಂಡಾಗ, ಅವರಿಬ್ಬರೂ ಪರಸ್ಪರ ಪ್ರೇಮದಲ್ಲಿ ಮದುವೆಯಾಗಲು ಒಪ್ಪಿ ಕೊಂಡಾಗ, ರಾಸ್ಕೋಲ್ ನಿಕೋವ್‌ನ ಆತಂಕ ಪರಿಹಾರವಾಗುತ್ತದೆ. ಸದ್ಯ ಆ ನೀಚ ಲೂರ್ಝಿನ್ನಿನಿಂದ ತಂಗಿಯ ಬಿಡುಗಡೆಯಾಯಿತಲ್ಲಾ ಎಂದು ನಿಟ್ಟುಸಿರು ಬಿಡುತ್ತಾನೆ.

ಆದರೆ ಪ್ರತೀಕಾರದ ಲೂರ್ಝಿನ್ ರಾಸ್ಕೋಲ್ ನಿಕೋವಿನ ಮೇಲೆ ಸೇಡು ತೀರಿಸಿ ಕೊಳ್ಳಲು ಅವನ ಪ್ರೀತಿ ಗೌರವಗಳಿಗೆ ಪಾತ್ರಳಾದ ಸೋನ್ಯಾಳ ಚಾರಿತ್ರ್ಯವಧೆ ಮಾಡಲು ಒಂದು ಉಪಾಯ ಹುಡುಕುತ್ತಾನೆ. ಒಂದು ಕೂಟದಲ್ಲಿ ಮೆತ್ತಗೆ ಸೋನ್ಯಾಳ ಜೇಬಿಗೆ ದುಡ್ಡು ಹಾಕಿ ತನ್ನ ದುಡ್ಡು ಕಳುವಾಯಿತೆಂದು ಗುಲ್ಲೆಬ್ಬಿಸುತ್ತಾನೆ. ಆ ಮೇಲೆ ಸೋನ್ಯಾಳ ಜೇಬು ಶೋಧಿಸಿದಾಗ ದುಡ್ಡು ಸಿಕ್ಕಿಬಿಡುತ್ತದೆ. ದಿಗ್ಭ್ರಾಂತಳಾಗಿ ಅವಮಾನಕ್ಕೀಡಾದ ಸೋನ್ಯಾಳ ಪರಿಹಾರಕ್ಕೆ ಆ ಕೂಟದಲ್ಲಿದ್ದ ಒಬ್ಬ ಸಂಭಾವಿತ ಲೂರ್ಝಿನ್ ಸೋನ್ಯಾಳ ಜೇಬಿನಲ್ಲಿ ತಾನೇ ಖುದ್ದಾಗಿ ಹಣ ತುರುಕಿಸಿದ್ದನ್ನು ಕಣ್ಣಾರೆ ಕಂಡುದಾಗಿ ಸಾಕ್ಷಿ ಹೇಳಿಬಿಡುತ್ತಾನೆ. ಇದರಿಂದ ನೀಚನಾದ ಲೂರ್ಝಿನ್ನಿನ ಮುಖ

ಭಂಗವಾಗುತ್ತದಲ್ಲದೆ, ಸೋನ್ಯಾಳ ಸಚ್ಚಾರಿತ್ರ್ಯಕ್ಕೆ ಎಲ್ಲರ ಮೆಚ್ಚುಗೆ ಗೌರವಗಳು ಬರುತ್ತವೆ.

ತಂಗಿ ದೂನ್ಯಾಳ ಕೈಹಿಡಿದ ರಾಜಮಿಖಿನ್ ಮುದ್ರಣದ ಕೆಲಸದಲ್ಲಿ ಮುಂದುವರೆಯುತ್ತಾ ತಂಗಿಯೊಡನೆ ಸುಖದ ಜೀವನ ನಡೆಸುತ್ತಾನೆ. ಇದರಿಂದ ರಾಸ್ಕೋಲ್ ನಿಕೋವ್‌ಗೆ ಸಂಸಾರದ ಬಾಧೆ, ತಾಯಿಯ ಮತ್ತು ತಂಗಿಯ ಬಗೆಗಿನ ಚಿಂತೆ, ಸಂಪೂರ್ಣ ತೊಲಗಿಬಿಡುತ್ತದೆ. ಈ ಮಧ್ಯೆ ತಂಗಿಗೆ ಸ್ವಿಡ್ರಿಗೇಲವ್ ಎನ್ನುವ ಕಾಮಿ ತಾನು ತನ್ನ ಮನೆಯಲ್ಲಿ ಮಕ್ಕಳಿಗೆ ಪಾಠ ಹೇಳಲು ಇರಿಸಿಕೊಂಡಿದ್ದ ದೂನ್ಯಾಳಿಗೆ ಕೊಟ್ಟ ಕಾಟಕ್ಕಾಗಿ ಪಶ್ಚಾತ್ತಾಪಗೊಂಡು, ತನ್ನ ಆಸ್ತಿಯ ಬಹುಭಾಗವನ್ನು ಪ್ರಾಯಶ್ಚಿತ್ತಕ್ಕಾಗಿ ಅವಳಿಗೆ ಬರೆದುಬಿಟ್ಟು ತನ್ನನ್ನು ತಾನೇ ಗುಂಡಿನಿಂದ ಹೊಡೆದುಕೊಂಡು ಸತ್ತು ಬಿಡುತ್ತಾನೆ. ಹೀಗಾಗಿ ದೂನ್ಯಾಳು ಪಟ್ಟ ಸಂಕಷ್ಟಗಳಿಗೆ, ಕೊನೆಗೆ ಸುಖ ನೆಮ್ಮದಿಗಳು ದೊರೆಯುತ್ತವೆ.

ಸಂಸಾರದ ಜವಾಬ್ದಾರಿಯಿಂದೇನೋ ಮುಕ್ತನಾದ ರಾಸ್ಕೋಲ್ ನಿಕೋವ್ ಈಗ ಸಂಪೂರ್ಣ ತನ್ನ ಕೊಲೆಯ ಸಮಸ್ಯೆಯಲ್ಲಿ ಸಿಕ್ಕು ತೊಳಲಾಡುತ್ತಾನೆ. ತನಗೆ ತನ್ನ ಕಣ್ಣಮುಂದೆ ನಿತ್ಯ ನಡೆಯುವ ಪವಾಡವೆಂದರೆ ದೇವತೆಯಾದ ಸೋನ್ಯಾಳ ವೇಶ್ಯಾವೃತ್ತಿಯ ಬಲಿದಾನ. ಇದರಿಂದ ಅವಳು ಅವನಿಗೆ ತುಂಬಾ ಆತ್ಮೀಯಳಾಗಿಬಿಡುತ್ತಾಳೆ. ಈಗ ಅವನಿಗೆ ಇರುವ ಒಬ್ಬಳೇ ಒಬ್ಬ ಆತ್ಮೀಯವ್ಯಕ್ತಿ, ಸೋನ್ಯಾ.

ರಾಸ್ಕೋಲ್ ನಿಕೋವ್‌ಗೆ ಅವಳಲ್ಲಿನ ದೈವಭಕ್ತಿ ಅತ್ಯಂತ ಆಶ್ಚರ್ಯವನ್ನು ಉಂಟುಮಾಡುವಂಥಾದ್ದು. ಯಾವ ದೈವ ಅಂತಹ ದೇವತಾ ಸಮಾನಳಾದ ವ್ಯಕ್ತಿಗೆ ವೇಶ್ಯಾವೃತ್ತಿಗೆ ನೂಕಿದೆಯೋ ಅಂತಹ ದೈವದ ಬಗ್ಗೆ ಅವಳಿಗೆ ಭಕ್ತಿ ಹೇಗೆ? ರಾಸ್ಕೋಲ್ ನಿಕೋವ್ ತನ್ನೆಲ್ಲ ಗೊಂದಲಗಳನ್ನು ಸೋನ್ಯಾಳ ಮುಂದಿಡುತ್ತಾನೆ. ತಾನು ಲೋಕ ಕಲ್ಯಾಣಕ್ಕೆ ಒಬ್ಬನನ್ನು ಕೊಲೆ ಮಾಡಿದರೆ ಅದು ಸರಿ ಎಂದು ತನ್ನ ತಾತ್ವಿಕ ನಿಲುವನ್ನು ಸಮರ್ಥಿಸುತ್ತಾನೆ. ದೊಡ್ಡವರಿಗೆ, ಅಂದರೆ ಇಂತಹ ಜನರ ನಾಯಕರಿಗೆ, ಲೋಕ ಕಲ್ಯಾಣಕ್ಕಾಗಿ ಏನುಮಾಡಲಿಕ್ಕೂ ಪರವಾನಗಿ ಇದೆ ಎನ್ನುತ್ತಾನೆ. ಆದರೆ ಸೋನ್ಯಾಳಿಗೆ ಅದು ತಾನು ನಂಬಿದ ಕ್ರಿಸ್ತಧರ್ಮಕ್ಕನುಸಾರವಾಗಿ ಮಹಾಪಾಪ. ದೇವರೊಬ್ಬನೇ ಕೊಲ್ಲಬಲ್ಲವನಾದವನು: ಮನುಷ್ಯನಿಗೆ ಆ ಅಧಿಕಾರವಿಲ್ಲ. ಅದು ತಪ್ಪು ಇದು ಸೋನ್ಯಾಳ ನಂಬುಗೆ, ಸಿದ್ಧಾಂತ. ಅವರಿಬ್ಬರ ಸಂವಾದ, ಅಂದರೆ ಧರ್ಮದ ಮತ್ತು ವೈಚಾರಿಕತೆಯ ಘರ್ಷಣೆ ಹೀಗೆ ನಡೆಯುತ್ತದೆ.

> "ಸೋನ್ಯಾ, ನಿನಗೆ ಮೊದಲಿನಂತೆ ಈಗಾಗಿ ಗಿರಾಕಿಗಳು ದೊರೆಯುತ್ತಾರೆಯೇ" ಸೋನ್ಯಾಳಿಗೆ ಇನ್ನೂ ಮುಜುಗರವಾಯಿತು, ಅವಳ ಕೆನ್ನೆ ಕೆಂಪೇರಿತು. "ಇಲ್ಲ" ಎಂದು ಕಷ್ಟದಿಂದಲೇ ಉಸಿರಿದಳು.
>
> "ಇಗೋ, ನಿನ್ನಂತಹ ಸ್ಥಿತಿಯೇ (ನಿನ್ನ ತಂಗಿ) ಪೋಲ್ಯಾಳಿಗೂ ಬಂದುಬಿಡುತ್ತದೆ, ನಿಸ್ಸಂದೇಹವಾಗಿ" ಎಂದು ಥಟ್ಟನೆ ಅಂದುಬಿಟ್ಟ.
>
> "ಇಲ್ಲ! ಇಲ್ಲ! ಎಂದಿಗೂ ಇಲ್ಲ. ಇಲ್ಲ!" ಎಂದು ಗಟ್ಟಿಯಾಗಿ, ಚಾಕ

> ವಿನಿಂದ ಇರಿದವಳಂತೆ, ಚೀರಿದಳು ಸೋನ್ಯಾ. "ದೇವರು ಇವನ್ನು ಆಗಗೊಡುವುದಿಲ್ಲ."
> "ಅವನು ಇತರರಿಗೆ ಆಗಗೊಟ್ಟಿದ್ದಾನೆ."
> "ಇಲ್ಲ, ಇಲ್ಲ! ದೇವರು ಅವಳನ್ನು ಕಾಪಾಡುತ್ತಾನೆ—ದೇವರು!" ಎಂದಳು, ದುಃಖದಲ್ಲಿ ಅನ್ಯಮನಸ್ಕಳಾಗಿ.
> "ಬಹುಶಃ, ದೇವರು ಇಲ್ಲವೇ ಇಲ್ಲ!" ರಾಸ್ಕೊಲ್‌ನಿಕೋವ್ ನಿರ್ದಿಷ್ಟವಾದ ಕೆಡುಕು ಮನೋವೃತ್ತಿಯಲ್ಲೀ ನುಡಿದ. ಆ ಮೇಲೆ ನಕ್ಕು, ಅವಳ ಕಡೆ ನೋಡಿದ.

ಇದೀಗ ಈ ಮಹಾಕಾದಂಬರಿಯ ಅತ್ಯಂತ ಗಂಭೀರವಾದ ಸಾವು ಬದುಕಿನ ಸವಾಲಿನ ಸಂದರ್ಭ. ಇಲ್ಲೇ ದಾಸ್ತೋವಸ್ಕಿಯ ಸತ್ವಪರೀಕ್ಷೆಯ ತೀರ್ಮಾನ.

ಕಥಾನಾಯಕನಾದ ರಾಸ್ಕೋಲ್ ನಿಕೋವಿನ ಪ್ರಶ್ನೆ ದಾಸ್ತೋವಸ್ಕಿಯ ಇಡಿಯ ಧರ್ಮ—ವೈಚಾರಿಕತೆಗಳ, ದೈವತ್ವ—ಮಾನವತ್ವಗಳ ಇತ್ಯರ್ಥದ ಪ್ರಶ್ನೆ. ರಾಸ್ಕೋಲ್ ನಿಕೋವ್ ಕೇಳಿದ ಪ್ರಶ್ನೆ ಯಾವ ಪ್ರಾಮಾಣಿಕ ವಿಚಾರವಂತನೂ, ಬಾಳಿನ ದುಃಖವನ್ನು ಕಂಡುಂಡ ಯಾವ ವಾಸ್ತವವಾದಿಯೂ ಕೇಳಬೇಕಾದ ನಿರ್ಭಯದ ಸ್ವತಂತ್ರ ಪ್ರಶ್ನೆ. ದೇವರು ಕರುಣಾಮಯಿಯಾದರೆ, ಅವನೇ ಸೃಷ್ಟಿಸಿದ ಈ ಸೃಷ್ಟಿಯಲ್ಲಿ ಈ ತಾರತಮ್ಯಗಳೇಕೆ? ದೇವತೆಯಾದ ಸೋನ್ಯಾಳಂತಹ ಅಮಾಯಕಿ ವೇಶ್ಯೆಯಾಗಿ ಕಾಮಿಗಳ ತೀಟೆಗೆ ದೇಹವನ್ನೊಡ್ಡುವ ಹಿಂಸೆಗೆ ತುತ್ತಾಗಬೇಕೇಕೆ?

ಯೌವ್ವನ ಕಳೆದಮೇಲೆ ಸೋನ್ಯಾಳ ಗಿರಾಕಿಗಳು ಕಡಿಮೆಯಾಗುತ್ತಾರೆ. ಆಗ ಮಕ್ಕಳ ಹೊಟ್ಟೆಗಾಗಿ ತನ್ನ ತಂಗಿ ಪೋಲ್ಯಾಳು ಸೂಳೆಯಾಗಬೇಕಾಗುತ್ತದೆ, ತನ್ನಂತೆಯೇ! ಆ ಪ್ರಶ್ನೆ ಬಂದ ತಕ್ಷಣ ಸೋನ್ಯಾ ದಯಾಮಯಿ ದೇವರು ಅದನ್ನು ಆಗಗೊಂಡನೆನ್ನುತ್ತಾಳೆ. ಆದರೆ ಆ ದೇವರೇ ಅವಳಿಗೆ ಆಗಗೊಟ್ಟಿದ್ದಾನಲ್ಲ? ಆ ದೇವರೇ ಅವಳಂತಹ ಅಮಾಯಕಿಯರನೇಕರನ್ನು ಸೂಳೆಯಾಗಲು ಈಗಾಗಲೇ ಆಗಗೊಟ್ಟಿದ್ದಾನಲ್ಲಾ? ಇನ್ನು ಪೋಲ್ಯಾ ಸೂಳೆಯಾಗಲು ಆಗಗೊಡುವುದು ಅವನ ಕೈವಾಡವೇ ಅಲ್ಲವೇ?

ಸೋನ್ಯಾ ರಾಸ್ಕೋಲ್ ನಿಕೋವ್‌ನ ಪ್ರಶ್ನೆಗೆ ಉತ್ತರಕೊಡುತ್ತಿಲ್ಲ. ಆ ಪ್ರಶ್ನೆಯನ್ನು ದಬಾವಣೆ ಮಾಡುತ್ತಿದ್ದಾಳೆ. ಇಲ್ಲಿ ಕ್ರಾಂತಿಕಾರಿ ವಿಚಾರವಂತ ದಾಸ್ತೋವಸ್ಕಿ, ಪ್ರಾಮಾಣಿಕ ವಾಸ್ತವವಾದಿ ದಾಸ್ತೋವಸ್ಕಿ, ಧಾರ್ಮಿಕ ದಾಸ್ತೋವಸ್ಕಿಗೆ, ನಂಬುಗೆಯ ದಾಸ್ತೋವಸ್ಕಿಗೆ ಶರಣು ಹೋಗಿದ್ದಾನೆ. ಈ ಸೋಲು ಎಷ್ಟು ದಾರುಣವಾಗಿದೆ, ಆ ಮುಂದುವರೆದ ಸಂವಾದದಲ್ಲಿ ನೋಡಿ:

> ಇದ್ದಕ್ಕಿದ್ದಂತೆ ಸೋನ್ಯಾಳ ಮುಖ ಭಯಾನಕವಾಗಿ ಮಾರ್ಪಾಡಾಯಿತು; ಆ ಮುಖದ ಮೇಲೆ ಮಾಂಸದ ಅದುರುವಿಕೆ, ಮಲರೋಗದಂತಹ ಸೆಳೆತ ಷುರುವಾಯಿತು. ಅವಳು ಅವನ ಕಡೆ ಬಾಯಿಗೆಬಾರದ ಛೀಮಾರಿ ಹಾಕುತ್ತಾ ನೋಡಿದಳು, ಆದರೆ ಏನೂ ಹೇಳಲಾಗಲಿಲ್ಲ. ಇದ್ದಕ್ಕಿದ್ದಂತೆ

ಅವಳು ತಾಳಲಾಗದ ಬಿಸಿ ಕಂಬನಿ ಸುರಿಸುತ್ತಾ ತನ್ನ ಮುಖವನ್ನು ಎರಡೂ ಕೈಗಳಿಂದ ಮುಚ್ಚಿಕೊಂಡಳು.

ಸ್ವಲ್ಪ ಹೊತ್ತಾದ ಮೇಲೆ ಅವನೆಂದ: "ನೀನು ಹೇಳುತ್ತಿ, (ನಿನ್ನ ಮಲತಾಯಿ) ಕ್ಯಾಥರೀನ್ ಇವನೋವ್ನಾಳ ತಲೆ ಕೆಡುತ್ತಿದೆ ಎಂದು. ಈಗ ನಿನ್ನ ತಲೆಯೇ ಕೆಡುತ್ತಿದೆ"

ಐದು ನಿಮಿಷ ಕಳೆಯಿತು. ಅತ್ತಿಂದಿತ್ತ, ಅವಳ ಕಡೆ ನೋಡದ ಅವನು ನಿಶಬ್ದವಾಗಿ ಕಾಲುಹಾಕಿದ. ಆ ಮೇಲೆ ಅವಳ ಹತ್ತಿರ ಹೋದ. ಅವನ ಕಣ್ಣು ಮಿಂಚಿದುವು. ಅವಳ ಭುಜಗಳ ಮೇಲೆ ತನ್ನ ಎರಡೂ ಕೈಗಳಿಟ್ಟು ಅವಳು ದುಃಖಿಸುತ್ತಿರುವ ಮುಖದಲ್ಲಿ ನೇರವಾಗಿ ನೋಡಿದ. ಅವನ ದೃಷ್ಟಿ ಒಣಗಿತ್ತು, ಉರಿಯುತ್ತಿತ್ತು, ಕೊರೆಯುತ್ತಿತ್ತು ; ಅವನ ತುಟಿ ಅದುರುತ್ತಿತ್ತು. ಇದ್ದಕ್ಕಿದ್ದಂತೆ ದಿಢೀರನೆ ಉದ್ದಕ್ಕೂ ಬಾಗಿ, ನೆಲದಮೇಲೆ ಬಿದ್ದು, ಅವಳ ಪಾದವನ್ನು ಮುತ್ತಿಟ್ಟ. ಸೋನ್ಯಾ ಭೀತಳಾಗಿ, ಹುಚ್ಚನಿಂದ ಹಿಂತೆಗೆದುಕೊಳ್ಳುವಂತೆ ಕಾಲನ್ನು ಹಿಂತೆಗೆದುಕೊಂಡಳು. ನಿಜಕ್ಕೂ, ಅವನು ಹುಚ್ಚನಂತೆಯೇ ಕಾಣುತ್ತಿದ್ದ.

"ನೀನೇನು ಮಾಡುತ್ತಿದ್ದೀ, ಎಲ್ಲರನ್ನೂ ಬಿಟ್ಟು ನನಗೇನೇ?" ಎಂದು ದನಿಗುಟ್ಟಿದಳು, ಬಿಳಿಚಿಕೊಳ್ಳುತ್ತಾ. ಅವಳ ಹೃದಯ ಮಹಾ ಯಾತನೆಯಿಂದ ಮಿಡಿಯುತ್ತಿತ್ತು.

ಕೂಡಲೇ ಅವನು ಎದ್ದ. "ನಾನು ನಿನಗಲ್ಲ ತಲೆಬಾಗಿದ್ದು. ನಾನು ನರಳುವ ಇಡಿಯ ಮಾನವ ಜನಾಂಗಕ್ಕೇ ಕಾಲು ಬಿದ್ದದ್ದು."

ಇದೊಂದು ಅದ್ಭುತ ಭಯಾನಕ ಸನ್ನಿವೇಶ: ಅಭೂತ ಪೂರ್ವವಾದ ನಾಟಕೀಯ ಸಂದರ್ಭ ; ಸತ್ಯಾಸತ್ಯಗಳ ಸಂದಿಗ್ಧ ಅಗ್ನಿ ದಿವ್ಯ. ಇದನ್ನು ಅರ್ಥಮಾಡಿಕೊಳ್ಳುವುದರಲ್ಲೇ ಇಡಿಯ ಕಾದಂಬರಿಯ ಅರಿವಿದೆ, ದಾಸ್ತೋವಸ್ಕಿಯ ದರ್ಶನ ಸಾಕ್ಷಾತ್ಕರಣವಿದೆ.

ದೇವರಿಲ್ಲವೆಂದು ಸಾರಿದ ರಾಸ್ಕೋಲ್ ನಿಕೋವ್, ಕಾರಣವಿಲ್ಲದೆ ನಗುತ್ತಾನೆ. ಆ ಸಾರುವಿಕೆಯ ಸಿಡಿಲಿಗೆ ಸೋನ್ಯಾ ಮಲರೋಗದವಳಂತೆ ಮುಖದಲ್ಲಿ ಸೆಟೆದುಕೊಳ್ಳುತ್ತಾಳೆ, ಮಾರ್ಪಾಡಗುತ್ತಾಳೆ. ಅವಳನ್ನು ನೋಡಿ, ರಾಸ್ಕೋಲ್ ನಿಕೋವ್ ಅವಳಂತೆ ಅದುರುವ ಸೆಟೆಯುವ ಅವಸ್ಥೆಗೆ ಗುರಿಯಾಗುತ್ತಾನೆ. ಕಾರಣವಿಲ್ಲದೆ ದಿಢೀರನೆ ಅವಳ ಕಾಲು ಬಿದ್ದು ನಮಸ್ಕಾರ ಮಾಡುತ್ತಾನೆ. ಈ ಇಬ್ಬರೂ ಕಾರಣವಿಲ್ಲದ ಒಂದೇ ತರಹೆಯ ಅವಸ್ಥೆಗೆ ಗುರಿಯಾಗಿ, ಒಂದೇ ರೀತಿಯ ಸಂವೇದನೆಗೊಳಗಾಗುತ್ತಾರೆ.

ಇಲ್ಲಿಯ ವ್ಯಾಪಾರ ಮೊದಮೊದಲು ವಾಸ್ತವತೆಯ ನೆಲೆಯಲ್ಲಿ ಶುರುವಾಗಿ ಕೊನೆಗೆ ಅವಾಸ್ತವ ಮಾರ್ಪಾಡುಗಳಿಗೆ ತುತ್ತಾಗಿ ತಮ್ಮ ವೈಚಾರಿಕತೆಯನ್ನು ತಾವೇ ತಮ್ಮ ಮೂಢಪೋ ಅಥವಾ ಎಚ್ಚರಿಕೆಯದೋ ಆದ ನಂಬುಗೆಗಳಿಗೆ ಬಲಿಕೊಟ್ಟುಕೊಂಡುಬಿಡುತ್ತಾರೆ. ಅಥವಾ ಅವರಲ್ಲಿ ಶತಶತಮಾನಗಳಿಂದ ತುಂಬಿಸಿದ್ದ ಅವರಲ್ಲಿನ

ಅಸ್ಥಿಗತವಾದ ಆಸ್ತಿಕತೆ ಅವರ ವೈಚಾರಿಕತೆಯನ್ನು ನುಂಗುವಷ್ಟು ಪ್ರಬಲವಾಗಿರಲಿಕ್ಕೂ ಸಾಕು.

ಸಾಮಾಜಿಕ ವಾಸ್ತವತೆಗೆ ವಾಸ್ತವಿಕ ಪರಿಹಾರವನ್ನು, ಮಾನವೀಯ ಮೌಲ್ಯಗಳ ನೆಲೆಯಲ್ಲೇ, ಮಾನವೀಯತೆಯಲ್ಲೇ ಕಂಡುಕೊಳ್ಳಲು ಹೊರಟ ಲೆನಿನ್‌ನಂತಹ ಕ್ರಾಂತಿಕಾರೀ ರಾಸ್ಕೋಲ್ ನಿಕೋವ್, ಈಗ ಸಾಮಾಜಿಕ ಮತ್ತು ವಾಸ್ತವಿಕ ಜಗತ್ತನ್ನೇ ಮೀರಿನಿಂತ ದೇವರೆಂಬ ಧಾರ್ಮಿಕ ನಂಬುಗೆಗೆ ಮನಸೋತು, ಆ ನಂಬಿಕೆಗೇ ಕಾಲು ಬೀಳುವುದು, ಅಂದರೆ ಎತ್ತಿಯೇ ಇರಬೇಕಾಗಿದ್ದ ವೈಚಾರಿಕ ತಲೆ ನೆಲಕ್ಕುರುಳಿ ನಂಬುಗೆಯ ಕಾಲುಬೀಳುತ್ತಿರುವುದು ನಿಜಕ್ಕೂ ಘೋರವಾದದ್ದು.

ಇಲ್ಲಿ ನಾವು ದಾಸ್ತೋವಸ್ಕಿಯ ಜೀವನದಲ್ಲಿನ ಮಾನಸಿಕ ಪ್ರಬೇಧವನ್ನು ಗಮನಿಸಬೇಕೆಂದು ಕಾಣುತ್ತದೆ. ಅವನೂ ಸತ್ತು ಬದುಕಿದ ಶಾಕಿನವನಲ್ಲವೇ? ಆ ಶಾಕು ಅವನ ಮಲರೋಗವನ್ನು, ಮೂರ್ಛೆರೋಗವನ್ನು ಮತ್ತಷ್ಟೂ ಉಲ್ಬಣಗೊಳಿಸಿತು. ಅವನೊಂದು ರೀತಿಯಲ್ಲಿ ಸಾವುಬದುಕಿನ ಸಂದಿಗ್ಧತೆಯಲ್ಲಿದ್ದ ಅಸ್ವಸ್ಥ. ಅವನ ಬರಹವೂ ಈ ಸಾವಿಗೆ ಹತ್ತಿರವಿರುವ ನೋವಿನ ತುದಿಗಾಲಲ್ಲಿದ್ದ ಅಸ್ವಸ್ಥ ಬರಹಗಾರನೆಂದರೆ ತಪ್ಪಾಗಲಾರದು. ಯಾವಾಗ ಮನಸ್ಸು ತನ್ನ ಕ್ಷೇಮದ ಮೇರೆ ಮೀರುತ್ತದೋ, ಹುಚ್ಚಿನ ಅಂಚನ್ನು ಮುಟ್ಟುತ್ತಿರುತ್ತದೋ ಆಗ ಆ ಮನಸ್ಸಿಗೆ ತನ್ನ ಉತ್ಕಟತೆಯಿಂದಲೇ ಅದಕ್ಕೆ ಬಾಳಿನ ಕೆಲವು ಮಹಾಸತ್ಯಗಳ ದರ್ಶನವಾಗುತ್ತದೆ. ಸಾವನ್ನು ತಬ್ಬಿಬಂದವ ಸಾವನ್ನು ಗೆದ್ದು ಬಾಳನ್ನು ಮರುಹುಟ್ಟಿನಲ್ಲಿ ಕಂಡುಕೊಂಡ ಬಾಳಿಗನಾಗುತ್ತಾನೆ.

ಈ ಮರುಹುಟ್ಟು ದಾಸ್ತೋವಸ್ಕಿಯ ಸಂವೇದನೆಯಲ್ಲಿ ತಿಳಿವಿನ ಮಾಧ್ಯಮವಾಗಿದೆ. ಏಸುವು ಹೇಗೆ ಶಿಲುಬೆಗೇರಿ, ಮಹಾಯಾತನೆಯನ್ನನುಭವಿಸಿ, ಮತ್ತೆ ರಿಸರೆಕ್ಟ್ (resurrect) ಆದನೋ, ಅಂದರೆ ಸಾವಿನಿಂದ ಮತ್ತೆ ಎದ್ದು ಬಂದನೋ, ಹಾಗೇನೇ ಸತ್ತ ಪ್ರತಿಯೊಬ್ಬ ಕ್ರಿಸ್ತಧರ್ಮದವನೂ ತೀರ್ಪಿನ ಮಹಾ ದಿನದಂದು (Judgement day) ಮತ್ತೆ ಎದ್ದೇಳುತ್ತಾನೆಂದು ಕ್ರಿಸ್ತ ಧರ್ಮದಲ್ಲಿ ನಂಬುಗೆ ಇದೆ. ಏಸುವಿನ ಜೀವನದಲ್ಲೇ ಏಸುವು ಮೇರಿ ಮತ್ತು ಮಾರ್ಥಾರ ಸೋದರನಾದ ಲಾಜರಸ್ ಎನ್ನುವವನನ್ನು ಸಾವಿನಿಂದ ಬದುಕಿಸಿದ ಕಥೆ ಬೈಬಲ್ಲಿನಲ್ಲಿ ಒಂದು ಪವಿತ್ರ ಪ್ರಸಂಗವಾಗಿದೆ.

ಲಾಜರಸ್ಸಿನ ಹಾಗೆ ಈ ಕತೆಯಲ್ಲಿನ ರಾಸ್ಕೋಲ್ ನಿಕೋವ್ ಮುದಿ ವಿಧವೆಯನ್ನು ಕೊಲೆ ಮಾಡಿ ಮಾನಸಿಕ ಯಾತನೆಯಲ್ಲಿ ಸತ್ತವ. ಅವನೀಗ ಏಸುವಿನ ಕೃಪೆಯಿಂದ, ದೈವಾನುಗ್ರಹದಿಂದ, ಸಾವಿನಿಂದ ಬದುಕಬೇಕಾಗಿದೆ, ಪುನರ್ಜನ್ಮ ಪಡೆದುಕೊಳ್ಳಬೇಕಾಗಿದೆ. ಆದಕ್ಕಾಗಿ ತನ್ನ ಪ್ರಾಯಶ್ಚಿತ್ತಕ್ಕಾಗಿಯೂ, ತನ್ನಲ್ಲಿ ಆಂತರಿಕವಾಗಿ ಹುದುಗಿದ್ದ ದೈವಭಕ್ತಿಗಾಗಿಯೂ ರಾಸ್ಕೋಲ್ ನಿಕೋವ್ ಸೋನ್ಯಾಳ ಕಾಲು ಬೀಳುತ್ತಾನೆ. ಅವನ ಪಾಲಿಗೆ ಅವಳು ಏಸುವು ಹೇಗೆ ಶಿಲುಬೆಗೇರಿ ಮಹಾಯಾತನೆಯನ್ನು ಅನುಭವಿಸಿದನೋ ಅಂತಹ ಮಹಾಯಾತನೆಯನ್ನು, ಕ್ರೂಸಿಫಿಕ್ಷನ್ನನ್ನು, (crucifixion) ಅವಳು ನಿತ್ಯವೂ ಕಾಮುಕರಿಗೆ ತನ್ನ ಮೈಯೊಡ್ಡಿ ಅನುಭವಿಸುತ್ತಿರುವವರು. ಅವಳು ನಿಜಕ್ಕೂ ಸಂತಳೇ. ಅವಳೇ ಅವನ ಉದ್ಧಾರದ ಬಾಳ ದೇವತೆ. ಅವಳ ಕಾಲು ಬೀಳು

ವುದೇ ಅವನು ದೇವರಲ್ಲಿ ಶರಣಾಗತನಾಗುವುದರ ಸಂಕೇತ. ಅಂದಿನಿಂದ ಅವನು ಸೋನ್ಯಾಳಿಗೆ ಮತ್ತೆ ಮತ್ತೆ ಲಾಜರಸ್ಸಿನ ಪ್ರಸಂಗವನ್ನು ಬೈಬಲ್ಲಿನಲ್ಲಿ ಓದಲು ಕೇಳಿಕೊಳ್ಳುತ್ತಾನೆ. ಆ ಕತೆ ಅವಳು ಓದುತ್ತಿದ್ದಂತೆ ತಾನೂ ಸಾಂಕೇತಿಕವಾಗಿ ತನ್ನ ಪುನರ್ಜನ್ಮದತ್ತ, ಮರುಹುಟ್ಟಿನ ಧಾರ್ಮಿಕ ಬಾಳಿನತ್ತ ಸಾಂಕೇತಿಕವಾಗಿ ಸಾಗುತ್ತಾನೆ.

ಇಲ್ಲಿ ನಾವು ದಾಸ್ತೋವಸ್ಕಿಯ ಈ ಕತೆಯ ಮಹಾ ನಾಯಕ ರಾಸ್ಕೋಲ್ ನಿಕೋವ್ ವೈಚಾರಿಕತೆಯ ಮಹಾ ಸವಾಲಿಗೆ ಎದೆಕೊಡಲಾರದೇ ಧಾರ್ಮಿಕತೆಯ ನಂಬುಗೆಗೆ ಶರಣಾಗತನಾಗುತ್ತೇನೆನ್ನೋಣವೇ? ಯಾವ ಲೆನಿನ್‌ನಂತಹ ಕ್ರಾಂತಿಕಾರಿಯಾಗಬಹುದಾಗಿದ್ದ ತರುಣ ಧಾರ್ಮಿಕ ವಾದಕತೆಗೆ ಸೋತು ಸಿಲುಬೆ ಹೊತ್ತ ಧಾರ್ಮಿಕನಾಗಿ ಬಿಡುತ್ತಾನೆನ್ನೋಣವೇ?

ಅದೇನೇ ಇರಲಿ ಕ್ರೈಮ್ ಅಂಡ್ ಪನಿಷ್‌ಮೆಂಟ್", ಅಪರಾಧ ಮತ್ತು ಶಿಕ್ಷೆ' ಕತೆ ಬಾಳಿನ ಈ ಮೂಲಭೂತ ಪ್ರಶ್ನೆಗಳಾದ ಹಿಂಸೆ, ಶೋಷಣೆ ಇವುಗಳ ವಿರುದ್ಧ ಮಾನವೀಯ ಹೋರಾಟ ಅಥವಾ ದೈವದಲ್ಲಿ ಶರಣಾಗತಿ ಇವುಗಳ ತಿಕ್ಕಾಟವನ್ನು ನಮ್ಮ ಕಣ್ಣುಮುಂದೆ ಕಟ್ಟಿ ತೋರಿಸುತ್ತದೆ.

ಈ ಕತೆಯಲ್ಲಿ ದೈವ ಕೃಪೆಯೆನ್ನುವಂತೆ ರಾಸ್ಕೋಲ್ ನಿಕೋವ್ ಮತ್ತು ಸೋನ್ಯಾರ ಕಷ್ಟಗಳ ಪವಾಡದಂತೆ ಕರಗಿಹೋಗುತ್ತವೆ. ರಾಸ್ಕೋಲ್ ನಿಕೋವ್‌ಗೆ ತಂಗಿಯನ್ನು, ತಾಯಿಯನ್ನು ಸಾಕುವ ಜವಾಬ್ದಾರಿ ತಂಗಿಗೆ ಸಿಕ್ಕ ಅದೃಷ್ಟವಂತ ಗಂಡನಿಂದ, ಮತ್ತೆ ಅವಳಿಗೆ ಅಕಸ್ಮಾತ್ತಾಗಿ ಪ್ರಾಪ್ತವಾದ ಆಸ್ತಿಯಿಂದ ತಪ್ಪಿಹೋದಂತೆ, ಸೋನ್ಯಾಳಿಗೆ ಸಿಗುವ ಅಕಸ್ಮಾತ್ತಾದ ಆಸ್ತಿಯೆಂದು ಅವಳ ಸಂಸಾರಿಕ ಜವಾಬ್ದಾರಿಯನ್ನೂ ಮಾಯಮಾಡಿಬಿಡುತ್ತದೆ. ಇವು ಕತೆಯ ಕಲಾ ದೃಷ್ಟಿಯಿಂದ ನೋಡುವುದಾದರೆ ಕಷ್ಟಗಳಿಂದ ಸಲೀಸಾಗಿ ಜಾರಿಸುವ ಸನ್ನಾಹಗಳೆಂದೇ ಹೇಳಬೇಕಾಗುತ್ತದೆ. ಆದರೆ ಇವು ನಾವು ಒಪ್ಪುವಂತೆ, ನಂಬಲು ಅರ್ಹವಾದ ಪರಿಹಾರಗಳೇ ಆದರೂ ಈ ಕತೆ ಎಬ್ಬಿಸುವ ಪ್ರಶ್ನೆಗಳ ವಿಪ್ಲವಕ್ಕೆ ಪಲಾಯನವೇ ಮಾಡಿದಂತಿವೆ. ಇದಕ್ಕೆ ಸಾಕ್ಷಿ ಏನೆಂದರೆ ಯಾವ ಬಗ್ಗಡ ಬಡತನದ ಸಮಾಜಕ್ಕೆ ಮುಮ್ಮರ ಮರುಗಿ ರಾಸ್ಕೋಲ್ ನಿಕೋವ್ ಶೋಷಣೆಯ ಸಾಂಕೇತಿಕ ಕೊಲೆ ಮಾಡುತ್ತಾನೆಯೋ ಅಂತಹ ಶೋಷಣೆಯ ಕೊಲೆಯನ್ನೇ ಲೆನಿನ್ ಮಹಾನುಭಾವ ಆಮೇಲೆ ಪ್ರತ್ಯಕ್ಷವಾಗಿ ಮಾಡಿಯೇ ಆ ರಷ್ಯಾ ರಾಷ್ಟ್ರವನ್ನು ಈಗಿನ ಅತ್ಯಂತ ಪ್ರಬಲವಾದ ಅಮೆರಿಕಾ ರಾಷ್ಟ್ರಕ್ಕೆ ಶಕ್ತಿಯಲ್ಲಿ ಯಾವ ರೀತಿಯಲ್ಲೂ ಕಡಿಮೆಯಿಲ್ಲದಂತೆ ಮಾಡಲು ಕಾರಣನಾಗಿದ್ದಾನಷ್ಟೇ ಅಲ್ಲ, ಈಗಿನ ಪ್ರಪಂಚದ ಮೂರನೇ ಒಂದು ಪ್ರಮಾಣದ ಜನಸಂಖ್ಯೆ ರಷ್ಯಾ ಕ್ರಾಂತಿಯ ಕೆಂಪು ಪ್ರಭಾವದಡಿಯಲ್ಲಿ ಬರಲು ಕಾರಣ ಪುರುಷನೂ ಆಗಿದ್ದಾನೆ ಎನ್ನಬಹುದು. ಅಂದರೆ ಕ್ರಿಸ್ತಧರ್ಮ ಅಥವಾ ಯಾವದೇ ದೇವರನ್ನು ನಂಬಿದ ಧರ್ಮತರಲಾರದ ಮಹಾಕ್ರಾಂತಿಯನ್ನು ಮಾನವೀಯತೆಯ ಮಾನವ ಪ್ರೇಮವೊಂದೇ, ಅಸಮತೆಯ ಮಹಾಮಂತ್ರವೊಂದೇ, ಶೋಷಣೆಯ ವಿರುದ್ಧ ಹೋರಾಡಿದ ರಕ್ತಕ್ರಾಂತಿಯೊಂದೇ ಈ ಮಹಾ ಪರಿವರ್ತನೆಯನ್ನು ಪ್ರಪಂಚದಲ್ಲೇ ಮೊಟ್ಟಮೊದಲಬಾರಿಗೆ ತಂದದ್ದಾಗಿದೆಯಲ್ಲವೇ? ಇಂತಹ, ನಾವೆಲ್ಲರೂ ನಮ್ಮ ಕಣ್ಣಮುಂದೆ ಜೀವಂತವಾಗಿ ನೋಡುತ್ತಿರುವ ಕ್ರಾಂತಿ

ಯತ್ತಲೇಯಲ್ಲವೇ, ರಾಸ್ಕೋಲ್ ನಿಕೋವ್ ತನ್ನ ಮೊದಲ ದಿಟ್ಟ ಹೆಜ್ಜೆ ಇಟ್ಟವನು? ಆ ಹೆಜ್ಜೆ ಅವನು ಹಿಂತೆಗೆದುಕೊಳ್ಳಲು ಅವನು ಏನು ಉತ್ತರವನ್ನು ಕೊಟ್ಟಾನು? ಅವನ ಆತ್ಮೀಯಳೂ, ಅವನ ದುಃಖದಲ್ಲಿ ಪಾಲ್ಗೊಂಡವಳೂ ಆದ ಸೋನ್ಯಾ ಸಂತ ಳಾದರೂ ಅದಕ್ಕೆ ಯಾವ ಸಮಜಾಯಿಷಿಯನ್ನು ಕೊಟ್ಟಳು. ಈ ಹಿಂತೆಗೆಯುವಿಕೆಗೆ ರಾಸ್ಕೋಲ್ ನಿಕೋವಿಗಾಗಲೀ, ಸೋನ್ಯಾಳಿಗಾಗಲೀ ಯಾವ ಉತ್ತರವೂ ಇಲ್ಲ. ಹೀಗಾಗಿ ಈ ಕತೆ ರೆವಲೂಷನರಿ (revolutionary) ಯಾಗಬೇಕಾಗಿದ್ದುದು ರಿಯಾಕ್ಷನರಿ (reactionary) ಯಾಗಿ ಬಿಡುತ್ತದೆ, ಕ್ರಾಂತಿಕಾರೀಕತೆ ಪ್ರತಿಗಾಮಿ ಕತೆಯಾಗಿಬಿಡುತ್ತದೆ.

ಈ ಮಾತನ್ನು ಇಲ್ಲಿ ಕಾಣಿಸಲೇಬೇಕಾಗಿದೆ ಯಾಕೆಂದರೆ ಈ ಕತೆ ಬಾಳಿನ ಮೂಲ ಭೂತ ಪ್ರಶ್ನೆಗಳಾದ ಹಿಂಸೆ, ಶೋಷಣೆ, ಪ್ರೇಮ, ಸಮತೆಗಳನ್ನು ಗಟ್ಟಿಯಾಗಿಯೇ ಕೇಳು ತ್ತದೆ, ಆ ದಿಶೆಯಲ್ಲಿ ದಿಟ್ಟವಾದ ಹೆಜ್ಜೆಗಳನ್ನೂ ಇಡುತ್ತದೆ. ಆದರೆ ಗೀತೆಯಲ್ಲಿ ಕೃಷ್ಣನು, ಎಲ್ಲಧರ್ಮಗಳನ್ನೂ ಪರಿತ್ಯಜಿಸಿ ನನ್ನೊಬ್ಬನಲ್ಲೇ ಶರಣು ಹೋಗು ಎಂದು ಅರ್ಜುನನ ಹಿಂಸೆಯ ಮೂಲಭೂತ ಪ್ರಶ್ನೆಯನ್ನು ಹತ್ತಿಕ್ಕುವಂತೆ, ಇಲ್ಲಿ ಸೋನ್ಯಾ ಇವನೆಲ್ಲಾ ಕ್ರಾಂತಿಕಾರೀ ಪ್ರಶ್ನೆಗಳ ದಳ್ಳುರಿಗೆ ನೀರೆರಚಿ ಏಸುವಿನಲ್ಲಿ ಮರೆಹೋಗುವಂತೆ ಮಾಡು ತ್ತಾಳೆ. ಅವನಿಗೆ ತನ್ನ ಶಿಲುಬೆಯನ್ನೂ ಬೈಬಲನ್ನೂ ದೀಕ್ಷೆಯಾಗಿ ಕೊಟ್ಟುಬಿಡುತ್ತಾಳೆ.

ಇನ್ನು ಕತೆ ಕೆಲವು ಆಶ್ಚರ್ಯಕರವಾದ, ಪವಾಡಗಳೇ ಎನ್ನಬಹುದಾದ ಘಟನೆ ಗಳಲ್ಲಿ ಸಾಗುತ್ತಾ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ಕಾಣಿಸುತ್ತಾ ಸಾಗುತ್ತದೆ.

ರಾಸ್ಕೋಲ್ ನಿಕೋವ್ ಒಂದು ದಿನ ತನ್ನ ಅಪರಾಧದ ಗುಟ್ಟನ್ನು ಸೋನ್ಯಾಳಿಗೆ ಕೂಲಂಕಷವಾಗಿ ನಿವೇದಿಸಿಬಿಡುತ್ತಾನೆ. ಈ ಗುಟ್ಟನ್ನು ಕದ್ದು ಕೇಳಿದ ಸ್ವಿಡ್ರಿಗೇಲವ್ ಅದರ ಲಾಭ ಪಡೆಯಲು ನೋಡುತ್ತಾನೆ. ತಾನು, ರಾಸ್ಕೋಲ್‌ನಿಕೋವಿನ ತಂಗಿ ದೂನ್ಯಾಳನ್ನು ತನ್ನಲ್ಲಿ ಕೆಲಸಕ್ಕಿದ್ದಂದಿನಿಂದಲೂ ಪ್ರೀತಿಸಲು ನೋಡಿದವನಾದ್ದರಿಂದ ಈಗಲಾದರೂ ಅವಳು ತನಗೆ ದಕ್ಕಬಹುದು, ತನ್ನನ್ನು ಮದುವೆಯಾಗಬಹುದೆಂದು ಆಶಿಸಿ, ಅವಳಿಗೆ ಈ ಗುಟ್ಟು ಹೇಳಿ, ಅವಳು ತನ್ನನ್ನು ಒಲಿದರೆ ಮಾತ್ರ ಅವಳ ಅಣ್ಣನನ್ನು ಉಳಿಸುವುದಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಾನೆ. ಅವಳು ಒಪ್ಪದಿದ್ದಕ್ಕೆ ಅವಳಿಗೆ ತನ್ನ ಪಿಸ್ತೂಲನ್ನು ತೋರಿಸುತ್ತಾನೆ. ಈ ಹೋರಾಟದಲ್ಲಿ ದೂನ್ಯಾ ಸ್ವಿಡ್ರಿಗೇಲವ್‌ನನ್ನು ಪಿಸ್ತೂಲಿನಿಂದ ಹೊಡೆಯಲು ಪ್ರಯತ್ನಿಸುತ್ತಾಳೆ. ಗುಂಡು ತಪ್ಪಿ ಹೋಗುತ್ತದೆ. ಕೊನೆಗೆ ತನ್ನ ಜೀವನಕ್ಕೆ ಮಹಾಜಿಗುಪ್ಸೆಗೊಂಡ ಸ್ವಿಡ್ರಿಗೇಲವ್ ತಾನೇ ತನ್ನನ್ನು ಗುಂಡಿಕ್ಕಿ ಕೊಂದು ಕೊಂಡುಬಿಡುತ್ತಾನೆ. ಅವನ ಆಸ್ತಿಯ ಮಹಾಪಾಲನ್ನು ದೂನ್ಯಾಳಿಗೆ ಪ್ರಾಯಶ್ಚಿತ್ತಕ್ಕೂ ಹಾಗೂ ತನಗೆ ಅವಳ ಮೇಲಿದ್ದ ಪ್ರೀತಿಗಾಗಿಯೂ ಬರೆದುಬಿಟ್ಟು, ದೂನ್ಯಾಳ ಸುಖಜೀವನಕ್ಕೆ ಮತ್ತಷ್ಟು ಕಾರಣನಾಗುತ್ತಾನೆ.

ಇದಾದನಂತರ ರಾಸ್ಕೋಲ್ ನಿಕೋವ್ ಸೋನ್ಯಾಳ ಆದೇಶಕ್ಕೆ ತಲೆಬಾಗಿ ಪೋಲೀಸರ ಮುಂದೆ ತನ್ನ ಅಪರಾಧವನ್ನು ಬಹಿರಂಗವಾಗಿ ಒಪ್ಪಿಕೊಂಡು ಬಿಡುತ್ತಾನೆ. ಇದಕ್ಕೆ ಅವನಿಗೆ ಎಂಟುವರ್ಷದ ಸೈಬೀರಿಯಾ ಜೇಲಿನ ಶಿಕ್ಷೆಯಾಗುತ್ತದೆ. ಈ ಕಡಿಮೆ ಪ್ರಮಾಣದ ಶಿಕ್ಷೆಗೆ ಪಾರ್ಫಿರಿ ಎನ್ನುವ ಪತ್ತೇದಾರಿ ಪೋಲೀಸ್ ಅಧಿಕಾರಿ. ಮೊದಲಿ

ನಿಂದಲೂ ರಾಸ್ಕೋಲ್ ನಿಕೋವಿನ ಅಪರಾಧದ ಗುಮಾನಿಯಿದ್ದ ಪಾರ್ಫಿರಿ ಇವನ ಶತ್ರುವೇಷದ ಮಿತ್ರನೆಂದೇ ಹೇಳಬೇಕು. ಅವನು ರಾಸ್ಕೋಲ್ ನಿಕೋವ್‌ನನ್ನು ಬೆಕ್ಕು ಇಲಿಯನ್ನು ಬೇಟೆಯಾಡುವಂತೆ ಬೇಟೆಯಾಡಿದರೂ ಅವನು ರಾಸ್ಕೋಲ್ ನಿಕೋವಿನಲ್ಲಿ ನೈತಿಕ ಎಚ್ಚರವನ್ನು ಉಂಟುಮಾಡಿದ ನೈತಿಕ ಗುರುವೇ ಸರಿ.

ಹೀಗೆ ರಾಸ್ಕೋಲ್ ನಿಕೋವಿಗೆ ಪಾರ್ಫಿರಿ ನೈತಿಕ ಎಚ್ಚರವನ್ನು ಮೂಡಿಸಲು ಪರೋಕ್ಷವಾಗಿ ಕಾರಣನಾದ ಗುರುವಾದರೆ, ಸೋನ್ಯಾ ಅವನಲ್ಲಿ ಧಾರ್ಮಿಕ ಮರುಹುಟ್ಟನ್ನು ಕೊಟ್ಟ ಧರ್ಮಮಾತೆಯೇ ಎನ್ನಬೇಕು.

ರಾಸ್ಕೋಲ್ ನಿಕೋವ್‌ಗೆ ಶಿಕ್ಷೆಯಾದಾಗ, ಸೋನ್ಯಾ ತನ್ನನ್ನವಲಂಬಿಸಿದ ಮಕ್ಕಳಿಗೆ ತನಗೆ ಸಿಕ್ಕ ಆಸ್ತಿಯ ವ್ಯವಸ್ಥೆ ಮಾಡಿ, ತಾನು ಮಾತ್ರ ರಾಸ್ಕೋಲ್ ನಿಕೋವ್ ಇದ್ದ ಸೈಬೀರಿಯಾದ ಜೈಲಿನ ಹತ್ತಿರ ಒಂದು ಹಳ್ಳಿಯಲ್ಲಿದ್ದು ಈ ಖೈದಿಗಳ ಸೇವೆ ಮಾಡುತ್ತಾಳೆ. ಇದಕ್ಕೆ ಅವರೆಲ್ಲರೂ ಈ ಕರುಣೆಯ ತಾಯಿಯನ್ನು "ಚಿಕ್ಕ ತಾಯಿ" (Little Mother) ಎಂದು ಕರೆಯುತ್ತಾರೆ.

ರಾಸ್ಕೋಲ್ ನಿಕೋವ್‌ಗೆ ತನ್ನ ಪ್ರೇಮದೇವತೆಯ ಒಡನಾಟವಿದ್ದುದರಿಂದ ಅವನ ಜೈಲುವಾಸ ಅವನಿಗೆ ಭರಿಸುವಂತಾಗುತ್ತದೆ. ಇಲ್ಲಿಗೆ ಕತೆ ಮುಗಿಯುತ್ತದೆ.

ದಾಸ್ತೋವಸ್ಕಿ ಮನಸ್ಸಿನ ಮಹಾ ಸಂಗ್ರಾಮದ ದೈತ್ಯ. ಅವನ ಈ ಮಾನಸಿಕ ಯುದ್ಧವೇ ಈ 'ಅಪರಾಧ ಮತ್ತು ಶಿಕ್ಷೆ'. ಒಬ್ಬ ಮಾನವಜೀವಿ ಇನ್ನೊಬ್ಬ ಮಾನವ ಜೀವಿಯನ್ನು ಕೊಲ್ಲಬಹುದೇ ? ಅದರಲ್ಲೂ ನಿಸ್ಸಹಾಯಕವಾದ ನಿರ್ಬಲವಾದ ಮುದಿ ಹೆಣ್ಣು ಜೀವವನ್ನು ? ಆ ಮುದಿ ಗಿರವಿ ಮುದುಕಿಯನ್ನು ಕೊಂದ ರಾಸ್ಕೋಲ್ ನಿಕೋವ್, ಅವನ ಕನಸಿನಲ್ಲಿನ ಮಿಕೋಲ್ಕಾ ಒಂದು ಮುದಿ ಹೆಣ್ಣು ಕುದುರೆಯನ್ನು ಕೊಂದವನಿಗಿಂತ ಹೇಗೆ ಭಿನ್ನ ? ಗಿರವಿಯವಳು ಗಂಡನಿಲ್ಲದ ಅಬಲೆ, ಮೇಲತ್ತೂ ಮುದುಕಿ ; ಹೆಣ್ಣಾಗಿ, ವಿಧವೆಯಾಗಿ, ಮುದುಕಿಯಾಗಿ ಅವಳು ಮುಮ್ಮಡಿಯಾಗಿ ದುರ್ಬಲೆ. ಅವಳು ತನ್ನ ಜೀವನೋಪಾಯದ ಹೆಸರಿನಲ್ಲಿ ಅನೇಕರನ್ನು ಶೋಷಿಸುತ್ತಿರುವ ಶೋಷಕಿ, ಸರಿ. ಆದರೆ ಅವಳ ಈ ಶೋಷಕ ಜೀವನವೂ ಈ ಶೋಷಕ ಸಮಾಜದಿಂದಲೇ ಅನಿವಾರ್ಯವಾಗಿ ನಿರ್ಮಿತವಾದದ್ದಲ್ಲವೇ ? ಅದಕ್ಕೆ ಇವಳನ್ನು ಕೊಂದರೆ ಶೋಷಣೆಯನ್ನು ಕೊಂದಂತಾದೀತೇ ? ಇವಳೇ ಶೋಷಕ ಸಮಾಜದ ಶೋಷಕಿಯಲ್ಲವೇ ? ಹೆಣ್ಣಿಗೆ, ವಿಧವೆಗೆ, ಮುದುಕಿಗೆ ಈ ಶೋಷಕ ಸಮಾಜದಲ್ಲಿ ತಾವೆಲ್ಲಿ ? ಅಂದಾಗ ರಾಸ್ಕೋಲ್ ನಿಕೋವ್ ಕೊಂದದ್ದು ಶೋಷಕ ಸಮಾಜದಲ್ಲಿ ತನ್ನಂತೆ ಶೋಷಣೆಗೊಳಗಾದ ಶೋಷಿತ ಅಮಾಯಕಿಯನ್ನೇ ಅಲ್ಲವೇ ?

ಈ ಎಲ್ಲ ಸಂಶಯ, ಶಂಕೆ, ಆತಂಕಗಳ ಬಿರುಗಾಳಿಯನ್ನೆಬ್ಬಿಸುವ ಆತ್ಮಶೋಧದ ಮಹಾಪ್ರಗಾದ ದಾಸ್ತೋವಸ್ಕಿಯ 'ಅಪರಾಧ ಮತ್ತು ಶಿಕ್ಷೆ'. ಇದು ಸೋತಿರಬಹುದು, ಆದರೆ ಇದರ ಸೋಲು ಮಹಾಸೋಲಾಗಿರುವುದರಿಂದ, ಇದು ಒಂದು ಗೆಲುವೇ, ಸೋತು ಗೆದ್ದಿರುವಿಕೆಯೇ, ಎನ್ನಬಹುದಲ್ಲವೇ ? !

ದಾಸ್ತೋವಸ್ಕಿಯ 'ದ ಗ್ಯಾಂಬ್ಲರ್': ಒಂದು ವಿಶ್ಲೇಷಣೆ

ಡಾ|| ಆರ್. ರಾಮಚಂದ್ರ

'ಬ್ರದರ್ಸ್ ಕರಮಜೊವ್', 'ಕ್ರೈಮ್ ಅಂಡ್ ಪನಿಷ್ಮೆಂಟ್', 'ದ ಇಡಿಯಟ್', 'ದ ಪೊಸೆಸ್ಡ್'—ಇವು ದಾಸ್ತೋವಸ್ಕಿಯ ಕಾದಂಬರಿ ಪ್ರಪಂಚದ ಶಿಖರಗಳು. ಬಹಳಷ್ಟು ಓದುಗರು ಈ ನಾಲ್ಕು ಕೃತಿಗಳಿಗೇ ಮಾರುಹೋಗಿ ದಾಸ್ತೋವಸ್ಕಿಯ ಕೆಲವು 'ಕಿರಿಯ' ಕಾದಂಬರಿಗಳ ಸಾಧನೆಯನ್ನು ಗುರುತಿಸದೇ ಬಿಟ್ಟಿದ್ದಾರೆ. ಉದಾಹರಣೆಗೆ, 'ಕ್ರೈಮ್ ಅಂಡ್ ಪನಿಷ್ಮೆಂಟ್' ಕಾದಂಬರಿಯನ್ನು ಬರೆದ ವರ್ಷದಲ್ಲಿ ದಾಸ್ತೋವಸ್ಕಿಯು ಬರೆದ 'ದ ಗ್ಯಾಂಬ್ಲರ್': ಅದು ಜೂಜುಕೋರ ವ್ಯಕ್ತಿಯ ಅತ್ಯಂತ ಸೂಕ್ಷ್ಮವಾದ, ಕರಾರುವಾಕ್ಕಾದ ವಿಶ್ಲೇಷಣೆ ಎಂದು ಸಾಧಾರಣವಾಗಿ ಮೆಚ್ಚುಗೆ ಗಳಿಸಿದೆ. ಆದರೆ 'ದ ಗ್ಯಾಂಬ್ಲರ್' ಕೇವಲ ವ್ಯಕ್ತಿಯೊಬ್ಬನ ಮನೋವಿಕಾರವನ್ನು ವಿಶ್ಲೇಷಿಸುವ ಕಾದಂಬರಿಯಲ್ಲ; ಒಂದು ನಾಗರಿಕತೆಯ ಕಟುಟೀಕೆಯನ್ನೂ, ಮಾನವನ ಅಸ್ತಿತ್ವದ ಬಗ್ಗೆ ತಾತ್ವಿಕ ಸತ್ಯವನ್ನು ಒಳಕೊಂಡಿರುವ ಕಲಾತ್ಮಕ ಕೃತಿ.

'ದ ಗ್ಯಾಂಬ್ಲರ್‌ನ' ಕತೆಯ ಸ್ಥಳ ಜರ್ಮನಿಯ ರೂಲೆಟನ್‌ಬರ್ಗ್. ಆ ಪಟ್ಟಣದ ರೂಲೆಟ್ ಮತ್ತು ಇತರ ಬಗೆಯ ಜೂಜಾಟಗಳು ಎಲ್ಲ ಐರೋಪ್ಯ ದೇಶಗಳಿಂದ ಜನರನ್ನು ಆಕರ್ಷಿಸಿವೆ. ಕಾದಂಬರಿಯ ನಿರೂಪಕ ಅಲೆಕ್ಸಿಸ್ ಒಬ್ಬ ರಷ್ಯನ್ ಯುವಕ; ನಿವೃತ್ತ ರಷ್ಯನ್ ಜನರಲ್‌ನೊಬ್ಬನ ಪರಿವಾರದಲ್ಲಿ ಟ್ಯೂಟರ್. ಉಳಿದ ಪಾತ್ರಗಳಂತೆ ಅವನೂ ತನ್ನ ನಾಡಿನಿಂದ ಹೊರಗೆ, ರೂಲೆಟನ್‌ಬರ್ಗ್‌ನ ಐರೋಪ್ಯ ಸಮುದಾಯದಲ್ಲಿದ್ದಾನೆ. ಈ ನಿರೂಪಕನ ಮೂಲಕ ದಾಸ್ತೋವಸ್ಕಿ ಒಂದು ಮುಖ್ಯವಾದ ಪ್ರಶ್ನೆಯನ್ನು ಮಂಡಿಸುತ್ತಾನೆ: ಹಣವನ್ನೇ ಪರಮ ಮೌಲ್ಯವನ್ನಾಗಿ ಮಾಡಿಕೊಳ್ಳುವ ನಾಗರಿಕತೆಯಲ್ಲಿ ಜೂಜಾಡಿ ಹಣ

ಬಾಚಬೇಕೆನ್ನುವ ಆಸೆ ಬಂಡವಾಳವನ್ನು ಹೂಡುವ ಮಾತ್ರದಿಂದ ಲಾಭ ದೋಚಬೇಕೆನ್ನುವ ಆಸೆಗಿಂತಲೂ ಅನೈತಿಕವಾಗಲು ಹೇಗೆ ಸಾಧ್ಯ? ಈ ಮೊನಚಾದ ಪ್ರಶ್ನೆ ಅಲೆಕ್ಸಿಸ್‌ನಂತಹ 'ಪ್ರಾತಿನಿಧಿಕ' (typical) ಮನುಷ್ಯನನ್ನು ಕೆಣಕಿಸುವಂಥ ಜಗತ್ತು ದ ಗ್ಯಾಂಬ್ಲರ್‌ನಲ್ಲಿ ಸೃಷ್ಟಿಯಾಗಿದೆ. ಕಾದಂಬರಿಯ ಬಂಡವಾಳಶಾಹಿ ಜಗತ್ತಿನಲ್ಲಿ ಹಣ ಮಾನವಿಕ ಸಂಬಂಧಗಳು ಮುರಿದುಬೀಳುವಂತೆ ಮಾಡುತ್ತದೆ. ಜನರಲ್‌ನು ತನ್ನ ಮಕ್ಕಳ ಇನ್ಶುರೆನ್ಸ್ ಹಣವನ್ನು ರೂಲೆಟ್‌ನಲ್ಲಿ ಸೋತು, ರಷ್ಯದಲ್ಲಿ ಖಾಯಿಲೆಯಿಂದ ನರಳುತ್ತಿರುವ 'ಅಜ್ಜಿ'ಯೊಬ್ಬಳ ಸಾವನ್ನೇ ಎದುರುನೋಡುತ್ತಿದ್ದಾನೆ—ಅವಳ ಆಸ್ತಿಯಲ್ಲಿ ಪಾಲು ಸಿಗಬಹುದೆಂಬ ಆಸೆಯಿಂದ. ಅವನಿಗೆ ಹಣ ಬೇಕಾಗಿರುವುದು—ಅದು ರೂಲೆಟ್‌ನ ಮೂಲಕವಾಗಲಿ, ಅಜ್ಜಿಯ ಸಾವಿನ ಮೂಲಕವಾಗಲಿ—ಅವನು ಮರುಳಾಗಿರುವ ಮೆಡ್‌ಮೊಸೇಲ್ ಬ್ಲಾಂಷ್ ಎಂಬ ಫ್ರೆಂಚ್ ಚೆಲುವೆಣ್ಣಿನ ಸಹವಾಸ ಬೆಳೆಸಲು. ಈ ಹೆಣ್ಣಾದರೂ ಜೂಜಾಡುವವರಿಗೆ ಬಡ್ಡಿ ಮೇಲೆ ಹಣ ನೀಡುತ್ತಾಳೆ. ಅವಳು ಸುಂದರಿ; ಆದರವಳ ಸೌಂದರ್ಯ ಕ್ರಯಕ್ಕಿದೆ. ಜನರಲ್‌ನಿಗೆ ಸಾಲಕೊಟ್ಟ ಅವನ ಫ್ರೆಂಚ್ ಸ್ನೇಹಿತ ಡಿಗ್ರೊ, ಜನರಲ್‌ನನ್ನು ತನ್ನ ಮೋಹದಲ್ಲಿ ಸಿಕ್ಕಿಸಿಕೊಂಡ ಮೆ. ಬ್ಲಾಂಷ್, ಮತ್ತು ಅವಳ ಅಮ್ಮ ಎಲ್ಲರೂ ನಿತ್ಯವೂ ಕಾತುರತೆಯಿಂದ ಟೆಲಿಗ್ರಾಂ ಕಳುಹಿಸುತ್ತಲೇ ಇರುತ್ತಾರೆ, 'ಅಜ್ಜಿ ಸತ್ತಳಾ?' ಎಂದು. ದಿಢೀರನೆ ಧನಿಗಳಾಗಬೇಕೆಂಬ ಎಲ್ಲರಿಗೂ ಆಸೆ. ಹೀಗಿರುವಾಗ ಜೂಜಾಟ ಬಂಡವಾಳಶಾಹಿ ವ್ಯವಸ್ಥೆಯನ್ನು ಪ್ರತಿಬಿಂಬಿಸುವುದಿಲ್ಲವೆ? "ಇಡೀ ಪ್ರಪಂಚದ, ಅದರಲ್ಲೂ ನಮ್ಮ ರಷ್ಯಾದ ಪತ್ರಿಕೆಗಳ ದೈನ್ಯವನ್ನು ನಾನು ಸಹಿಸಲಾರೆ. ಪ್ರತಿ ಬೇಸಗೆಯಲ್ಲಿ ಪತ್ರಿಕೆಕಾರರು ಬರೆಯುವುದು ಎರಡೇ ವಿಷಯಗಳ ಬಗ್ಗೆ: ಒಂದು, ಜರ್ಮನಿಯ ಜೂಜಿನಂಗಡಿಗಳ ಸೊಗಸು, ಅಲಂಕಾರ, ಆಡಂಬರ; ಇನ್ನೊಂದು, ಜೂಜಿನ ಟೇಬಲ್ ಮೇಲೆ ಚೆಲ್ಲಾಡಿ ಬಿದ್ದಿರುವುದಾಗಿ ನಂಬಲ್ಪಡುವ ಚಿನ್ನದ ರಾಶಿ. ಈ ವರದಿಗಾರರಿಗೆ ಯಾವ ಸಂಭಾವನೆಯೂ ಸಿಗುವುದಿಲ್ಲ; ಆದರೂ ನಿರ್ಲಿಪ್ತವಾದ ದಾಸ್ಯಭಾವದಲ್ಲಿ ಇವನ್ನೆಲ್ಲ ಬರೆಯುತ್ತಾರೆ"—ಎನ್ನುತ್ತಾನೆ ಅಲೆಕ್ಸಿಸ್. ಬಂಡವಾಳ ಬಡ್ಡಿ ಗಂಟೆ ಎರಡು ಗಂಟೆಗಳಲ್ಲಿ ಗಂಟು ಮಾಡುವಂತಹದರಿಂದಾದ ನಾಗರಿಕತೆಯಲ್ಲಿ ಆದಷ್ಟು ಬೇಗ ಹಣಗಳಿಸಬೇಕೆಂಬ ಜೂಜುಕೋರನ ದಿಸೆ ಕೊಳಕಾಗಲು ಸಾಧ್ಯವಿಲ್ಲ, ಅಲೆಕ್ಸಿಸ್ ಪ್ರಕಾರ: ಸಣ್ಣ ಪಣಕಟ್ಟುವವರ 'ಅಲ್ಪ ಲೋಭ' ಮತ್ತು ದೊಡ್ಡ ಪಣವನೊಡ್ಡಿ ಜೂಜಾಡುವವರ ಲೋಭ–ಇವುಗಳ ನಡುವೆ ನೈತಿಕ ಅಂತರವಿಲ್ಲವೇ ಇಲ್ಲ.

ಇಂತಹ ನಾಗರಿಕತೆಯಲ್ಲಿ ಪ್ರಾಮಾಣಿಕವಾಗಿಯೇ ಹಣವನ್ನು ಹೇರಳವಾಗಿ ಗಳಿಸಬೇಕೆಂಬ ಉದ್ದೇಶ ಸಹ ಮಾಲಿನ್ಯತೆಯಿಂದ ಕೂಡಿದ್ದು. ಇದನ್ನು ನಿರೂಪಿಸಲು ಅಲೆಕ್ಸಿಸ್ ಒಂದು ಸೆಂಟಿಮೆಂಟಲ್ ಕತೆ ಹೇಳುತ್ತಾನೆ: ಪ್ರಾಮಾಣಿಕ ಮುದಿತಗಾ ಜರ್ಮನನೊಬ್ಬನು ತನ್ನಿಬ್ಬರ ಮಕ್ಕಳಲ್ಲಿ ಕಿರಿಯನನ್ನು ಜೀತಕ್ಕೆ ಮಾರಿ, ಹಿರಿಯನನ್ನು ನಲವತ್ತು ವರ್ಷಗಳವರೆಗೆ ದುಡಿಸಿ ದುಡಿಸಿ ಹಣ ಕೂಡಿಸಿದುತ್ತಾನೆ: ನಂತ ಹಿರಿಮಗನನ್ನೇ ಕಾದು ಕೆನ್ನೆ ಬತ್ತಿಸಿಕೊಂಡ ಹೆಣ್ಣೊಂದಿಗೆ ಅವನ ಮದುವೆಮಾ ಮುದಿ ತಂದೆ ಸಾಯುತ್ತಾನೆ; ಮಗನೂ ಅದೇ ಬಗೆಯ ಜೀವನ ನಡೆಸಿ ತಂ

ಬಿಟ್ಟುಹೋದ ಹಣಕ್ಕೆ ಮತ್ತೂ ಸ್ವಲ್ಪ ಸೇರಿಸುತ್ತಾನೆ—ಹೀಗೆ ಐದಾರು ತಲೆಮಾರುಗಳ ಬಲಿಪಶುಗಳಿಂದಾಗಿ ಒಂದಷ್ಟು ಆಸ್ತಿ ಸೇರಿ ಆ ಪೀಳಿಗೆಯ ಯಾವನೋ 'ಬ್ಯಾರನ್' ಅದನ್ನು ಅನುಭವಿಸುತ್ತಾನೆ. "ನಾನು ಸಣ್ಣವನಿದ್ದಾಗ ಸಿಂಚಿತೋಟದಲ್ಲಿ ನನ್ನಪ್ಪ ನಮ್ಮಮ್ಮನಿಗೂ ನನಗೂ ಇಂಥ ಪುಸ್ತಕಗಳನ್ನು ಓದುತ್ತಿದ್ದ" ಎಂದು ವ್ಯಂಗ್ಯವಾಗಿ ಅಲೆಕ್ಸಿಸ್ ಟೀಕಿಸುತ್ತಾನೆ. ಅರ್ಥಾತ್, ಈ ಬಗೆಯ 'ಪ್ರಾಮಾಣಿಕ ದುಡಿತ'ದಲ್ಲಿ ಮೆಚ್ಚುವಂಥ ಅಂಶ ಪುರಾತನ ಕಾಲದಲ್ಲಿ ಅಥವ ಪುಸ್ತಕಗಳಲ್ಲಿರಲು ಸಾಧ್ಯ ; ಇವತ್ತಿನ ವಾಸ್ತವವಾದ ಬಂಡವಾಳ-ಯುಗದಲಲ್ಲ. ಈ ರೀತಿ ಬದುಕುವುದಕ್ಕಿಂತ ರಷ್ಯನ್ ಶೈಲಿಯಲ್ಲಿ ಹಣ ದುಂದುಮಾಡುವುದು, ಅಥವ ಜೂಜಾಡುವುದೇ ಮೇಲು ಎಂದು ಅಲೆಕ್ಸಿಸ್ ವಾದಿಸುತ್ತಾನೆ: "ಐದು ತಲೆಮಾರುಗಳ ನಂತರ 'ಗೊಪ್ಪೆ ಅಂಡ್ ಕಂಪನಿ' ಯಾಗುವುದರಲ್ಲಿ ನನಗೆ ಆಸಕ್ತಿ ಇಲ್ಲ. ಹಣ ನನಗಾಗಿಯೇ ಬೇಕು ; ಮತ್ತು ನನ್ನನ್ನು ನಾನು ಬಂಡವಾಳಕ್ಕೆ ಅಧೀನನಾದಂತೆಯೋ, ಅವಶ್ಯಕನಾದಂತೆಯೋ ತಿಳಿಯುವುದಿಲ್ಲ." ರಷ್ಯನರ ದುಂದುಗಾರಿಕೆ, ಪ್ರಾಮಾಣಿಕ ಜರ್ಮನರ ಈ ಧನಶೇಖರಣೆ—ಎರಡೂ ಹೇಸಿಗೆಯ ಹುಟ್ಟಿಸುವಂತಹುವು ; ಇಬ್ಬರಲ್ಲಿಯೂ ಹಣವೇ ಮಾನವಸಂಬಂಧಗಳಿಗಿಂತ ಮುಖ್ಯ. "ಲಾಭದ ಬಗ್ಗೆ ಹೇಳುವುದಾದರೆ ರೂಲೆಟ್ ಆಟದಲ್ಲಿ ಮಾತ್ರವಲ್ಲ, ಎಲ್ಲೆಲ್ಲೂ ಜನ ಸಿಕ್ಕಸಿಕ್ಕವರನ್ನು ಅಲ್ಪ ಲಾಭಕ್ಕಾಗಿ ಹಿಂಡುವ ಪ್ರಯತ್ನ ಮಾಡುತ್ತಲೇ ಇದ್ದಾರೆ" ಎನ್ನುವ ಸತ್ಯವನ್ನು ಗಮನಿಸುತ್ತಾನೆ ಅಲೆಕ್ಸಿಸ್.


ಅಲೆಕ್ಸಿಸ್ ಹೀಗೆ ಅಭಿಪ್ರಾಯಪಟ್ಟ ಮಾತ್ರಕ್ಕೆ ದಾಸ್ತೋವಸ್ಕಿ ಜೂಜಾಟವನ್ನು ಸಮರ್ಥಿಸಿ ಅದರ ಬಗ್ಗೆ ರೊಮ್ಯಾಂಟಿಕ್ ಆದ ಧೋರಣೆಯನ್ನು ತಳೆಯುತ್ತಾನೆಂದು ತಿಳಿಯಬೇಕಾಗಿಲ್ಲ. ಜೂಜಾಟದಿಂದಾಗುವ ಹಾನಿಯನ್ನು ನಿರ್ದಾಕ್ಷಿಣ್ಯವಾಗಿ 'ಅಜ್ಜಿ'ಯ ಚಿತ್ರಣದ ಮೂಲಕ ನಿರೂಪಿಸುತ್ತಾನೆ. ಸಾಯುತ್ತಾಳೆನ್ನುತ್ತಿದ್ದ ಮುದುಕಿ ಅಂಟೋನಿಡಾ ವ್ಯಾಸಿಲಿಯೇವ್ನಾ ಇದ್ದಕ್ಕಿದ್ದಂತೆ ರೂಲೆಟೆನ್‌ಬರ್ಗ್‌ನಲ್ಲಿ ಪ್ರತ್ಯಕ್ಷಳಾಗುತ್ತಾಳೆ. ಪ್ರತಿಯೊಂದು ವಸ್ತುವಿನಲ್ಲೂ ಮಗುವಿನಂತಹ ಉತ್ಸುಕತೆ ತೋರಿಸುವ ಅವಳು ರೂಲೆಟ್ ಆಟ ನೋಡಲು ಕುತೂಹಲಳಾಗುತ್ತಾಳೆ. ಮೊದಲ ದಿನ ನಂಬಲಾರದ ರೀತಿಯಲ್ಲಿ ಹಣ ಗೆದ್ದು, ಮಾರನೆಯ ದಿನ ಗೆದ್ದ ಹಣಕ್ಕೂ ಮಿಗಿಲಾಗಿ ಸೋತು ಬಿಡುತ್ತಾಳೆ. ಹಣ ಪೋಲಾಯಿತಲ್ಲ ಎನ್ನುವ ಪ್ರಜ್ಞೆ ಬಂದು ಮತ್ತೆ ರಷ್ಯಾಕ್ಕೆ ಮರಳುವ ಸಿದ್ಧತೆ ಮಾಡಿಕೊಳ್ಳುತ್ತಾಳೆ. ಆದರೆ ರೈಲು ಹೊರಡಲು ಒಂದು ಗಂಟೆ ಇದೆ ಎನ್ನುವಾಗ ಇದ್ದಕ್ಕಿದ್ದಂತೆ ರೂಲೆಟ್‌ನ ಹುಚ್ಚು ಮತ್ತೆ ಹಿಡಿದು, ಮತ್ತೆ ಕೆಸಿನೋಗೆ ಹೋಗಿ ಲಕ್ಷಾಂತರ ಸೋಲುತ್ತಾಳೆ—ರಷ್ಯಾಗೆ ಮರಳಿ ಹೋಗಲೂ ಹಣ ಸಾಲದ ಹಾಗೆ. ರೂಲೆಟ್‌ನಿಂದ ಆವೇಶಿತಳಾಗುವ ಮೊದಲು ಅವಳು ತನ್ನ ಸೇವಕರನ್ನು ಬಹಳ ಮಾನವೀಯವಾಗಿ ನಡೆಸಿಕೊಳ್ಳುತ್ತಿರುತ್ತಾಳೆ. (ಹಾಗೆ ನೋಡಿದರೆ ಅವಳು ಅನಾವಶ್ಯಕವಾಗಿ ಸೇವಕರನ್ನು ಇಟ್ಟುಕೊಂಡಿಲ್ಲ; ಅವಳ ಕಾಲುಗಳು ಸ್ವಾಧೀನ ತಪ್ಪಿಹೋಗಿರುವುದರಿಂದ ಇಬ್ಬರು ಅವಳನ್ನು ಹೊತ್ತುಕೊಂಡು ಹೋಗಲು ಬೇಕೇಬೇಕು.) ಸೇವಕಿ ಮಾರ್ಥಾಳನ್ನು ಕೆಸಿನೋಗೆ ಕರೆದುಕೊಂಡು ಹೋಗಬಾರದೆಂದು ಜನರಲ್ಲನು ಹೇಳಿದಾಗ ಅವಳು ರೇಗುತ್ತಾಳೆ: ಇನೆಂಥ ಮೂರ್ಖತನ! ಅವಳು ಕೆಲಸದವಳು ಅಂದ ಮಾತ್ರಕ್ಕೆ

ಅವಳನ್ನು ನಾನು ಬಿಟ್ಟುಹೋಗಬೇಕಾ?....ಅವಳಿಗೂ ಸ್ವಲ್ಪ ಪ್ರಪಂಚ ನೋಡಬೇಕೆನಿ ಸುತ್ತೆ ; ನನ್ನನ್ನು ಬಿಟ್ಟು ಮತ್ತೆ ಯಾರ ಜತೆಯಲ್ಲಿ ಹೋಗುತ್ತಾಳೆ?" ಆದರೆ ಕೆಸಿನೋ ದಿಂದ ಹಿಂತಿರುಗುವಷ್ಟರಲ್ಲಿ ಅವಳ ಸ್ವಭಾವದಲ್ಲಿ ಗಮನಾರ್ಹ ಬದಲಾವಣೆ ಕಂಡು ಬರುತ್ತದೆ. ರೂಲೆಟ್‌ನಲ್ಲಿ ಗೆದ್ದು ಹೋಟೆಲಿಗೆ ಮರುಳುವಾಗ ಅಪರಿಚಿತರಿಗೆಲ್ಲ ಭಿಕ್ಷುಕರಿಗೆ ಎನ್ನುವಂತೆ ಧಾರಾಳವಾಗಿ ಹಣ ಕೊಡುತ್ತಾ ಬರುತ್ತಾಳೆ. ಹಾಗೆ ಮಾಡುವುದರಿಂದ ಅವರ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗಬಹುದು ಎನ್ನುವ ವಿಚಾರ ಅವಳಿಗೆ ಬರುವುದಿಲ್ಲ. ರೂಲೆಟ್‌ನಲ್ಲಿ ಸೋತ ನಂತರ ಅವಳಿಗೆ ಪ್ರಪಂಚದ ಮೇಲಿನ, ಜನರ ಮೇಲಿನ ಕುತೂಹಲ ಉಳಿಯುವುದಿಲ್ಲ: ಕೇವಲ ಸಿಡುಕಿಯಾಗುತ್ತಾಳೆ. ಜೂಜಿನ ವ್ಯಸನ ತಗುಲಿದ 'ಅಜ್ಜಿ'ಯ ಬಗ್ಗೆ ಅಲೆಕ್ಸಿಸ್ ನುಡಿಯುತ್ತಾನೆ: "ಆ (ಜೂಜಿನ) ಮಾರ್ಗ ಸ್ಲೆಜ್‌ಗಾಡಿಯಲ್ಲಿ ಕುಳಿತವನೊಬ್ಬ ಮತ್ತೂ ಮತ್ತೂ ವೇಗವಾಗಿ ಹಿಮಕಂದರವೊಂದರಲ್ಲಿ ಜಾರಿ ಹೋದಂತೆ."

ವಿಚಿತ್ರವೆಂದರೆ, ಜೂಜಾಟದಿಂದ ಉಂಟಾಗುವ ಅಧೋಗತಿಯ ಬಗ್ಗೆ ಇಂತಹ ಪ್ರಭಾವಶಾಲಿಯಾದ ಪ್ರತಿಮೆಯನ್ನು ಬಳಸುವ ಅಲೆಕ್ಸಿಸ್ ತಾನು ಪ್ರೀತಿಸುವ ಪೌಲಿನಾ—ಅವಳು ಜನರಲ್ಲನ ಮಲಮಗಳು—ಬಳಿ ಹೇಳುತ್ತಾನೆ: "ರೂಲೆಟ್‌ನಿಂದ ಮಾತ್ರ ನನಗೆ ಬಿಡುಗಡೆ ಮತ್ತು ಮೋಕ್ಷ."

ಜೂಜಾಟದಿಂದ ಹಣ ಮಾಡಬೇಕೆನ್ನುವ ಆಸೆ ಬೇರೆ ಮಾರ್ಗದಿಂದ ಮಾಡಬಹು ದೆಂಬ ಆಸೆಗಿಂತ ಕೀಳಲ್ಲ ಎನ್ನುವ ಅಲೆಕ್ಸಿಸ್ ಬಗ್ಗೆ ಓದುಗರಲ್ಲಿ ಅನುಕಂಪವನ್ನು ಮೂಡಿಸುತ್ತಾ ಜೂಜಾಟದಿಂದಾಗುವ ಹಾನಿಯನ್ನೂ ಒತ್ತಿ ಹೇಳುವುದರ ಅರ್ಥ ಏನು? 'ದ ಗ್ಯಾಂಬ್ಲರ್' ನ ಬಗ್ಗೆ ಒಂದೆಡೆ ದಾಸ್ತೋವಸ್ಕಿ ಹೀಗೆ ಹೇಳುತ್ತಾನೆ: "ನಾನು ಚಿತ್ರಿ ಸುವ ಪಾತ್ರ....ಎಲ್ಲದರಲ್ಲಿಯೂ ನಂಬಿಕೆ ಕಳೆದುಕೊಂಡವನು, ಆದರೆ ನಾಸ್ತಿಕನಾಗಲು ಧೈರ್ಯಪಡದವನು....ಎಲ್ಲ ಬಗೆಯ ಅಧಿಕಾರವನ್ನು ವಿರೋಧಿಸುತ್ತಾ ಒಳಗೊಳಗೆ ಅಧಿಕಾರಕ್ಕೆ ಅಂಜುವವನು....ನಿಜ ಹೇಳಬೇಕೆಂದರೆ ತನ್ನೆಲ್ಲ ಶಕ್ತಿ, ಚೈತನ್ಯ, ಪ್ರತಿಭೆ ಯನ್ನು ರೂಲೆಟ್ ಆಟದಲ್ಲಿ ಪೋಲು ಮಾಡುವವನು." ನಂಬಿಕೆ, ಆಜ್ಞೆಯು ಎರಡನ್ನೂ ಕಳೆದುಕೊಂಡ ಅಲೆಕ್ಸಿಸ್ ಒಂದು ಇಡೀ ನಾಗರಿಕತೆಯ ಪ್ರಾತಿನಿಧಿಕ ಪಾತ್ರವಾಗುತ್ತಾನೆ. ಧರ್ಮ, ರಾಜಕೀಯ ನೀತಿ, ಸಂಸ್ಕೃತಿ, ರಾಷ್ಟ್ರೀಯತೆ, ನೈಚಾರಿಕ ಮುಂತಾದ ಮೌಲ್ಯಗಳು—ಅನುಭವವನ್ನು ಸಾಂಪ್ರದಾಯಕ ರೀತಿಯಲ್ಲಿ ವ್ಯವಸ್ಥಿತ ಗೊಳಿಸಬಹುದಾದ ಮೌಲ್ಯಗಳು—ಕುಸಿದಾಗ, ಹಣವೊಂದೇ ಮೌಲ್ಯವಾದಾಗ ಮಾನವನ ಅಹಂಕಾರ ಮತ್ತು ಹತಾಶ ಭಾವನೆ ತೀವ್ರ ಸ್ವರೂಪದ್ದಾಗುತ್ತವೆ.

ಈ ಹತಾಶ ಭಾವನೆ ಬಹಿರಂಗವಾಗಿ ಅಲೆಕ್ಸಿಸ್‌ನಲ್ಲಿ ಒಂದು ಯಾಂತ್ರಿಕವಾದ ವಿಧಿಯ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ವಿಧಿಯ ನಿಯಮಕ್ಕೆ ಸಿಕ್ಕಿದ ವಿಶ ಪ್ರತೀಕವಾಗಿ ರೂಲೆಟ್ ಆಟ ಅವನಿಗೆ ಗೋಚರವಾಗುತ್ತದೆ. ಕಾದಂಬರಿಯ ಕಡೆಕ ಯಲ್ಲಿ ರೂಲೆಟ್ ಆಟದ ಪರಿಭಾಷೆಯಲ್ಲಿ ತನ್ನ ನೆನಪುಗಳನ್ನು ಸಂಕ್ಷಿಪ್ತವಾಗಿ ವಿವರಿ ತ್ತಾನೆ: "ಘಟನೆಗಳು ಸುಳಿಸುತ್ತಿ ನನ್ನನ್ನು ಮತ್ತೆ ಎಸೆದಿವೆ. ನನಗನಿಸುತ್ತದೆ, ಈಗಲು ನಾನು ಆ ಸುಂಟರಗಾಳಿಯಲ್ಲಿ ಸಿಲುಕಿ ಯಾವ ವ್ಯವಸ್ಥೆಯನ್ನೂ ಆಳತೆಯನ್ನೂ ಕಾಣ



ಮಿಖಿಯಲ್ ದಾಸ್ತೋವಸ್ಕಿ (೧೭೮೯-೧೮೩೯) ಲೇಖಕರ ತಂದೆ



ಮರಿಯಾ ದಾಸ್ತೋವಸ್ಕಿ (೧೮೦೦-೧೮೩೭) ಲೇಖಕರ ತಾಯಿ



ಮಿಖಾಯಿಲ್ ದಾಸ್ತೋವಸ್ಕಿ (೧೮೨೦-೧೮೬೪) ಲೇಖಕರ ಅಣ್ಣ



ಅನ್ನಾ ದಾಸ್ತೋಏವಸ್ಕಿ (೧೮೪೬-೧೯೧೮) ಲೇಖಕರ ದ್ವಿತೀಯ ಹೆಂಡತಿ



ಸೇಂಟ್ ಪೀಟರ್ಸ್‌ಬರ್ಗ್‌ನ ಸೇಂಟ್ ಅಲೆಕ್ಸಾಂಡರ್ ನೆವ್‌ಸ್ಕಿಮಠದ ವೇಖ್ವಿನ್ ಸಮಾಧಿಭೂಮಿಯಲ್ಲಿ
ದಾಸ್ತೋವಸ್ಕಿಯವರ ಸಮಾಧಿ (೧೮೮೩)

ಹಾಗೇ ಸುತ್ತುತ್ತಿದ್ದೇನೆ." ರೂಲೆಟ್ ಚೆಂಡಿನಂತೆ. ಹಿಂದೂ ಆಸ್ತಿಕನಿಗೆ ಶ್ರೀಚಕ್ರ ಹೇಗೆ ಸೃಷ್ಟಿಯ ಸಂಕೇತವೊ, ಹಾಗೆ ರೂಲೆಟ್ ಆಟದ ಮೇಜು ಅಲೆಕ್ಸಿಸ್‌ಗೆ:

"ರೂಲೆಟ್ ಮೇಜಿನ ಮೇಲೆ ಹರಡಿಕೊಂಡಿರುವ ಫ್ರೆಂಚ್, ಜರ್ಮನ್ ದೇಶಗಳ ಹಣವನ್ನು, ಆಟ ನಡೆಸುವವನ ಮೊರದಿಂದ ಉರಿಯುವ ಕಿಢಿಗಳಂತೆ ಚೆಲ್ಲಿ ಬಿದ್ದಿರುವ ಚಿನ್ನದ ನಾಣ್ಯಗಳನ್ನು, ಚಕ್ರದ ಸುತ್ತಲೂ ಗಜದ ಎತ್ತರಕ್ಕೆ ರಾಶಿ ಬಿದ್ದ ಬೆಳ್ಳಿಯನ್ನು ಎಷ್ಟು ಲೋಲುಪತೆಯಿಂದ ವೀಕ್ಷಿಸುತ್ತೇನೆ." ಆದುದರಿಂದಲೇ ಅವನು "ತನ್ನ ಬಿಡುಗಡೆಯಿರುವುದು, ಮೋಕ್ಷವಿರುವುದು ರೂಲೆಟ್‌ನಿಂದ" ಎನ್ನುವುದು. ದೇವರಿಲ್ಲದ, ಯಾಂತ್ರಿಕವಾದ ವಿಧಿಗನುಸಾರವಾದ ಸೃಷ್ಟಿಯನ್ನು ಅಲೆಕ್ಸಿಸ್ ನಂತಹವನು ಆಕಸ್ಮಿಕ ಯೋಗದಿಂದ (chance) ಮಾತ್ರ ಎದುರಿಸಬಲ್ಲ.

ಬದುಕಿನ ಬಗ್ಗೆ ಅವನ ಈ ಧೋರಣೆಯೇ ಅವನ ಮತ್ತು ಪೌಲಿನಾಳ ನಡುವಿನ ಸಂಬಂಧವನ್ನು ಅರ್ಥ ಮಾಡಿಕೊಳ್ಳಲು ಒದಗಿ ಬರುವುದು. ಒಂದೆಡೆ ಅವನು ಪೌಲಿನಾಳಿಗೆ ಹೇಳುತ್ತಾನೆ.

"ನಾವಿಬ್ಬರೂ ಜತೆಯಲ್ಲಿ ನಡೆದು ಹೋಗುವುದರಲ್ಲಿ ಎಂಥ ಅಪಾಯವಿದೆ ಎಂದು ನಿನಗೆ ತಿಳಿದಿದೆಯಲ್ಲ? ನಿನಗೆ ಹೊಡೆಯಬೇಕು, ನಿನ್ನನ್ನು ವಿರೂಪಗೊಳಿಸಬೇಕು, ನಿನ್ನ ಕತ್ತು ಹಿಚಕಿ ಕೊಲ್ಲಬೇಕೆಂಬ ಬಯಕೆ ಅನೇಕ ಸರ್ತಿ ಬರುತ್ತದೆ....ನಿನ್ನ ಮೇಲಿನ ಆಸೆ ಬಿಟ್ಟು ನಿನ್ನನ್ನು ಪ್ರೀತಿಸುತ್ತೇನೆ....ನಿನ್ನನ್ನೇನಾದರೂ ಕೊಂದರೆ, ನನ್ನನ್ನೂ ನಾನು ಕೊಲ್ಲಬೇಕಾಗುತ್ತದೆ." ಈ ಮಾತುಗಳು ದಾಸ್ತೋವಸ್ಕಿಯಂತಹ ದ್ರಷ್ಟಾರನ ಕೃತಿಯಲ್ಲಿ ಕೇವಲ ಕಾಮ ವಿಕಾರವನ್ನು ಸೂಚಿಸುವಂತಹವಾಗುವುದಿಲ್ಲ. ಒಂದು ಗಂಡು–ಹೆಣ್ಣಿನ ಸಂಬಂಧದಲ್ಲಿನ ನೆಲೆ ಕೇವಲ ಲೈಂಗಿಕತೆಯಲಲ್ಲದೆ ಇಡೀ ಸೃಷ್ಟಿ–ವ್ಯಕ್ತಿಯ ಸಂಬಂಧದಲ್ಲಿರುವುದಾಗಿ ಕಾದಂಬರಿ ತೋರಿಸುತ್ತದೆ. ಅಲೆಕ್ಸಿಸ್ ಮಟ್ಟಿಗೆ ಸೃಷ್ಟಿಯ ಸಂಕೇತವಾದ ರೂಲೆಟ್ ಮತ್ತು ಅವನ ನಡುವಿನ ಸಂಬಂಧ ಪೌಲಿನಾ ಮತ್ತು ಅಲೆಕ್ಸಿಸ್‌ನ ನಡುವಿನ ಸಂಬಂಧದಲ್ಲಿ ಕಾದಂಬರಿಯುದ್ದಕ್ಕೂ ಇಣುಕಿರುತ್ತದೆ. ತನ್ನನ್ನು ಪೌಲಿನಾ ಗುಲಾಮನಂತೆ ಕಾಣುತ್ತಾಳೆ ಎಂದು ಅವನ ಭ್ರಾಂತಿ; "ಪುರಾತನ ಕಾಲದಲ್ಲಿ ಚಕ್ರವರ್ತಿನಿಯು ಗುಲಾಮನ ಮುಂದೆ ಬೆತ್ತಲಾಗಲು ಅಭ್ಯಂತರವಿರಲಿಲ್ಲ; ಯಾಕೆಂದರೆ ಆ ಚಕ್ರವರ್ತಿನಿಗೆ ಗುಲಾಮನು ಮನುಷ್ಯಜೀವಿಯೇ ಆಗಿರಲಿಲ್ಲ. ಆ ಚಕ್ರವರ್ತಿನಿಯಂತೆ ಇವಳೂ ಇಲ್ಲಿಯವರೆಗೆ ನನ್ನನ್ನು ಗುಲಾಮನಂತೆ ಕಾಣುತ್ತಿದ್ದಳು. ಹೌದು, ಅನೇಕ ವೇಳೆ ಇವಳಿಗೆ ನಾನು ಮನುಷ್ಯತ್ವವೇ ಇಲ್ಲದವನಾಗಿ ಕಾಣುತ್ತಿದ್ದೆ." ಗುಲಾಮನಿಂದ ಬೇರೆಯ ವ್ಯಕ್ತಿತ್ವಕ್ಕೇ ಅವನು ಬದಲಾಗಬೇಕಾದರೆ ಹಣ ಬೇಕೇ ಬೇಕು ಎಂದು ಅವನ ಹತಾಶ ಮನಸ್ಸು ನಂಬುತ್ತದೆ. ಪೌಲಿನಾಗೆ ಅವನು ಹೇಳುತ್ತಾನೆ. "ಕೇವಲ ಹಣ ಮಾಡುವುದರಿಂದ ಮಾತ್ರ ನಿನಗೆ ನಾನು ಗುಲಾಮನಲ್ಲದೆ ಬೇರೆಯ ರೂಪಿನಿಂದ ಕಾಣಲು ಸಾಧ್ಯ." ಆದ್ದರಿಂದ ಅವನ ವ್ಯಕ್ತಿತ್ವವನ್ನು ಏಕಾಏಕಿ ಬೇರೆಯಾಗಿ ಮಾಡಲು ಅಕಸ್ಮಾತ್ ಯೋಗದ ಆಟ ರೂಲೆಟ್ ಒಂದಕ್ಕೇ ಸಾಧ್ಯ. "ನಾನಾಗಲೇ ನಿರ್ಧರಿಸಿಬಿಟ್ಟಿದ್ದೆ. ರೂಲೆಟನ್‌ಬರ್ಗ್‌ನಲ್ಲೇ ನನ್ನ ವಿಧಿಯ ಗತಿಯಲ್ಲಿ ಮೂಲಭೂತ ಬದಲಾವಣೆಯಾಗೇ ಆಗುತ್ತದೆ. ಆದ್ದರಿಂದ ನಾನು ಬದಲಾಗದೇ ಇಲ್ಲಿಂದ ಕಾಲ್ತೆಗೆಯುವುದಿಲ್ಲ" ಎಂದು

ಕಾದಂಬರಿಯ ಶುರುವಿನಲ್ಲೇ ಅವನು ಹೇಳುತ್ತಾನೆ. ಆದರೆ ಆಂತರಿಕದ ಹತಾ ಭಾವನೆಯೇ ಬಹಿರಂಗವಾಗಿ ವಿಧಿಯಾದಾಗ ಆದರೊಡನೆ ಆಕಸ್ಮಿಕಯೋಗದಿಂದ ಸೆಣಸು ವುದರ ಮೂಲ ಮಾನವಿಕ ಸಂಬಂಧವನ್ನು ಊರ್ಜಿತ ಮಾಡಿಕೊಳ್ಳಲಾಗದು ಎಂಬುದನ್ನು 'ದ ಗ್ಯಾಂಬ್ಲರ್' ಮನದಟ್ಟು ಮಾಡಿಕೊಡುತ್ತದೆ. ಒಂದು ರಾತ್ರಿ ಪೌಲಿನಾ ಇದ್ದಕ್ಕಿದ್ದಂ ಅಲೆಕ್ಸಿಸ್ ಬಳಿಗೆ ಬರುತ್ತಾಳೆ. ಡಿಗ್ರೋನಿಂದ ತನ್ನ ಗೌರವ ಉಳಿಸಿಕೊಳ್ಳಲು ಅವಳಿ ೫೦ ಸಾವಿರ ಫ್ರ್ಯಾಂಕ್ ಬೇಕು. ಅವಳನ್ನು ತನ್ನ ರೂಮಿನಲ್ಲೇ ಇರಲು ಹೇಳಿ ಅಲೆಕ್ಸಿಸ್ ರೂಲೆಟ್ ಆಡಲು ಹೋಗುತ್ತಾನೆ. ಆಶ್ಚರ್ಯಕರ ರೀತಿಯಲ್ಲಿ ಅದೃಷ್ಟ ಅವನಿಗೊಲಿದು ೨೦೦ಸಾವಿರ ಫ್ರ್ಯಾಂಕ್ ಗೆಲ್ಲುತ್ತಾನೆ. ಆದರೆ ಜೂಜಾಡುವ ವೇಳೆಯಲ್ಲಿ "ತನ್ನ ಪ್ರೀತಿಯು ಹಿನ್ನೆಲೆಗೆ ಸರಿದಿತ್ತು" ಎಂದು ಅವನು ನಂತರ ತಿಳಿಸುತ್ತಾನೆ. ಕೆಸಿನೋದಿಂದ ವಾಪಸು ಬಂದ ವನೇ ಅವಳಿಗೆ ೫೦ಸಾವಿರ ಫ್ರ್ಯಾಂಕ್ ಕೊಡುತ್ತಾನೆ. ಡಿಗ್ರೋನಂತೆಯೇ ಇವನೂ ತನ್ನನ್ನು ಹಣಕ್ಕೆ ಕ್ರಯಿಸುವುದನ್ನು ವಿರೋಧಿಸಿ ಅವಳು ಅವನ ಮುಖಕ್ಕೆ ಹಣವನ್ನೆಸೆದು ಹೊರಟು ಹೋಗುತ್ತಾಳೆ. ಅಲೆಕ್ಸಿಸ್ ಕ್ರಯಕ್ಕೆ ದಕ್ಕುವ ಹೆಣ್ಣೊಂದಿಗೆ ಪ್ಯಾರಿಸ್ಸಿಗೆ ಹೋಗಿ ಒಂದ ತಿಂಗಳಲ್ಲಿ ಬರಿಗೈಯಾಗುತ್ತಾನೆ. ಹಾಗೆ ಪ್ಯಾರಿಸ್ಸಿಗೆ ಹೋಗುವಾಗಲೂ ಅವನಿಗೆ ತನ್ನ ವಿಧಿಯ ಪ್ರಜ್ಞೆ ಇರುತ್ತದೆ. "ಪ್ಯಾರಿಸ್ಸಿಗೆ ಹೋಗಬೇಕಿದ್ದರೆ ಪ್ಯಾರಿಸ್ಸಿಗೇ ಸೈ. ಇದು ನಾನ ಹುಟ್ಟಿದಾಗಲೇ ನಿರ್ಣಯವಾಗಿದ್ದಂತೆ ಕಾಣುತ್ತದೆ."–ಈ ಹೇಳಿಕೆಯನ್ನು ಗಮನಿಸಬೇಕು ಅವನ ವಿಧಿಯಾಗಿ ತೋರುವುದು ವಾಸ್ತವದಲ್ಲಿ ಅವನ ಆಂತರಿಕ ಹತಾಶ ಭಾವನೆಯೇ ಈ ಹತಾಶ ಭಾವನೆಯ ಹಿಂದೆ ಮಾನವಿಕ ಮೌಲ್ಯಗಳೆಲ್ಲ ಶೂನ್ಯವಾಗಿರುವ ಸೂಚನ ಇದೆ. ಪೌಲಿನಾಳ ಪ್ರಾಣ ತೆಗೆಯುವ ಬಯಕೆ ವ್ಯಕ್ತಪಡಿಸುವುದರೊಂದಿಗೆ ಅವಳಿಗಾ ಬೇಕಾದರೆ ಶ್ಲಾಂಗೆನ್‌ಬರ್ಗ್ ಶಿಖರದಿಂದ ಹಾರಿಬಿಡುವ ಮಾತನ್ನೂ ಆಡುತ್ತಿರುತ್ತಾನ ಅಲೆಕ್ಸಿಸ್. "ನೀನು ಶ್ಲಾಂಗೆನ್‌ಬರ್ಗ್ ಶಿಖರದಿಂದ ನೆಗೆದರೆ ನನಗೇನು ಉಪಯೋಗ ? ಪೌಲಿನಾ ಪ್ರಶ್ನಿಸುತ್ತಾಳೆ. ಇದಕ್ಕೆ ಹಿಂದೆಯೇ ಅವನು ಅವಳ ಬಳಿ ಹೇಳಿರುತ್ತಾನೆ "ನನ್ನ ಜೀವಕ್ಕೆ ನಾನು ಯಾವ ಮೌಲ್ಯವೂ ಇದೆ ಎಂದುಕೊಂಡಿಲ್ಲ." ಹೀಗೆ ಬೆಲೆಯ ಯಿಲ್ಲದ ಅವನ ಜೀವವನ್ನು ಅವಳಿಗೆ ಅವನು ಯಾವ ಭಾವನೆಯಿಂದ ಅರ್ಪಿಸಬಲ್ಲ? "ಏನು ಉಪಯೋಗ ಎಂದು ಕೇಳುವಿರಾ? ಸುಖಾನುಭವದಲ್ಲಿ ಉಪಯೋಗವಿದ್ದೆ ಇದೆ: ಮತ್ತು ಉಗ್ರವಾದ, ಮಿತಿಯಿಲ್ಲದ ಅಧಿಕಾರ—ಅದು ಕೇವಲ ಒಂದ ಕೀಟದ ಮೇಲಿರಲಿ—ತನ್ನದೇ ಆದ ರೀತಿಯಲ್ಲಿ ಆನಂದ ನೀಡುವಂತಹದು. ಮಾನವ ಸ್ವಭಾವತಃ ಕ್ರೂರಿ: ಹಿಂಸೆ ಅವನಿಗೆ ಬಹಳ ಇಷ್ಟ' ಎಂದು ಪೌಲಿನಾಗೆ ಉತ್ತ ಕೊಡುತ್ತಾನೆ.

ಬಂಡವಾಳ ಜಗತ್ತಿನಲ್ಲಿ ಅಲೆಕ್ಸಿಸ್‌ನಂತಹವರು ಇತರರನ್ನು ಕೇವಲ ಅಹಂಕಾ ದಿಂದ ಮಾನವರನ್ನು ಸಂಪರ್ಕಿಸಲು ಪ್ರಯತ್ನಿಸುತ್ತಾರೆ. ತಾನು ದೀನನಾಗಬೇಕು ಗುಲಾಮನಾಗಬೇಕು: ಇಲ್ಲವೇ ತಾನು ಪ್ರೀತಿಸುವವರನ್ನು ಗುಲಾಮರನ್ನಾಗಿಸಬೇಕು ದೈನ್ಯತೆಗೆ ಕುಗ್ಗಿಸಬೇಕು: ಆತ್ಮಹತ್ಯೆ ಮಾಡಿಕೊಳ್ಳಬೇಕು, ಇಲ್ಲವೆ ತಾನು ಪ್ರೀತಿಸು ವವರನ್ನು ಕೊಲ್ಲಬೇಕು: ಒಟ್ಟಿನಲ್ಲಿ ಇಬ್ಬರೂ ನಿರ್ನಾಮವಾಗಬೇಕು! ಕಾದಂಬ ಅಂತ್ಯಗೊಳ್ಳುವಾಗಲೂ ಅಲೆಕ್ಸಿಸ್ ತಾನು ಮತ್ತೆ ರೂಲೆಟ್ ಮೂಲಕ ಉದ್ಧಾರವಾಗು

ಆಸೆ ಇಟ್ಟುಕೊಂಡಿರುತ್ತಾನೆ; ಮಾರನೆಯ ದಿನವೇ ತಾನು ಮತ್ತೆ ಬದಲಾವಣೆಯಾಗಿ ಸ್ವಿಟ್ಜರ್‌ಲೆಂಡ್‌ಗೆ ಹೋಗುವ ಸುಳ್ಳು ಆಸೆ ಹೊಂದಿರುತ್ತಾನೆ. ಪೌಲಿನಾ ದೂರದ ಸ್ವಿಟ್ಜರ್-ಲೆಂಡ್‌ನಲ್ಲಿ ಅವನ ಪ್ರೇಮದಲ್ಲಿ ಸೊರಗುತ್ತಿರುತ್ತಾಳೆ. ಹೀಗಾಗಿ 'ದ ಗ್ಯಾಂಬ್ಲರ್'ನ ಪ್ರಪಂಚದಲ್ಲಿ ಯಾವುದೇ ಮಾನಸಿಕ ಸಂಬಂಧವೇ ಏರ್ಪಡುವುದಿಲ್ಲ. ಅಲೆಕ್ಸಿಸ್‌ನ ಇಂಗ್ಲಿಷ್ ಸ್ನೇಹಿತ ಅವನಿಗೆ ಹೇಳುವ ಸರಳವಾದ ಮಾತುಗಳಲ್ಲಿ ಅವನು ಪ್ರತಿನಿಧಿಸುವ ನಾಗರಿಕತೆಯ ರೋಗದ ವಿಶ್ಲೇಷಣೆ ಸಿಗುತ್ತದೆ:

"ಅವಳು ಈಗಲೂ ನಿನ್ನನ್ನು ಪ್ರೀತಿಸುತ್ತಿದ್ದಾಳೆ ಎಂದು ನಾನು ಹೇಳಿದರೂ ನೀನು ಇಲ್ಲೇ ಉಳಿಯುವವನು. ಹೌದು, ನಿನ್ನನ್ನು ನೀನು ಪೂರ್ತಿಯಾಗಿ ನಾಶಮಾಡಿಕೊಂಡಿರುವೆ ನಿನ್ನಲ್ಲಿ ಕೆಲವು ಅರ್ಹತೆಗಳಿದ್ದುವು....ನಿನ್ನ ನಾಡಿನ ಸೇವೆಯಲ್ಲಿ ನೀನು ತೊಡಗಬಹುದಿತ್ತು; ನಾಡಿಗೆ ನಿನ್ನಂತಹವನ ಸೇವೆಯ ಅವಶ್ಯಕತೆ ಇತ್ತು. ಆದರೆ ನೀನು ಇಲ್ಲೇ ಉಳಿದೆ. ನಿನ್ನ ಜೀವನವೇ ಮುಗಿದುಹೋಗಿದೆ....ಆದರೆ ನಿನ್ನನ್ನು ನಾನು ತೆಗಳಲಾರೆ....ಕಾಯಕದ ಅರ್ಥವನ್ನು ಅರಿಯಲಾರದವರಲ್ಲಿ ನೀನೇನು ಮೊದಲಿಗನಲ್ಲ..."

ಕಾಯಕದ ಅರ್ಥವನ್ನು ಅರಿಯಲಾರದವನ ಚಿತ್ರಣವನ್ನು ಮಾಡಿರುವುದು ದಾಸ್ತೋವಸ್ಕಿ ಒಬ್ಬನೇ ಏನಲ್ಲ. ರಷ್ಯದ ಸಾಹಿತ್ಯದಲ್ಲೇ ಲೆರ್ಮೆಂತೊವ್‌ನ ಪೆಚೊರಿನ್ ಮತ್ತು ಟಾಲ್‌ಸ್ಟಾಯ್‌ನ ವ್ರಾಂಸ್ಕಿ ರಂತಹ ಉದಾಹರಣೆಗಳಿದ್ದಾರೆ. ಆದರೆ ಮಾನವನ ನಿರರ್ಥಕತೆ, ಬಂಡವಾಳ ವ್ಯವಸ್ಥೆ ಮತ್ತು ಮಾನವ–ಸೃಷ್ಟಿ ನಡುವಿನ 'ಆಧ್ಯಾತ್ಮಿಕ' ಸಂಬಂಧ—ಇವೆಷ್ಟನ್ನೂ 'ದ ಗ್ಯಾಂಬ್ಲರ್' ಹೆಣೆಯುವಷ್ಟು ಸೂಕ್ಷ್ಮವಾಗಿ ಪ್ರಾಯಶಃ ಮತ್ತ್ಯಾವ ಕಾದಂಬರಿಯೂ ಮಾಡಲಾರದು.

ದ್ವಂದ್ವ

ಹೊರಗೆ ಸಭ್ಯ ವೇಷ ಒಳಗೆ ಪುರುಳುತನ ಸಲ್ಲದಯ್ಯ
ಹೊರಗೆ ದಾನದ ಮಾತು ಮನೆಯೊಳಗೆ ಜಿಪುಣತನ ಒಲ್ಲದಯ್ಯ ;
ಹೊರಗೆ ಜಾತ್ಯಾತೀತ ಒಳಗೊಳಗೇ ಜಾತಿವಾದ ಎಲ್ಲೂ ಗೆಲ್ಲಸಯ್ಯ
ಹೊರಗೊಂದು ಒಳಗೊಂದು ಇರಬಾರದಯ್ಯ...ಮುಗ್ಧನ ಮಗ.

ದೊಡ್ಡರಂಗೇಗೌಡ

ಭಗವದ್ಗೀತೆ ಹಾಗೂ ಅಪರಾಧ ಮತ್ತು ಶಿಕ್ಷೆ

ಎಸ್. ವೆಂಕಟರಾವ್

ವ್ಯಾಸ ರಚಿಸಿದನೆಂದು ನಂಬಲಾಗಿರುವ ಭಗವದ್ಗೀತೆ ಒಂದು ಪ್ರವಚನ. ದಾಸ್ತೋವಸ್ಕಿಯ ಅಪರಾಧ ಮತ್ತು ಶಿಕ್ಷೆ ಒಂದು ಕಾದಂಬರಿ. ಒಂದು, ಎರಡು ಸಾವಿರದ ಐನೂರು ವರುಷದಷ್ಟು ಪ್ರಾಚೀನ ಭಾರತೀಯ ದಾರ್ಶನಿಕ ಗ್ರಂಥ. ಇನ್ನೊಂದು, ನೂರು ವರುಷದಷ್ಟು ಈಚೆಗಿನ ರಷ್ಯನ್ ಸಾಹಿತ್ಯ ಕೃತಿ. ಈ ಎರಡರ ಕಥಾಸಂದರ್ಭಗಳೂ ಸಂಪೂರ್ಣವಾಗಿ ಬೇರೆ ಬೇರೆ. ಆದರೆ ಈ ಎರಡೂ ಕೃತಿಗಳೂ ಶೋಧಿಸುವ ಮೂಲ ಸಾಮಗ್ರಿ ಒಂದು ಆಧ್ಯಾತ್ಮಿಕ ತರ್ಕ.

ಭಗವದ್ಗೀತೆ ಕುರುಕ್ಷೇತ್ರದಲ್ಲಿ ಕಿಂಕರ್ತವ್ಯಮೂಢನಾದ ಕ್ಷತ್ರಿಯನೊಬ್ಬನಿಗೆ ಆ ಯುದ್ಧದ ಸೂತ್ರಧಾರ ಮಾಡಿದ ಉಪದೇಶ. ಸಂತೆಯ ನಡುವೆ ನಿಂತು ಹೇಳಿದ ತತ್ತ್ವ. ಯುದ್ಧ ಸನ್ನದ್ಧರಾದ ಯೋಧರು, ಅವರು ಕೈಯಲ್ಲಿ ಹಿಡಿದ ಮಾರಕ ಶಸ್ತ್ರಾಸ್ತ್ರಗಳು, ಯೋಧರ ಶಂಖನಾದ, ಕೊಂಬು, ಡೋಲು, ಮದ್ದಲೆಯ ನಿನಾದ, ಕುದುರೆಗಳ ಹೇಷಾರವ, ಇಂಥ ಸನ್ನಿವೇಶ ದಲ್ಲಿ ಯುದ್ಧ ಆರಂಭವಾಗಲಿರುವ ಮುನ್ನ ಅರ್ಜುನ ಸಾರಥಿ ಕೃಷ್ಣನಿಗೆ ಹೀಗೆ ಕೇಳಿಕೊಳ್ಳುತ್ತಾನೆ:

> ಧೃತರಾಷ್ಟ್ರನ ದುಷ್ಟ ಸಂತಾನದ ಅಣತಿಯಂತೆ ಯುದ್ಧ ಮಾಡಲು ಸನ್ನದ್ಧರಾಗಿ ನಿಂತಿರುವ, ನಾನು ಯಾರೊಡನೆ ಹೋರಾಡಬೇಕಾಗಿದೆಯೋ ಅಂಥ ನನ್ನ ಶತ್ರುಗಳನ್ನು ನಾನು ನೋಡಬೇಕು. ನನ್ನ ರಥವನ್ನು ಅಲ್ಲಿಗೆ ಒಯ್ದು ನಿಲ್ಲಿಸು.

ಕೃಷ್ಣ ಎರಡು ಪಾಳಯಗಳ ನಡುವೆ ರಥವನ್ನು ನಿಲ್ಲಿಸು ತ್ತಾನೆ. ಅರ್ಜುನ ಅಲ್ಲಿ ಉಭಯ ಶಿಬಿರಗಳಲ್ಲಿಯೂ ಹಂಚಿಹೋಗಿ ಪರಸ್ಪರ ಕೊಲ್ಲಲು ಸಿದ್ಧರಾಗಿ ನಿಂತಿದ್ದ ಬಂಧು ಬಾಂಧವರು,

ಮಿತ್ರರು, ಗುರುಗಳನ್ನು ಪರಮ ವಿಷಾದದಿಂದ, ಕರುಣೆಯಿಂದ ನೋಡುತ್ತಾನೆ. ಇದು ಭಗವದ್ಗೀತೆಯ ದೃಶ್ಯ ಶ್ರಾವ್ಯ ಸಂದರ್ಭ.

ಚಿಕ್ಕಂದಿನಿಂದಲೂ ಯುದ್ಧದ ಸಂಸ್ಕಾರ ಪಡೆದಿದ್ದ ಕ್ಷತ್ರಿಯನಾದ ಅರ್ಜುನನಿಗೆ ಧರ್ಮ ಸಂದಿಗ್ಧ ಹುಟ್ಟುತ್ತದೆ. ಅಲ್ಲಿಂದ ಮುಂದೆ ಮಹಾಭಾರತದ ಯುದ್ಧದ ವರದಿಗಾರನಾದ ಸಂಜಯನ ಮುಖಾಂತರ ಪ್ರಸಿದ್ಧ ಕೃಷ್ಣಾರ್ಜುನ ಸಂವಾದ ಬಿಚ್ಚಿಕೊಳ್ಳುತ್ತದೆ. ಅರ್ಜುನ ತನ್ನ ಅಳಲನ್ನು ಹೀಗೆ ತೋಡಿಕೊಳ್ಳುತ್ತಾನೆ:

> ನನ್ನ ಬಂಧು ಬಾಂಧವರನ್ನು ಇಲ್ಲಿ ಕಂಡಾಗ ನನ್ನ ಕೈಕಾಲು ಸೋಲುತ್ತವೆ. ಬಾಯಿ ಒಣಗುತ್ತದೆ. ಮೈ ನಡುಗುತ್ತದೆ. ಕೂದಲು ನಿಮಿರುತ್ತದೆ. ಚರ್ಮ ಉರಿಯುತ್ತದೆ. ಗಾಂಡೀವ ಕೈಯಿಂದ ಜಾರುತ್ತದೆ.... ಹೀಗೆ ಬಂಧು ಬಾಂಧವರನ್ನು ಕೊಲ್ಲುವುದರಿಂದ ಏನನ್ನು ತಾನೇ ಆಶಿಸಬಹುದು?....ಇದು ಸೋತವರನ್ನು ಅಧೋಗತಿಗಿಳಿಸಿ, ಗೆದ್ದವರನ್ನು ಶಾಪಗ್ರಸ್ತರನ್ನಾಗಿ ಮಾಡುತ್ತದೆ....ನಾನು ಮಾಡಹೊರಟಿರುವುದು ಏನು? ಮಹತಾಪಕರವಾದ ಸ್ವಜನ ಹತ್ಯೆ. ನಾನಷ್ಟು ಸ್ವಾರ್ಥಿಯೇ? ನಾನು ಅವರನ್ನು ಕೊಲ್ಲುವುದಿಲ್ಲ. ಅವರೇ ನನ್ನನ್ನು ಕೊಲ್ಲಲಿ. ಅದೇ ಉತ್ತಮ. ಈ ಲೋಕದ ರಾಜ್ಯವಾಗಲೀ, ದೇವಲೋಕದ ಸಿಂಹಾಸನವಾಗಲೀ ಈ ವ್ಯಥೆಯನ್ನು ನಿವಾರಿಸಲಾರದು.

ಇಷ್ಟು ಹೇಳಿ ಹೃದಯದಲ್ಲಿ ವ್ಯಥೆ ತುಂಬಿ ಕಣ್ಣಿನಲ್ಲಿ ನೀರು ತುಂಬಿ ತನ್ನ ಬಿಲ್ಲು ಬಾಣಗಳನ್ನು ಕೆಳಗೆಸೆದು ರಥದ ಪೀಠದ ಮೇಲೆ ಅರ್ಜುನ ಕುಳಿತುಬಿಟ್ಟ. ಈ ಸನ್ನಿವೇಶದಲ್ಲಿ ಅರ್ಜುನ ಏನು ಮಾಡಬೇಕು? ಅಥವಾ ಇಂಥ ಯಾವುದೇ ಸನ್ನಿವೇಶದಲ್ಲಿ ಯಾರಾದರೂ ಏನು ಮಾಡಬೇಕು?

ಇಲ್ಲಿಂದ ಮುಂದೆ ಶ್ರೀಕೃಷ್ಣನ ವ್ಯಕ್ತಿತ್ವ ಪೂರ್ಣವಾಗಿ ಪರಿಸ್ಥಿತಿಯನ್ನೂ ಸಂವಾದವನ್ನೂ ತನ್ನ ಹತೋಟಿಗೆ ತೆಗೆದುಕೊಳ್ಳುತ್ತದೆ. ಅವನ ವಾಕ್ಪ್ರವಾಹ ವ್ಯಕ್ತಿತ್ವದ ಅಧಿಕಾರಯುತ ಶೈಲಿ, ದಾರ್ಶನಿಕ ಪಾಂಡಿತ್ಯದೆದುರಿಗೆ ಅರ್ಜುನನ ತರ್ಕ ಶಕ್ತಿ, ಚಿಂತನ ಸಾಮರ್ಥ್ಯ ನಿಧಾನವಾಗಿ ಕರಗಿಹೋಗುತ್ತದೆ. ಅತ್ಯಂತ ಮಾನವೀಯ ಸಂದಿಗ್ಧಕ್ಕೆ ಖುದ್ದು ಭೂಮಿಗಿಳಿದು ಬಂದ ಭಗವಂತ ಅಧಿಕಾರವಾಣಿಯಿಂದ ಸಮಾಧಾನ ಸೂಚಿಸುತ್ತಾನೆ. ಅವನ ಸಮಾಧಾನದ ಧಾಟಿ:

> ನಿನಗೆ ಇಂಥ ಹೃದಯ ದೌರ್ಬಲ್ಯ ಸಲ್ಲದು. ನಾನು ಅಜರಾಮರ ಎಲ್ಲ ಜೀವರಾಶಿಗಳ ಪ್ರಭು. ಧರ್ಮಗ್ಲಾನಿಯಾದಾಗಲೆಲ್ಲ ನಾನು ಬಂದು ದುಷ್ಟ ಶಿಕ್ಷಣ, ಶಿಷ್ಟ ರಕ್ಷಣೆ ಮಾಡುತ್ತೇನೆ. ನನ್ನ ಪ್ರಕೃತಿಯ ಮೂಲಕವೇ ನಾನು ಜಗತ್ತಿನ ಸೃಷ್ಟಿ, ಪ್ರಳಯಗಳ ಕರ್ತ. ನನ್ನ ರೂಪ ಸ್ವಭಾವ ಅರಿತವನು ಜೀವನ್ಮುಕ್ತ. ನನ್ನನ್ನು ಆರಾಧಿಸುವವನ ಇಷ್ಟಾರ್ಥ

> ಗಳನ್ನು ನಾನು ಪೂರೈಸುತ್ತೇನೆ. ಚಾತುರ್ವರ್ಣ್ಯದ ಕರ್ತನಾದ ನಾನು ಎಲ್ಲ ಕತ್ತಲನ್ನೂ ನಿವಾರಿಸುವ ಜ್ಯೋತಿಯಂತಹ ಅರಿವು, ಈ ಜನರೆಲ್ಲ ನನ್ನಿಂದಲೇ ಹತರಾಗಿದ್ದಾರೆ. ನೀನು ನಿಮಿತ್ತ ಮಾತ್ರ. ಕ್ಷತ್ರಿಯನಾದ ನಿನಗೆ ಈ ಯುದ್ಧಧರ್ಮಸಮ್ಮತ.

ಮನುಷ್ಯನ ಚಿಂತನೆ, ಸಾರಾಸಾರ ವಿಚಾರ, ನಿರ್ಧಾರಕ್ಕೆ ಇಲ್ಲಿ ಏನೇನೂ ಮಹತ್ವವಿಲ್ಲ. ಅವನು ನಿಮಿತ್ತ ಮಾತ್ರ. ಪ್ರವಚನದ ಎಲ್ಲ ತಿರುವು ಮುರುವುಗಳ ಮುಖ್ಯ ಧಾರೆ, ನಾನು ಎಂಬ ಈ ಧ್ವನಿ. ಆಧುನಿಕ ಕಾಲದಲ್ಲಿ ಈ ಧಾಟಿಯಲ್ಲಿ ಯಾರಾದರೂ ಮಾತನಾಡಿದರೆ ಆತನಿಗೆ ಮ್ಯಾಗಲೋಮ್ಯಾನಿಯ ಇದೆ–ಎನ್ನುತ್ತಾರೆ. ಕಡೆಗೆ ಈ ರಭಸದಿಂದ ಬಚಾವಾಗಿ ಏನಾದರೂ ಕೋಮಲವಾದ ಹೂವಿನಂತೆಯೊ, ಮೊಳಕೆಯಂತೆಯೋ ಕಿಂಚಿತ್ತಾದರೂ ಮಾನವ ಸಹಜವಾದ ವಿಚಾರಶಕ್ತಿ ಉಳಿದಿದ್ದರೆ ಅದನ್ನು ನಿರ್ನಾಮಗೊಳಿಸಿದ್ದು 'ವಿಶ್ವರೂಪ' ದರ್ಶನದ ದುಳ್ಳುರಿ.

> ಕೋಟಿ ಸೂರ್ಯ ಸಮಪ್ರಭವಾದ ಅಸಂಖ್ಯ ಮುಖಗಳ ಅಂಗಾಂಗಗಳ ಸಹಿತವಾದ ಆಭರಣ ಖಚಿತವಾದ ವಿಶ್ವರೂಪವನ್ನು ಅರ್ಜುನ ಕಂಡ. ಅದನ್ನು ಕಾಣಲು ದಿವ್ಯದೃಷ್ಟಿ ಬೇಕಾಯಿತು. ಅದನ್ನು ಶ್ರೀ ಕೃಷ್ಣ ಅರ್ಜುನನಿಗೆ ನೀಡಿದ.

ಅಲ್ಲಿಗೆ ಮಾನವ ದೃಷ್ಟಿ, ಮಾನವ ಸಂವಾದ ಅಂತ್ಯ. ವ್ಯಕ್ತಿಯ ವಿಚಾರ ಶಕ್ತಿಗೆ ಇದು ಕಡೆಯ ಪ್ರಹಾರ. ತಾರ್ಕಿಕವಾಗಿ ಮಾತು ಪ್ರಾರಂಭಿಸಿದ ಕೃಷ್ಣ ಇಲ್ಲಿ ಸರ್ವಶಕ್ತನಾಗಿ ಮಾತು ಮುಗಿಸುತ್ತಾನೆ. ಅರ್ಜುನ ಹೀಗೆನ್ನುತ್ತಾನೆ:

> ಅಜಾಗೃತನಾಗಿ ನಿನ್ನನ್ನು ಕೃಷ್ಣ, ಸಂಗಾತಿ ಎಂದು ಕರೆದೆ. ಅಮರನಾದ ದೇವನನ್ನು ಮಿತ್ರ, ನರನೆಂದು ಬಗೆದೆ. ಕ್ಷಮಿಸು, ಪ್ರಭು. ನಿನ್ನ ದಯಿಯಿಂದ ನನ್ನ ಭ್ರಾಂತಿ ನಿರ್ಮೂಲವಾಯಿತು, ನನ್ನ ಮನಸ್ಸು ನಿರಾಳವಾಗಿದೆ. ಅದರ ಅನುಮಾನಗಳು ತೀರಿವೆ. ನಿನ್ನ ಆಜ್ಞೆ ನಾನು ಪಾಲಿಸುತ್ತೇನೆ.

ಧರ್ಮಸಂದಿಗ್ಧದಿಂದ ವಿಷಣ್ಣನಾಗಿದ್ದ ಅರ್ಜುನ ಈ ಸ್ಪಷ್ಟ ಮನಸ್ಸಿನಿಂದ ಕ್ರಿಯೆಗೆ ತೊಡಗುತ್ತಾನೆ. ಅವನ ವಿಷಾದ ಹಾಗೂ ಕರುಣೆ ಕರಗಿಹೋಗಿದೆ. ಒಂದು ಮಹದೋದ್ದೇಶಕ್ಕಾಗಿ ಅವನಿಗೆ ಕೊಲೆ ಮಾಡುವ ಹಕ್ಕು ಇದೆ ಎಂಬ ನಂಬಿಕೆ ಬಂದಿದೆ. ಆದುದರಿಂದ ಈ ಕ್ರಿಯೆ ಪ್ರಜ್ಞಾಪೂರ್ವಕವಾದ, ಪೂರ್ವ ನಿಯೋಜಿತವಾದ ಯುದ್ಧವೆಂಬ ಹೆಸರಿನ ಸಾಮೂಹಿಕ ಕೊಲೆ. ಇದರ ಉದ್ದೇಶ ರಾಜ್ಯ ಸಂಪತ್ತು. ಬಂಧು ಬಾಂಧವರ ಕೊಲೆ ಸಹಿತ ಯುದ್ಧದ ಅನಂತ ಅಪರಾಧಗಳೂ ನೈತಿಕವಾಗಿ ಸಿಂಧು,

ಸಮರ್ಥನೀಯ–ಹಾಗೆಂದು ಎಲ್ಲ ತಿಳಿದವನಾದ ಎಲ್ಲಕ್ಕೂ ಕಾರಣಕರ್ತನಾದ ಅತಿ ಮಾನವನಾದ ಕೃಷ್ಣ ಹೇಳುತ್ತಾನೆ. ಅರ್ಜುನ ಕೃಷ್ಣನ ಉದ್ದೇಶಗಳ ಸಾಧನೆ, ನಿಮಿತ್ತ ಮಾತ್ರ. ಅರ್ಜುನ ಈ ಹೊಸ ದೃಷ್ಟಿಯನ್ನು ಮನಸಾರೆ ಒಪ್ಪಿದ್ದಾನೆ. ಉದ್ದೇಶ ಶುದ್ಧ ವಾದುದಾದರೆ, ಕಳಬಹುದು, ಕೊಲಬಹುದು, ಹುಸಿಯ ನುಡಿಯಲುಬಹುದು, ತನ್ನ ಬಣ್ಣಿಸಬಹುದು, ತುಂಬಾ ಪರಿಚಿತ ಸಿದ್ಧಾಂತ.

ಮೂಲತಃ ಇದಕ್ಕೆ ತದ್ವಿರುದ್ಧವಾದ ಘಟನಾಚಕ್ರ ಹಾಗೂ ತರ್ಕಚರ್ಕ ದೊಸ್ತೋವಸ್ಕಿಯ 'ಅಪರಾಧ ಮತ್ತು ಶಿಕ್ಷೆ'ಯದು. ಅದರ ಕಥಾನಾಯಕ ರಾಸ್ಕೋಲ್ನಿ ಕೋವ್ ಸಾಮಂತ ವರ್ಗಮೂಲದ ಆದರೆ ಇಂದು ಅಹನ್ಯಹನಿ ಕಾಲಕ್ಷೇಪ ಮಾಡು ತ್ತಿರುವ ನಿರ್ಗತಿಕ ವಿದ್ಯಾರ್ಥಿ. ಮದುವೆಯಾಗಲು ಪ್ರಾಪ್ತವಯಸ್ಕಳಾದ, ಆದರೆ ಬಡತನದ ಕಾರಣದಿಂದ ಅನುರೂಪನಾದ ವರನನ್ನು ಪಡೆಯಲಾರದ, ರಾಸ್ಕೋಲ್ನಿ ಕೋವನ ಅಭ್ಯುದಯದ ಸಲುವಾಗಿ ಅಪರವಯಸ್ಸಿನ ಉದ್ಧಟ ಶ್ರೀಮಂತನೊಬ್ಬನನ್ನು ಮದುವೆಯಾಗಲೊಪ್ಪಿರುವ ಅವನ ಸೋದರಿ, ಅವನಿಗಾಗಿ ಏನು ತ್ಯಾಗ ಮಾಡಲೂ ಸಿದ್ಧವಿರುವ, ಆದರೆ ಅಸಹಾಯಕಳಾದ ವಾತ್ಸಲ್ಯಮಯಿ ತಾಯಿ ಅವನ ಆಪ್ತರು.

ರಾಸ್ಕೋಲ್ನಿಕೋವನ ಪ್ರಖರ ಆದರ್ಶಶೀಲ ಬುದ್ಧಿ ಒಂದು ಸಿದ್ಧಾಂತವನ್ನು ಕುರಿತು ಚಿಂತಿಸುತ್ತಿರುತ್ತದೆ. ಅವನು ಇದರ ಬಗ್ಗೆ ಒಂದು ಲೇಖನವನ್ನು ಬರೆದಿರುತ್ತಾನೆ ಕೂಡ.

> "ಜಗತ್ತಿನಲ್ಲಿ ಎರಡು ವರ್ಗದ ಜನ:. ನಿಯಮಾತೀತರಾದ ಅತಿ ಮಾನ ವರು. ನಿಯಮ ಪಾಲಕರಾದ ಮಾನವರು. ಮಹಾಪುರುಷರು ಮಹತೋದ್ದೇಶಕ್ಕಾಗಿ ಏನಾದರೂ ಮಾಡಬಹುದು, ಕಳಬಹುದು., ಕೊಲಬಹುದು. ಅದು ಅವರು ಜಗತ್ತನ್ನು ಮುನ್ನಡೆಸುವ ದಾರಿ."

ಅಕಸ್ಮಾತ್ತಾಗಿ ಈ ಸಿದ್ಧಾಂತದ ಒಂದು ವ್ಯವಹಾರ್ಯ ಸಲಹೆ ಒಬ್ಬ ವಿದ್ಯಾರ್ಥಿ ಬೇರೆ ಯಾರೊಡನೆಯೋ ಮಾಡುತ್ತಿದ್ದ ಒಣ ಚರ್ಚೆಯ ಮಧ್ಯದಲ್ಲಿ ಅವನ ಕಿವಿಯ ಮೇಲೆ ಬಿದ್ದಿರುತ್ತದೆ:

> "ಗಿರವಿಯ ವ್ಯಾಪಾರ ನಡೆಸಿ ಸುಲಿಗೆ ಮಾಡುತ್ತಿರುವ ಒಬ್ಬ ದುಷ್ಟ ಮುದುಕಿಯನ್ನು ಕೊಲ್ಲು. ಅವಳ ಹಣ ತೆಗೆದುಕೋ. ಅದರ ನೆರವಿನಿಂದ ಮಾನವತೆಯ ಸೇವೆ. ಎಲ್ಲರ ಕಲ್ಯಾಣ ಸಾಧಿಸು. ಸಾವಿರಾರು ಸತ್ಕಾರ್ಯ ಗಳಿಂದ ಒಂದು ಅಪರಾಧ ತೊಡೆದು ಹೋಗುವುದಿಲ್ಲವೇ? ಒಂದು ಸಾವಿನಿಂದ ಸಾವಿರಾರು ಬದುಕುಗಳು ಭ್ರಷ್ಟತೆಯಿಂದ, ಅವನತಿಯಿಂದ ಉಳಿಯುವುವು. ಒಂದು ಸಾವು ನೂರು ಜನರ ಬದುಕಿಗೆ ಸಮ. ಗಣಿತದಷ್ಟೇ ಸರಳ. ಜಗತ್ತಿನ ಜೀವರಾಶಿಯ ತಕ್ಕಡಿಯಲ್ಲಿ ಆ ಒಂದು ರೋಗಗ್ರಸ್ತ, ಮೂರ್ಖ, ದುಷ್ಟ ಸ್ವಭಾವದ ಮುದುಕಿಯ ಜೀವನದ ಬೆಲೆ ಏನು?"

ಆ ಮುದುಕಿಯನ್ನು ಇವನೂ ಬಲ್ಲ. ಬೀಜರೂಪವಾದ ಈ ಸಲಹೆ ಇದೇ ಸಿದ್ಧಾಂತದಿಂದ ಸಿದ್ಧವಾಗಿದ್ದ ಮನೋಭೂಮಿಯಲ್ಲಿ ಬಿದ್ದು, ಮೊಳೆತು ಅವನ ಎಲ್ಲ ಸಮಸ್ಯೆಗಳಿಗೆ ನೇರ ಪರಿಹಾರವಾಗಿ ತೋರುತ್ತದೆ. ಒಂದು ದಿನ ಅವಳ ಮನೆಗೆ ಹೋಗಿ ಗಿರವಿ ಮಾಲು ಒಂದನ್ನು ಅವಳಿಗೆ ತೋರಿಸುವ ನೆಪದಲ್ಲಿ ತಾನು ಕೊಂಡೊಯ್ದಿದ್ದ ಒಂದು ಕೊಡಲಿಯಿಂದ ಅವಳನ್ನು ತಲೆಯೊಡೆದು ಕೊಂದ. ಆಗ ಅವನು ಎಚ್ಚರದಿಂದ, ಸಂಯಮದಿಂದ ಇದ್ದ. ಅವನ ಮನಸ್ಸಿನಲ್ಲಿ ಏನೂ ಗಡಿಬಿಡಿ ಇರಲಿಲ್ಲ. ಅವಳ ಕುಪ್ಪಿಗೆಯಲ್ಲಿದ್ದ ಹಣದ ಚೀಲವನ್ನು, ಗಿರವಿಯ ವಿವಿಧ ಚಿನ್ನದ ಮಾಲುಗಳನ್ನು ದೋಚಿದ. ಅಷ್ಟು ಹೊತ್ತಿಗೆ ಸತ್ತ ಮುದುಕಿಯ ತಂಗಿ ಹೊರಗಿಂದ ಮನೆಗೆ ಬರುತ್ತಾಳೆ. ಅವಳನ್ನೂ ಕೊಲ್ಲುತ್ತಾನೆ. ಹೀಗೆ ಸದುದ್ದೇಶಕ್ಕಾಗಿ ಕೊಲ್ಲುವ, ದೋಚುವ ಹಕ್ಕನ್ನು ಚಲಾಯಿಸುತ್ತಾನೆ. ಆಶ್ಚರ್ಯಕರ ರೀತಿಯಲ್ಲಿ ಯಾರಿಗೂ ಸುಳಿವು ಕೊಡದೆ ಮನೆಗೆ ಹಿಂತಿರುಗುತ್ತಾನೆ. ಕಳುವು ಮಾಡಿದ್ದ ಸಾಮಾನುಗಳನ್ನು ಯಾರೂ ಕಾಣದಂತೆ ಮುಚ್ಚಿಡುತ್ತಾನೆ. ಜೋಡಿ ಕೊಲೆಮಾಡಿದ್ದನ್ನು ಯಾರೂ ಕಂಡಿರಲಿಲ್ಲ. ಚೀಲದ ತುಂಬ ಹಣ, ಚಿನ್ನದ ಆಭರಣಗಳನ್ನು ದೋಚಿ ತಂದಿದ್ದ. ಇನ್ನು ಅವನು ತನ್ನ ತಾಯಿಯ, ಸೋದರಿಯ ಸಮಸ್ಯೆಗಳನ್ನು ಬಗೆಹರಿಸಬಹುದು. ತಾನು ಮಹತ್ಕಾರ್ಯದಲ್ಲೂ ತೊಡಗಬಹುದು.

ಆದರೆ ಆ ಕ್ಷಣದಿಂದ ಅವನಲ್ಲಿ ಕ್ಷೀಣವಾಗಿ ಇದ್ದೂ ಇಲ್ಲದಂತಿದ್ದ ಅಂತಃಸಾಕ್ಷಿಯ ಕಿಡಿ ನಿಧಾನವಾಗಿ ಹತ್ತಿಕೊಂಡು ಕೊಳ್ಳಿಯಾಗಿ ಉರಿಯತೊಡಗುತ್ತದೆ. ಎಲ್ಲಿಗೆ ಹೋದರೂ, ಏನು ಮಾಡಿದರೂ ಅವನಿಗೆ ಮೊದಮೊದಲು ತನ್ನ ಅಪರಾಧದ ಪತ್ತೆಯ ಭೂತ ಸ್ವಪ್ನ ಕಾಡತೊಡಗುತ್ತದೆ. ಒಳಗುದಿ, ಜ್ವರ, ಬಡಬಡಿಕೆ, ಸನ್ನಿ, ಭ್ರಮೆ. ಇಂತಹ ಮನೋವಿಕಾರಗಳು ಅವನ ವ್ಯಕ್ತಿತ್ವವನ್ನು ಆಕ್ರಮಿಸಿ ದೇಹವನ್ನು ಜರ್ಝರಗೊಳಿಸಿ ಹುಚ್ಚಿನ ಅಂಚಿಗೆ ಎಳೆದೊಯ್ಯುತ್ತವೆ. ಮನಃಶಾಂತಿ ಸಂಪೂರ್ಣ ನಾಶವಾಗಿ ಕರ್ತವ್ಯದ ಬೆಳಕು ಕಾಣದೆ ಅವನ ಅಂತರಂಗ ಅಲ್ಲೋಲ ಕಲ್ಲೋಲವಾಗಿದೆ. ಹಲವು ಕಾಕತಾಳೀಯಗಳು ಘಟಿಸಿದರೂ ಎಷ್ಟೇ ಗುಮಾನಿ ಬಂದರೂ ಅವನ ಅಪರಾಧ ಪೋಲೀಸರಿಂದ ಪತ್ತೆ ಆಗುವುದಿಲ್ಲ. ಹೀಗೆ ರಾಜ್ಯಶಕ್ತಿಯಿಂದ ನಿರಾತಂಕವಾದರೂ ಈಗ ಪೂರ್ಣ ಎಚ್ಚೆತ್ತ ಅಂತಃಶಕ್ತಿ ಅವನ ಮೇಲೆ ದಂಗೆ ಸಾರಿ ಆದಿ ಅಂತ್ಯವಿಲ್ಲದ ಬೇಗುದಿ ಎಬ್ಬಿಸಿದೆ. ಅದರಿಂದ ಹೊರಬರುವ ಮಾರ್ಗಕ್ಕಾಗಿ ತೊಳಲಾಟ ನಿರಂತರವಾಗಿ ನಡೆದಿದೆ. ಈ ಎಲ್ಲ ಹೋರಾಟ ಅವನ ಹೃದಯ ಕ್ಷೇತ್ರದಲ್ಲಿ ನಡೆಯುತ್ತದೆ.

ಈ ಸನ್ನಿವೇಶದಲ್ಲಿ ಅವನಿಗೆ ತನ್ನ ಮಲತಾಯಿಯನ್ನು ಸಾಕುವುದಕ್ಕಾಗಿ ಬೀದಿಗಿತ್ತಿಯಾಗಿದ್ದ ಸೋನಿಯಾ ಎಂಬ ಹೆಣ್ಣಿನ ಪರಿಚಯವಾಗುತ್ತದೆ. ಯಾವುದೋ ಅಗೋಚರ ಬಿರುಗಾಳಿ ಸಮಾನವಾಗಿ ಧರ್ಮಭ್ರಷ್ಟರಾದ ಅವರಿಬ್ಬರನ್ನೂ ಒಂದು ನಿರ್ಜನವಾದ ನಡುಗಡ್ಡೆಗೆ ತಂದು ಒಟ್ಟಿಗೆ ಎಸೆದಿದೆ. ಅವನು ಕೊಲೆಗಾರನಾದರೆ, ಅವಳು ಬಸವಿ. ಆದರೆ ಅವಳ ಈ ಹೊರ ಬದುಕಿಗೆ ವಿರುದ್ಧವಾದ, ವಿಶುದ್ಧವಾದ ಒಳಬದುಕು ಅವಳದು. ಅಬಲೆಯಾದ ಅವಳ ಅಂಗಾಂಗಗಳಲ್ಲೂ ಕರುಣೆ ಸ್ರವಿಸುತ್ತದೆ. ನಿಧಾನವಾಗಿ ಅವನು ಅವಳ ಪ್ರಭಾವವಲಯಕ್ಕೆ ಒಳಗಾಗಿ, ಅವಳು ತನ್ನ ಸಹಧರ್ಮಿಣಿ ಎಂದು ಅವನಿಗೆ ಎನಿಸುತ್ತದೆ. ಅವನು ಅವಳನ್ನು ಕುರಿತು ಹೀಗೆ ಹೇಳುತ್ತಾನೆ:

> "ನೀನೂ ಒಂದು ಬದುಕನ್ನು ನಾಶ ಮಾಡಿರುವೆ–ನಿನ್ನದೇ ಬದುಕನ್ನು. ನೀನೊಬ್ಬಳೇ ಇದ್ದರೆ ನನ್ನಂತೆ ನಿನಗೂ ಹುಚ್ಚು ಹಿಡಿಯುತ್ತದೆ. ಆದ್ದರಿಂದ ನಾವಿಬ್ಬರೂ ಒಂದೇ ಮಾರ್ಗದಲ್ಲಿ ಹೋಗಬೇಕಾಗಿದೆ, ಹೋಗೋಣ."

ದುಸ್ಸಹವಾದ ಆತ್ಮಗ್ಲಾನಿಗೊಳಗಾದ ಅವನಿಗೆ ಅವನ ಸ್ವಾನುಭವ ಪಕ್ವವಾಗಿ ಧರ್ಮಪ್ರಜ್ಞೆ ಜಾಗೃತವಾಗಿ ಅಂತರ್ಬೋಧೆ ಮನಸ್ಸಿನಲ್ಲಿ ಮಿಡಿಯುತ್ತಿದ್ದಾಗ ಅವಳ ಉಪದೇಶ:

> "ಈಗಲೇ, ಈ ಕ್ಷಣ ಹೋಗು. ಅಡ್ಡ ರಸ್ತೆಯಲ್ಲಿ ನಿಲ್ಲು. ತಲೆಬಾಗಿ ನೀನು ಅಪವಿತ್ರಗೊಳಿಸಿರುವ ನೆಲಕ್ಕೆ ಮುತ್ತಿಡು. ಅನಂತರ ಜಗತ್ತಿಗೆಲ್ಲ ತಲೆಬಾಗಿ, ಎಲ್ಲ ಜನರಿಗೂ ಹೇಳು 'ನಾನು ಕೊಲೆಗಡುಕ'. ಆಗ ದೇವರು ನಿನಗೆ ಹೊಸ ಬದುಕನ್ನು ನೀಡುವನು."

ಅವಳು ಅವನಿಗೆ ಒಂದು ಶಿಲುಬೆಯನ್ನು ನೀಡಿ, ಹೊಸ ಒಡಂಬಡಿಕೆಯ ಒಂದು ಹೃದಯಸ್ಪರ್ಶಿ ಆಖ್ಯಾಯಿಕೆಯನ್ನು ಅವನ ಕೋರಿಕೆಯಂತೆ ಓದುತ್ತಾಳೆ—ಮೃತನಾದ ಲಾಜರಸ್ ಏಸುವಿನ ಕೃಪೆಯಿಂದ ಮತ್ತೆ ಎದ್ದು ಬಂದದ್ದು. ಹಾಗೆಯೇ ಅವನಿಗೆ ಅವಳು ಒಟ್ಟಿಗೆ ನರಳುವ, ಒಟ್ಟಿಗೆ ಶಿಲುಬೆ ಧರಿಸುವ, ಒಟ್ಟಿಗೆ ಪಾಪವನ್ನು ಕಳೆದುಕೊಳ್ಳುವ ದೀಕ್ಷೆಯ, ಪ್ರೇಮಮಯ ಸಾಹಚರ್ಯದ ಬಲವನ್ನೂ ನೀಡುತ್ತಾಳೆ. ಕಡೆಗೆ ಅವನು ತನ್ನ ಅಪರಾಧವನ್ನು ಸಾಬೀತು ಮಾಡಲಾರದ ಪೋಲೀಸರಲ್ಲಿಗೆ ತಾನೇ ಹೋಗಿ ತಪ್ಪೊಪ್ಪಿಕೊಳ್ಳುತ್ತಾನೆ.

ದೂರದ ಸೈಬೀರಿಯಾದಲ್ಲಿ ಎಂಟು ವರುಷ ಗಡೀಪಾರಾಗಿ ದುಡಿಯುವ ಶಿಕ್ಷೆ ದೊರೆಯುತ್ತದೆ. ಅವನ ನೆರಳಿನಂತೆ ಅವಳೂ ಅವನನ್ನು ಹಿಂಬಾಲಿಸಿ ಅಲ್ಲಿ ವ್ರತಿಯಂತೆ ಅವನ ಬಿಡುಗಡೆಗಾಗಿ ಕಾಯುತ್ತಾಳೆ. ನಿವೇದನೆ ಹಾಗೂ ಶಿಕ್ಷೆಯ ಸ್ವೀಕಾರ ಮತ್ತು ಅವಳೊಂದಿಗೆ ಸಾಧಿಸಿದ ಏಕಾತ್ಮಕತೆಯಿಂದ ಅವನ ಮನಶ್ಶಾಂತಿ ನಿಧಾನವಾಗಿ ಮರಳುತ್ತದೆ. ಅವನ ಅಪರಾಧ, ಸೆರೆವಾಸ–ಇವು ಅವನಿಗೆ ಈಗ ಹೊರಗಿನ ವ್ಯಾಪಾರಗಳು. ಅವನ ಒಳಗನ್ನು ಅವು ಮುಟ್ಟವು. ಅವನ ಆತ್ಮ ಸಂಸ್ಕರಣ ಆರಂಭವಾಗಿದೆ. ಅವನ ಹೊಸ ಬದುಕಿನ ಹೊಂಗಿರಣ ಉದಯಿಸಿದೆ.

ಭಗವದ್ಗೀತೆ ಹಾಗೂ ಅಪರಾಧ ಮತ್ತು ಶಿಕ್ಷೆ ಎರಡೂ ಕೃತಿಗಳು ಶೋಧಿಸುವುದು ಸಾಧನ ಮತ್ತು ಉದ್ದೇಶಗಳ ಸಂಕೀರ್ಣ ಸಂಬಂಧವನ್ನು. ಭಗವದ್ಗೀತೆ ಸದುದ್ದೇಶಕ್ಕಾಗಿ ಯುದ್ಧ–ಸಾಮೂಹಿಕ ಕೊಲೆಯ–ನೈತಿಕತೆಯನ್ನು ಪ್ರಶ್ನಿಸುವ ಒಳಗುದಿಯಿಂದ ಆರಂಭವಾಗಿ ಅಂಥ ನೈತಿಕತೆಯನ್ನು ಒಪ್ಪತೊಡಗುವುದರಲ್ಲಿ ಪರ್ಯವಸಾನವಾಗಿದೆ. 'ಅಪರಾಧ ಮತ್ತು ಶಿಕ್ಷೆ' ಸದುದ್ದೇಶಕ್ಕಾಗಿ ಕೊಲೆಯ ನೈತಿಕತೆಯನ್ನು ಒಪ್ಪತೊಡಗುವುದರಿಂದ ಆರಂಭವಾಗಿ ಅದನ್ನು ತಿರಸ್ಕರಿಸುವ ಧರ್ಮದಲ್ಲಿ ಪರ್ಯವಸಾನವಾಗುತ್ತದೆ.

ಭಗವದ್ಗೀತೆಯಲ್ಲಿ ಅಪೌರುಷೇಯ ಶಕ್ತಿಯ ತರ್ಕ ವೈಭವ ಮೆರೆದರೆ "ಅಪರಾಧ ಮತ್ತು ಶಿಕ್ಷೆ"ಯಲ್ಲಿ ರಾಸ್ಕೋಲ್ನಿಕೋವ್–ಸೋನಿಯಾರ ಮಾನವೀಯ ಅರಸಿಕೆಯ ಭಾವ ವೈಭವ ಮೆರೆಯುತ್ತದೆ. ಭಗವದ್ಗೀತೆಯಲ್ಲಿ ಅರ್ಜುನನ ವಿಷಾದಯೋಗ ಗೌಣವಾಗಿದ್ದರೆ 'ಅಪರಾಧ ಮತ್ತು ಶಿಕ್ಷೆಯಲ್ಲಿ' ರಾಸ್ಕೋಲ್ನಿಕೋವನ ವಿಷಾದವೇ ಪ್ರಧಾನ. ಭಗವದ್ಗೀತೆ ಹೆಚ್ಚು ದಾರ್ಶನಿಕ ಗ್ರಂಥವಾದರೆ, ಅಪರಾಧ ಮತ್ತು ಶಿಕ್ಷೆ ಹೆಚ್ಚು ಮಾನವೀಯ ಕೃತಿ. ಒಂದು ರೀತಿಯಲ್ಲಿ ಅಪರಾಧ ಮತ್ತು ಶಿಕ್ಷೆ ಭಗವದ್ಗೀತೆಯ ಉತ್ತರಭಾಗ. ಗೀತೆಯಲ್ಲಿ ಕೃಷ್ಣನ ಉಪದೇಶ ಹಾಗೂ ಅರ್ಜುನನ ವಿಷಾದದ ಒಂದೇ ಭಿತ್ತಿಚಿತ್ರ ಮೊದಲಿನಿಂದ ಕೊನೆಯವರೆಗೂ ಮೂಡಿದ್ದರೆ, ಅಪರಾಧ ಹಾಗೂ ಶಿಕ್ಷೆಯಲ್ಲಿ ಒಂದು ಬದುಕಿನ ಮೆರವಣಿಗೆಯೆ ಕಣ್ಣೆದುರು ಸಾಗಿ ಅತ್ಯಂತ ಮಾರ್ಮಿಕವಾದ ಹಾಗೂ ಕೋಮಲವಾದ ಹಲವು ಭಾವ ಸನ್ನಿವೇಶಗಳು ನಿರ್ಮಿತವಾಗಿ ಜೀವನದ ನಕಲಾದ ಹಲವು ವ್ಯಕ್ತಿಗಳು ರಂಗದ ಮೇಲೆ ಓಡಾಡುತ್ತಾರೆ. ಆದರೆ ಈ ಎರಡರಲ್ಲೂ ರಚನೆಯ ಅಡ್ಡಾದಿಡ್ಡಿತನ ಇದೆ.

ಈ ಎರಡೂ ಕೃತಿಗಳೂ ಹಲವು ಹತ್ತು ಸ್ವಾರಸ್ಯಕರ ವಿಷಯಗಳನ್ನು ಪ್ರಾಸಂಗಿಕವಾಗಿ ಮುಟ್ಟುತ್ತವೆ, ಒಳಹೋಗುತ್ತವೆ, ಬಳಸುತ್ತವೆ. ಅವುಗಳನ್ನೆಲ್ಲ ಇಲ್ಲಿ ಚರ್ಚಿಸುವ ಅಥವಾ ಗುರುತಿಸುವ ಉದ್ದೇಶ ಇಲ್ಲ. ಉದಾಹರಣೆಗೆ, ಗೀತೆ ಪ್ರತಿಪಾದಿಸುವ ನಿಷ್ಕಾಮ ಕರ್ಮ ಮನೋಭಾವ, ಚಾತುರ್ವರ್ಣ್ಯ ವಿಭಜನೆ ಹಾಗೂ 'ಅಪರಾಧ ಮತ್ತು ಶಿಕ್ಷೆ' ಯಲ್ಲಿ ಚಿತ್ರಿತವಾಗಿರುವ ಗಿಲ್ಟ್ ಕಾಂಪ್ಲೆಕ್ಸ್, ಮಾನವ, ಅತಿಮಾನವ ವರ್ಗೀಕರಣ. ಆದರೆ ಒಟ್ಟಾರೆ ನೋಡುವುದಾದರೆ ಶ್ರೀಕೃಷ್ಣನಿಗಿಂತ ದೊಸ್ತೋವಸ್ಕಿಯೇ ಹೆಚ್ಚು ಆಧ್ಯಾತ್ಮಿಕತೆಯನ್ನು ಪ್ರತಿಧ್ವನಿಸುತ್ತಾನೆ. ಕೃಷ್ಣನ ಗುರಿ ಬಾಹ್ಯ ರಾಜ್ಯ. ದಾಸ್ತೋವಸ್ಕಿಯ ಗುರಿ ಆಂತರಿಕ ರಾಜ್ಯ. ಇದು ಸಹಜವೂ ಕೂಡ. ಎರಡೂವರೆ ಮೂರು ಸಾವಿರ ವರುಷಗಳ ಹಿಂದೆ ಭಾರತದಲ್ಲಿ ಆಗತಾನೆ ತಲೆಎತ್ತಿ ರೂಪು ಧಾರಣೆ ಮಾಡುತ್ತಿದ್ದ ಹಲವಾರು ಸಣ್ಣಪುಟ್ಟ ರಾಜ್ಯಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಒಂದು ಭಾರತದ ಸಾಮ್ರಾಜ್ಯ ಸ್ಥಾಪಿಸುವ ಹುಮ್ಮಸ್ಸಿನಲ್ಲಿ ಯಾವ ಅಡೆತಡೆಯನ್ನೂ ಬದಿಗೆ ಸರಿಸುವ ಕಾಲದ ಆತ್ಮವಿಶ್ವಾಸದ ಐಹಿಕ ಸಿದ್ಧಾಂತ ಗೀತೆಯ ತಿರುಳು. ಮಧ್ಯಯುಗದ ಸಾಮಂತಶಾಹಿ ವ್ಯವಸ್ಥೆ ರಷ್ಯಾದಲ್ಲಿ ಕುಸಿದುಬಿದ್ದು ಸಾಮಂತ ಕುಲೀನರು, ನಿರ್ಗತಿಕರು, ನೀತಿಭ್ರಷ್ಟರು, ರೋಗಿಷ್ಟರು, ದಿಶಾಹೀನರು ಆಗಿದ್ದ ಅವನತಿಯ ಕಾಲದ ಪಾರಮಾರ್ಥಿಕ ಸಿದ್ಧಾಂತ ಅಪರಾಧ ಮತ್ತು ಶಿಕ್ಷೆಯ ಪಲ್ಲವಿ. ಪ್ರಾಸಂಗಿಕವಾಗಿ ದಾಸ್ತೋವಸ್ಕಿಯನ್ನು ಕುರಿತು ಸ್ಟಾಲಿನ್ನಿನ ಮಾತನ್ನು ಇಲ್ಲಿ ಉದ್ಧರಿಸಬಹುದು : "ದಾಸ್ತೋವಸ್ಕಿ ಬಲು ದೊಡ್ಡ ಲೇಖಕ. ಆದರೆ ಬಲು ದೊಡ್ಡ ಪ್ರತಿಗಾಮಿ....ಆದರೆ ಬಲು ದೊಡ್ಡ ಲೇಖಕ."

ಈ ಎರಡೂ ಪ್ರಸಂಗಗಳನ್ನೂ ನಾವು ಆಧುನಿಕ ಪರಿಸರದಲ್ಲಿಟ್ಟು ಹೀಗೆ ಪೃತತ್ರಾಂತೀಕರಿಸಬಹುದು. ಕೃಷ್ಣನಂಥ ಒಬ್ಬಾತ ತುಂಬ ಕಷ್ಟ ಕಾರ್ಪಣ್ಯ, ಹತಾಶೆಗೊಳಗಾಗಿದ್ದ ತನ್ನ ಒಬ್ಬ ಆಪ್ತನಿಗೆ ಹೀಗೆ ಹುರಿದುಂಬಿಸಬಹುದು : "ನಿನ್ನ ಪಾಲಿನ ಆಸ್ತಿಗೆ ಯಜಮಾನನಾಗಿರುವ ನಿನ್ನ ಅಣ್ಣ ಮೋಸಗಾರ, ದಂದುಗಾರ, ಅಧರ್ಮಿ,

ನೀನಾದರೋ ಹೆಂಡತಿ, ಮಕ್ಕಳು ಮರಿ ಇರುವ ಸಂಸಾರಿ. ಆದರೆ ವ್ಯವಹಾರದಲ್ಲಿ ಅಮಾಯಕ. ನಿನ್ನ ಆಸ್ತಿಯ ಪಾಲನ್ನು ಅವನು ಅನ್ಯಾಯದಿಂದ ಒಳಹಾಕಿಕೊಂಡಿದ್ದಾನೆ. ಅವನನ್ನು ಉಪಾಯಾಂತರದಿಂದ ನೀನು ಕೊಲ್ಲು, ಅದು ಅಧರ್ಮವಾಗದು, ಅಲ್ಲದೆ, ನಾನು ಸುಪ್ರಸಿದ್ಧ ವಕೀಲ. ನಿನ್ನನ್ನು ಕಾನೂನಿನ ನೇಣುಗಂಬದಿಂದ ಉಳಿಸಬಲ್ಲೆ. ಅನುಮಾನವಿದ್ದರೆ ನಾನು ನ್ಯಾಯಾಲಯದಲ್ಲಿ ಗೆದ್ದಿರುವ ಇಂಥ ಮೊಕದ್ದಮೆಗಳ ಪಟ್ಟಿಯನ್ನೇ ನೋಡು." ಇದು ಭಗವದ್ಗೀತೆಯ ಪ್ರಸಂಗದ ಇಂದಿನ ಅವತರಣಿಕೆ. ಹಾಗೆಯೆ ಸಮಾಜಕಂಟಕನಾದ ದುಷ್ಟನೊಬ್ಬನನ್ನು ಸದುದ್ದೇಶಕ್ಕಾಗಿ ಕೊಂದು ಪೊಲೀಸರ ಎಲ್ಲ ವಿಧದ ತನಿಖೆಯಲ್ಲೂ ಪತ್ತೆಯಾಗದೆ ತನ್ನ ಒಳತೋಟಿಯ ಮೂಲಕ ಅಂತಃಪ್ರೇರಣೆಯಿಂದ ನಿವೇದನೆ ಮಾಡಿಕೊಂಡು ಶಿಕ್ಷೆಯನ್ನು ಸ್ವೀಕರಿಸುವ ಆಧುನಿಕ ಯುವಕನನ್ನೂ ಕಲ್ಪಿಸಿಕೊಳ್ಳಬಹುದು. ಈ ಎರಡು ಅವತರಣಿಕೆಗಳೂ ಅಷ್ಟೇನೂ ಅಪರೂಪವಲ್ಲ. ಅಂತೆಯೇ ಈ ಎರಡೂ ಕೃತಿಗಳ ದೇಶ ಕಾಲಾತೀತ ಮಹತ್ವ.

ಈ ಸಂದರ್ಭದಲ್ಲಿ ಥಿಯೋಡರ್ ಡ್ರೈಜರನ 'ಆನ್ ಅಮೆರಿಕನ್ ಟ್ರಾಜಿಡಿ' ನೆನಪಿಗೆ ಬರುವುದು ಸಹಜ. ಅಲ್ಲಿನ ಹೀರೊ ತನ್ನ ಪ್ರೇಯಸಿಯನ್ನು ತನ್ನ ಪ್ರಾಪಂಚಿಕ ಪ್ರಗತಿಗಾಗಿ ಕೊಲೆಮಾಡಿದನೇ ಎಂಬುದು ಅನುಮಾನಾಸ್ಪದ. ಆದರೆ ಮಾಡಲು ಆಲೋಚಿಸಿರುತ್ತಾನೆ. ಅವಳು ಸತ್ತಿರುತ್ತಾಳೆ. ಅವನಿಗೆ ಶಿಕ್ಷೆಯಾಗುತ್ತದೆ. ಡ್ರೈಜರನ ತಾತ್ಪರ್ಯ, ಅಪರಾಧಿ ಸಮಾಜ; ವ್ಯಕ್ತಿ ಯಜ್ಞಪಶು. ಇದು ಅಮೆರಿಕದ ಬಂಡವಾಳ ಶಾಹಿ ಸಮಾಜದ ಭರ್ತ್ಸನೆ.

ಹಿಂಸೆಯನ್ನು ಸ್ಫಟಿಕ ಸ್ಪಷ್ಟವಾಗಿ ಸಮರ್ಥಿಸುವ ಭಗವದ್ಗೀತೆಯಲ್ಲಿ ಅಹಿಂಸೆಯ ಸಂದೇಶವನ್ನೂ ಕಂಡುಕೊಂಡ ಗಾಂಧೀಜಿಯ ವ್ಯಾಖ್ಯಾನದ ವಕೀಲಿ ಚಾತುರ್ಯವನ್ನು ಕಂಡು ನಾವು ಕೌತುಕಪಡಬಹುದಷ್ಟೆ!

ನೈಜ ನಡೆ

ಅನುಮಾನ ಅಳಿದರೆ ದೃಢ ಮನದ ಖಾತರಿ ನಿಲವು
ಸಂದೇಹ ಉಳಿದರೆ ಯಾವ ಕಾರ್ಯಕೂ ಸಿಗದು ಗೆಲವು;
ಶಂಕೆಯ ಬಿಟ್ಟರೆ ಯಶದ ಹಾದಿಗೆ ಸುಲಭ ಸುಳಿವು
ನಿಜಪರಿತು ನಡೆದರೆ ಬದುಕೇ ಸುಗಮವು...ಮಣ್ಣಿನ ಮಗ.

ದೊಡ್ಡರಂಗೇಗೌಡ

ಭಾಷೆಯನ್ನು ಕುರಿತು ದಾಸ್ತೋವಸ್ಕಿ

ಪ್ರೊ॥ ಸುಜನಾ

ರಷ್ಯದ ಮಹಾಕಾದಂಬರಿಕಾರ ದಾಸ್ತೋವಸ್ಕಿಯ ದಿನಚರಿಯಲ್ಲಿ ಬಂದಿರುವ ಭಾಷೆಯನ್ನು ಕುರಿತ ಟಿಪ್ಪಣಿಯ ಅನುವಾದವನ್ನಿಲ್ಲಿ ನೀಡಲಾಗಿದೆ. ೧೮೭೬ರಲ್ಲಿ ಅವನು ರಷ್ಯನ್ ಭಾಷೆಯ ಸ್ಥಿತಿಯನ್ನೂ ಫ್ರೆಂಚ್ ಭಾಷೆಯ ಆಧಿಪತ್ಯವನ್ನೂ ಕುರಿತು ಬರೆದಿರುವ ಈ ಮಾತುಗಳು ಕನ್ನಡ ಇಂಗ್ಲಿಷ್ ಸಂಸ್ಕೃತ ಭಾಷೆಗಳ ಸಂದರ್ಭದಲ್ಲಿ ಹೆಚ್ಚು ಅರ್ಥಪೂರ್ಣವಾಗುತ್ತವೆ.

ರಷ್ಯನ್-ಫ್ರೆಂಚ್ ಉಪಭಾಷೆಯನ್ನು ಮಾತಾಡುವ ನಮ್ಮ ರಷ್ಯನ್ನರ ಕಾಕು—ಅದು ರಷ್ಯಕ್ಕೇ ವಿಶಿಷ್ಟ ಗುಣಲಕ್ಷಣಗಳಿಂದ ಕೂಡಿದ್ದು—ವಿದೇಶೀಯರನ್ನೂ ಚಕಿತರನ್ನಾಗಿಸುವಂಥದು. ನನಗೆ ಗೊತ್ತು, ರಷ್ಯನ್ ಜನರ ಫ್ರೆಂಚ್ ಭಾಷೆಯನ್ನು ಕುರಿತು ದಬಾಯಿಸುವುದೀಗ ತುಂಬಾ ಹಳಸಲು ವಿಷಯವಾಗಿದೆ. ಆ ವಿಷಯ ಮಾತ್ರವೆ ಅಲ್ಲ ಅದರ ನೀತಿ ಕುರಿತಾಗಿ ಮಾತಾಡುವುದೂ ಸವಕಲು ಮಾತಾಗಿದೆ. ಆದರೆ, ನನಗೆ ಆಶ್ಚರ್ಯದ ಸಂಗತಿಯೆಂದರೆ ರಷ್ಯನರು ತಮ್ಮ ತಮ್ಮಲ್ಲೇ ರಷ್ಯನ್ ಭಾಷೆಯಲ್ಲಿ ಮಾತನಾಡಬಾರದೆಂಬುದಲ್ಲ—ಅವರು ಹಾಗೇನಾದರೂ ರಷ್ಯನ್ ಭಾಷೆಯಲ್ಲಿ ಮಾತಾಡಿದರೆ ಅದು ಮತ್ತೂ ಹೆಚ್ಚು ಆಶ್ಚರ್ಯಕರವಾಗುತ್ತದೆ—ಅವರು ತಾವು ಒಳ್ಳೆಯ ಫ್ರೆಂಚ್ ಮಾತಾಡುತ್ತೇವೆಂದು ಭ್ರಮಿಸಿಕೊಂಡಿರುವುದೆ ಸೋಜಿಗದ ವಿಷಯವಾಗಿದೆ. ಈ ವಿಪರೀತ ಪೂರ್ವಗ್ರಹಿಕೆಗಳನ್ನು ಅವರ ತಲೆಯೊಳಕ್ಕೆ ಯಾರು ಗಿಡಿದರೊ ತಿಳಿಯದು. ನಮ್ಮ ಅಜ್ಞಾನದಿಂದಾಗಿ ಈ ಭ್ರಾಂತಿಯಿನ್ನೂ ಬಲಿಷ್ಠವಾಗಿದೆ. ಫ್ರೆಂಚ್ ಭಾಷೆಯನ್ನು ಆಡುವ ನಮ್ಮ ಅತ್ಯಧಿಕ ಸಂಖ್ಯೆಯ ವಿದ್ಯಾವಂತ ರಷ್ಯನರನ್ನು ಎರಡು ಗುಂಪಾಗಿ ವರ್ಗೀಕರಿಸಬಹುದು. ಒಂದು, ನಿಸ್ಸಂದೇಹವಾಗಿ ಕೆಟ್ಟ ಫ್ರೆಂಚ್ ಮಾತಾಡುವವರ ಹಿಂಡು; ಎರಡನೆಯದು, ತಾವು ಪ್ಯಾರಿಸಿಯನ್ನರಂತೆ ಶುದ್ಧ ಫ್ರೆಂಚ್ ನುಡಿಯುತ್ತೇವೆಂದು ಭ್ರಮಿಸಿರು

ಸವರ ಹಿಂಡು. ಇವರ ಫ್ರೆಂಚಾದರೂ ಮೊದಲವರದಕ್ಕಿಂತ ಹೇಗೂ ಉತ್ತಮವಲ್ಲ. ಈ ರ್ಗದವರಂತೂ ಅಸಂಗತ ಪ್ರಹಸನದ ಪರಮಾವಧಿ ಮುಟ್ಟುತ್ತಾರೆ. ಒಮ್ಮೆ ನಾನು ಂಜೆ ಕಾಲಾಡುತ್ತಿದ್ದಾಗ ಇಬ್ಬರು ದಂಪತಿಗಳ ಸಂಭಾಷಣೆ ಕೇಳಿದೆ. ಅವರೇನೊ ತಮ್ಮ ಂಸಾರದ ಗಂಭೀರ ವಿಷಯವೊಂದನ್ನು ಚರ್ಚಿಸಿದ್ದಂತೆ ಕಂಡಿತು. ಅದು ಅವರಿಬ್ಬರನ್ನೂ ಾತರಕ್ಕೀಡುಮಾಡಿದಂತಿತ್ತು. ಉತ್ಕಂಠೆಯಿಂದ ಅವರು ಮಾತಾಡುತ್ತಿದ್ದರು—ಆಶ್ಚರ್ಯ, ಫ್ರೆಂಚ್ ಭಾಷೆಯಲ್ಲಿ! ಒಬ್ಬರಿಗೊಬ್ಬರು ಹೇಳಿಕೊಳ್ಳಬೇಕೆಂಬುದನ್ನು ಹೇಳಿಕೊಳ್ಳಲಾರರು! ಪೆಳಚಿಕೊಂಡ ಭಾಷೆಯಲ್ಲಿ, ಕೊಳಕು ನುಡಿಗಟ್ಟು ಬಳಸಿ ಕಷ್ಟಪಟ್ಟು ಮಾತಾಡುತ್ತಿದ್ದರು. ತಮ್ಮನ್ನು ಹೇಳಿಕೊಳ್ಳಲಾಗದೆ ತೊಳಲಿದ್ದರು ; ತಾಳ್ಮೆತಪ್ಪಿ ಒಬ್ಬರನ್ನೊಬ್ಬರು ತಿದ್ದುತ್ತ ಅವರಾಡಬೇಕಾದುದನ್ನು ತಾವೆ ಹೇಳಿಕೊಡುತ್ತ ಮಾತಾಡಿದ್ದರು. ಇಷ್ಟೆಲ್ಲ ತೊಳಲಿ ಬಳಲಿದ್ದರೂ ಅವರು ರಷ್ಯನ್ ಭಾಷೆಯಲ್ಲಿ ಮಾತಾಡಬೇಕೆಂಬ ವಾಸ್ತವಾಂಶವನ್ನೆ ಗ್ರಹಿಸ ದಾದರು! ತಪ್ಪರ್ಥವಾದರೂಸರಿ, ಬರಿಯ ತ್ರಾಸವಾದರೂಸರಿ ಫ್ರೆಂಚ್ ಮಾತಾಡಿದರೆ ಆಯಿತು! ನೂರಾರು ಇಂಥ ಪ್ರಸಂಗಕಂಡಿದ್ದೆ. ಆದರೆ ಆಗ ಅನಿಸಿತು, ಅದು ನಂಬಲಾಗ ದಂತಹ ಮೂರ್ಖತನವೆಂದು. ರೂಢಿಯಂತೆ ಈ ಜನ ಕೆಟ್ಟ ಫ್ರೆಂಚ್ ಮಾತಾಡುತ್ತಾರೆ. ಯಾವ ಭಾಷೆಯಲ್ಲಿ ಮಾತಾಡುವುದು ಸುಲಭ ಎಂದು ಯೋಚಿಸುವಗೋಜಿಗೂ ಹೋಗುವುದಿಲ್ಲ. ಇಂಥ ಸತ್ತಸಂಭಾಷಣೆಗಳಲ್ಲಿ ಬರುವ ನಿರ್ಜೀವ ಉಚ್ಚಾರಣೆಯಂತೂ ತುಂಬಾ ಜಿಗುಪ್ಸೆ ತರುವಂಥದು.

ಎರಡನೆಯ ವರ್ಗದ, ನಾಜೂಕಯ್ಯಗಳ ರಷ್ಯನ್‌ಫ್ರೆಂಚ್ ಭಾಷೆಯಾದರೂ ಉಚ್ಚಾರದಿಂದಲೆ ವಿಲಕ್ಷಣವಾಗಿದೆ. ಪ್ಯಾರಿಸ್‌ನವರಂತೆ ಮಾತಾಡುತ್ತೇವೆಂದು ಭ್ರಮಿಸಿ ಕೊಂಡಿದ್ದರೂ ಅದು ಹಾಗಿರುವುದಿಲ್ಲ. ಕೃತಕತೆ ಅವರಾಡುವ ಮೊದಲ ಸ್ವನದಿಂದಲೆ ಮೊಳಗತೊಡಗಿರುತ್ತದೆ. ಈ ಆತ್ಮವಂಚಕಕಾರಿಯಾದ ಗುಲಾಮತನ ಯಾರಿಗೂ ತೀರಾ ಹೇಸಿಗೆ ತರುವಂಥದು. ಜೀವಂತಜನ ತಮ್ಮ ಸತ್ತ್ವೋನ್ನತಿಯಲ್ಲಿರುವಾಗಲೂ ಕ್ಷಯ ರೋಗಿಷ್ಠವಾದ ಭಾಷೆಯನ್ನಾಡುತ್ತಲೆ ಇದ್ದಾರಲ್ಲ ಎಂಬುದು ದಿಗ್ಭ್ರಮೆ ಹುಟ್ಟಿಸು ವಂಥದು. ಅದೇನೊ ಸರಿಯೆ, ಅವರು ತಾವಾಡುವ ಭಾಷೆಯ—ಫ್ರೆಂಚ್ ಭಾಷೆಯ ಅಲ್ಲ, ಆದರೆ ಅವರಾಡುವ ಭಾಷೆಯ—ಶೋಚನೀಯ ರಿಕ್ತತೆಯನ್ನು ತಿಳಿದುಕೊಂಡಿಲ್ಲ. ತಮ್ಮ ಮಾನಸಿಕ ಬೆಳವಣಿಗೆಯ ಅಭಾವದಿಂದಾಗಿ ಹಾಗೂ ತಮ್ಮ ನಿಷ್ಫಲ ಚಿಂತನಗಳ ಬಂಜೆ ತನದಿಂದಾಗಿ ಅವರಾದರೂ ತಮ್ಮ ಸಂವಹನ ಮಾಧ್ಯಮದ ಬಗೆಗೆ ತಾತ್ಕಾಲಿಕವಾಗಿ ಯಾದರೂ ಹೆಮ್ಮೆಗೊಂಡಿರುತ್ತಾರೆ. ರಷ್ಯದಲ್ಲಿ ಹುಟ್ಟಿ ಬೆಳೆದೂ ಕೂಡ ತಾವು ಫ್ರೆಂಚರಾಗಿ ಕುಲಗೆಡುವುದು ಏನೇ ಆದರೂ ಅಸಾಧ್ಯವೆಂಬುದು ಅವರಿಗೆ ಹೊಳೆಯುವುದೇ ಇಲ್ಲ, ತಲೆಗೆ ಹಿಡಿಯುವುದೂ ಇಲ್ಲ! ತಮ್ಮ ದಾದಿಯರಿಂದ ಅವರು ತುಟಿಯಾಡಿಸಲು ಕಲಿತದ್ದೆ ಫ್ರೆಂಚ್ ಭಾಷೆಯಾಗಿರಬಹುದು, ಆಮೇಲೆ ಪಾಠದ ಓಜಯ್ಯಗಳು ಅವರಿಗೆ ತರಪೇತು ಕೊಟ್ಟೂ ಇರಬಹುದು. ಈ ಕಾರಣದಿಂದಲೇ ಅವರ ಆಡುಮಾತು ಎಂದಿಗೂ ಜೀವಂತ ವಲ್ಲದ ಸತ್ತಭಾಷೆ. ಈ ಅಸಹಜವಾದ ಭ್ರಾಮಕವಾದ ಹುಚ್ಚೆದ್ದ ಭಾಷೆಯನ್ನು ಶುದ್ಧ ಭಾಷೆಯೆಂದುಕೊಂಡಿರುತ್ತಾರಲ್ಲ! ಅದಂತೂ ಖಂಡಿತವಾಗಿಯೂ ಫ್ರೆಂಚ್‌ಭಾಷೆಯಂತೂ ಅಲ್ಲ. ಇತರ ವಿದೇಶಿಯರಂತೆ ರಷ್ಯನರೂ ಕೂಡ ಜೀವಂತ ಫ್ರೆಂಚ್‌ಭಾಷೆಯ ಎಲ್ಲಾ

ಸೂತ್ರಗಳನ್ನೂ ಕಲಿಯಲು ಅಸಮರ್ಥರು, ಕಾರಣ ಅವರು ಫ್ರೆಂಚರಾಗಿ ಹುಟ್ಟಲಿಲ್ಲ. ಪರಕೀಯ ನುಡಿಯೊಂದರ ಗಿಳಿಪಾಠವಷ್ಟೆ ಮಾಡಿಕೊಂಡು ಕ್ಷೌರದಂಗಡಿಯ ನುಡಿಗಟ್ಟ ಷ್ಟನ್ನು ಕಲಿತು ಆ ಮಟ್ಟದ ಆಲೋಚನೆಯನ್ನೆ ರೂಢಿಸಿಕೊಂಡಿರುತ್ತಾರಷ್ಟೆ. ಇದು ಕದ್ದ ಭಾಷೆಯಂತಹದು. ಈ ಕಾರಣದಿಂದಲೆ ಒಬ್ಬನೇ ಒಬ್ಬ 'ರಷ್ಯನ್ ಪ್ಯಾರಿಸ್' ಮಹನೀಯನೂ ತನ್ನ ಜೀವನವಿಡೀ ತನ್ನದೇ ಆದ ಒಂದೇ ಒಂದು ನುಡಿಗಟ್ಟನ್ನಾದರೂ ನೀಡುವುದು ಸಾಧ್ಯವಿಲ್ಲ. ಮಂದಿಯ ಗಮನಸೆಳೆದು ಬೀದಿನುಡಿಯಾಗುವಂತಹ ಒಂದೇ ಒಂದು ಸ್ವೋಪಜ್ಞವಾದ ಶಬ್ದವನ್ನೂ ಆತ ಹಡೆಯಲಾರ; ಆದರೆ ಕ್ಷೌರದಂಗಡಿಯ ಮಾಣಿಕೂಡ ಇದನ್ನು ಸಾಧಿಸಬಲ್ಲ.

ಪ್ಯಾರಿಸ್ ನಗರದ ಹೋಟೆಲೊಂದಕ್ಕೆ ಹೋಗಿ ತಿಂಡಿಯನ್ನು ಮಾಣಿಗೆ ತರಹೇಳಿದ ರಷ್ಯನ್ ಮಹನೀಯನೊಬ್ಬನ ಇಂಥ ಪೇಚನ್ನು ಟರ್ಗಿನೆವ್ ತನ್ನ ಒಂದು ಕಾದಂಬರಿ ಯಲ್ಲಿ ನಿರೂಪಿಸಿದ್ದಾನೆ. ಈ ಮಾಣಿಗಳ ಭಾಷಾರೂಪ ಮತ್ತು ಅಭಿಪ್ರಾಯಗಳ ಮುಂದೆ ಗುಲಾಮತನದಿಂದ ಉರುಳುಸೇವೆ ಮಾಡುವ ರಷ್ಯನ್‌ಪಾರಿಸ್ ಮಹನೀಯರು ಸಹಜ ವಾಗಿ ಫ್ರೆಂಚ್ ಆಲೋಚನೆಯ ಗುಲಾಮರಾಗಿದ್ದಾರೆ. ಹೀಗಾಗಿ ಇವರು ತಮ್ಮ ಜೀವಮಾನವಿಡೀ ತಮ್ಮದೇ ಆದ ಒಂದೂ ಆಲೋಚನ ಪಡೆದುಕೊಳ್ಳಲಾಗದ ಶೋಚನೀಯ ಅಧೋಗತಿಗೆ ತಮ್ಮ ಬಡ ಬುರುಡೆಯನ್ನು ದೂಡಿಕೊಂಡು ನಾಶಮಾಡಿ ಕೊಳ್ಳುತ್ತಾರೆ.

ಎಳೆಮಗುವಾಗಿದ್ದಾಗಿನಿಂದಲೂ ಪರಕೀಯ ಭಾಷೆಯನ್ನು ತನ್ನದನ್ನಾಗಿ ಮಾಡಿ ಕೊಳ್ಳಲು ಮಾಡುವ ಯತ್ನದಿಂದಾಗುವ ಕೇಡಿನ ಬಗ್ಗೆ ಚರ್ಚಿಸುವುದು ಪ್ರಶ್ನಾತೀತ ವಾಗಿಯೂ ನಗೆಗೇಡಿನದು. ಹಾಗೂ ಅದು ಹಳೆಯ ಕಂದಾಚಾರವಿಚಾರವಾಗಿದೆ. ಹಾಗಿದ್ದರೂ, ಯಾರೂ ಇನ್ನೇನೂ ಹೇಳಬಾರದೆಂಬಷ್ಟು ಇದೇನೂ ಇನ್ನೂ ಸಮಕಲು ವಿಷಯವಾಗಿಲ್ಲ. ಅಷ್ಟೇ ಅಲ್ಲ, ಏನೂ ಹೊಸದನ್ನು ಹೇಳಲಾಗದಂತಹ ಯಾವುದೇ ಹಳೆಯ ವಿಷಯವೆಂಬುದೂ ಸಹ ಇಲ್ಲ. ಹೊಸತನ್ನು ಹೇಳೇನೆಂದು ನಾ ಹೇಗೆ ಹೇಳಲಿ, ನಾ ಹಾಗೆ ನಟಿಸಲಾರೆ. ನನ್ನ ಅಂತರಾತ್ಮನನ್ನು ತಿಳಿಯಾಗಿಡಲೆಂದಷ್ಟೆ ಇದನ್ನು ಹೇಳುತ್ತೇನೆ.

೨

ನನ್ನ ಮುದ್ದಿ ಅಮ್ಮ ನನ್ನಲ್ಲಿ ಈ ಪ್ರಶ್ನೆ ಕೇಳುವೆ. ಭಾಷೆಯೆಂದರೇನೆಂದು ಆಕೆಗೆ ಗೊತ್ತೆ? ಯಾವ ಉದ್ದೇಶಕ್ಕಾಗಿ ಮಾತಿನ ಸೃಷ್ಟಿಯಾಯಿತು ಎಂಬುದನ್ನಾದರೂ ಆಕೆ ಹೇಗೆ ತಿಳಿದಿದ್ದಾಳೆ? ಭಾಷೆ ನಿಸ್ಸಂದೇಹವಾಗಿ ಆಲೋಚನೆಯ ರೂಪ, ಮಜ್ಜೆ ಮಾಂಸ ಒಳಚರ್ಮ, (ಆಲೋಚನೆಯೆಂದರೇನೆಂದು ನಾನೇನೂ ವಿವರಿಸುತ್ತಿಲ್ಲ.) ಅದು ಜೈವಿಕ ವಿಕಾಸದ ಕಟ್ಟಕಡೆಯ ಮಾತು. ನನ್ನ ಭಾಷೆ—ಸಂವಹನಸಾಧನ—ಸಂಪನ್ನರಿತವಾದಂತೆ ನಾನು ಜೀವನದಲ್ಲಿ ಹೆಚ್ಚು ಸುಖಮಯನಾಗಿರುವೆ. ನನಗೇ, ಹಾಗೂ ಅನ್ಯರಿಗೆ ನಾನು ಹೆಚ್ಚು ವಿಶದವೂ ವೇದ್ಯವೂ ಆಗುತ್ತೇನೆ, ಜಯಶಾಲಿಯೂ ಸಾರ್ವಭೌಮವು ಆಗುತ್ತೇನೆ. ನಾ ಹೇಳಬೇಕೆಂದುದನ್ನು ನನಗೇ ತಟ್ಟನೆ ನುಡಿದುಕೊಂಡಷ್ಟೂ ನಾನು ಆಳವಾಗಿ ಅಭಿವ್ಯಕ್ತಿ ಪಡಿಸಬಲ್ಲೆ ; ನಾನು ಅಭಿವ್ಯಕ್ತಿಪಬೇಕೆಂದುದನ್ನು ನಾನು ಆಳವಾ

ಸಮಗ್ರವಾಗಿ ಗ್ರಹಿಸಬಲ್ಲೆ ; ನನ್ನ ಚೇತನ ಸುಭದ್ರವೂ ಪ್ರಶಾಂತವೂ ಆದಂತೆ ನಾನು ಹೆಚ್ಚು ಪ್ರಾಜ್ಞನಾಗುತ್ತೇನೆ.

ಅಮ್ಮ ನಿಗೆ ತಿಳಿದಿರಬೇಕು, ಮನುಷ್ಯ ವಿದ್ಯುಚ್ಛಕ್ತಿಯ ವೇಗದಲ್ಲಿ ಯೋಚಿಸ ಬಲ್ಲ. ವಾಸ್ತವವಾಗಿ ಆ ವೇಗದಲ್ಲಿ ಸಾಧ್ಯವಿಲ್ಲ, ಅದಕ್ಕಿಂತ ಎಷ್ಟೋ ಪಟ್ಟು ಮಂದಗತಿಯಲ್ಲಷ್ಟೆ ಸಾಧ್ಯ, ಆದರೂ ಮಾತನಾಡುವುದಕ್ಕಿಂತ ಎಷ್ಟೋಪಟ್ಟು ವೇಗವಾಗಿ ಯೋಚಿಸಬಲ್ಲ. ಇದೇಕೆ ಹೀಗೆ? ಮನುಷ್ಯ ಅಷ್ಟಾದರೂ ಅಗತ್ಯದಿಂದಾಗಿ ಒಂದು ಭಾಷೆಯಲ್ಲಿ ಯೋಚಿಸುತ್ತಾನೆ. ಇಂಥದೆ ಭಾಷೆಯಲ್ಲಿ ಆಲೋಚಿಸುತ್ತಿದ್ದೇವೆಂದು ನಮಗೆ ಪ್ರಜ್ಞಾಪೂರ್ಣವಾಗಿ ತಿಳಿದಿಲ್ಲದಿರ ಬಹುದು ; ಹೀಗಿದ್ದೂ ಅದು ಹಾಗೆಯೆ. ಶಬ್ದಾನುಗುಣವಾಗಿ ನಾವು ಆಲೋಚಿಸುತ್ತಿಲ್ಲ ದಿದ್ದರೂ, ಅಂದರೆ, ಶಬ್ದಗಳನ್ನುಸುರದಿದ್ದರೂ ಕೇವಲ ಮಾನಸಿಕವಾಗಿಯಾದರೂ ನಾವು ಭಾಷೆಯ ಮೂಲಾಧಿಶಕ್ತಿಯನ್ನೆ ಆಶ್ರಯಿಸಿ ಚಿಂತನ ನಡೆಸಿರುತ್ತೇವೆ. ನಾವು ಆಲೋಚಿಸಲು ಆಯ್ಕೆಮಾಡಿಕೊಳ್ಳುವ ಭಾಷೆಯ ಬಾಗುಬಳುಕುಗಳನ್ನು ತಿಳಿದಷ್ಟೂ ಅದರ ಶ್ರೀಮಂತಿಕೆಯನ್ನೂ ಅಸಂಖ್ಯ ಸಾಧ್ಯತೆಗಳನ್ನೂ ಕಂಡುಕೊಂಡಷ್ಟೂ, ಅದರ ಮೇಲೆ ಪ್ರಭುತ್ವ ಪಡೆದುಕೊಂಡಷ್ಟೂ ನಾವು ನಮ್ಮ ಆಲೋಚನಗಳನ್ನು ಸಶಕ್ತವಾಗಿ ಶ್ರೀಮಂತವಾಗಿ ಅದರಲ್ಲಿ ಮೂಡಿಸಬಲ್ಲೆವು. ನಾವು ಮೂಲತಃ ಐರೋಪ್ಯಭಾಷೆಗಳನ್ನು— ಉದಾಹರಣೆಗೆ ಫ್ರೆಂಚ್ ಭಾಷೆಯನ್ನು ಕಲಿಯುವುದೇತಕ್ಕೆ ? ಫ್ರೆಂಚ್ ಓದಲು ಹಾಗೂ ಫ್ರೆಂಚರನ್ನು ಸಂಧಿಸಿದಾಗ ಅವರೊಡನೆ ಮಾತಾಡಲುತಾನೆ? ಆದರೆ ಯಾವುದೇ ಸಂದರ್ಭದಲ್ಲೂ ರಷ್ಯನರೊಡನಾಗಲಿ ತನ್ನ ಕೂಡೆಯೆ ಆಗಲಿ ಮಾತನಾಡುವುದಕ್ಕಂತೂ ಅಲ್ಲವೆ ಅಲ್ಲ ತಾನೆ ? ಭವ್ಯತರ ಜೀವನಕ್ಕೆ, ಆಳ ಚಿಂತನಕ್ಕೆ ಪರಕೀಯ ಭಾಷೆ ಎಂದೂ ಅಸಮರ್ಪಕವೆ ; ಏಕೆಂದರೆ, ನಿಶ್ಚಿತವಾಗಿ ಅದೆಂದೂ ನಮಗೆ ಪರಕೀಯವಾಗಿಯೆ ಉಳಿದು ಕೊಳ್ಳುತ್ತದೆ. ಈ ಕಾರಣಕ್ಕಾಗಿ ಹುಟ್ಟು ಭಾಷೆಯೆ ಅತ್ಯಗತ್ಯ. ಒಂದರ್ಥದಲ್ಲಿ ಆ ವ್ಯಕ್ತಿ ಆ ಭಾಷೆಯೊಡನೆಯೆ ಹುಟ್ಟಿರುತ್ತಾನೆ. ಈಗ ನಾವಿಲ್ಲಿ ಎಡರೊಂದರ ಮೇಲೆ ಮುಗ್ಗರಿಸು ತ್ತೇವೆ. ರಷ್ಯನರು—ಕಡೆಯಪಕ್ಷ ಮೇಲ್ವರ್ಗಕ್ಕೆ ಸೇರಿದವರು—ಜೀವಂತ ಭಾಷೆಯೊಂದಿಗೆ ಹುಟ್ಟುವುದೆ ತಪ್ಪಿಹೋಗಿದೆ. ಆಮೇಲೆ ಅವರು ಶಾಲೆಗಳಲ್ಲಿ ವ್ಯಾಕರಣದ ಮೂಲಕ ಏನೋ ಒಂದು ಕೃತಕ ರಷ್ಯನ್ ಭಾಷೆಯನ್ನು ಕಲಿತುಕೊಳ್ಳುತ್ತಾರೆ. ಮೃತಭಾಷೆ ಯೊಡನೆ ಹುಟ್ಟಿದ್ದ ವ್ಯಕ್ತಿ ಕುತೂಹಲಾಸಕ್ತಿಯಿಂದ ಶ್ರಮಪಟ್ಟು ಕಾಲಾಕ್ರಮೇಣ ಮರುಕಲಿಕೆಯ ಮೂಲಕ ಜೀವಂತ ರಷ್ಯನ್ ಭಾಷೆಯನ್ನು ಒಂದಷ್ಟುಮಟ್ಟಿಗೆ ಕಲಿಯ ಬಹುದು. ನಮ್ಮ ರಷ್ಯನ್ ಲೇಖಕರೊಬ್ಬರು ರಷ್ಯನ್ ಭಾಷೆಕಲಿತದ್ದೂ ಅಲ್ಲದೆ ರೈತರ ಜೀವನವನ್ನೂ ಅಭ್ಯಸಿಸಿ ಅವರನ್ನು ಕುರಿತು ಒಂದು ಕಾದಂಬರಿಯನ್ನೂ ಬರೆದು ಹೆಸರು ಗಳಿಸಿದುದೂ ನನಗೆ ಗೊತ್ತು. ಇಂಥ ಹಾಸ್ಯಾಸ್ಪದ ಸಂಗತಿ ನಮ್ಮಲ್ಲಿ ಅಪರೂಪ ವೇನೂ ಅಲ್ಲ. ಕೆಲವೊಮ್ಮೆ ಇದು ವಿಪರೀತ ಪ್ರಮಾಣ ತಾಳಿತ್ತು. ಪುಶ್ಕಿನ್ ಮಹಾಶಯ, ಅವನೆ ಒಪ್ಪಿಕೊಂಡಿರುವಂತೆ, ಹೊಸದಾಗಿ ಮರುಕಲಿತು ರಷ್ಯನ್ ಜನಭಾಷೆಯನ್ನೂ ಈ ಜನದ ಚೈತನ್ಯವನ್ನೂ ತಿಳಿದುಕೊಳ್ಳುತ್ತಾನೆ, ಅದೂ ತನ್ನ ದಾದಿಯ ಮೂಲಕ. ತನ್ನ ಭಾಷೆಯನ್ನು ಕಲಿಯುವುದು ಎಂಬುದು ನಮಗೆ, ನಮ್ಮ ರಷ್ಯನ್ನರಿಗೇ ಪ್ರತ್ಯೇಕವಾಗಿ ಒಪ್ಪುತ್ತದೆ ; ಏಕೆಂದರೆ ಮೇಲ್ವರ್ಗದ ನಾವು ಜನದಿಂದ ಕಳಚಿಕೊಂಡಿರುತ್ತೇವೆ. ಅಂದರೆ

ಜೀವಂತ ಭಾಷೆಯಿಂದ ವಂಚಿತರಾಗಿರುತ್ತೇವೆ. 'ಜನ' ಹಾಗೂ 'ಭಾಷೆ' ಎರಡೂ ನಮ್ಮ ಭಾಷೆಯಲ್ಲಿ ಸಮಾನಾರ್ಥಪದಗಳು—ಇದು ಎಂಥ ಗಹನ ತತ್ತ್ವ!

ಹೇಗಾದರೂ ಇಷ್ಟನ್ನು ಖಚಿತವಾಗಿ ಹೇಳಬಹುದು. ಸಜೀವ ಭಾಷೆಯನ್ನು ಕಲಿಯುವ ವಿಷಯದಲ್ಲಿ ರಷ್ಯನ್ ಕಲಿಕೆ, ಫ್ರೆಂಚ್ ಕಲಿಕೆ ಎಂಬ ಭೇದವೇನೂ ಇಲ್ಲ. ರಷ್ಯನನಿಗೆ ರಷ್ಯನ್‌ಭಾಷೆ ಸುಲಭ. ಆದ್ದರಿಂದ ಇದರ ಸೌಲಭ್ಯವನ್ನು ನಾವು ಬಳಸಿಕೊಳ್ಳಬೇಕು....ಹೀಗೆ ನಮ್ಮ ಭಾಷೆಯ ಪ್ರಭುತ್ವಗಳಿಸಿಕೊಂಡ ಮೇಲೆ, ನಾವು ಆಗ ನಮ್ಮ ರಷ್ಯನ್ ಭಾಷಾ ಸಾಮರ್ಥ್ಯದಿಂದ ಯೂರೋಪಿಯನ್ ಭಾಷೆಗಳನ್ನೂ ಕಲಿಯುವ ಕಸುವು ಪಡೆದುಕೊಳ್ಳುತ್ತೇವೆ.

ತನ್ನ ಹುಟ್ಟು ಭಾಷೆಯನ್ನು ಅತ್ಯಂತ ಪರಿಪೂರ್ಣವಾಗಿ ಕಲಿತು ಅದರ ಮೇಲೆ ಪ್ರಭುತ್ವ ಪಡೆದ ಮೇಲೆಯೆ ಪರಕೀಯ ಭಾಷೆಯನ್ನು ಅತ್ಯಂತ ಪರಿಪೂರ್ಣವಾಗಿ ಕಲಿತು ಪ್ರಭುತ್ವ ಸ್ಥಾಪಿಸಬಹುದು—ಅದಕ್ಕೆ ಮುನ್ನ ಸಾಧ್ಯವೆ ಇಲ್ಲ. ಆಮೇಲೆ ಮಾತ್ರವೆ ನಾವು ಪರಕೀಯ ಭಾಷೆಯ ಅನೇಕ ರೂಪಗಳನ್ನು ಅಪ್ರಯತ್ನ ಪೂರ್ವಕವಾಗಿ ನಮ್ಮ ನುಡಿಗೆ ಅಳವಡಿಸಿಕೊಂಡು ಅದರ ಚಿಂತನ ಮಾರ್ಗವನ್ನೆ ವಿಸ್ತರಿಸಬಹುದು.

ನಮ್ಮ ಯೌವನ ಪೂರ್ಣವಾದ ಅವ್ಯವಸ್ಥಿತ ಭಾಷೆಗೆ ಐರೋಪ್ಯ ಭಾಷೆಯ ಚೈತನ್ಯದ ಹಾಗೂ ಚಿಂತನದ ಅತ್ಯಂತ ಗಹನಾಭಿವ್ಯಕ್ತಿಯನ್ನೂ ಅನುವಾದಿಸಲು ಸಮರ್ಥರಾಗಿದ್ದೇವೆ. ಐರೋಪ್ಯ ಕವಿ–ಚಿಂತನಶೀಲರೆಲ್ಲ ರಷ್ಯನ್ ಭಾಷೆಗೆ ಅನುವಾದ ಸುಲಭರು. ಅವರಲ್ಲಿ ಕೆಲವರಾಗಲೆ ಅತ್ಯಂತ ಪರಿಪೂರ್ಣವಾಗಿ ಅನುವಾದಗೊಂಡಿದ್ದಾರೆ. ಆದರೆ ನಮ್ಮ ರಷ್ಯನ್ ಜಾನಪದ ಭಾಷೆಯ ಎಷ್ಟೋ ಮಾದರಿಗಳಾಗಲಿ, ನಮ್ಮ ಸಾಹಿತ್ಯ ಲಲಿತಕಲಾ ಕೃತಿಗಳಾಗಲಿ ಐರೋಪ್ಯ ಭಾಷೆಗಳಿಗೆ, ಅದರಲ್ಲೂ ಫ್ರೆಂಚಿಗೆ ಅನುವಾದಗೊಳಿಸಲಾಗದಂತೆ, ಅಭಿವ್ಯಕ್ತಿಪಡಿಸಲಾಗದಂತೆ ಉಳಿದಿವೆ. ಐರೋಪ್ಯ ಚೈತನ್ಯ ಪ್ರಾಯಶಃ ನಮ್ಮದರಷ್ಟು ಬಹುಮುಖಿಯಾದುದೂ ನಿಸ್ಸಂದೇಹವಾಗಿ ವಿವಿಕ್ತವಾದುದೂ ಆಗಿಲ್ಲ; ಹೀಗೆಂದರೆ ಭಯಾನಕ ಹೇಳಿಕೆಯಾಗಬಹುದು. ಅದು ನಮ್ಮದಕ್ಕಿಂತ ಹೆಚ್ಚು ನಿಶ್ಚಿತ ಶಿಲ್ಪವುಳ್ಳದ್ದೂ ಹೆಚ್ಚು ಚಿತ್ರವತ್ತಾದುದೂ ಆಗಿರಬಹುದು. ಈ ಹೇಳಿಕೆ ಎಷ್ಟೆ ಭೀಕರವಾಗಿದ್ದರೂ ನಮ್ಮ ಭಾಷಾ ಚೈತನ್ಯವಂತೂ ಪ್ರಶ್ನಾತೀತವಾಗಿ ಬಹುಮುಖಿ, ಶ್ರೀಮಂತ, ವಿಶ್ವವ್ಯಾಪಿ, ಸರ್ವಗ್ರಾಹಿ. ಅದು ತನ್ನ ಅವ್ಯವಸ್ಥಿತ ರೂಪದಲ್ಲೆ ಐರೋಪ್ಯ ಚಿಂತಾರತ್ನಗಳನ್ನು ಅಭಿವ್ಯಕ್ತಿಪಡಿಸಲು ಸಮರ್ಥವಾಗಿದೆ. ಈ ಅಭಿವ್ಯಕ್ತಿಯಾದರೂ ನಿರ್ದುಷ್ಟವೂ ನಿಸ್ಸಂದಿಗ್ಧವೂ ಖಚಿತವೂ ಆಗಿದೆಯೆಂದೆ ನಾವು ಭಾವಿಸುತ್ತೇವೆ. ಇಂಥ ಭಾಷಾ ಶಕ್ತಿಯನ್ನೆ ನಾವು ನಮ್ಮ ಮಕ್ಕಳಿಗೆ ನೀಡದೆ ವಂಚಿಸುತ್ತಿದ್ದೇವೆಯಲ್ಲ! ಏಕಾಗಿ? ನಿಸ್ಸಂದೇಹವಾಗಿಯೂ ಅವರನ್ನು ಅಸುಖಿಗಳನ್ನಾಗಿ ಮಾಡಲೆಂದೇ ತಾನೆ? ನಾವು ಈ ನುಡಿಯನ್ನು ತುಚ್ಛವಾಗಿ ಕಾಣುತ್ತೇವೆ; ಇದನ್ನು ಒರಟೆಂದೂ "ಅಡಿಗೊರಸಿನ" ನುಡಿಯೆಂದೂ ಇದರಲ್ಲಿ ನಾಜೂಕಯ್ಯಗಳ ಭಾವನೆಗಳನ್ನೂ ತಿಳಿಸಬರದೆಂದೂ ಪರಿಗಣಿಸುತ್ತೇವೆ.

ಪ್ರಾಸಂಗಿಕವಾಗಿ ಒಂದು ಮಾತು: ಸರಿಯಾಗಿ ಐದುವರ್ಷಗಳ ಹಿಂದೆ ನಾವು "ಮಾರ್ಗ ಶಿಕ್ಷಣ ಕ್ರಮದ" ಉದ್ಘಾಟನಮಾಡಿದೆವು. ಗಣಿತವಿಜ್ಞಾನ ಹಾಗೂ

ಗ್ರೀಕ್ ಮತ್ತು ಲ್ಯಾಟಿನ್‌ಗಳನ್ನು ಅತ್ಯಂತ ಪರಿಣಾಮಕಾರಿಯಾದ ಮಾನಸಿಕ ಹಾಗೂ ಆಧ್ಯಾತ್ಮಿಕ ಅಭಿವೃದ್ಧಿಗೆ ಅಗತ್ಯವಾದ ಸಾಧನಗಳೆಂದು ಪರಿಗಣಿಸಲಾಯಿತು. ಇದನ್ನು ನಾವೇ ಕಂಡು ಹಿಡಿದದ್ದಲ್ಲ; ಇಡೀ ಯೂರೋಪ್‌ನಲ್ಲೆ ಶತಮಾನಗಳಿಂದ ಹೀಗೆಂದು ದೃಢಪಡಿಸಲಾಗಿದೆ. ನಾವೂ ಅದನ್ನೆ ಸುಮ್ಮನೆ ಅಳವಡಿಸಿಕೊಂಡೆವು. ಆದರೆ ಇಲ್ಲೊಂದು ವಿಚಾರವಿದೆ. ಗಣಿತ, ಜೊತೆಗೆ ಐರೋಪ್ಯ ಮಹಾಭಾಷೆಗಳೆರಡರ ಅತ್ಯಂತ ಗಾಢವಾದ ಶಿಕ್ಷಣ ನೀಡುವಾಗ ರಷ್ಯನ್ ಭಾಷೆಯ ಬೋಧನವನ್ನಂತೂ ವಾಸ್ತವವಾಗಿ ಅದುಮಿಟ್ಟು ಉಸುರುಕಟ್ಟಿಸಿದ್ದೇವೆ. ರಷ್ಯನ್ ಭಾಷೆಯನ್ನು ನಿರ್ಲಕ್ಷಿಸಿ ಯಾವ ಮಾಧ್ಯಮದ ಮೂಲಕ ಗ್ರೀಕ್ ಲ್ಯಾಟಿನ್ ಭಾಷೆಗಳನ್ನು ಮಕ್ಕಳು ಕಲಿಯುತ್ತಾರೆ. ಜೆಕ್ ಶಿಕ್ಷಕರು ಈ ಭಾಷೆಗಳ 'ಯಂತ್ರ ಜ್ಞಾನ'ವನ್ನು ಆ ಮಕ್ಕಳಿಗೆ ಹೇಗೆ ಕಲಿಸಿಯಾರು? ಅದರಿಂದ ಮಕ್ಕಳ ಯಾವ ಅಭಿವೃದ್ಧಿಯಾದಂತಾಯಿತು? ಸಜೀವ ಭಾಷೆಯ ಮೂಲಕವಲ್ಲದೆ, ಅದರ ಸಾದೃಶ್ಯವಿಲ್ಲದೆ ಹೇಗೆತಾನೆ ಆ ಭಾಷೆಗಳ ವಿಜ್ಞಾನವನ್ನು ಬೋಧಿಸಬರುತ್ತದೆ. ಮಾನುಷ ಚಿಂತನದ ಅತ್ಯಂತ ನಿರ್ದುಷ್ಟ ವಾಸ್ತುರೂಪವನ್ನು ಪಡೆದಿರುವ ಈ ಎರಡು ಭಾಷೆಗಳನ್ನು, ಅನಾಗರಿಕ ಪಶ್ಚಿಮ ಜಗತ್ತನ್ನು ಶತಮಾನಗಳ ಅವಧಿಯಲ್ಲಿ ಉದ್ಧರಿಸಿ ಉತ್ತುಂಗ ನಾಗರಿಕ ಶಿಖರಕ್ಕೇರಿಸಿದ ಈ ಎರಡು ಭಾಷೆಗಳನ್ನು ನಮ್ಮ ಮಕ್ಕಳು ಪಡೆಯಲಾರದವರಾಗುತ್ತಾರೆ, ರಷ್ಯನ ಭಾಷಾ ಬೋಧನಕ್ಕಿರುವ ಅವನತಿಯಿಂದಾಗಿ. ಏನು, ನಮ್ಮ ಸುಧಾರಕರು ರಷ್ಯನ್ ಭಾಷಾವ್ಯಾಸಂಗವೆ ಬೇಡವೆಂದುಕೊಂಡರೆ? ಮೇಲ್ವರ್ಗದ ಜನ ಸಜೀವ ರಷ್ಯನ್ ಭಾಷೆಯೊಡನೆ ಹುಟ್ಟುತ್ತಿಲ್ಲ; ಬಹಳ ಕಾಲದಿಂದ ಇದು ಹೀಗೆಯೆ ಇದೆ. ಆದರೆ ನಾವು ಜನತೆಯೊಡನೆ ಸಂಪೂರ್ಣವಾಗಿ ಬೆರೆಯುವ ಮುನ್ನ ಈ ಜೀವಂತ ರಷ್ಯನ್ ಭಾಷೆಯ ಅಸ್ತಿತ್ವವು ಸಾಧ್ಯವೆ ಇಲ್ಲ.

ಇದೇನು, ಮಾರ್ಗ ಶಿಕ್ಷಣದ ವಿಷಯ ಜನತೆಯೊಡನೆ ಮಿಲನಗೊಳ್ಳುವುದರತ್ತ ಜಾರಿಕೊಂಡಿತೆ? ಅದೇನೊ ಸರಿ, ಅಮ್ಮನಿಗೆ ಇದುಕೇಳಲು ತುಂಬಾ ಬೇಸರ. ಕೋಪದಿಂದ ತನ್ನ ಪುಟ್ಟಕೈಗಳನ್ನು ಬೀಸಿ ತಿರಸ್ಕಾರಪೂರ್ಣವಾಗಿ ಮುಖತಿರುಗಿಸಿ ಆಕೆ ಹೊರಟು ಹೋಗುತ್ತಾಳೆ. ತನ್ನ ಮಗ ಯಾವ ಭಾಷೆಯಲ್ಲಿ ಆಲೋಚಿಸಿದರೇನಂತೆ, ಅದಾವುದೂ ಅಮ್ಮನಿಗೆ ರವೆಯಷ್ಟೂ ಮುಖ್ಯವಲ್ಲ. ಪ್ಯಾರಿಸ್ ಭಾಷೆಯಲ್ಲಿ ಮಾತಾಡಿದರೆ ಮತ್ತೂ ಒಳ್ಳೆಯದೆ. "ಅದು ಹೆಚ್ಚು ಸುಕುಮಾರ ಭಾಷೆ, ಹೆಚ್ಚು ಚತುರ, ಹೆಚ್ಚು ಮಧುರ!" ಆದರೆ, ಇದಕ್ಕೆ ವ್ಯಕ್ತಿ ಮೊದಲು ಫ್ರೆಂಚನಾಗಿ ಮರುಹುಟ್ಟಬೇಕಾಗುತ್ತದೆ ಎಂದೇ ಆಕೆಗೆ ತಿಳಿಯದು. ಶಿಕ್ಷಿತ ದಾದಿಯರಿಂದಾಗಲಿ, ಮನೆಯ ಮಾಸ್ತರರಿಂದಾಗಲಿ ಆ ಪ್ಯಾರಿಸ್‌ಫ್ರೆಂಚ್ ಸುಖ ಬಾರದು. ಹೆಚ್ಚೆಂದರೆ ರಷ್ಯನ್ನನಾಗುವುದು ತಪ್ಪುತ್ತದೆ! ಓ! ಪ್ರೀತಿಯ ಅಮ್ಮ ತನ್ನ ಮಗುವಿಗೆ ಎರಡನೆಯ ವರ್ಷದಲ್ಲೆ ಓಜಯ್ಯಗಳನ್ನು ನೇಮಿಸಿ ಎಂಥ ವಿಷಪಾನ ಮಾಡಿಸುತ್ತಿದ್ದೇನೆಂದೆ ತಿಳಿಯಳು. ತಂದೆತಾಯಂದಿರಿಗೆಲ್ಲ ಗೊತ್ತು, ನತದೃಷ್ಟ ಮಕ್ಕಳು ಕೆಲವು ಚಿಕ್ಕಂದಿನ ದಿನಗಳಲ್ಲೆ ಚಟವಾಗಿ ಮಾಡಿಕೊಂಡ ಶಾರೀರಿಕವಾದ ಕೆಲವು ಭಯಾನಕ ಅಭ್ಯಾಸಗಳು ಬೆಳೆದು ಮುಂದೆ ಯೌವನದಲ್ಲೆ ಅವರಿಗೆ ಮುಪ್ಪು ತಂದು ಜೀವನವಿಡೀ ಅವರು ಪೆಸ್ಪುಮೊದ್ದಾಗಿ ಬಾಳುವಂತೆ ದುರಂತಕ್ಕೆ ದೂಡಿರುವುದು, ತಂದೆ ತಾಯಂದಿರಿಗೆಲ್ಲ ಗೊತ್ತು. ಹಾಲು ಹಸುಳೆಗಳಿಗೆಲ್ಲ ಶಿಕ್ಷಕಿಯರ ಮೂಲಕ

ಫ್ರೆಂಚ್ ಕಲಿಸುವುದಾದರೂ ಪರಿಣಾಮದಲ್ಲಿ, ನೈತಿಕಾರ್ಥದಲ್ಲಿ ಆ ಶಾರೀರಿಕದುಶ್ಚಟ ದಿಂದ ಬರುವ ಬುದ್ಧಿಮಾಂದ್ಯದಂತೆಯೆ ಎಂದು ಸಾರಲು ಧೈರ್ಯಪಡುತ್ತೇನೆ. ಒಂದುವೇಳೆ ಅಂಥವರು—ಫ್ರೆಂಚ್ ಹತವಾದವರು—ಹುಟ್ಟಿನಿಂದಲೆ ದಡ್ಡರಾಗಿದ್ದರೆ ಏನೂ ಅಂಥ ನಷ್ಟವಾಗುವುದಿಲ್ಲ. ಅಂಥವರು ತಮ್ಮ ಜೀವನವಿಡೀ ತಾವು ಕಲಿತ ಫ್ರೆಂಚ್ ಭಾಷೆಯ ವಿದೂಷಕ ಪ್ರದರ್ಶನ ಮಾಡುತ್ತ, ತುಂಡು ಆಲೋಚನೆಗಳ ಶ್ರೀಮಂತರಾಗಿ ಕ್ಷೌರ ದಂಗಡಿಯ ಮನೋಧರ್ಮ ಮೆರೆಸುತ್ತ, ಜೀವನವೆಲ್ಲ ತಾವೊಬ್ಬ ಮೂರ್ಖ ಶಿಖಾಮಣಿ ಯಾಗಿದ್ದೇವೆಂಬುದನ್ನೆ ತಿಳಿದುಕೊಳ್ಳಲಾಗದೆ ಸಾಯುತ್ತಾರೆ. ಆದರೆ ಅವನೇನಾದರೂ ಮಹದ್ಭಾವಗಳ ಹೃದಯವುಳ್ಳ, ತಲೆಯಲ್ಲಿ ಚಿಂತನೆವುಳ್ಳ ಸಮರ್ಥನಾಗಿದ್ದರೆ? ಅವನೆಂದಾ ದರೂ ಸುಖಿಯಾಗಿರಬಲ್ಲನೆ? ಅವನು ತನ್ನ ಗಹನಾಲೋಚನೆಗಳ ಆಧ್ಯಾತ್ಮಿಕ ಸಾಹಸ ಗಳ ಗೂಢ ತಿಳಿದು ಅವುಗಳ ವಿಂಗಡಣಮಾಡಲು ಸಾಧನವಾದ ಆತ್ಮೀಯ ಭಾಷೆಯೆ ಅವನಿಗೆ ಇರುವುದಿಲ್ಲ. ಅವನು ತನ್ನ ಜೀವನವಿಡೀ ಸತ್ತ ಭಾಷೆಯೊಂದನ್ನು ಕದ್ದುತಂದು ಅದರೊಡನೆ ಏಗಲಾರದೆ—ಅವನೆಷ್ಟೆ ಶ್ರಮಿಸಿ ಅದರ ತಂತ್ರ ತಿಳಿಯಹೋದರೂ ಅದು ರೂಕ್ಷವಾಗಿಯೆ ಉಳಿದು ಅವನ ಉಸಿರ ಹಾಳತಕ್ಕೆ ತಕ್ಕಂತೆ ಹಿಗ್ಗಲಾರದೆ ಮರಗಟ್ಟಿರು ತ್ತದೆಯಾದ್ದರಿಂದ ಅವನು ನಿರಂತರವೂ ತೊಳಲುತ್ತ ಕೊರಗುತ್ತ ತನ್ನೊಳಗನ್ನು ತೋಡಿ ಕೊಳ್ಳಲಾಗದುದಕ್ಕೆ ಯಾತನೆಗೊಳ್ಳುತ್ತಾನೆ. (ಅಯ್ಯೊ ದೇವರೆ! ಆ ಭಾಷೆ ಸತ್ತದ್ದೆಂದು ಗ್ರಹಿಸಿಕೊಳ್ಳುವುದೇ ಅಷ್ಟು ದುಸ್ಸಾಧ್ಯವೆ?) ಅವನಿಗೇ ತಿಳಿಯುತ್ತದೆ, ತನ್ನ ಚಿಂತನೆಗಳೆಲ್ಲ ಇಮುರಿಕೊಂಡು ಮೋಟುಮೋಟಾದುವೆಂದು, ಸಿನಿಕವಾದುವೆಂದು. ರೀತಿಯಿಂದಾಗಲಿ ಒಳ ಅರ್ಥದಿಂದದಾಗಲಿ ಅವುಗಳೆಲ್ಲ ಅಗಣ್ಯವಾಗಿಯೆ ಉಳಿಯುತ್ತವೆ. ಕಟ್ಟಕಡೆಯ ದಾಗಿ ತಾನೆ ಭ್ರಷ್ಟನೆಂದು ಅವನಿಗೆ ಗೋಚರಿಸುತ್ತದೆ. ಹತಾಶೆಯ ಫಲವಾಗಿ ಹಾದರಿಗ ಅವನಿಂದ ಹೊರಬರುತ್ತಾನೆ. ಆದರೇನು, ಅವನ ಜೀವನ ನಷ್ಟಕ್ಕೀಡಾಗುವುದಿಲ್ಲ! ಶಿಕ್ಷಕಿಯರಿಂದ ಫ್ರೆಂಚ್ ತುಟಿಯಾಡಿಸಲು ಕಲಿತ ಈ ಮಂದಿಯಅದೃಷ್ಟವನ್ನೆಲ್ಲ ಅವರ ತಾಯಂದಿರೆ ವಿಮೆಮಾಡಿ, ಯಶಸ್ವಿಯಾಗಿ ನಿರ್ದೇಶಿಸಿರುತ್ತಾರೆ! ತಾವು ತಮ್ಮ ಮಾತೃಭೂಮಿಯ ಆಧಾರಸ್ತಂಭಗಳೆಂಬ ನಂಬಿಕೆಯೂ ಅವರಲ್ಲಿ ಮೈಗೂಡಿ ಬಂದಿರು ತ್ತವೆ. ಅವನು ಮಿರುಗುತ್ತಾನೆ, ಆಜ್ಞೆ ಹೊರಡಿಸುತ್ತಾನೆ, ಹೊಸಕಟ್ಟಳೆ ವಿಧಿಸು ತ್ತಾನೆ, ಆಡಳಿತವನ್ನು ಹೇಗೆ ನಿಭಾಯಿಸುವುದೆಂಬುದನ್ನೂ ಚೆನ್ನಾಗಿ ತಿಳಿದುಕೊಳ್ಳು ತ್ತಾನೆ. ಸಂಕ್ಷೇಪವಾಗಿ ಹೇಳುವುದಾದರೆ, ಅವನು ಎಷ್ಟೋಬಾರಿ ತನ್ನ ಬಗೆಗೆ ತಾನೆ ಹಿಗ್ಗಿ ಹೆಗ್ಗೋಡಾಗಿರುತ್ತಾನೆ. ಅದೂ ದೀರ್ಘ ಭಾಷಣಮಾಡುವಾಗ, ಅನ್ಯರ ಭಾವನೆ ಗಳಿಂದ ತುಂಬಿದ ಪರಭಾಷೆಯ ನುಡಿಗಟ್ಟುಗಳಿಂದ ಗಿಜಿಗುಡುತ್ತ ಭಾಷಣ ಮಾಡಿರು ವಾಗ, ಅವನಿಗೇ ಹಿಗ್ಗು. ಅವನೇನಾದರೂ ಕಿಂಚಿತ್ ಮಾನವೀಯತೆಯುಳ್ಳವನಾಗಿ ದ್ದರೂ ಒಟ್ಟಿನಲ್ಲಿ ಅವನು ಅಸುಖಿಯಾಗುತ್ತಾನೆ. ಪರಿಣಾಮವಾಗಿ ನಿರಂತರ ಯಾತನೆಗೆ ತುತ್ತಾಗುತ್ತಾನೆ. ದುಶ್ಚಟಕ್ಕೆ ತುತ್ತಾದ ಮಕ್ಕಳು ಷಂಡ ಯೌವನವನ್ನು ಬಾಳುವಂತೆ ಅವನಾದರೂ ಅಂಥದೆ ನೋವಿಗೀಡಾಗುತ್ತಾನೆ.

ಇದೆಲ್ಲ ಫ್ರೆಂಚ್ ಭಾಷೆಯ ಕೊಡುಗೆ, ಶಿಕ್ಷಕಿಯರಿಂದ ಬಂದ ವರದಾನ ಎಂಬುದ ನ್ನೆಂದೂ ನಮ್ಮಮ್ಮ ಒಪ್ಪುವುದೇ ಇಲ್ಲ. ಉತ್ಪ್ರೇಕ್ಷಿಸಿದ್ದರೂ ನಾನು ಸತ್ಯನುಡಿದಿರುವೆನೆಂದು

ಅಮ್ಮನಷ್ಟೆ ಹೇಳುವುದಿಲ್ಲ. ಖಂಡಿತವಾಗಿ ಹೇಳುವುದಾದರೆ ನಾನಾದರೂ ಯಾವ ಅತ್ಯುಕ್ತಿಯಿಲ್ಲದೆ ಸತ್ಯ ನುಡಿದಿದ್ದೇನೆ. ವಾದವೇನೊ ಮಾಡಬಹುದು, ಪರಕೀಯ ಭಾಷೆಯೊಡನೆ ಬಾಳುವೆ ಮಾಡುವುದೆ ಉತ್ತಮವೆಂದೂ ಪುಷ್ಟೀಕರಿಸಬಹುದು ; ಆ ಭಾಷೆಯೊಡನೆ ಗರಿ ಹಗುರಾಗಿ ಕಂದುಕಸುರಿಲ್ಲದಂತೆ ಒಪ್ಪವಾದ ಬಾಳುವೆ ಮಾಡಲೂ ಬಹುದು ; ಆದರೆ ಜೀವನೋದ್ದೇಶ, ಧ್ಯೇಯ ಸಾಹಸಗಳೆಲ್ಲವನ್ನೂ ಬದಿಗೆ ಸರಿಸಿಬಿಡ ಬೇಕು ! ಅವನ್ನೆಲ್ಲ ಫ್ರೆಂಚ್ ಭಾಷೆಗೆ ವಹಿಸಿಬಿಡಬೇಕು ! ಫ್ರೆಂಚ್ ಭಾಷೆಯೆ ಅಂತಲ್ಲ ; ತನ್ನ ನುಡಿ ಬಿಟ್ಟು ಯಾವುದೆ ಅನ್ಯ ಭಾಷೆಯನ್ನು ರೂಢಿಸಿಕೊಂಡರೂ ಅಂಥ ಪರನುಡಿಗೆ ಅನ್ವಯಿಸುತ್ತದೆ ಇದು. "ಏನಂತೀರಿ ? ನೋಡಿ, ಈ ತೇಜಃ ಪುರುಷನನ್ನು ನೋಡಿ ! ಕೇಶಾರಾಮಗಳ ಮಾಟಗಾರ? ಎಂದಾದರೂ ಅಸುಖಿಯಾಗಿರಬಲ್ಲನೆ? ಸುಕುಮಾರ ವೇಷ ಭೂಷಿತ! ಎಷ್ಟು ಮಾಟವಾಗಿ ಕೇಶಾಲಂಕರಿಸಿಕೊಂಡಿದ್ದಾನೆ! ಅವನ ಮುಖದಲ್ಲೆಂಥ ಶ್ರೀಮಂತ ಕಾಂತಿ ! ಎಷ್ಟು ಸುಂದರ ಗುಲಾಬಿಯನ್ನು ತನ್ನ ಎದೆಕಾಜ ದಲ್ಲಿರಿಸಿಕೊಂಡಿದ್ದಾನೆ ! ಇವನು ಅಸುಖಿಯೆ!" ಹೀಗೆಂದು ಮುದ್ದು ಅಮ್ಮಾಜಿ ತಿರಸ್ಕಾರ ಪೂರ್ಣವಾಗಿ ಮುಗುಳುನಗೆ ಬೀರುತ್ತಿದ್ದಾಳೆ.

ದರ್ಶನ

ಮರುಳು ತೊಲೆದರೆ ಮತಿಗೆ ಬೆಳಕು
ಇರುಳು ಕಳೆದರೆ ಜಗಕೆ ಹಗಲು ;
ಭ್ರಮೆಯ ಮರೆತರೆ ವಾಸ್ತವದ ಅರಿವು
ದರ್ಶನ ಪಡೆದರೆ ಹೊಸ ತಿಳಿವು...ಮಣ್ಣಿನ ಮಗ.

ದೊಡ್ಡರಂಗೇಗೌಡ

ನಾ. ಕಸ್ತೂರಿ, ಎಂ.ಎ; ಬಿ.ಎಲ್.

ಕೆ. ವೆಂಕಟರಾಮಪ್ಪ

ಅರವತ್ತು ನಾಲ್ಕು ವರ್ಷಗಳ ಹಿಂದಿನ ಮಾತು. ಮೈಸೂರು ಡಿ. ಬನುಮಯ್ಯನವರ ಕೊಲಿಜಿಯೆಟ್ ಹೈಸ್ಕೂಲಿನ ಎಂಟ್ರೆನ್ಸ್ ತರಗತಿಗೆ ಇತಿಹಾಸ ಮತ್ತು ಅರ್ಥಶಾಸ್ತ್ರಗಳ ಪಾಠ ಹೇಳುತ್ತಿದ್ದ ಈ ಕಸ್ತೂರಿಅಯ್ಯರ್ ಅವರು ಜನಮಾನ್ಯರಾದ ಶ್ರೇಷ್ಠ ಅಧ್ಯಾಪಕ ರಾಗಿದ್ದರು. ಹೈಸ್ಕೂಲಿನ ಬೇರೆ ತರಗತಿಗಳಿಗೂ ಇವರು ಪಾಠ ಹೇಳುತ್ತಿದ್ದರಾದರೂ ಇವರ ಪ್ರಧಾನವಾದ ಕಾರ್ಯಭಾರ ಎಂಟ್ರೆನ್ಸ್ ತರಗತಿಯ ಪಾಠವೇ ಆಗಿತ್ತು. ಪ್ರತಿದಿನ ಎರಡು ಗಂಟೆಗಳ ಹೊತ್ತು ಆ ತರಗತಿಗೆ ಅವರು ಪಾಠ ಹೇಳುತ್ತಿದ್ದರು. 'ಅತಿ ಪರಿಚಯಾದವಜ್ಞಾ' ಎಂಬ ಗಾದೆಯು ಮಾತನ್ನು ಸುಳ್ಳಾಗಿ ಸಿದ್ದವರು ಕಸ್ತೂರಿಯವರು. ಅವರ ಪಾಠ ಒಂದು ಗಂಟೆಯ ಹೊತ್ತು ನಡೆದುದೇ ತಿಳಿಯುತ್ತಿರಲಿಲ್ಲ. ಅವರು ಇತಿಹಾಸವನ್ನಾಗಲಿ ಅರ್ಥಶಾಸ್ತ್ರವನ್ನಾಗಲಿ ಬಹಳ ಸ್ವಾರಸ್ಯವಾಗಿ ಹೇಳುತ್ತಿದ್ದರು. ಯಾವ ವಿಷಯವನ್ನೇ ಆದರೂ ಬಹಳ ಸರಳವಾದ ಮಾತಿನಲ್ಲಿ ವಿದ್ಯಾರ್ಥಿಗಳಿಗೆ ಸುಲಭವಾಗಿ ಮನದಟ್ಟಾಗುವಂತೆ ಹೇಳುವ ಚಮತ್ಕಾರ ಕಸ್ತೂರಿಯವರಿಗೆ ಜನ್ಮಸಹಜವಾಗಿ ಸಿದ್ಧಿಸಿತ್ತೆಂದು ತೋರುತ್ತದೆ. ಗಹನವಾದ, ಜಟಿಲವಾದ ಸಂಗತಿಯನ್ನೇ ಆದರೂ ಎಳೆ ಎಳೆಯಾಗಿ ಬಿಡಿಸಿ ಬಿಡಿಸಿ ಹೇಳಬಲ್ಲವರಾಗಿದ್ದರು.

ಶ್ರೀ ಕಸ್ತೂರಿಯವರು ಕೇರಳದಿಂದ ಬಂದು ಮೈಸೂರಿನಲ್ಲಿ ಉಪಾಧ್ಯಾಯರಾಗಿದ್ದವರು. ಆಗ್ಗೆ ಅವರಿಗೆ ಕನ್ನಡ ಬರುತ್ತಿರಲಿಲ್ಲ. ಅವರ ತಾಯಿನುಡಿ ಮಲೆಯಾಳವಾಗಿತ್ತು, ಆದರೆ ಶಿಕ್ಷಣ ಮಾಧ್ಯಮ ಅಂದು ಇಂಗ್ಲಿಷ್ ಭಾಷೆಯಾಗಿದ್ದುದರಿಂದ ಪಾಠಕಾರ್ಯದಲ್ಲಿ ಏನೂ ತೊಡಕಾಗಲಿಲ್ಲ. ಅವರು ಇಂಗ್ಲಿಷಿನಲ್ಲಿ ಪಾಠ ಹೇಳಿದರೂ ಅದು ನಮಗೆ ಪರಭಾಷೆಯೆಂಬ ಭಾವನೆಯೇ ಮೂಡದಂತೆ, ಆಗತಾನೆ ಹೈಸ್ಕೂಲು ದಾಟಿದ್ದ ನಮಗೆ ಪರಿಚಿತವಾದ ಮಾತುಗಳನ್ನೇ ಬಳಸುತ್ತ, ಶಿಷ್ಯರಿಗೆ ಕ್ಲೇಶವಾಗದಂತೆ ಎಚ್ಚರ ವಹಿಸುತ್ತಿದ್ದರಲ್ಲದೆ

ಅನಿವಾರ್ಯವಾಗಿ ಹೊಸ ಪದಗಳನ್ನು ಬಳಸಬೇಕಾದಾಗ ಮೊದಲೇ ಆ ಪದಗಳನ್ನು ಪರಿಚಯಮಾಡಿಸಿ ಆ ಪದಗಳ ಪೂರ್ವೋತ್ತರಗಳನ್ನು ಹೇಳಿ ಅರ್ಥವಿವರಣೆ ನೀಡುತ್ತಿದ್ದರು. ಶ್ರೀ ಕಸ್ತೂರಿಯವರ ಪ್ರವಚನ, ಸಾವಕಾಶವಾಗಿ ಗಂಭೀರವಾಗಿ, ಹರಿಯುವ ನದಿಯ ಪ್ರವಾಹದಂತೆ! "ಪೋರ್ಷನ್ ಮುಗಿಸಬೇಕು" ಎಂಬ ಧಾವಂತದಿಂದ ಆತುರಪಡುವ ಬಾಬತ್ತು ಅಲ್ಲ, ಅಥವಾ "ನೋಟ್ಸು ಬರೆಸುತ್ತೇನೆ" ಎಂದು ಆಸೆ ಹುಟ್ಟಿಸಿ ಅರ್ಥವಾಗದ ಶಬ್ದಗಳನ್ನು ಬಲವಂತವಾಗಿ ಹುಡುಗರ ಮನಸ್ಸಿಗೆ 'ತುರುಕುವ' ಬಾಬತ್ತೂ ಅಲ್ಲ. ಪ್ರತಿ ತಿಂಗಳಲ್ಲಿಯೂ ತಮ್ಮ ಪಾಠಕ್ಕೆ ಎಷ್ಟು ಕಾಲ ದೊರೆಯಬಹುದೆಂದು ಲೆಕ್ಕ ಹಾಕಿಕೊಂಡು ಆ ಕಾಲಾವಕಾಶದಲ್ಲಿ ಎಷ್ಟು ವಿಷಯ ಹೇಳಬಹುದೆಂಬುದನ್ನು ಮೊದಲೇ ಅಂದಾಜು ಮಾಡಿಕೊಂಡು ಅದರಂತೆ ನಿರ್ವಹಿಸುತ್ತಿದ್ದರಾದ್ದರಿಂದ ಎಂದೂ ಪಾಠದಲ್ಲಿ ತೊಡಕು ಬರಲಿಲ್ಲ. ಆಗ್ಗೆ ವಿದ್ಯಾರ್ಥಿ ಮುಷ್ಕರಗಳು ಇರಲಿಲ್ಲ. ಹಬ್ಬದ ರಜಾದಿನಗಳಿಂದ ಕೆಲವು ದಿನ ಪಾಠ ತಪ್ಪುತ್ತಿತ್ತು. ಆದರೆ ಆ ನಷ್ಟವನ್ನು ತುಂಬಿಕೊಳ್ಳಲು ಕಸ್ತೂರಿಯವರು ಸದಾ ಪ್ರಯತ್ನಿಸುತ್ತಿದ್ದರು. ನಮ್ಮ ತರಗತಿಯ ಬೇರೆ ಉಪಾಧ್ಯಾಯರು ಯಾರಾದರೂ ರಜೆ ಪಡೆದುಕೊಂಡಾಗ ಆ ಗಂಟೆಯಲ್ಲಿ ತಮಗೆ ಬಿಡುವಿದ್ದರೆ ತಾವೇ ಆ ತರಗತಿಗೆ ಬಂದು ತಮ್ಮ ಪಾಠವನ್ನು ಮುಂದುವರಿಸುತ್ತಿದ್ದರು. ಆದಷ್ಟುಗೂ 'ಸ್ಪೆಷಲ್ ಕ್ಲಾಸ್' ಅಗತ್ಯವಾಗದಂತೆ ಕಾರ್ಯನಿರ್ವಾಹ ಮಾಡುತ್ತಿದ್ದ ಶ್ರೀ ಕಸ್ತೂರಿಯವರು ಶಿಷ್ಯವತ್ಸಲರು. ವರ್ಷದ ಕೊನೆಯಲ್ಲಿ ಎಲ್ಲ ಅಧ್ಯಾಪಕರೂ ಸ್ಪೆಷಲ್‌ಕ್ಲಾಸ್ ನಡೆಸಿದರೆ ಹುಡುಗರ ಗತಿಯೇನು? ಆತುರಾತುರವಾಗಿ ಬರೆದುಕೊಂಡ ಟಿಪ್ಪಣಿಗಳನ್ನು ಓದಿ ಅರ್ಥಮಾಡಿಕೊಳ್ಳುವುದು ಯಾವಾಗ? ಅಂಥ ಪ್ರಸಂಗಗಳಲ್ಲಿ ಅಧ್ಯಾಪಕರು ಪಾಠ ಮಾಡುವ ಬದಲು ಅಖಂಡವಾಗಿ ಹೇಳಿ ಬರೆಯಿಸುತ್ತಿದ್ದರು. ಅಂಥ ಸಂದರ್ಭಗಳಲ್ಲಿ ಎಷ್ಟು ಮಾತುಗಳನ್ನು ತಪ್ಪಾಗಿ ಬರೆದುಕೊಳ್ಳುತ್ತಿದ್ದರೊ! ಅಂಥ ಪಾಠ ಸರಿಯಾಗಿ ಅಗಿಯದೆ ನುಂಗಿದ ಆಹಾರದಂತೆ ಅಜೀರ್ಣಕ್ಕೆ ಕಾರಣವಾಗುತ್ತಿತ್ತೇ ಹೊರತು ಪುಷ್ಟಿಯನ್ನು ಕೊಡುವುದು ಸಾಧ್ಯವಿರಲಿಲ್ಲ. ಇದನ್ನು ಚೆನ್ನಾಗಿ ಮನಗಂಡು ಕಸ್ತೂರಿಯವರು 'ನೋಟ್ಸ್' ಹೇಳಿ ಬರೆಯಿಸುವ ಗೋಜಿಗೇ ಹೋಗುತ್ತಿರಲಿಲ್ಲ, ಅವರು ಕ್ರಮವಾಗಿ ಪ್ರವಚನ ನಡೆಸಿ ವ್ಯಾಖ್ಯಾನ ಮಾಡಿ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಸಾವಧಾನವಾಗಿ ಉತ್ತರ ಹೇಳಿ ತಾವು ಹೇಳಿದ ಶಾಸ್ತ್ರಪಾಠ ಗ್ರಹಿಕೆಯಾಯಿತೆಂಬುದನ್ನು ಖಚಿತ ಮಾಡಿಕೊಳ್ಳುತ್ತಿದ್ದರು. ಅವರ ತರಗತಿಗೆ ಯಾವ ವಿದ್ಯಾರ್ಥಿಯೂ 'ಚಕ್ಕರ್' ಹೊಡೆದದ್ದನ್ನು ಕಾಣೆ. ಹಾಗೇನಾದರೂ ಪಾಠಕ್ಕೆ ತಪ್ಪಿಸಿಕೊಂಡರೆ ಅವನಿಗೇ ಪರಿಣಾಮದಲ್ಲಿ 'ಚಕ್ರ' ವಾಗುವುದೆಂಬುದನ್ನು ಎಲ್ಲರೂ ಅರಿತಿದ್ದರು.

ಅಂದಿನ ವಿಶ್ವವಿದ್ಯಾನಿಲಯ ಪ್ರವೇಶ ಪರೀಕ್ಷೆ (University Entrance, U.E.) ಬಹಳ ಕ್ರೂರವಾದ ವಿಷಪರೀಕ್ಷೆಯೇ ಆಗಿತ್ತೆಂದರೆ ತಪ್ಪಲ್ಲ. ಮಾರ್ಚ್ ೧೧ನೆಯ ತಾರೀಖು ಪ್ರಾರಂಭವಾಗಿ ಒಂದು ವಾರದಲ್ಲಿ ಮುಗಿದು ಹೋಗುತ್ತಿತ್ತು. ದಿನವೂ ಎರಡು ಪ್ರಶ್ನೆ ಪತ್ರಿಕೆಗಳು. ೧೦ ರಿಂದ ೧ ಗಂಟೆವರೆಗೆ ಒಂದು ಪೇಪರು ೨ ರಿಂದ ೫ ರವರೆಗೆ ಎರಡನೆ ಪೇಪರು. ಶನಿವಾರ ಒಂದು ಪೇಪರು! ಪರೀಕ್ಷೆ ಆಗಿಯೇ ಹೋಯಿತು! ಫಲಿತಾಂಶ ತಿಳಿದಾಗ ಗೆದ್ದವರು ಯಾರೋ ಕೆಲವರು, ಸೋತವರೇ ಬಹು ಸಂಖ್ಯೆ,

ಮೊದಲಸಲವೇ ಆ ಪರೀಕ್ಷೆಯಲ್ಲಿ ಗೆದ್ದವರು ಅದೃಷ್ಟಶಾಲಿಗಳು! ಆದರೆ ಕಸ್ತೂರಿಯವರು ನಮ್ಮನ್ನು ಅದೃಷ್ಟ ಪರೀಕ್ಷೆಗೇ ಗುರಿ ಮಾಡದೆ ನಮ್ಮ ನಮ್ಮ ಬುದ್ಧಿಶಕ್ತಿಯನ್ನು ಬಳಸಿ ಕೃತಕೃತ್ಯರಾಗಲು ಬೇಕಾದ ಶಿಕ್ಷಣವನ್ನು ನೀಡಿದ್ದರು. ಎಂದಾದರೂ ಅಪೂರ್ವವಾಗಿ ಹುಡುಗರು ನಿರುತ್ಸಾಹ ತೋರಿದಾಗ ಕಸ್ತೂರಿಯವರು "Beware the Ides of March" ಮಾರ್ಚಿ ತಿಂಗಳ ೧೫ನೇ ತಾರೀಖು ನೆನಪಿರಲಿ ಎಂದು ಎಚ್ಚರಿಕೆ ಹೇಳಿ ನಮ್ಮ ಸೋಮಾರಿತನಕ್ಕೆ ಮದ್ದು ಮಾಡುತ್ತಿದ್ದರು.

ಶ್ರೀ ಕಸ್ತೂರಿಯವರು ಎಂದೂ ಸಂಬಳದ ಉಪಾಧ್ಯಾಯರಂತೆ ವರ್ತಿಸಲಿಲ್ಲ, "ಗಂಟೆ ಪೂರಾ ತರಗತಿ ನಡೆಸಿದರೆ, ಪಾಠ ಮುಗಿಸಿದರೆ, ಸಂಜೆಹೊತ್ತಿಗೆ, ಆರು ಮೊಳ' ಎಂಬಂತೆ ಅವಧಿ ಮುಗಿಯುವ ವೇಳೆಗೆ ಪೋರ್ಷನ್ ಮುಗಿಯಿತೆಂದಾದರೆ ಸರಿ" ಎಂಬ ಮನೋಭಾವವನ್ನು ಅವರು ಎಂದೂ ತೋರಲಿಲ್ಲ. ತಾವು 'ಹೇಳಿದ ಪಾಠ ಸಫಲವಾಗಬೇಕು. ಹುಡುಗರಿಗೆ ಅದು ಅರ್ಥವಾಗಬೇಕು. ಅವರು ಆ ವಿಷಯವನ್ನು ಕುರಿತು ಚಿಂತನ ಮಾಡಬಲ್ಲವರಾಗಬೇಕು. ತಾವು ಕಲಿಸಿದ ಪಾಠದಿಂದ ಆ ಹುಡುಗರು ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು' ಎಂಬುದು ಅವರ ಧ್ಯೇಯ. ತಾವು ಕೈಕೊಂಡ ಅಧ್ಯಾಪಕ ವೃತ್ತಿ ಕೇವಲ ಜೀವನೋಪಾಯವಷ್ಟೇ ಅಲ್ಲ, ಅದು ತಮ್ಮ ಬದುಕಿನ ಸಾಫಲ್ಯಕ್ಕೆ ದಾರಿ ಎಂದು ನಂಬಿದವರು ಕಸ್ತೂರಿಯವರು. ಎಲ್ಲ ವಿಧಗಳಿಂದಲೂ ವಿದ್ಯಾರ್ಥಿಗಳ ಜ್ಞಾನಸಮೃದ್ಧಿಯಾಗಬೇಕೆಂದು ಅವರು ಬಯಸಿದರು. ಅದು ಕೇವಲ ಬಯಕೆಯಾಗಿಯೇ ಉಳಿಯದೆ ಅದರ ಈಡೇರಿಕೆಗೆ ಕಸ್ತೂರಿಯವರು ಅವಿರತವಾದ ಪ್ರಯತ್ನ ಮಾಡಿದರು. ಅವರು ನನಗೆ ತಿಳಿದಮಟ್ಟಿಗೆ ಆದರ್ಶ ಉಪಾಧ್ಯಾಯರು. ನಮ್ಮ ಪ್ರಿಯ ಗುರುಗಳಿಗೆ ಅನಂತ ನಮನಗಳು! ಕಸ್ತೂರಿಯವರು ಬೇರೆ ಪ್ರಾಂತದಿಂದ ಬಂದವರು. ಅವರ ಮಾತೃಭಾಷೆ ಮಲೆಯಾಳ; ಕನ್ನಡವಲ್ಲ. ಅವರ ಕಡೆಯವರು, ಬಂಧು ವರ್ಗಕ್ಕೆ ಸೇರಿದವರು, ಯಾರೂ ಇಲ್ಲಿ ಅವರ ಪಾಠದ ಪ್ರಯೋಜನ ಪಡೆಯುವವರಿರಲಿಲ್ಲ. ಆದರೂ ಈ ಕನ್ನಡದ ನೆಲವೇ ತಮ್ಮದೆಂದು ತಿಳಿದು ತಮ್ಮೆದುರಿನ ಹುಡುಗರೆಲ್ಲ ತಮ್ಮವರೇ ಎಂದು ತಿಳಿದು ಅವರ ಶ್ರೇಯಸ್ಸಾಧನೆಗಾಗಿ ದುಡಿದ ನಿಷ್ಕಾಮ ಕರ್ಮಯೋಗಿಗಳೆಂದರೂ ಸಲ್ಲುತ್ತದೆ.

ಕಸ್ತೂರಿಯವರು ಕನ್ನಡ ಕಲಿತರು. ಸಂಸಾರದ ಹೊಣೆ ಹೊತ್ತು ಹೈಸ್ಕೂಲಿನಲ್ಲಿ ಹಲವು ಗಂಟೆಗಳ ಕಾಲ ಪಾಠ ಹೇಳುತ್ತಿದ್ದ ಉಪಾಧ್ಯಾಯರು ಒಂದು ಹೊಸ ಭಾಷೆಯನ್ನು ಕಲಿಯುವ ಸಾಹಸ ಮಾಡಿದರು. ಅದಕ್ಕೆ ಅವರಿಗೆ ಹೊತ್ತೆಲ್ಲಿ ಸಿಕ್ಕಿತೋ? 'ಮನಮುಳ್ಳೊಡುಂಟು ಮಾರ್ಗಂ' ಅಲ್ಲವೆ? ಎಂಟ್ರೆನ್ಸ್ ತರಗತಿಯ ವಿದ್ಯಾರ್ಥಿಗಳಿಗೂ ಆಗತಾನೆ ಆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಬಿ.ಎ. ತರಗತಿ ಸೇರಿದ್ದ ವಿದ್ಯಾರ್ಥಿಗಳಿಗೂ ಅನುಕೂಲವಾಗುವಂತೆ ಒಂದು ಚರ್ಚಾಕೂಟವನ್ನು ಏರ್ಪಡಿಸಿದರು. ಪ್ರತಿ ಭಾನುವಾರ ಬೆಳಗ್ಗೆ ಎಂಟೂವರೆ ಗಂಟೆಗೆ ಎಲ್ಲ ಸದಸ್ಯರೂ[1] ಬನುಮಯ್ಯನವರ ಶಾಲೆಯ ಒಂದು ಕೊಟಡಿಯಲ್ಲಿ ಸೇರತಕ್ಕದ್ದು. ಅಲ್ಲಿ ಪಾರ್ಲಿಮೆಂಟರಿ ಡಿಬೇಟ್ ಪದ್ಧತಿಯನ್ನು ಕಲಿಸುವ

[1] ಆ ಸಂಘದ ಸದಸ್ಯತ್ವಕ್ಕೆ ಶುಲ್ಕವೇನೂ ಇರಲಿಲ್ಲ.

ವ್ಯವಸ್ಥೆ ಮಾಡಿದರು ಕಸ್ತೂರಿಯವರು. ಅವರೇ ಖಾಯಂ ಸ್ಪೀಕರ್, ಚರ್ಚಾವಿಷಯ ಏನು ಬೇಕಾದರೂ ಆಗಬಹುದು. ಆದರೆ ಚರ್ಚೆಯ ಭಾಷೆ ಇಂಗ್ಲಿಷ್ ಅಥವಾ ಕನ್ನಡ! ಸುಮಾರು ಮೂರು ಗಂಟೆಗಳ ಹೊತ್ತು ಆ ಕೂಟ ನಡೆಯುತ್ತಿತ್ತು. ಇಂಗ್ಲಿಷಿನಲ್ಲಿ ನಾಲ್ವರೆದುರಿಗೆ ಮಾತನಾಡಲು ಹಿಂಜರಿಯುತ್ತಿದ್ದ ನನ್ನಂಥ ಹಳ್ಳಿಯ ಮುಖೇಡಿಗಳಿಗೆ ಉತ್ಸಾಹ ತುಂಬಿ, ಧೈರ್ಯ ಹೇಳಿ ಇಂಗ್ಲಿಷ್ ಮಾತನಾಡಲು ಪ್ರೇರಣೆ ನೀಡಿದರು. ಈ 'ಸಂಡೇ ಡಿಬೇಟಿಂಗ್ ಸೊಸೈಟಿ' ಬಹಳ ಯಶಸ್ವಿಯಾಗಿ ನಡೆಯಿತು. ನನ್ನ ಅನೇಕ ಸ್ನೇಹಿತರು ಇಂಗ್ಲಿಷ್‌ನಲ್ಲಿಯೂ ಕನ್ನಡದಲ್ಲಿಯೂ ಒಳ್ಳೆಯ ಮಾತುಗಾರರಾದರು! ಪಾರ್ಲಿಮೆಂಟರಿ ವ್ಯವಸ್ಥೆಯ ಪ್ರಾತ್ಯಕ್ಷಿಕೆಯೂ ಆಯಿತು! ಈ ಧ್ಯೇಯ ಸಾಧನೆಗೆ ನಮ್ಮ ಕಸ್ತೂರಿ ಮೇಷ್ಟ್ರು ತಮ್ಮ ವಾರದ ಒಂದು ರಜಾ ದಿನದ ಪೂರ್ವಾರ್ಧವನ್ನು ನಮಗಾಗಿ ಮೀಸಲಿಟ್ಟರು! ಇದರಲ್ಲಿ ಅವರಿಗೆ ಯಾವ ಐಹಿಕ ಪ್ರಯೋಜನವೂ ಇರಲಿಲ್ಲ. ಅದೇ ವೇಳೆಯನ್ನು 'ಮನೆಪಾಠ'ಕ್ಕೆ ವಿನಿಯೋಗಿಸಿದ್ದರೆ ಆ ಕಾಲದಲ್ಲಿಯೂ ಅವರಿಗೆ ತಕ್ಕ ಮಟ್ಟಿಗೆ ದ್ರವ್ಯಾರ್ಜನೆಯಾಗಬಹುದಿತ್ತು. ಆದರೆ ಕಸ್ತೂರಿಯವರು ಆ ಮೇಲುಸಂಪಾದನೆಗೆ ಆಸೆಪಡದೆ ಶಿಷ್ಯರ ಜ್ಞಾನಾಭಿವೃದ್ಧಿಗೆ ಮನಸ್ಸುಕೊಟ್ಟು ಶ್ರಮಿಸಿದರು!

ಆ ಕಾಲಕ್ಕೆ ಮೈಸೂರು ಇನ್ನೂ ಹಳ್ಳಿಯಂತೆಯೇ ಇತ್ತೆಂದರೆ ಯಾರೂ ತಪ್ಪು ತಿಳಿಯಬಾರದು. ನವನಾಗರಿಕತೆ ಇನ್ನೂ ತಲೆದೋರಿರಲಿಲ್ಲ. ಇಲ್ಲಿ ಯಾವ ಕೈಗಾರಿಕೆಯೂ ಸ್ಥಾಪನೆಯಾಗಿರಲಿಲ್ಲ. "ಶ್ರೀ ಕೃಷ್ಣರಾಜೇಂದ್ರ ಮಿಲ್ಸ್" ಇನ್ನೂ ಆವಿರ್ಭವಿಸಿರಲಿಲ್ಲ. ಆದ್ದರಿಂದ ಹಣದ ಚಲಾವಣೆ ಕಡಿಮೆಯಾಗಿತ್ತು, ದಿನ ಪತ್ರಿಕೆ, ವಾರಪತ್ರಿಕೆ, ಮಾಸ ಪತ್ರಿಕೆಗಳನ್ನು 'ಕೊಂಡು' ಓದುವ ಶಕ್ತಿ ಅನೇಕ ವಿದ್ಯಾರ್ಥಿಗಳಿಗೆ ಸಾಧ್ಯವಿರಲಿಲ್ಲ. ಅವನ್ನು ಕಾಲೇಜಿನ, ರೀಡಿಂಗ್ ರೂಮಿನಲ್ಲಿಯೇ ಕಾಣಬೇಕಾಗಿತ್ತು. ಕಾಲೇಜಿನವರು ತರಿಸುತ್ತಿದ್ದ 'ಹಿಂದೂ' 'ಸಂಪದಭ್ಯುದಯ' 'ಡೈಲಿಪೋಸ್ಟ್' ನಂಥ ವೃತ್ತಾಂತ ಪತ್ರಿಕೆಗಳನ್ನು ಮಾತ್ರ ಬಲ್ಲವರಾಗಿದ್ದೆವು. ಹೀಗಿರುವಾಗ ಒಂದು ಸಲ ಕಸ್ತೂರಿಯವರು ಸೀಮೆಗೆ ಹೋಗಿಬಂದಿದ್ದ ತಮ್ಮ ಗೆಳೆಯರೊಬ್ಬರ ನೆರವಿನಿಂದ 'ಲಂಡನ್' ನಗರದಲ್ಲಿ ಚಲಾವಣೆಯಲ್ಲಿದ್ದ ಹಲವು ಪತ್ರಿಕೆಗಳ ಒಂದು ಪ್ರದರ್ಶನವನ್ನು ಸ್ಕೂಲಿನಲ್ಲಿ ಏರ್ಪಡಿಸಿದ್ದರು. ಆಗ ಫುಟ್‌ಬಾಲಿ (Football) ಗೇ ಮೀಸಲಾದ "Referce" ಯೆಂಬ ಹೆಸರಿನ ಒಂದು ಮಾಸಪತ್ರಿಕೆಯನ್ನು ನೋಡಿದ ನೆನಪು. ಬೇರೆಬೇರೆ ಕಾರ್ಖಾನೆಗಳವರು, ವಾಣಿಜ್ಯಸಂಸ್ಥೆಗಳು, ಲೇವಾದೇವಿ ಉದ್ಯಮಗಳೇ ಮುಂತಾದ ವಿವಿಧ ಕಸಬುಗಳು ತಮ್ಮದೇ ಆದ ಪತ್ರಿಕೆಗಳನ್ನು ನಡೆಸುತ್ತಿದ್ದರೆಂದೂ ಅವನ್ನು ಬ್ರಿಟಿಷರು ಕೊಂಡು ಪ್ರೋತ್ಸಾಹಿಸುತ್ತಿದ್ದರೆಂದೂ ಆಗ ತಿಳಿದೆವು. ಪತ್ರಿಕಾ ಪ್ರಪಂಚದ ವಿಸ್ತಾರ ವೈವಿಧ್ಯಗಳ ಅರಿವು ಆ ಪ್ರದರ್ಶನವನ್ನು ನೋಡಿದ ವಿದ್ಯಾರ್ಥಿಗಳಿಗೆ ಲಭಿಸಿತು. ಕಸ್ತೂರಿಯವರು ಯಾವ ಒಂದು ಅವಕಾಶವನ್ನು ಉದಾಸೀನಮಾಡದೆ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ನೆರವಾಗುತ್ತಿದ್ದರು. ಅವರು ವಿದ್ಯಾ ಪ್ರಚಾರಕ್ಕೇ ತಮ್ಮನ್ನು ಅರ್ಪಿಸಿಕೊಂಡಿದ್ದರೆಂದು ಹೇಳಬಹುದು. ತಮ್ಮ ಅರ್ಥಲಾಭಕ್ಕಿಂತ ಹೆಚ್ಚಾಗಿ ಶಿಷ್ಯರ ಜ್ಞಾನಲಾಭದ ಕಡೆಗೇ ಅವರ ಗಮನ ಹರಿಯುತ್ತಿತ್ತು.

ತರಗತಿಯಲ್ಲಿ ಶ್ರೀ ಕಸ್ತೂರಿಯವರು ಇತಿಹಾಸ ಪಾಠ ಹೇಳುವಾಗಲೂ ತಕ್ಕ

ಮಟ್ಟಿಗೆ ಸರಸ ಸಂಭಾಷಣೆ ನಡೆಸಿದಂತೆ ಮಾತನಾಡುತ್ತಿದ್ದರು. ಸನ್ನಿವೇಶಕ್ಕೆ ಹೊಂದು ವಷ್ಟು ತಿಳಿಹಾಸ್ಯವನ್ನು ತುಂಬಿ ಹುಡುಗರ ಮನಸ್ಸನ್ನು ಉಲ್ಲಾಸದಲ್ಲಿ ತೇಲಿಸುತ್ತಿದ್ದರು. ಬಾಲ್ಯದ ತರಗತಿಯ ಒಂದು ಇಂಗ್ಲಿಷ್ ಪಠ್ಯ ಪುಸ್ತಕದಲ್ಲಿ ಇದ್ದ "Learning is nothing but mirth" ಎಂಬ ಒಂದು ಕವನಸಂಕ್ತಿಯನ್ನು ಪದೇಪದೇ ಸ್ಮರಿಸಿ ಕೊಳ್ಳುತ್ತಿದ್ದೇನೆ. ಕಸ್ತೂರಿಯವರ ಶಿಷ್ಯವರ್ಗಕ್ಕೆ ಸೇರಿದ ಭಾಗ್ಯವಿಶೇಷ ನನ್ನದು. ವಿದ್ಯೆಯು ಕಲಿಕೆ ಒಂದು ದೊಡ್ಡ ಸಂತಸದ, ಉತ್ಸಾಹದ ಸಂಗತಿಯೇ ಆಗಿತ್ತು ಅವರು ಪಾಠಕ್ಕೆ ತೊಡಗಿದಾಗ.

ಕಸ್ತೂರಿಯವರ ತಾಯಿನುಡಿ ತಮಿಳೇ, ಮಲೆಯಾಳವೇ ನನಗೆ ಖಚಿತವಾಗಿ ತಿಳಿಯದು. ತಮಿಳುನಾಡಿನಿಂದ ಮಲೆಯಾಳಕ್ಕೆ ವಲಸೆ ಹೋದ ಸಂಸಾರದವರೆಂದು ಒಮ್ಮೆ ಕೇಳಿದ್ದೆ. ಅದು ಹೇಗೇ ಇರಲಿ, ಅವರು ಮೈಸೂರಿಗೆ ಬಂದು, ಇಲ್ಲಿ ಅಧ್ಯಾಪಕರಾಗಿ ಕನ್ನಡ ಹುಡುಗರಿಗೆ ಪಾಠ ಹೇಳುತ್ತಾ ತಾವೂ ಕನ್ನಡಿಗರೇ ಆದರು. ಅಚ್ಚಕನ್ನಡಿಗರಿಗಿಂತ ಹೆಚ್ಚಿನ ಶ್ರದ್ಧೆಯಿಂದ ಕನ್ನಡದಲ್ಲಿ ಬರೆವಣಿಗೆಯನ್ನು ನಡೆಸಿದರು. ೧೯೩೦ರ ದಶಕದಲ್ಲಿ ಪ್ರಬುದ್ಧ ಕರ್ಣಾಟಕದಲ್ಲಿ ನಾ. ಕಸ್ತೂರಿಯವರ ಕೆಲವು ಕನ್ನಡ ಬರೆಹಗಳು ಪ್ರಕಟ ವಾಗಿವೆ. ಅವುಗಳನ್ನು ಓದುವಾಗ ಈ ಲೇಖಕರು ಕನ್ನಡಿಗರು ಹೌದೆ, ಅಲ್ಲವೆ, ಎಂಬ ಸಂಶಯವೇ ಬರಲು ಸಾಧ್ಯವಿಲ್ಲ. ಅಷ್ಟು ಸಹಜ ಸರಳ ಕನ್ನಡ ಭಾಷೆಯಲ್ಲಿ 'ಕುಮಾರದೇವ' 'ಬೋಧಿಧರ್ಮ' ಎಂಬ ಬೌದ್ಧಧರ್ಮ ಪ್ರಚಾರಕರು ಚೀನಾ ಜಪಾನುಗಳಿಗೆ ಹೋಗಿ ಬಂದ ಇತಿಹಾಸವನ್ನು ಚೊಕ್ಕವಾಗಿ ಬರೆದಿದ್ದಾರೆ. ಇನ್ನು ಅವರ ಕನ್ನಡ ಕೃತಿಗಳ ವಿಷಯ ಯಾರಿಗೆ ತಿಳಿಯದು? 'ಡಿಲ್ಲೀಶ್ವರನ ದಿನಚರಿ' 'ಅಶೋಕ' 'ಗಗ್ಗಯ್ಯನ ಗಡಿಬಿಡಿ' 'ಗಾಳಿಗೋಪುರ' 'ಚಿಂಗೂಲಿ ಚೆಲುವ' 'ಚಕ್ರದೃಷ್ಟಿ' 'ಅನರ್ಥಕೋಶ' ಮೊದಲಾದವು ಅತ್ಯಂತ ಜನಪ್ರಿಯವಾದ ಗ್ರಂಥಗಳು. ಅವುಗಳಲ್ಲಿ ಕೆಲವು ವಿಶ್ವವಿದ್ಯಾ ನಿಲಯದ ಕೆಲವು ಪರೀಕ್ಷೆಗಳಿಗೆ ಪಠ್ಯ ಗ್ರಂಥಗಳೂ ಆಗಿದ್ದುವು. ಅವರ ಎಲ್ಲ ಕೃತಿ ಗಳನ್ನೂ ಒಟ್ಟಾಗಿ ಪ್ರಕಟಿಸಿ ಸುಲಭಬೆಲೆಗೆ ಲಭಿಸುವಂತೆ ಮಾಡಿದರೆ, ಕನ್ನಡದ ಹಾಸ್ಯ ಸಾಹಿತ್ಯಕ್ಕೆ ಅಮೂಲ್ಯ ಸೇವೆಯಾಗುತ್ತದೆ. ಯಾವ ಸಭೆಯಲ್ಲಿಯಾದರೂ ನಿಶ್ಶಂಕೆಯಾಗಿ ಓದಬಹುದಾದ ಮೃದುಮಧುರ ಗಂಭೀರ ಹಾಸ್ಯವನ್ನು ನಾ. ಕಸ್ತೂರಿಗಳ ಗ್ರಂಥಗಳಲ್ಲಿ ಕಾಣಬಹುದಾಗಿದೆ. ರಾಶಿಯವರೊಂದಿಗೆ ನಾ. ಕಸ್ತೂರಿಯವರು 'ಕೊರವಂಜಿ' ಎಂಬ ಹಾಸ್ಯಪ್ರಧಾನ ಪತ್ರಿಕೆಗೆ ಲೇಖನಗಳನ್ನು ಬರೆದರು. ಕನ್ನಡ ಸಾಹಿತ್ಯದಲ್ಲಿ ಜನಮಾನ್ಯ ರಾಗಿರುವ ಕೆಲವರೇ ಶ್ರೇಷ್ಠ ಹಾಸ್ಯಲೇಖಕರಲ್ಲಿ ಅಗ್ರಪಂಕ್ತಿಗೆ ಸೇರಿದವರು, ನಾ. ಕಸ್ತೂರಿಯವರು!

ಕನ್ನಡದಲ್ಲಿ ಕೃತಿರಚನೆ ಮಾಡಿದುದೇ ಅಲ್ಲದೆ, ಈ ಮಲೆಯಾಳದ ಮೇಷ್ಟ್ರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಗಳ ಕೆಲಸದಲ್ಲಿಯೂ ಸಕ್ರಿಯವಾಗಿ ಭಾಗ ವಹಿಸಿ ಕನ್ನಡ ಮಾಧ್ಯಮದಲ್ಲಿಯೂ ಬೋಧೆಮಾಡಬಲ್ಲವರಾಗಿದ್ದುದನ್ನು ಸಾಬೀತು ಮಾಡಿದರು. ಸುಮಾರು ೪೦ ವರ್ಷಗಳ ಹಿಂದೆ ತುಮಕೂರಿನಲ್ಲಿ ಏರ್ಪಾಟಾಗಿದ್ದ ಒಂದು ಉಪನ್ಯಾಸ ಸಪ್ತಾಹಕ್ಕೆ ನಾ. ಕಸ್ತೂರಿಯವರು ಬಂದು ಉಪನ್ಯಾಸಮಾಡಿದುದು ನೆನಪಾಗುತ್ತದೆ. ಅವರ ಸಾರ್ವಜನಿಕ ಕನ್ನಡ ಉಪನ್ಯಾಸಗಳನ್ನು ಕೇಳಿದವರು ಯಾರು

ಇವರು ಬೇರೆ ಭಾಷಾಪ್ರಾಂತದವರಿರಬಹುದೆಂದು ಶಂಕಿಸಲು ಅವಕಾಶವೇ ಇರುತ್ತಿರಲಿಲ್ಲ. ಇಂಗ್ಲಿಷಿನಲ್ಲಿ ಎಷ್ಟು ಸುಲಭವಾಗಿ ಪಾಠ ಹೇಳುವರಾಗಿದ್ದರೋ ಕನ್ನಡದಲ್ಲಿಯೂ ಅಷ್ಟೇ ಸುಲಭವಾಗಿ ಸರಳ ಶೈಲಿಯಲ್ಲಿ ವಿಷಯ ನಿರೂಪಣೆ ಮಾಡಿ ಶ್ರೋತೃಗಳಿಗೆ ಗ್ರಹಿಕೆಯಾಗುವಂತೆ ಹೇಳಬಲ್ಲವರಾಗಿದ್ದರು, ಶ್ರೀ ಕಸ್ತೂರಿಯವರು. ಇವರು ಶುದ್ಧವಾದ ಕನ್ನಡ ಕಸ್ತೂರಿ!

ವಿಶ್ವರಹಸ್ಯ

ಅರಿಯಲಾಗದು ವಿಶ್ವ ರಹಸ್ಯವನು
ಅರಿಯಲಾಗದು ಜೀವನ ನಿಗೂಢವನು-
ಅರಿಯಲಾಗದು ಸಾವಿನಾಚೆ ತತ್ತ್ವವನು
ಅರಿವಿನೆಡೆ ಮುಖಮಾಡೋ...ಮಣ್ಣಿನ ಮಗ.

ಹೃದಯಮೈತ್ರಿ

ಎಲ್ಲಿ ಮನಗಳು ಕುಬ್ಜವೋ
ಅಲ್ಲೇ ಜಗಳವೂ...ಪ್ರಕ್ಷುಬ್ಧವೂ...
ಎಲ್ಲಿ ಹೃದಯ ವಿಶಾಲವೋ
ಅಲ್ಲೇ ದಿಟದಾ ಮೈತ್ರಿಯೋ...ಮಣ್ಣಿನ ಮಗ.

ದೊಡ್ಡರಂಗೇಗೌಡ

ಕಸ್ತೂರಿ ಕಂಪಿಗೆ ಪ್ರಾಕಾರವೇ?

ಜಿ. ಬ್ರಹ್ಮಪ್ಪ

ಕನ್ನಡದ ಆಸ್ತಿ ಮಾಸ್ತಿ, ಕನ್ನಡದ ಪೆಂಪು ಕುವೆಂಪು, ಕನ್ನಡದ ನಾದತರಂಗ ಬೇಂದ್ರೆ, ಕನ್ನಡದ ಕಾದಂಬರಿಯ ಜೀವನದಿ ಕಾರಂತ ಇವರೆಲ್ಲ ಉತ್ತುಂಗ ಶಿಖರಗಳಾಗಿ ಕಂಗೊಳಿಸುವರು. ಈ ಶಿಖರಗಳನ್ನು ಏರಿ ಆಯಾಸವಾದಾಗ ಆಯಾಸ ಪರಿಹಾರಕ್ಕಾಗಿ ಕಸ್ತೂರಿಯವರ ಹಾಸ್ಯದ ಮಡುವಿನಲ್ಲಿ ಸಹೃದಯರು ಮೀಯಬೇಕು. ನಕ್ಕು ನಕ್ಕು ಸಹೃದಯರ ಮನಸ್ಸು ಚೊಕ್ಕವಾಗಬೇಕು. ಕನ್ನಡ ಸಾಹಿತ್ಯದಲ್ಲಿ ತಿಳಿ ಹಾಸ್ಯದ ಪೂರ್ಣ ಪ್ರವಾಹವನ್ನು ಹರಿಸಿದವರೆಂದರೆ ನಾ. ಕಸ್ತೂರಿಯವರೇ. ಕಸ್ತೂರಿ ರಂಗನಾಥಶರ್ಮ ಆಗಿದ್ದವರು ಕರ್ನಾಟಕಕ್ಕೆ ಬಂದಾಗ ನಾರಾಯಣ ಕಸ್ತೂರಿಯಾದರು. ಅನಂತರ ನಾ. ಕಸ್ತೂರಿಯಾದರು. ಕೊನೆಗೆ 'ನಾಕ' ಆದರು. ನಾಕವೆಂದರೆ ನಗುವಿನ ಸ್ವರ್ಗವಲ್ಲವೆ?

ಇವರು ಹುಟ್ಟಿದ್ದು ಕೇರಳದಲ್ಲಿ; ಬೆಳಕು ಕಂಡುದು ಕರ್ನಾಟಕದಲ್ಲಿ; ಪ್ರಶಾಂತವಾಗಿ ಕಣ್ಣು ಮುಚ್ಚಿದುದು ಆಂಧ್ರ ಪ್ರಾಂತ್ಯದಲ್ಲಿ. ಕಸ್ತೂರಿ ಕಂಪಿಗೆ ಪ್ರಾಕಾರ ನಿರ್ಮಿಸಲು ಸಾಧ್ಯವೆ? ಇವರ ಮನೆಯ ಮಾತು ತಮಿಳು. ಇವರು ಕಲಿತ ಭಾಷೆ ಮಲೆಯಾಳ. ಇವರು ಕಂಪು ಬೀರಿದುದು ಕನ್ನಡದಲ್ಲಿ. ಇವರು ಹೊಟ್ಟೆ ಹೊರೆದುದು ಆಂಗ್ಲ ಭಾಷೆಯ ಬಲದಿಂದ. ಇವರು ಎಂ. ಎ. ಪದವೀಧರರಾದುದು ಇತಿಹಾಸದಲ್ಲಿ. ಆದರೆ ಇವರು ಐತಿಹಾಸಿಕ ವ್ಯಕ್ತಿಯಾದುದು ಕನ್ನಡ ಸಾಹಿತ್ಯದಿಂದ. ತಮಿಳು, ಮಲೆಯಾಳ, ಕನ್ನಡ, ತೆಲುಗು ಮತ್ತು ಇಂಗ್ಲೀಷು ಇಷ್ಟೂ ಭಾಷೆಗಳಲ್ಲಿ ನಾ. ಕಸ್ತೂರಿಯವರು ಪರಿಣತರಾಗಿದ್ದರು. ಇವರ ಪ್ರತಿಭೆಯೆಲ್ಲವೂ ಹಾಸ್ಯರಸಕ್ಕೆ ಪಾತಿಯಾಯಿತು. ಇವರ ಕಲ್ಪನಾ ವಿಲಾಸವೆಲ್ಲವೂ ಹಾಸ್ಯ ವಲ್ಲಿಯಾಗಿ ಕನ್ನಡದ ಹಂದರದಲ್ಲಿ ಹಬ್ಬಿ ಚಿಗುರಿ ಹೂ ಬಿಟ್ಟು ಪರಿಮಳವನ್ನು ಬೀರಿತು.

ನಾರಾಯಣ ಕಸ್ತೂರಿಯವರು ೧೫-೧೨-೧೮೯೭ರಲ್ಲಿ ಕೇರಳ ಪ್ರಾಂತದ ಕೊಚ್ಚಿನ್ ಸಂಸ್ಥಾನದಲ್ಲಿ ಜನಿಸಿದರು. ಹುಟ್ಟುತ್ತಿದ್ದಂತೆ ಇವರು ತಂದೆಯನ್ನು ಕಳೆದುಕೊಂಡರು. ತಾಯಿಗಾದರೋ ಆಗ ಕೇವಲ ೧೮ ವರ್ಷಗಳು. ಸೋದರ ಮಾವನ ಮನೆಯಲ್ಲಿ ಈ ತಾಯಿ ಮಕ್ಕಳಿಬ್ಬರೂ ಅನಿವಾರ್ಯವಾಗಿ ನೆಲಸಬೇಕಾಯಿತು. ಬಾಲ್ಯದಲ್ಲಿ ಕಸ್ತೂರಿಯವರು ಪಟ್ಟ ಪಾಡು ಹೇಳತೀರದು. ದೇಗುಲಗಳಲ್ಲಿ ಬ್ರಾಹ್ಮಣರಿಗೆ ಅನ್ನ ಸಂತರ್ಪಣೆಯಾದರೆ ಇವರ ಆನಂದ ಅಷ್ಟಿಷ್ಟಲ್ಲ. ಅಂದು ಮನಃಪೂರ್ವಕ ರುಚಿ ರುಚಿಯಾದ ಆಹಾರವನ್ನು ತಿಂದು ಆನಂದಪಡುತ್ತಿದ್ದರು. ಇವರ ಸೋದರ ಮಾವನ ಮನೆಯೂ ದರಿದ್ರ ಲಕ್ಷ್ಮಿಯು ಅವಾಸ ಸ್ಥಾನವಾಗಿದ್ದಿತು. ಇವರ ಮಾತಾಪಿತ್ರರು ಪ್ರತಿ ವರ್ಷವೂ ತಪ್ಪದೆ ಕಾಶೀಯಾತ್ರೆ ಮಾಡುತ್ತಿದ್ದರು. ಆಗ ಸುತ್ತಮುತ್ತ ಇದ್ದ ಭಕ್ತರು ಕಾಶೀ ವಿಶ್ವನಾಥನಿಗೆ ಅರ್ಪಿಸಲು ತಮ್ಮ ಕೈಲಿದ್ದ ಪುಡಿಗಾಸನ್ನು ಈ ಮುದುಕರ ಕೈಗೆ ಹಾಕುತ್ತಿದ್ದರು. ಈ ಪುಡಿಗಾಸು ಸಾಕಷ್ಟು ಸಂಗ್ರಹವಾಗುತ್ತಿತ್ತು. ಕೆಲವು ದಿನವಾದರೂ ಈ ಮುದುಕರು ಈ ಕಾಸಿನ ಬಲದಿಂದ ಹಾಯಾಗಿರುತ್ತಿದ್ದರಂತೆ; ತಪ್ಪದೆ ಕಾಶೀಕ್ಷೇತ್ರಕ್ಕೂ ಹೋಗಿಬರುತ್ತಿದ್ದರಂತೆ. ಪ್ರತಿ ಸೋಮವಾರದಂದು ದೇವಾಲಯದಲ್ಲಿ ಮಕ್ಕಳ ತಲೆಗೆ ಒಂದು ಸೌಟು ಎಣ್ಣೆ ಕೊಡುತ್ತಿದ್ದರಂತೆ. ಆ ಎಣ್ಣೆಯನ್ನು ತಲೆಯಮೇಲೆ ಹಾಕಿಸಿಕೊಂಡು ಕಸ್ತೂರಿಯವರೂ ಅಭ್ಯಂಜನ ಮಾಡುತ್ತಿದ್ದರಂತೆ. ಬಾಲ್ಯದ ಈ ಕಾರ್ಪಣ್ಯವನ್ನು ಆಗಾಗ ಇವರು ನನ್ನೊಡನೆ ಹೇಳಿಕೊಳ್ಳುತ್ತಿದ್ದರು. ಇಂಥ ಕಡು ಬಡತನದಲ್ಲೂ ಇವರು ಇತಿಹಾಸದಲ್ಲಿ ಎಂ.ಎ. ಮಾಡಿದುದು ಒಂದು ಪವಾಡವೇ!

೧೯೨೦ ರಲ್ಲಿ ನಾ. ಕಸ್ತೂರಿಯವರು ಮೈಸೂರಿಗೆ ಬಂದರು. ಬನುಮಯ್ಯ ಕಾಲೇಜಿನ ಅಧ್ಯಾಪಕ ಹುದ್ದೆ ಇವರಿಗೆ ದೊರೆಯಿತು. ಬರುವಾಗಲೇ ಯಾರಿಂದಲೋ ಕೆಲವು ಕನ್ನಡ ಪುಟ್ಟಪುಟ್ಟ ವಾಕ್ಯಗಳನ್ನು ಹೇಳಿಸಿಕೊಂಡು ಮಲಿಯಾಳದ ಅಕ್ಷರದಲ್ಲಿ ಅವನ್ನು ಬರೆದುಕೊಂಡು ಬಂದಿದ್ದರಂತೆ. ಬನುಮಯ್ಯ ಕಾಲೇಜಿನ ಹೆಡ್‌ಮಾಸ್ತರನ್ನು ಕಂಡಾಗ ಆ ವಾಕ್ಯಗಳನ್ನು ಉಸಿರಲು ಸನ್ನದ್ಧರಾಗಿ ಬಂದಿದ್ದರು. ಆದರೆ ಹೆಡ್‌ಮಾಸ್ತರ್ ಕೂಡ ಕೇರಳದವರೇ! ಕಸ್ತೂರಿಗಳನ್ನು ಕಾಣುತ್ತಲೇ ಅವರು ಮಲೆಯಾಳ ಮಾತನಾಡಲು ಪ್ರಾರಂಭಿಸಿದರಂತೆ. ತಾನು ಕಲಿತುದುದು ವ್ಯರ್ಥವಾಯಿತು ಎಂದು ಕೆಲವು ದಿವಸ ಇವರು ಪೇಚಾಡಿದ್ದೂ ಉಂಟು.

ಮೈಸೂರಿನಲ್ಲಿ ತಳವೂರಿದ ಮೇಲೆ ಇವರಿಗೆ ಅರ್ಥವಾಯಿತು. ತಮಗೆ ಯಾರೋ ಕಲಿಸಿಕೊಟ್ಟ ಕನ್ನಡವು ಬೈಗಳಗೊಂಚಲೆಂಬುದು. ಇದನ್ನೂ ಶ್ರೀಯುತರು ನನ್ನೊಡನೆ ತಿಳಿಸಿದ್ದರು.

ಮೈಸೂರಿನಲ್ಲಿ ಕಸ್ತೂರಿಯವರು ಮೈಸೂರಿನವರೇ ಆಗಿ ಹೋದರು. ಆಟ ಊಟ ಕಲಿತರು. ಹಿಂದೆ ಬಂದರೆ ಒದೆಯಬೇಡಿ, ಮುಂದೆ ಬಂದರೆ ಹಾಯಬೇಡಿ ಎಂಬ ಪದ್ಯವನ್ನೂ ಕಲಿತರು. ಮಹಾರಾಜ ಕಾಲೇಜಿನ ಕನ್ನಡ ಅಧ್ಯಾಪಕರ ಸಹವಾಸ ಇವರಿಗೆ ಲಭಿಸಿತು. ನಾರಣಪ್ಪ, ಹರಿಹರ, ಪಂಪ ಮುಂತಾದ ಕವಿಗಳೂ ಇವರಿಗೆ ಒಲಿದರು. ನಾ ಕಸ್ತೂರಿಯವರು ಅಡಿಯಿಂದ ಮುಡಿತನಕ ಕನ್ನಡವಾಗಿ ಹೋದರು.

ಕಬ್ಬು ಬೆಳೆಯುತ್ತಾ ಬೆಳೆಯುತ್ತಾ ಸಿಹಿಯಾಗಿ ಬೆಳೆಯುವುದು, ದವನ ಅದಿ

ಯಿಂದ ಮುಡಿತನಕ ಗಮಗಮವಾಗಿ ಬೆಳೆಯುವುದು. ಕಸ್ತೂರಿಯವರು ಹಾಸ್ಯರಸದ ಪಟಾವಳಿ ಕಬ್ಬಾಗಿ ಕರ್ನಾಟಕದಲ್ಲಿ ಬೆಳೆದರು. ನಗುವಿನ ಮರುಗವಾಗಿ ಮೈಸೂರಲ್ಲಿ ಬೇರುಬಿಟ್ಟು ಬೆಳೆದರು. ಕಸ್ತೂರಿಯವರು ಹಾಸ್ಯಪಟುವಾಗಿದ್ದಂತೆ ಲಾಸ್ಯಪಟುವೂ ಆಗಿದ್ದರು. ತಿಳಿಹಾಸ್ಯದ ಹಲವಾರು ಆಶುನಾಟಕಗಳನ್ನು ಇವರು ಕನ್ನಡದಲ್ಲಿ ಬರೆದರು. ಗಗ್ಗಯ್ಯನ ಗಡಿಬಿಡಿ, ವರಪರೀಕ್ಷೆ ಮುಂತಾದ ನಾಟಕಗಳನ್ನು ಬರೆದುದಲ್ಲದೆ ಇವನ್ನು ಆಡುವ ಗುಂಪನ್ನೂ ಬೆಳೆಸಿದರು. ಹುಡುಗರ ಜೊತೆ ತಾವೂ ಹುಡುಗರಾಗಿ ನಾಟಕದಲ್ಲಿ ಪಾತ್ರಧಾರಿಗಳಾಗುತ್ತಿದ್ದರು.

ಮೈಸೂರಿನ ಕೃಷ್ಣಮೂರ್ತಿಪುರದಿಂದ ಮೇಲಕ್ಕೆ ಲಕ್ಷ್ಮೀಪುರ ಬಡಾವಣೆ. ಕೃಷ್ಣಮೂರ್ತಿಪುರದಲ್ಲಿ ಕಸ್ತೂರಿಯವರ ಬಿಡಾರ. ಇದರ ಹೆಸರು ಕಲ್ಪತರು. ಈ ಹೆಸರಿಗೆ ಮರುಳಾಗಿ ಆಗಾಗ ಚಂದಾ ವಸೂಲು ಮಾಡಲು ಜನರು ಏನೇನೋ ನೆಪ ಹೇಳಿಕೊಂಡು ಇವರಲ್ಲಿಗೆ ಬರುತ್ತಿದ್ದರು. ಕಲ್ಪತರು ಒಳ್ಳೆಯ ಹೆಸರು ಎಂದು ಇವರನ್ನು ಹೊಗಳುತ್ತಿದ್ದರು. ಆದರೆ ಲಕ್ಷ್ಮೀಪುರ ಮುಂದೆ ಇದೆ ಎಂದು ಇವರು ಹೇಳಿ ತಾವೂ ನಕ್ಕು ಬಂದವರನ್ನೂ ನಗಿಸುತ್ತಿದ್ದರು.

ಪ್ರೊ|| ವೆಂಕಣ್ಣಯ್ಯನವರ ಕೃಪಾದೃಷ್ಟಿ ನಾ. ಕಸ್ತೂರಿಯವರ ಮೇಲೆ ಬಿದ್ದಿತು. ಪ್ರೊ|| ಕುವೆಂಪುರವರು ಇವರ ಸ್ನೇಹಿತರಾದರು. ಕೊನೆಗೆ ಕಸ್ತೂರಿಯವರು ಮಹಾರಾಜ ಕಾಲೇಜಿಗೆ ಚರಿತ್ರೆ ಅಧ್ಯಾಪಕರಾಗಿ ಆಗಮಿಸಿದರು. ಇವರ ಬರಹಗಳನ್ನು ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಿಸಿ, ವೆಂಕಣ್ಣಯ್ಯನವರು ಇವರ ಉತ್ಸಾಹ ಹೆಚ್ಚಿಸಿದರು.

ದಿ|| ಜಯಚಾಮರಾಜೇಂದ್ರ ಒಡೆಯರ್‌ರವರು ನಾ. ಕಸ್ತೂರಿಯವರ ವಿದ್ಯಾರ್ಥಿಗಳಾಗಿದ್ದರು. ಇವರ ಬರವಣಿಗೆಯ ಬಹುಭಾಗ ಸೃಷ್ಟಿಯಾದುದು ಇವರು ಮಹಾರಾಜ ಕಾಲೇಜಿನ ಅಧ್ಯಾಪಕರಾಗಿದ್ದಾಗಲೇ. ಮೈಸೂರಿನಲ್ಲಿ ಆಕಾಶವಾಣಿಯನ್ನು ರೂಪಿಸಿದ ಮಹಾಮಹಿಮರಲ್ಲಿ ನಾ. ಕಸ್ತೂರಿಯವರೂ ಒಬ್ಬರು. ಆಕಾಶವಾಣಿ ಎಂಬ ಮಾತನ್ನು ಸೃಷ್ಟಿಸಿದವರೂ ಇವರೇ.

ಕೆಲವುಕಾಲ ಕಸ್ತೂರಿಯವರು ಬೆಂಗಳೂರಿನ ಗೌರ್ನಮೆಂಟ್ ಕಾಲೇಜಿನಲ್ಲೂ ಇದ್ದರು. ನನಗೆ ಇವರ ಪರಿಚಯವಾದುದು ೧೯೫೦ರಲ್ಲಿ. ಆಗ ನಾನೂ ಬೆಂಗಳೂರಿನಲ್ಲಿ ಇವರ ಸಹೋದ್ಯೋಗಿಯಾಗಿದ್ದೆನು. ದಿನವೂ ಇವರ ಜೊತೆಯಲ್ಲಿ ನಾನು ನಗುವುದಕ್ಕಾಗೇ ಕೂರುತ್ತಿದ್ದೆನು. ಇವರು ಬಾಯಿ ತೆರೆದರೆ ಸಾಕು ಹಾಸ್ಯದ ಕಾರಂಜಿ ಚಿಮ್ಮುತ್ತಿದ್ದಿತು. "ನೋಡು ಬ್ರಹ್ಮಪ್ಪ, ನನಗೆ ಮೊನ್ನೆ ತುಂಬಾ ಭೇದಿಯಾಯಿತು. ಒಬ್ಬ ಆಯುರ್ವೇದದ ಪಂಡಿತರ ಬಳಿಗೆ ಹೋಗಿ ಹೇಳಿಕೊಂಡೆ. ಭೇದಿ ಮಾದರಿ ನೋಡಿದರೆ ಒಳ್ಳೆಯ ಔಷಧಿ ಕೊಡಬಹುದು. ಮಾದರಿ ತನ್ನಿ ಎಂದರು. ನಮ್ಮ ಮನೆ ಹತ್ತಿರವೇ ಇದ್ದಿತು. ಮನೆಗೆ ಬಂದೆ. ಭೇದಿಯ ಮಾದರಿಯನ್ನು ಒಂದು ಸೀಸೆಯಲ್ಲಿ ಹಾಕಿಕೊಂಡು ಪಂಡಿತರ ಬಳಿಗೆ ಹೋದೆ. ಆ ದಿನ ಭೇದಿಯಾಗಿ ನರಳುತ್ತಾ ಹತ್ತಾರು ಜನ ಬಂದಿದ್ದರು. ಎಲ್ಲರೂ ಮಾದರಿ ತಂದಿದ್ದರು. ನಿಮ್ಮ ನಿಮ್ಮ ಸೀಸೆಯ ಮೇಲೆ ಹೆಸರನ್ನು ಬರೆದು ಹೋಗಿ. ಪರೀಕ್ಷೆ ಮಾಡಿ ಸಂಜೆಯ ಹೊತ್ತಿಗೆ ಔಷಧಿ ಕೊಡುವೆನು ಎಂದು ಪಂಡಿತರು ಹೇಳಿದರು. ನನ್ನ ಸೀಸೆಯ ಮೇಲೆ ನಾನು ಹೆಸರನ್ನು ಬರೆದೆ. ಆಗ ನನ

ಒಂದು ಯೋಚನೆ ಬಂದಿತು. ಕಸ್ತೂರಿ ಅಂತ ಬರೆದಿರುವೆನು. ಪಂಡಿತರು ಒಳಗಿರುವುದನ್ನು ಕಸ್ತೂರಿ ಎಂದು ಭ್ರಮಿಸಿ ಔಷಧಿಗೆ ಹಾಕಿದರೆ ಗತಿ? ನಾನು ಬರುವಾಗ ಪಂಡಿತರಿಗೆ ನನ್ನ ಸೀಸೆ ನೋಡಿಸಿ, ಒಳಗಿರುವುದು ಕಸ್ತೂರಿಯಲ್ಲ ಸ್ವಾಮಿ ಅದು ಭೇದಿಯ ಮಾದರಿ ಎಂದು ಹೇಳಿ ಬರಬೇಕಾಯಿತು" ಎಂದು ನಾ. ಕಸ್ತೂರಿಯವರು ಅವರ ಹಾಸ್ಯದ ಕಾರಂಜಿ ಚಿಮ್ಮಿಸಿ ತಾವೂ ನಕ್ಕರು, ಕೇಳಿ ನಾನೂ ನಕ್ಕೆ.

೧೯೫೦ರಲ್ಲಿ ನಾ. ಕಸ್ತೂರಿಯವರನ್ನು ಉಪಪ್ರಾಧ್ಯಾಪಕರೆಂದು ಕರೆದು ದಾವಣಗೆರೆಯ ಧ.ರ.ಮು. ಕಾಲೇಜಿಗೆ ಸೂಪರಿಂಟೆಂಡೆಂಟ್ (ಪ್ರಿನ್ಸಿಪಾಲ್) ಆಗಿ ವರ್ಗ ಮಾಡಿದರು. ನನ್ನನ್ನೂ ದಾವಣಗೆರೆಗೆ ವರ್ಗ ಮಾಡಿದರು. ಮೂರು ನಾಲ್ಕು ವರ್ಷ ನಾನು ಅವರ ಜೊತೆಯಲ್ಲಿದ್ದೆನು. ಅವರ ಅಂತರಂಗದ ಬಳಗದಲ್ಲಿ ಪ್ರಮುಖನಾಗಿದ್ದೆನು. ಅವರಿಗೆ ಭಾಷಣದ ತೆವಲು ಹೆಚ್ಚು. ಯಾರೂ ಕರೆಯದಿದ್ದರೆ ಇವರೇ ಒಂದು ತಾಲ್ಲೂಕಿನ ತಹಸೀಲ್ದಾರರಿಗೆ ಪತ್ರ ಬರೆದು ಬರುವ ಭಾನುವಾರದಂದು ನಿಮ್ಮೂರಿಗೆ ಸ್ನೇಹಿತರೊಡನೆ ಬರುವೆನು. ಅಲ್ಲಿ ಒಂದು ಭಾಷಣದ ಏರ್ಪಾಟು ಮಾಡಿ ಎಂದು ಸೂಚಿಸುತ್ತಿದ್ದರು. ಸುತ್ತಮುತ್ತ ಇದ್ದ ತಹಸೀಲ್ದಾರರೆಲ್ಲರೂ ಇವರ ಶಿಷ್ಯರಾಗಿದ್ದರು. ಅವರು ಭಾಷಣದ ಏರ್ಪಾಟು ಮಾಡುತ್ತಿದ್ದರು. "ನಮ್ಮ ಒತ್ತಾಯಕ್ಕೆ ಮಣಿದು ನಮ್ಮ ಗುರುಗಳು ಬಂದಿರುವರೆಂದು" ಸ್ವಾಗತದಲ್ಲಿ ತಹಸೀಲ್ದಾರರು ಹೇಳುತ್ತಿದ್ದರು. ಆಗ ಕಸ್ತೂರಿಯವರಿಗೆ ಆನಂದವೋ ಆನಂದ. ಇವರು ಭಾಷಣ ಮಾಡುತ್ತಾ "ತಹಸೀಲ್ದಾರರು ನನ್ನ ಅಚ್ಚುಮೆಚ್ಚಿನ ಶಿಷ್ಯರು. ಬಹುದಿನದಿಂದ ನನ್ನನ್ನು ಇಲ್ಲಿಗೆ ಬರಲು ಪೀಡಿಸುತ್ತಿದ್ದರು ಎಂದು ಭಾಷಣವನ್ನು ಪ್ರಾರಂಭಿಸುತ್ತಿದ್ದರು. ಈ ಎಲ್ಲ ಸಂದರ್ಭಗಳಲ್ಲೂ ಸಾಕ್ಷಿಯಾಗಿ ನಾನಿರುತ್ತಿದ್ದೆನು.

ದಾವಣಗೆರೆ ಕಾಲೇಜಿನಲ್ಲಿ ಕಸ್ತೂರಿಯವರು ಆಫೀಸ್ ರೂಂನಲ್ಲಿ ಕುಳಿತಿರುತ್ತಿದ್ದರು. ಇವರನ್ನು ಕಾಣಲು ಬಂದವರು ಇವರ ಎದುರುಭಾಗದ ಕುರ್ಚಿಗಳಲ್ಲಿ ಕೂರುತ್ತಿದ್ದರು. ಮೇಜಿನ ಒಂದು ಕಡೆ ಕಸ್ತೂರಿಗಳು, ಇನ್ನೊಂದು ಕಡೆ ಬಂದವರು. ಬಂದವರ ಕೈಗೆ ಎಟಕುವಂತೆ ಒಂದು ಕಾಲಿಂಗ್ ಬೆಲ್ಲನ್ನು ಇವರು ಬೇಕಂತಲೇ ಇರಿಸುತ್ತಿದ್ದರು. ಬಂದವರು ಮಾತಾಡುತ್ತಾ ಅವರಿಗೆ ಅರಿವಿಲ್ಲದೆ ಕಾಲಿಂಗ್‌ಬೆಲ್ಲಿನ ಮೇಲೆ ಕೈಯಿಡುತ್ತಿದ್ದರು. ಯಂತ್ರ ತನ್ನ ಪಾಡಿಗೆ ತಾನು ಘಂಟೆ ಬಾರಿಸುತ್ತಿದ್ದಿತು. ಕೂಡಲೆ ಅಟೆಂಡರ್ ಅನಂತಪ್ಪ ಕಾಣಿಸಿಕೊಳ್ಳುತ್ತಿದ್ದ. ಕಸ್ತೂರಿಯವರು ನಗುತ್ತಾ "ಅನಂತಪ್ಪ, ಈ ಸಾಹುಕಾರರು ಬೆಲ್ಲು ಮಾಡಿರುವರು. ಸ್ವೀಟು ಕಾರ ಕಾಫಿ ಅವರಿಗೆ ಬೇಕಾಗಿರಬಹುದು. ದುಡ್ಡು ಕೊಡುವರು. ತಂದುಬಿಡು. ಹಾಗೇ ಎರಡು ಹೆಚ್ಚಿಗೆ ತಾ. ಬರುತ್ತಾ ಬ್ರಹ್ಮಪ್ಪನನ್ನು ಕರೆದುಕೊಂಡು ಬಾ" ಎನ್ನುತ್ತಿದ್ದರು. ಬಂದವರು ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಸ್ವೀಟು ಕಾರ ಕಾಫಿಗಾಗಿ ಹಣ ಕೊಡುತ್ತಿದ್ದರು. ಇಂಥ ಘಟನೆಗಳು ಆಗಾಗ ನಡೆಯುತ್ತಲೇ ಇದ್ದವು. ಹಾಸ್ಯಕ್ಕಾಗೇ ಕಸ್ತೂರಿಯವರು ಈ ಪಟ್ಟು ಹಾಕುತ್ತಿದ್ದರು.

ಕಸ್ತೂರಿಯವರಿಗೆ ಕಾಯಿಲೆ ಬಂದರೆ ಅವರ ತಾಯಿಯವರು "ಕಸ್ತೂರಿ, ಹಾಳು ಔಷಧಿ ಬೇಡ. ಒಂದು ನಾಟಕ ಆಡಿಸು. ಕಾಯಿಲೆ ಹೇಳದೇ ಕೇಳದೆ ಓಡಿಹೋಗು

ವುದು" ಎನ್ನುತ್ತಿದ್ದರು. ಇವರು ನಾಟಕ ಆಡಿಸಿ ಕಾಯಿಲೆಯನ್ನು ವಾಸಿ ಮಾಡಿಕೊಳ್ಳುತ್ತಿದ್ದರು.

ಕೊರವಂಜಿಯನ್ನು ಬದುಕಿಸಲು ಹೆಣಗಾಡಿದವರಲ್ಲಿ ನಾ. ಕಸ್ತೂರಿಯವರೂ ಪ್ರಮುಖರು. ಹಲವಾರು ಕಾವ್ಯನಾಮಗಳಲ್ಲಿ ಇವರು ಕೊರವಂಜಿಗೆ ಕೈತುತ್ತು ಹಾಕುತ್ತಿದ್ದರು. ಆದರೂ ಕೊರವಂಜಿ ಮಾಸಿಕ ಸತ್ತುಹೋಯಿತು.

ನಾ. ಕಸ್ತೂರಿಯವರ ಅನರ್ಥಕೋಶವು ಹಾಸ್ಯದ ಗುಳಿಗೆಗಳ ಕೋಶಾಗಾರವಾಗಿದೆ. ಪ್ರತಿಯೊಂದು ಮಾತಿಗೂ ಹಾಸ್ಯದ ಹೊದಿಕೆ ತೊಡಿಸಿ ಇವರು ಮೆರೆಸಿರುವರು. ಇವರು ಮುಟ್ಟಿದ್ದೆಲ್ಲ ಹಾಸ್ಯ, ಇವರು ಮೂಸಿದ್ದೆಲ್ಲ ಹಾಸ್ಯವಾಗಿ ಕನ್ನಡದ ಹಾಸ್ಯದ ಕಣಜ ತುಂಬುವಂತಾಯಿತು. ಸುಮಾರು ಐವತ್ತು ಪುಸ್ತಕಗಳನ್ನು ಇವರು ಬರೆದಿರುವರು. ಇವರು ನಾಟಕಕಾರರು. ಇವರು ಕಾದಂಬರಿಕಾರರು. ಇವರು ಇತಿಹಾಸ ವಚನಕಾರರು. ಇವರು ಪ್ರಬಂಧಕಾರರು. ಇವರ ಆಶು ನಾಟಕಗಳಲ್ಲಿ ಬಹುಭಾಗ ಮಿಂಚಿ ಮಿಂಚಿ ಮಾಯವಾದವು. ಕನ್ನಡಕ್ಕೆ ಒಬ್ಬನೇ ಕೈಲಾಸಂ ಎನ್ನುವಂತೆ ಕನ್ನಡಕ್ಕೆ ಒಬ್ಬನೇ ಕಸ್ತೂರಿ ಎನ್ನಬಹುದು.

೧೯೫೫ರಲ್ಲಿ ಇವರು ನಿವೃತ್ತರಾದರು. ಆಂಧ್ರಪ್ರಾಂತ್ಯದ ಪುಟ್ಟಪರ್ತಿಯಲ್ಲಿ ಸತ್ಯಸಾಯಿಬಾಬರವರ ಪ್ರಶಾಂತನಿಲಯದ ಆವರಣದಲ್ಲಿ ಕಸ್ತೂರಿಯವರು ಒಂದು ಮನೆ ಕಟ್ಟಿಸಿಕೊಂಡರು. ಅಲ್ಲೇ ಕೊನೆತನಕ ತಂಗಿದರು. ಇವರಿಗೆ ಒಂದು ಗಂಡು ಒಂದು ಹೆಣ್ಣು. ಚಿಕ್ಕ ಸಂಸಾರ. ಬಾಬರವರ ಆಧ್ಯಾತ್ಮಿಕ ಪ್ರಭಾವ ಇವರ ಮೇಲೆ ಮೋಡಿ ಹಾಕಿತು. ಬಾಬರವರು ನಡೆಸುತ್ತಿದ್ದ ಸನಾಥ ಸಾರಥಿ ಮಾಸಿಕಕ್ಕೆ ಇವರು ಸಂಪಾದಕರಾದರು. ಬರುಬರುತ್ತಾ ಬಾಬರವರ ಅಂತರಂಗವೇ ಇವರಾದರು. ೧೪-೮-೧೯೮೭ ರಂದು ಇವರು ಪುಟ್ಟಪರ್ತಿಯಲ್ಲಿ ನಿಶ್ಚಿಂತರಾಗಿ ಕೊನೆಯುಸಿರನ್ನು ಎಳೆದರು. ಅವರು ಹರಡಿದ ಪರಿಮಳ ಎಂದೆಂದಿಗೂ ಕನ್ನಡದ ಪರಿಮಳವಾಗಿ ಜೀವಂತವಾಗಿರುವುದು!

ಮಂದಿ ಹಂದಿಯಲ್ಲ

ಉಪರಕೆ ಹಸಿವೆಂಪು ಬಂಡಿ ಬಂಡಿ ಅನ್ನ ತಿಂಪರೆ
ಬಂದೇ ಬರುವುದು ಹೊಟ್ಟೆ ನೋವಿನ ತೊಂದರೆ;
ಎಂದೂ ಮಿತಿ ಅರಿತವರಿಗಿರದು ಉದರ ಶೂಲೆ
ಹಂದಿಯಾಗಬಾರದೋ ಮಂದಿ...ಮಣ್ಣಿನ ಮಗ.

ದೊಡ್ಡರಂಗೇಗೌಡ

‘ಕಲ್ಪತರು’ವಿನ ಕಸ್ತೂರಿ

ರಾ. ವೆಂ. ಶ್ರೀನಿವಾಸಮೂರ್ತಿ

ಮೈಸೂರು ನಗರದ ಕೃಷ್ಣಮೂರ್ತಿಪುರಂ ಬಡಾವಣೆಯ ಕೆನರಾ ಬ್ಯಾಂಕ್ ಇರುವ ಜಾಗ ಹಿಂದೆ ಇದ್ದ ಕಸ್ತೂರಿ ನಿವಾಸದ ತೋಟವಾಗಿತ್ತು. ಕಾಂತರಾಜ ಅರಸ್ ರಸ್ತೆಯ ಮೂಲಕ ಮನೆಗೆ ಪ್ರವೇಶ. ಗೇಟಿನ ಒಂದು ಕಂಬದ ಮೇಲೆ ‘ಕಲ್ಪತರು’ ಎಂದು ಕೆತ್ತಿದೆ. ಅನೇಕ ವರುಷ ನಾ. ಕಸ್ತೂರಿಯವರು ಅಲ್ಲಿ ವಾಸವಾಗಿದ್ದರು.

ವಯಸ್ಕರ ಶಿಕ್ಷಣದಲ್ಲಿ ಅವರಿಗಿದ್ದ ಆಸಕ್ತಿ, ನಾಟಕ ಕಲೆ ಸಾಹಿತ್ಯಗಳಲ್ಲಿ ನನಗಿದ್ದ ಗೀಳು ಇವುಗಳಿಂದ ಆಗಾಗ ಅವರ ಮನೆಗೆ ಹೋಗುವ ಮತ್ತು ಅವರೊಡನೆ ಕುಳಿತು ಅನೇಕ ರಸನಿಮಿಷಗಳನ್ನು ಕಳೆಯುವ ಸದವಕಾಶ ನನಗೆ ಒದಗುತ್ತಿತ್ತು.

ಸಂಪಗೆಯ ಕಂಪಿನಂತೆ, ಮಲ್ಲಿಗೆಯ ಪರಿಮಳದ ಹಾಗೆ–ಹತ್ತಿರ ಕುಳಿತರೆ ಸಾಕು. ಕಸ್ತೂರಿಯ ಹಾಸ್ಯ ಅಲೆಯಲೆಯಾಗಿ ಬಂದು ಕಚಗುಳಿ ಇಡುತ್ತಿತ್ತು. ಗೇಟಿನ ಬಳಿಯೇ ಅದರ ಅನುಭವ !

ಮನೆಗೆ ಇಟ್ಟಿರುವ ‘ಕಲ್ಪತರು’ ಹೆಸರು ನೋಡಿದಾಗ ಅವರ ವಿವರಣೆ : “ಮುಂದೆ ನಮ್ಮ ಮಕ್ಕಳು ಕನ್ನಡದ ಜೊತೆ ಹಿಂದಿ ಕಲೀಬೇಕಾಗುತ್ತೆ. ಆದ್ದರಿಂದಲೇ ಕಲ್ಲು–ಪತ್ಥರು ಎರಡನ್ನೂ ಸೇರಿಸಿ ‘ಕಲ್ಪತರು’ ಎಂದಿಟ್ಟಿದ್ದೇನೆ” ಎನ್ನುತ್ತಿದ್ದರು.

*　　*　　*

ನಾಟಕ ಬರೆಯುವುದು, ನಿರ್ದೇಶಿಸುವುದು, ನಟಿಸುವುದು ಎಂದರೆ ಅವರಿಗೆ ಪ್ರಾಣ. ಅವರೊಡನೆ ಅಭಿನಯಿಸುವ ಅವಕಾಶ ನನಗೆ ಅನೇಕ ಬಾರಿ ಒದಗಿತ್ತು.

ವಯಸ್ಕರ ಶಿಕ್ಷಣ ಪ್ರಚಾರ ಕಾರ್ಯದಲ್ಲಿ ನಾಟಕ ಕಲೆಯನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದರ ಬಗ್ಗೆ ಅವರು ಅನೇಕ ಪ್ರಯೋಗಗಳನ್ನು ಮಾಡಿದರು. ‘ಮಂಕಾಸುರ ವಧೆ’, ‘ಏಕಚಕ್ರ’ ಮುಂತಾದ ಅನೇಕ ನಾಟಕಗಳನ್ನು ಬರೆದು, ಸ್ನೇಹಿತ ಕಲಾವಿದರೊಡನೆ ಹಳ್ಳಿಗಳಿಗೆ ಹೋಗಿ ಅಭಿನಯಿಸಿದರು. ಅವರಿಗೆ ಸಹಾಯಕ

ರಾಗಿ ಒಳ್ಳೊಳ್ಳೆಯ ಕಲಾವಿದರೂ ಇದ್ದರು. ಗೆಳೆಯರಾದ ಸಿ. ಬಿ. ಜಯರಾವ್, ನಂಜಪ್ಪ, ಎಚ್. ಕೆ. ರಂಗನಾಥ್, ವಾಮನರಾವ್, ಶ್ರೀಕಂಠಯ್ಯ, ಎಂ. ವಿ. ರಾಜಗೋಪಾಲ್, ಜಿ. ವೆಂಕಟಸುಬ್ಬಯ್ಯ, ಹೆಚ್. ಎಸ್. ವೆಂಕಟರಾವ್ ಮುಂತಾದವರು ಅನೇಕ ನಾಟಕಗಳಲ್ಲಿ ಭಾಗವಹಿಸುತ್ತಿದ್ದರು.

ಒಂದು ದಿನ ನಂಜನಗೂಡಿನ ಹತ್ತಿರ ಒಂದು ಹಳ್ಳಿಯಲ್ಲಿ 'ಲಂಕಾದಹನ' ನಾಟಕ ಆಡಿದೆವು. ಈಗಿನ ಹಾಗೆ ಆಗ ವಯಸ್ಕರ ಶಿಕ್ಷಣ ಕಾರ್ಯಕರ್ತರಿಗೆ ಮೋಟಾರು ವಾಹನ ಇರಲಿಲ್ಲ. ಬಸ್ಸು ಅಥವಾ ಎತ್ತಿನ ಗಾಡಿ. ನಾಟಕ ಬೆಳಗಿನ ಜಾವ ಮುಗಿಯಿತು. ಬಣ್ಣ ಹಾಕಿಕೊಂಡಿದ್ದ ರಾಮ, ಲಕ್ಷ್ಮಣ, ಸೀತೆ, ರಾವಣ, ಆಂಜನೇಯ ಇವರುಗಳಿಗೆ ಸಾಕಷ್ಟು ನೀರು ಒದಗದೆ ಬಣ್ಣ ತೊಳೆದುಕೊಳ್ಳಲಾಗಲಿಲ್ಲ. ಬೆಳಗಾಗುವುದರೊಳಗೆ ಊರು ಸೇರಿಕೊಂಡರಾಯಿತು ಎಂದು ನಾವೆಲ್ಲ ನಾಟಕದ ಉಡುಪಿನಲ್ಲಿಯೇ ಬಿಲ್ಲು, ಬಾಣ, ಗದೆ ಇತ್ಯಾದಿ ಹಿಡಿದುಕೊಂಡು ಕಮಾನಿಲ್ಲದ ಎತ್ತಿನ ಗಾಡಿಯಲ್ಲಿ ಕುಳಿತು ಊರಿಗೆ ವಾಪಸು ಹೊರಟೆವು. ಗಾಡಿ ವೇಗವಾಗಿ ಹೋಗುತ್ತಿದ್ದರೂ ನಸುಕಿನಲ್ಲೇ ಅನೇಕ ಜನ ನಮ್ಮನ್ನು ನೋಡಿ ನಕ್ಕರು. ನಮಗೂ ನಗು!

* * *

ಪೌರಾಣಿಕ ವಸ್ತುಗಳನ್ನು ಬಳಸಿಕೊಂಡು ಅಕ್ಷರ ಪ್ರಚಾರಕ್ಕೆ ಸಹಾಯವಾಗುವಂತಹ ಅನೇಕ ನಾಟಕಗಳನ್ನು ಅವರು ರಚಿಸಿದರು.

'ನವರಾತ್ರಿ–ಕೆಂಪ ಮೈಸೂರಿಗೆ ಹೋದದ್ದು' ಅವರು ವಯಸ್ಕರಿಗಾಗಿ ಬರೆದ ಕೃತಿಗಳಲ್ಲಿ ತುಂಬ ಜನಪ್ರಿಯವಾದುದು.

ಹಳ್ಳಿಗರು ಅಕ್ಷರಸ್ಥರಾಗಬೇಕು, ವಿದ್ಯಾವಂತರಾಗಬೇಕು, ಅವರ ಬೇಸಾಯ, ತೋಟಗಾರಿಕೆ, ಗೃಹಕೈಗಾರಿಕೆ ಎಲ್ಲ ಉತ್ತಮಗೊಳ್ಳಬೇಕು ಎಂಬ ಕಳಕಳಿ ಅವರಿಗೆ ಬಹಳ. ಮೈಸೂರಿನ ಅಕ್ಷರ ಪ್ರಚಾರ ಸಮಿತಿಗೆ, ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಗೆ ಅವರ ಕೊಡುಗೆ ಅಮೂಲ್ಯವಾದುದು.

* * *

ಮೈಸೂರಿನ 'ಆಕಾಶವಾಣಿ' ಹಳ್ಳಿಹಳ್ಳಿಯಲ್ಲಿಯೂ ಧ್ವನಿಸಿದಾಗ ಜನಪ್ರಿಯವಾದುದು, ರೈತರ ಕಾರ್ಯಕ್ರಮ. ದಿನವೂ ಸಂಜೆ ರೈತರಿಗೆ ಬೇಕಾದ ಅನೇಕ ವಿಷಯಗಳ ಮೇಲೆ ಸ್ವಾರಸ್ಯವಾಗಿ ಸಂಭಾಷಿಸುತ್ತಿದ್ದವರು ಕಸ್ತೂರಿ ಮತ್ತು ನಂಜಪ್ಪ.

* * *

ಕನ್ನಡ ಪದಗಳ ಸಂಪತ್ತಿಗೆ ಅನೇಕ ಹೊಸ ಪದಗಳನ್ನು ಸೇರಿಸಿ ಕೊಟ್ಟವರು, ಹಳೆಯ ಪದಗಳಿಗೆ ಹೊಸ ಹೊಸ ಅರ್ಥ, ಅರ್ಥ ವಿವರಣೆ ಕೊಟ್ಟವರು ಕಸ್ತೂರಿ. ಅವರ 'ಅನರ್ಥಕೋಶ' ಕೃತಿಯೊಂದೇ ಸಾಕು–ಆ ಅಮೂಲ್ಯ ಕೊಡುಗೆಯನ್ನು ಸಾರುವುದಕ್ಕೆ.

ಡಾ॥ ಶಿವರಾಂ ಅವರು ಪ್ರತಿ ತಿಂಗಳೂ ಪ್ರಕಟಿಸುತ್ತಿದ್ದ 'ಕೊರವಂಜಿ'ಯ ಬುಟ್ಟಿಯಲ್ಲಿ 'ನಾಕ' ಎಲ್ಲಿದೆ, ಎಂದು ಹುಡುಕಿ ಓದುವವರು ಬಹಳ ಜನ ಇದ್ದರು. ನಲವತ್ತರ ದಶಕದಲ್ಲಿ ಶಿವರಾಮ ಕಾರಂತರ 'ಸಿರಿಗನ್ನಡ ಅರ್ಥಕೋಶ' ಪ್ರಕಟವಾಗಿ, ಕಾದಂಬರಿಯ

ಕಾರಂತರು ಅರ್ಥಕೋಶದ ಕಾರಂತರಾಗಿಯೂ ಪ್ರಸಿದ್ಧರಾಗಿದ್ದರು. ಆದ್ದರಿಂದಲೇ ಕಸ್ತೂರಿಯವರು 'ಖಾರಾಂತ' ಎಂಬ ಹೆಸರಿನಲ್ಲಿ 'ಅನರ್ಥಕೋಶ'ವನ್ನು ಭಾಗಭಾಗವಾಗಿ 'ಕೊರವಂಜಿ' ಮಾಸಪತ್ರಿಕೆಯಲ್ಲಿ ಬರೆದರು. ಅದು ಆಮೇಲೆ ಸಂಪೂರ್ಣವಾಗಿ ಪುಸ್ತಕ ರೂಪದಲ್ಲಿ ಪ್ರಕಟವಾಯಿತು. ಈ ರೀತಿಯ ಸಾಹಿತ್ಯ ಬೇರೆ ಭಾರತೀಯ ಭಾಷೆಗಳಾವುದರಲ್ಲಿಯೂ ಇಲ್ಲವೆಂಬುದು ಅನೇಕ ವಿದ್ವಾಂಸರ ಅಭಿಪ್ರಾಯ.

'ಅನರ್ಥಕೋಶ'ದ ಕೆಲವು ಪದಗಳನ್ನು ಇಲ್ಲಿ ನೋಡಬಹುದು :

ಅಕ್ರೂರ–ರಿಟೈರಾದ ಉನ್ನತಾಧಿಕಾರಿ

ಅಗಸ–ನಮ್ಮ ಬಟ್ಟೆಗಳಿಂದ ಕಲ್ಲು ಬಂಡೆಗಳನ್ನು ಒಡೆಯಲು ಹಗಲೆಲ್ಲ ಪ್ರಯತ್ನಿಸುವ ಧೀರ, ಅರಿವೆಯನ್ನು ಇವನು ಹರಿವೆ ಎಂತಲೇ ಹೇಳುವನು; ಹೊಸದರಲ್ಲೇ ಅಗಸ ಹೊಳೆಯಲ್ಲಿ ತೇಲಿಸಿದ (ಗಾದೆ)

ಅಗ್ನಿತೀರ್ಥ–ವ್ಹಿಸ್ಕಿ

ಅಗ್ನಿಮಿತ್ರ–ಪೆಟ್ರೋಲ್

ಅಚ್ಚಾತುರ್ಯ–ಅಚ್ಚು ಮಾಡುವಾಗಿನ ಚಾತುರ್ಯ ಬರಹಗಾರನ ತಪ್ಪುಗಳನ್ನು ಸರಿಪಡಿಸುವ ಜಾಣತನ.

ಅಡುಗೆ– ಸಂಪಾದಿಸಿ ತಂದದ್ದನ್ನು ಮನೆಯಲ್ಲಿ ಹಾಳುಮಾಡುವ ವಿಧಾನಗಳಲ್ಲೊಂದು.

ಅಧ್ಯಾಪಕ–ಶಾಲೆ ಎಂಬ ಗೊಂಡಾರಣ್ಯದಲ್ಲಿ ರೋದನ ಮಾಡುವವ

ಅಮಲುದಾರ–ಅಮಲು ಹತ್ತಿದವ

ಅಮ್ಮಾವರು–ಮನೆ ಯಜಮಾನರು

ಅಶ್ವಗಂಧಿ–ಕುದುರೆ ಜೂಜುಗಳಲ್ಲೇ ಸದಾ ನಿರತನಾಗಿರುವ ಒಂದು ಬಗೆಯ ಮನುಷ್ಯ

ಆಕಾಶಪುರಾಣ–ರೇಡಿಯೊ ವಾರ್ತೆ

ಆಫೀಸ್–ಮನೆ ತಾಪತ್ರಯಗಳನ್ನೆಲ್ಲ ಮರೆತು ನೌಕರರು ನಿದ್ದೆ ಮಾಡುವ ಸ್ಥಳ.

ಆಯಿತ್ವಾರ–ವಾರದ ಕೆಲಸಗಳೆಲ್ಲ ಆಯಿತು ಎಂದೆನಿಸುವ ವಾರ.

ಇನ್ಶೂರೆನ್ಸ್ ಏಜೆಂಟ್–'ಜಾತಸ್ಯ ಮರಣಂ ಧ್ರುವಂ' ಎಂದು ನಮಗೆ ಪದೇ ಪದೇ ನೆನಪು ಮಾಡಿಕೊಡುವವನು.

ಉತ್ತರಕ್ರಿಯೆ–ಪರೀಕ್ಷೆಯಲ್ಲಿ ಉತ್ತರ ಬರೆಯುವ ಕೆಲಸ.

ಎಕ್ಕಡ–ನಾವು ಹೋದ ಕಡೆಯಲ್ಲೆಲ್ಲ ನಮ್ಮ ಪಾದ ಹಿಡಿದು ಬರುವ ಅವುಳಿ–ಜವುಳಿ.

ಓಟು–ಐದು ವರ್ಷಕೊಮ್ಮೆ ಘನವಾಗುವ ವಸ್ತು.

ಔಷಧಿ–ಡಾಕ್ಟರುಗಳ ರಂಗೋದಕ

ಕರತಲಾಮಲ–ಲಂಚ

ಕಾರುಬತ್ತ್ಯ–ಮಾವನ ಕಾರಿನ ಮೇಲೆ ಅಳಿಯನ ಪಾರುಪತ್ಯ.

ಕುಕ್ಕ–ತಪ್ಪಲೆ ಮುಚ್ಚಳಗಳನ್ನು ಎತ್ತಿ ಕುಕ್ಕುವುದರಿಂದ ಈತನಿಗೆ ಈ ಹೆಸರು.

ಕುದುರೆ–ಇದನ್ನು ಬರೆಯುವಾಗ ಎರಡು ಕೊಂಬು ಸೇರಿಸಬೇಕು.

ಗಂಡಾಂತರ–ವಿವಾಹ ವಿಚ್ಛೇದನ (ಹೆಂಡತಿಯ ದೃಷ್ಟಿಯಲ್ಲಿ)

ಗುಮಾಸ್ತೆ–ಸಂಬಳದಲ್ಲಿ ಬಿದ್ದೊದ್ದಾಡುವ ನೊಣ.

ಗ್ರಂಥ–ಕಟ್ಟಿ ಮಡುಗಬೇಕಾದ್ದು.

ಚಿರಋಣಿ–ಸಾಲವನ್ನು ತೀರಿಸಲಾರದವನು.

ಛತ್ರಪತಿ–ಕೊಡೆ ಹಿಡಿದಿರುವವನು ಅಥವಾ ಛತ್ರದ ಪಾರು ಪತ್ಯಗಾರ.

ಜೀಪಿಸು–ಜೀಪಿನಲ್ಲಿ ಓಡಾಡುವುದು.

ಜೂ–ಸಿಕ್ಕಿಬಿದ್ದ ಪ್ರಾಣಿಗಳನ್ನು ಸಿಕ್ಕಿ ಬೀಳದ ಪ್ರಾಣಿಗಳು ನೋಡಿ ನಲಿಯಲು ಮಾಡಿರುವ ಸ್ಥಳ.

ಟಂಕಸಾಲೆ–ಸರಕಾರದ ಆತಂಕಗಳನ್ನೆಲ್ಲ ಪರಿಹರಿಸುವ ಸಂಸ್ಥೆ.

ತಿರುಪೆ–ಇಂಡಿಯಾ ದೇಶದ ಅತ್ಯಂತ ಜನಪ್ರಿಯ ಕೈಗಾರಿಕೆ.

ತೀರ್ಥಯಾತ್ರೆ–ಪಡಖಾನೆಯ ಕಡೆಗೆ ಪ್ರಯಾಣ.

ತುರೀಯಾನಂದ–ಕಜ್ಜಿಯನ್ನು ಕೆರೆದಾಗ ಆಗುವ ಆನಂದ.

ದಮಯಂತಿ–ಗಂಡನ ಅಡುಗೆ ಸಾಮರ್ಥ್ಯವನ್ನು ಮೆಚ್ಚಿ ಕೈ ಹಿಡಿದವಳು.

ನರೆಕೂದಲು–ಜೀವನ ಸಂಗ್ರಾಮದಲ್ಲಿ ಸೋತೆ ಎಂದು ಸೂಚಿಸಲು ನಾವು ಹಾರಿಸುವ ಬಿಳಿ ಬಾವುಟ.

ನೆಯ್ಗೆಯವರು–ಸಾಹಿತಿಗಳು

ಪಂಚಾಯ್ತಿ–ಐದು ಜನ ಸೇರಿದರೆ ಆಗುವ ವಾಗ್ವಾದ.

ಪತಿ–ದಂಪತಿಗಳಲ್ಲಿ 'ದಂ' ಕಳೆದುಕೊಂಡವನು.

ಬಿಕ್ಕಲು–ಮದುವೆಯಾದ ಗಂಡಸಿನ ಮನೆ ಮಾತು.

ಬಿಸಿಲುಗುದುರೆ–ನಮ್ಮೆಲ್ಲರ ವಾಹನ.

ಭೂತಚೇಷ್ಟೆ–ಪೋಲಿಂಗ್ ಬೂತ್ ಸುತ್ತ ಹುರಿಯಾಳು ಮಾಡುವ ಚೇಷ್ಟೆ.

ಭಯಸ್ಕರ ಶಿಕ್ಷಣ–ಪ್ರೈಮರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಕ್ರಮ.

ಮಂಗನ್ಯಾಸ–ಮೈಕೈ ಕೆರೆದುಕೊಳ್ಳುವುದು.

ಮದ್ಯಮಾವತಿ–ಮದ್ಯದ ಅಮಲಿನಲ್ಲಿ ಹಾಡುವ ಧಾಟಿ.

ಮಾನವಿಲ್ಲ–ಅನೇಕರ ಮನೆಗಳಿಗೆ ಇಡಬಹುದಾದ ಹೆಸರು.

ಮಾವಾಡಿಗ–ಮಾವನನ್ನು ತನ್ನ ಕೈಗೊಂಬೆಯಂತೆ ಆಡಿಸುವ ಅಳಿಯ.

ರೋಗಿ–ವೈದ್ಯರನ್ನು ಬದುಕಿಸುವ ಮಹಾತ್ಮ.

ವಯಸ್ಕಾಂತ–ಆಕರ್ಷಕವಾದ ತಾರುಣ್ಯ

ವೇದಿಕೆ–ಇದರ ಮೇಲೆ ಹತ್ತಿ ನಿಂತರೆ ಕೆಲವರಿಗೆ ತಲೆ ತಿರುಗುತ್ತದೆ.

ವೈದ್ಯ–ರೋಗಿಯ ಪರ್ಸು ಹಿಡಿದು ನೋಡಿ ಖಾಯಿಲೆ ಯಾವುದೆಂದು ನಿರ್ಧರಿಸಬಲ್ಲವ.

ವೃದ್ಧಾಶ್ರಮ–ಒಂದು ಪ್ರಾಣಿದಯಾಸಂಸ್ಥೆ.

ಸಭೆ–ಒಬ್ಬರ ಬುರುಡೆಗಾಗಿ ಕಾದು ಕುಳಿತಿರುವ ಬುರುಡೆಗಳ ಸಾಲು.

ಸಹಗಮನ–ಗಂಡನೊಂದಿಗೆ ವಾಕಿಂಗ್.

ಸಾಲಕ್ಷೇಪ–ಸಾಲದಿಂದಲೇ ಕಾಲಕ್ಷೇಪ.

ಸೂಜಿಗ–ಆಧುನಿಕ ಅಲೋಪತಿಯ ವೈದ್ಯ.

ಹನುಮಾನ–ಸೀತೆಯೋ, ಮಂಡೋದರಿಯೋ ಎಂದು ಕಪಿ ಸಂದೇಹ.

ಹರಿಹರ–ತುಂಬ ರಗಳೆ ಮಾಡಿದ ಕನ್ನಡದ ಕವಿ.

ಹಲ್ಲು–ಎದ್ದು ಬಿದ್ದು ಮತ್ತೆ ಎದ್ದು ಬೀಳುವ ನಮ್ಮ ಗೆಳೆಯರು. ಇವರು ತುಟಿ ಮೀರದಿದ್ದರೆ ಚೆನ್ನ.

ಹಾವಾಡಿಗ–ಪುಂಗಿ ಬಾರಿಸಿ ಮೇಲಧಿಕಾರಿಯನ್ನು ಒಲಿಸಬಲ್ಲ ನೌಕರ.

ಹಾಸಿಗೆ–ಶಕ್ತಿ ಕುಂದಿದಾಗ ನಾವು ಹಿಡಿಯುವ ವಸ್ತು.

ಹಿಂದಾಕ್ರಾಂತ–ಹಿಂದಿನದನ್ನು ನೆನೆದು ಅಳುವುದು.

ಹೀರೊ–ಹೀರಿ ಜೀವಿಸುವವ.

ಹುಚ್ಚಾರಣೆ–ಯದ್ವಾತದ್ವಾ ಉಚ್ಚಾರಣೆ.

ಹೇಮಕೂಟ–ಶ್ರೀಮಂತರ ಪಾರ್ಟಿ.

ಹೋಟಲು–ಕಾಸುಕೊಟ್ಟು ಬಾಯಿಲೆ ಕೊಂಡುಕೊಳ್ಳುವ ಸ್ಥಳ.

ಹೋಮಾಗ್ನಿ–ಮನೆಯೊಳಗೆ ಸೇದುಬತ್ತಿ ಸೇದುವುದು.

ಹೋಲ್ಡಾಲ್–ಹೊಟ್ಟೆ.

ಹೌದು–ಸಾಹೇಬರ ಪ್ರಶ್ನೆಗಳಿಗೆಲ್ಲ ಅವರು ಬಯಸುವ ಉತ್ತರ.

೧೭೬ ಪುಟಗಳ ಕೋಶದ ಸ್ಯಾಂಪಲ್ ಮಾತ್ರ ಮೇಲೆ ಕೊಟ್ಟಿರುವುದು. ನನಗೆ ತಿಳಿದಿರುವ ಮಟ್ಟಿಗೆ 'ಆಕಾಶವಾಣಿ' ಪದ ಕೂಡ ಅವರದೇ ಸೃಷ್ಟಿ.

* * *

ಜೀವನವನ್ನು ತುಂಬ ಹಗುರವಾಗಿ, ನಗುತ್ತ ನಗಿಸುತ್ತ ಕಳೆಯುತ್ತಿದ್ದ ಅವರಿಗೂ ವಿಧಿ ಎಡರು ತಂದೊಡ್ಡಿತು. ಕೈಗೆ ಬಂದ ಮಗ ಅದ್ರಿ ಕಣ್ಮರೆಯಾದದ್ದೇ ಅವರಿಗೆ ಬಲವಾದ ಆಘಾತವಾಯಿತು. ಆಮೇಲೆ ಎರಗಿದ ಅನೇಕ ಆಘಾತಗಳಿಂದ ಅವರ ಹಾಸ್ಯದ ಬುಗ್ಗೆ ಭೂಗತವಾಯಿತು. ಇಳಿವಯಸ್ಸಿನಲ್ಲಿ ಪುಟ್ಟಪರ್ತಿಯ ಪ್ರಶಾಂತಿ ಧಾಮದಲ್ಲಿ ಶಾಂತವಾಗಿರಲು ಬಯಸಿತು ಅವರ ಮನಸ್ಸು. ಆದರೂ ಆಗಾಗ ಕಸ್ತೂರಿಯ ಆ ಪರಿಮಳ ಅನುಭವಿಸುವ ಸದವಕಾಶ ನಮಗೆ ಒದಗುತ್ತಿತ್ತು. ಈಗ ಅದೂ ಕಣ್ಮರೆಯಾಯಿತು.

ನಗುವು ಸಹಜದ ಧರ್ಮ ನಗಿಸುವುದು ಪರಧರ್ಮ
ನಗುವ ಕೇಳುತ ನಗುವುದತಿಶಯದ ಧರ್ಮ
ನಗುವ ನಗಿಸುವ ನಗಿಸಿ ನಗುತ ಬಾಳುವ ವರವ
ಮಿಗೆ ನೀನು ಬೇಡಿಕೊಳೊ—ಮಂಕುತಿಮ್ಮ

ಆರು ಕವನಗಳು

ಸುಮತೀಂದ್ರ ನಾಡಿಗ

ಸೇರೋಣವೆ?

ಸೇರೋಣವೆ ಅಲ್ಲಿ ಎಂದಾದರೊಂದು ದಿನ
ನಾನು ನೀನೆನ್ನುವುದು ಮರೆಯುವಲ್ಲಿ
ಆ ವಂಶ ಈ ವಂಶ ಆ ಊರು ಈ ಊರು
ಯಾವುದೂ ಅಂಟಿರದ ಗಳಿಗೆಯಲ್ಲಿ

ಪತಿನಾನು ಪಿತನಾನು ಸುತನಾನು ಎಂದೆನದ
ಯಾವುದೂ ಆಗಿರದ ಕಾಲದಲ್ಲಿ
ಮಾತೆ ಹೆಂಡತಿ ಪುತ್ರಿ ಯಾವುದೂ ಅನ್ನಿಸದ
ನಮಗೆ ಸಿಗಬಹುದಾದ ಗಳಿಗೆಯಲ್ಲಿ

ಅಲ್ಲಿ ಸೇರುತ್ತೇವೆ ಒಂದಲ್ಲ ಒಂದು ದಿನ
ಗಡಿಯಾರದಅರಿವಿರದ ಸಾವಿನಲ್ಲಿ
ಈ ಅರಿವಿನ ನಡುವೆ ಅಂಥಕ್ಷಣ ಬಂದಾಗ
ಹಿಡಿವ ಸಾಹಸ ಬರಲಿ ಬದುಕಿನಲ್ಲಿ

ಜೂಜಾಡುವವನ ಹಿತವಚನ

ಕಳೆದ ಕಾಲ ಬರುವುದಿಲ್ಲ, ಕಾಲ ಕಳೆಯ ಬೇಡವೆ
ಅನುಮಾನದ ಬಲೆಗೆ ಸಿಕ್ಕು, ಭಯದ ವ್ಯೂಹದಲ್ಲಿ ಹೊಕ್ಕು
ಹೊರಗೆಂದೂ ಬಾರದಂತೆ, ನವೆದು ಹೋಗ ಬೇಡವೆ

ಜೀವನವೆ ಜೂಜು ಕಣೆ, ಜೂಜಾಡದೆ ಇರುವುದುಂಟೆ?
ಕಾಲಮಿಂಚಿ ಹೋದ ಮೇಲೆ ಮರುಗಬೇಡವೆ,
ಪಣಕಟ್ಟಲು ಹರೆಯಬಿಟ್ಟು ಬೇರೇನೂ ಬೇಡವೆ

ಸೋರುವಂಥ ಮಡಿಕೆಯಲ್ಲಿ ನೀರೆಂದರೆ ಜೀವನ
ಅದನು ಕುಡಿಯುದಂಥ ಜೀವ ಕಾಡಿನಲ್ಲಿ ರೋದನ
ಸೋರಿಹೋದ ಮೇಲೆ ಮಡಿಕೆ ಬೈಯಬೇಕೆ ಕಾಲನ ?

ಏನೇನೊ ಕಂಡೆನೆ

ನಿನ್ನ ಕಣ್ಣಲೋಕದಲ್ಲಿ
ಏನೇನೊ ಕಂಡೆನೆ
ನಾನು ದಿಗಿಲುಗೊಂಡೆನೆ

ಅಲ್ಲಿ ನಾನು ಇರುಳ ಕಂಡೆ
ತಿವಿವ ಬೆಂಕಿ ಬೆರಳ ಕಂಡೆ,
ಕೆದರಿಹೋದ ಮುಡಿಯು ಕಂಡೆ
ಹರಿದು ಎಸೆದ ಮಾಲೆ ಕಂಡೆ
ಏನೇನೊ ಕಂಡೆನೆ, ನಾನು ದಿಗಿಲುಗೊಂಡೆನೆ

ಹಣವ ಕಂಡೆ ಹೆಣವ ಕಂಡೆ
ಉರಿವ ಬಣಬೆ ಕಣಜ ಕಂಡೆ,
ಮಾರಿ ಹೊಕ್ಕ ಊರ ಕಂಡೆ
ಪೈರ ಸುಡುವ ವೈರ ಕಂಡೆ
ಏನೇನೊ ಕಂಡೆನೆ, ನಾನು ದಿಗಿಲುಗೊಂಡೆನೆ

ಕೊಚ್ಚಿ ಹರಿವ ರಭಸ ಕಂಡೆ, ಚೂರು ಚೂರು ಸೀರೆ ಕಂಡೆ
ಅಪ್ಪಳಿಸುವ ಬಂಡೆ ಕಂಡೆ, ಜಗ್ಗಿ ಸೆಳೆವ ಸುಳಿಯು ಕಂಡೆ
ಏನೇನೊ ಕಂಡೆನೆ, ನಾನು ದಿಗಿಲುಗೊಂಡೆನೆ

ಬದುಕು

ಇಲ್ಲಿ ಕರ್ಪೂರದ ಬೆಟ್ಟವಿತ್ತು
ಘಮಘಮಿಸುತ್ತಿತ್ತು
ಯಾರೋ ತಾಗಿಸಿ ಬೆಂಕಿ
ಈಗ ಕಾಣುವುದಿಲ್ಲ
ಆದರೂ ಇದ್ದದ್ದು ಸುಳ್ಳಲ್ಲ

ಇಲ್ಲಿ ಉಪ್ಪಿನ ಬೆಟ್ಟವಿತ್ತು
ಭಾರೀ ಮಳೆ ಬಿದ್ದು
ಈಗ ಕಾಣುವುದಿಲ್ಲ
ಆದರೂ ಇದ್ದದ್ದು ಸುಳ್ಳಲ್ಲ

ಮುಖವಾಡ

ಒಂದು ದಿನ ಮುಬ್ಬಿನಲಿ ನನ್ನದೇ ಒಂದು ದನಿ
ಮೆಲ್ಲನುಸಿರಿತು ನನಗೆ 'ಮುಖವಾಡ ಧರಿಸು'
'ಮುಖವಾಡವೇತಕ್ಕೆ' ಎಂದು ಕೇಳಿದ್ದಕ್ಕೆ
'ಮೂರ್ಖತನವೇತಕ್ಕೆ ?' ತಿರುಗಿ ಪ್ರಶ್ನಿಸಿತು

ಅಂದಿನಿಂದಲು ನಾನು ನನ್ನ ಆ ದನಿಯನ್ನು
ಗುರುತು ಮಾಡುವುದಕ್ಕೆ ನಿರತನಾದೆ
ನೂರು ದನಿಗಳ ನಡುವೆ ಗುರುತು ಸಿಕ್ಕದ ದನಿಯು
ತಿರುತಿರುಗಿ ಬಂದಿತ್ತು ಮುಖವಾಡಕೆ

'ಎಲ್ಲವೂ ಮುಖವಾಡ' ಎಂದೊಮ್ಮೆ ಅನ್ನುವುದು
ಮುಗ್ಧತೆಯ ಮುಖವಾಡ ಸಾಕೆನುವುದು
ಮುಖವಾಡವಿಲ್ಲದೆಯೆ ಬದುಕಿಲ್ಲವೆನ್ನುವುದು
'ಕವಿಯ ಮುಖವಾಡ ತೆಗಿ' ಎಂದೆನುವುದು

ಗಂಡಸಿನ ಮುಖವಾಡ, ಪ್ರೊಫೆಸರನ ಮುಖವಾಡ
ಭಾಷೆಗಳ ಮುಖವಾಡ ಸಾಕೆಂದಿತು
ಮುಗುಳುನಗೆ ಮುಖವಾಡ, ಪ್ರಾಣಿಗಳ ಮುಖವಾಡ
ಸಹಜತೆಯ ಮುಖವಾಡ ತೆಗಿ ಎಂದಿತು

ಹಸಿವೆಯೂ ಮುಖವಾಡ, ಪ್ರೀತಿಯೂ ಮುಖವಾಡ
ಸ್ನೇಹವೂ ಮುಖವಾಡ, ಕಳಚು ಅಂತು
'ಮುಖವಾಡವಿಲ್ಲದೆಯೆ ಬದುಕಿಲ್ಲವೇ!' ಎಂದೆ
'ಈಗ ದಾರಿಗೆ ಬಂದಿ, ಸರಿ' ಎಂದಿತು

ಈಗ ದಾರಿಗೆ ಬಂದಿ ಅಂದರೂ ಆ ದನಿಯು
ದಾರಿತಪ್ಪಿದೆನೆಂದು ಕಂಡುಬಂತು
ಮುಖವಾಡದಂಗಡಿಯು ದನಿಯು ನಾ ಗುರ್ತಿಸಿದೆ
ವ್ಯಾಪಾರ ಅಲ್ಲಿಗೇ ಕೊನೆಯಾಯಿತು

ಯುಗಾದಿ

ಹೊಸಕಾಳನು ಹೊತ್ತುಕೊಂಡು ಹೊಸ ಚಿಗುರನು ಕಟ್ಟಿಕೊಂಡು
ಹಳೆವರ್ಷವ ಹೋಳಿಮಾಡಿ ಬಂತು ಹೊಸಯುಗಾದಿ
ಹಳೆವರ್ಷವ ಮುಗುಚಲಿಕ್ಕೆ, ಬೆಳೆಯು ಕಣಜ ತುಂಬಲಿಕ್ಕೆ
ಹೊಸಲಯವನು ಬದುಕಿನಲ್ಲಿ ಕರೆವ ಈ ಯುಗಾದಿ

ಹೊಸಯುಗಾದಿ ಹೊಸಯುಗವನು ನಮಗೆ ನಿಮಗೆ ಎಲ್ಲರಿಗೆ
ಹೊಸಶಾಂತಿಯು ಸಾಮರಸ್ಯ ಪಂಜಾಬಿನ ಜನರಿಗೆ
ಇರಾಕಿರಾನು ಸಿಂಹಳದಲಿ ದಿಕ್ಕುಗೆಟ್ಟ ಮಂದಿಗೆ
ತಂದು ನಮ್ಮ ಲೋಕವನ್ನು ಒಯ್ಯಲಿ ಸುಖಶಾಂತಿಗೆ

ಜೋಳುಮರದ ಬಾಳಿನಲ್ಲಿ ಚಿಗುರುಕನಸು ಕುಣಿದಿವೆ
ಮಾವಿನಲ್ಲಿ ತಾಮ್ರಕೆಂಪು ಚಿಗುರೆಲೆಗಳು ಜೋತಿವೆ
ಹೂಹೂಗಳ ಗೊಂಚಲುಗಳು ಮೇಲೆ ಮುಖವನೆತ್ತಿವೆ
ದಟ್ಟನೆರಳಿನಲ್ಲಿ ಕೂತು ಕೋಗಿಲೆಗಳು ಕಾದಿವೆ

ಅಣುಶಕ್ತಿಯ ಕೇಂದ್ರದಿಂದ ಆಗುವ ಅಪಾಯದಿಂದ
ಲೋಕವು ಪಾರಾಗಲಿ ಅಣುಬಾಂಬಿನ ರಾಶಿರಾಶಿ
ಬೆಳೆದು ಲೋಕ ಅಳಿಯದಂತೆ, ಬರುವ ಎಲ್ಲ ಮಕ್ಕಳಿಗೂ
ಈ ಲೋಕವ ಉಳಿಸುವಂತೆ ಜವಾಬ್ದಾರಿ ಹೆಚ್ಚಲಿ

ಹೊಸ ಎಲೆಗಳ ಹೊಂಗೆಯಲ್ಲಿ ಲವಲವಿಕೆಯು ಕಾಣುವಂತೆ
ಹೊಸ ಬೇವಿನ ಚಿಗುರಿನ ಜೊತೆ ಬೆಲ್ಲ ಕೊಡುವ ಈ ಯುಗಾದಿ
ಫಲಕ್ಕೆ ಪಾತ್ರ ಕಾಯುವವರು ಶ್ರಮಕ್ಕು ಸಿದ್ಧರಾಗುವಂತೆ
ಸುಖದುಃಖವ ಸಮಾಸಮಾ ನೋಡುವಂತೆ ಬಂದಿದೆ

ಪ್ರಾಣಭಯಂಕರ ರಾಜ್ಯದಲ್ಲಿ ಆಸೆಗೆ ಕೊನೆಯೇ ಇರಲಿಲ್ಲ !

ಜಿ. ಟಿ. ನಾರಾಯಣರಾವ್

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಮುಂದಿನ ೧೭೫೦ ವರ್ಷಗಳಲ್ಲಿ ಜನಸಂಖ್ಯೆ ಅತಿ ಮಂದ ದರದಿಂದ ವಾರ್ಷಿಕವಾಗಿ ಶೇಕಡಾ ೦.೦೫೬ ದರದಲ್ಲಿ ಬೆಳೆದು ಕ್ರಿಸ್ತಶಕ ೧೭೫೦ರ ವೇಳೆಗೆ ೮೦ ಕೋಟಿ ಆಯಿತು. ಇಷ್ಟಾಗುವಾಗ ಮಾನವನಿಗೆ ಹೊಸತೊಂದು ಶಕ್ತಿ ಮೂಲ ಲಭಿಸಿತು. ಉನ್ನತ ಸಂಮರ್ದದಲ್ಲಿ ಸಂಗ್ರಹಿಸಿದ ಉಗಿಯನ್ನು ಬಗೆಬಗೆಯ ಕಾರ್ಯ ನಿರ್ವಹಿಸಲು ನಿಯೋಜಿಸಬಹುದು ಎಂಬ ಉಗಿಯಂತ್ರದ ತತ್ತ್ವ ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಕರಗತವಾಯಿತು. ಸಹಜವಾಗಿ ಇದರಿಂದ ವಿಜ್ಞಾನ ಮತ್ತು ತಂತ್ರವಿದ್ಯೆಗೆ ಹೆಚ್ಚಿನ ನೂಕುಬಲ ಒದಗಿತು. ಉತ್ಪಾದನೆ, ವ್ಯಾಪಾರ, ಸಂಚಾರ, ಜನಾರೋಗ್ಯ, ಸಾಮಾಜಿಕ ವ್ಯವಹಾರ, ಸರ್ಕಾರಗಳ ಕಾರ್ಯ ಕಲಾಪ, ಯುದ್ಧ ಮುಂತಾದ ವಿವಿಧ ರಂಗಗಳಲ್ಲಿ ತಂತ್ರವಿದ್ಯೆ ತನ್ನ ಖಚಿತ ಮುದ್ರೆ ಒತ್ತಿ ಮಾನವ ಜೀವನದ ಸರ್ವಸ್ತರಗಳನ್ನೂ ಆಕ್ರಮಿಸಿತು. ಇಷ್ಟಾಗುವಾಗ ಇಸವಿ ಪಟ್ಟಿ ೧೮೦೦ನ್ನು ತೋರಿಸು ತ್ತಿತ್ತು. ಜನಸಂಖ್ಯೆ ೧೦೦ ಕೋಟಿಯನ್ನು ದಾಟಿತ್ತು. ೧೭೫೦ ರಿಂದ ೧೮೦೦ರ ತನಕದ ವಾರ್ಷಿಕ ಜನಸಂಖ್ಯಾವೃದ್ಧಿ ದರ ಶೇಕಡಾ ೦.೪೪.

ತಂತ್ರವಿದ್ಯೆಯ ಸರ್ವಾಂಗೀಣ ಅಭಿವರ್ಧನೆಗೆ ಹೊಸ ಆಯಾಮ ಲಭಿಸಿದ್ದು ಪೆಟ್ರೋಲಿಯಮ್ ಉತ್ಪನ್ನಗಳ ವಾಣಿಜ್ಯ ಗಾತ್ರದ ಶೋಧನೆ, ಸಂಸ್ಕರಣೆ, ಸಾಗಣೆ ಹಾಗೂ ಸಂಗ್ರಹಣೆ ವ್ಯಾಪಕವಾಗಿಯೂ ವ್ಯವಸ್ಥಿತವಾಗಿಯೂ ಆಗತೊಡಗಿದ ಮೇಲೆ. ಕ್ರಿ. ಪೂ. ೩೦೦೦ದಷ್ಟು ಹಿಂದೆಯೇ ಮಾನವ ಉಪ್ಪುನೀರಿನ ಬಾವಿಗಳನ್ನು ಅಗೆದು ಇಲ್ಲವೇ ಜವುಗು ನೆಲಗಳಲ್ಲಿ ಮೇಲಕ್ಕೆ

ಒಸರಿ ಬರುತ್ತಿದ್ದ ಪಸೆಯನ್ನು ಬಗೆದು ಪೆಟ್ರೋಲಿಯಮ್ ಎಣ್ಣೆ ಮತ್ತು ನೈಸರ್ಗಿಕಾನಿಲಗಳನ್ನು ಸಂಗ್ರಹಿಸುತ್ತಿದ್ದನೆಂದು ತಿಳಿದಿದೆ. ಹೀಗಿದ್ದರೂ ೧೯ನೆಯ ಶತಮಾನಾರಂಭದ ತನಕವೂ, ಅಮೆರಿಕದಂಥ ತಂತ್ರವಿದ್ಯಾತ್ಮಕವಾಗಿ ಪ್ರಗತಿ ಕಂಡಿದ್ದ ದೇಶದಲ್ಲಿ ಕೂಡ, ಮನೆ ಬೆಳಗಲು ಹಣತೆಯುಗದ ವಿಧಾನಗಳೇ ಬಳಕೆಯಲ್ಲಿದ್ದುವು.

ಆ ವೇಳೆಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನೂ ಜೀವನ ಸೌಕರ್ಯಗಳನ್ನೂ ಅರಸುತ್ತ ಜನ ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರಗಳಿಗೂ ಕೈಗಾರಿಕಾವಲಯಗಳಿಗೂ ವಲಸೆಹೋದರು. ಹೀಗೆ ನಗರಗಳು ಮೈದಳೆದು ಬೆಳೆಯಲಾರಂಭಿಸಿದುವು. ಸಹಜವಾಗಿ ಮನೆ, ಕಾರ್ಖಾನೆ, ಅಂಗಡಿ, ಬೀದಿ ಮುಂತಾದವನ್ನು ಬೆಳಗಲು, ಯಂತ್ರ ಸಂಕುಲಗಳಿಗೆ ಊಡಲು ಮತ್ತು ಸಂಚಾರ ಸಾಧನಗಳನ್ನು ದಕ್ಷವಾಗಿ ಚಾಲೂಗೊಳಿಸಲು ಹೊಸ ಇಂಧನಗಳೂ ಸ್ನೇಹನಗಳೂ (ಲ್ಯೂಬ್ರಿಕೆಂಟ್ಸ್) ಅವಶ್ಯವಾದುವು. ೧೯ನೆಯ ಶತಮಾನದ ಮಧ್ಯಭಾಗದಲ್ಲಿ ಕೆರೊಸೀನಿನ (ಕಲ್ಲೆಣ್ಣೆ) ಬಳಕೆ ಯೂರೋಪ್ ಮತ್ತು ಅಮೆರಿಕ ದೇಶಗಳಲ್ಲಿ ಸರ್ವಸಾಮಾನ್ಯವಾಗಿತ್ತು. ಕಲ್ಲಿದ್ದಲನ್ನು ಆಸವಿಸಿ ಇದನ್ನು ಪಡೆಯುತ್ತಿದ್ದರು. ೧೮ನೆಯ ಶತಮಾನದಲ್ಲಿ ವಿಶೇಷ ವೇಗೋತ್ಕರ್ಷ ಪಡೆದು ಪ್ರವರ್ಧಿಸುತ್ತಿದ್ದ ಕೈಗಾರಿಕಾಕ್ರಾಂತಿ ತನ್ನ ಬಹುಬಾಹುಗಳನ್ನು (ಕಬಂಧ ಬಾಹುಗಳನ್ನು?) ನವ ಇಂಧನಾಕರಗಳ ಶೋಧನೆಗೆ ನಿಯೋಜಿಸಿತು. ಅಗ್ಗವಾಗಿಯೂ ಯಥೇಚ್ಛವಾಗಿಯೂ ದೊರೆಯಬಲ್ಲ ಎಣ್ಣೆಯ ಹಾಗೂ ಸ್ನೇಹನದ ಆವಶ್ಯಕತೆ ಹಿಂದೆಂದಿಗಿಂತಲೂ ಆಗ ಅತಿ ತೀವ್ರವಾಗಿತ್ತು.

೧೮೫೯ರಲ್ಲಿ ಇ. ಎಲ್. ಡ್ರೇಕ್ ಎಂಬಾತ ಪೆನ್ಸಿಲ್ವೇನಿಯಾದಲ್ಲಿ ಮೊದಲ ಎಣ್ಣೆ ಬಾವಿ ಕೊರೆದಾಗ ಪೆಟ್ರೋಲಿಯಮ್ ಯುಗ ಅಧಿಕೃತವಾಗಿ ಆರಂಭವಾಯಿತು. ಹೀಗೆ ತೊಡಗಿದ ಪೆಟ್ರೋಲಿಯಮ್ ಉದ್ಯಮ ಆಧುನಿಕ ಕೈಗಾರಿಕಾ ಯುಗವನ್ನು ಆವಾಹಿಸಿತು. ಫಾಸಿಲ್ ಇಂಧನದ ವ್ಯಾಪಕೋಪಯೋಗ ಪ್ರಪಂಚದ ಮುಖವನ್ನು ನಾಗರಿಕತೆಯ ಆರಂಭದಿಂದ ಆ ತನಕ ಕಾಣದಿದ್ದ ರೀತಿಯಲ್ಲಿ ಶಾಶ್ವತವಾಗಿ ಬದಲಾಯಿಸಿ ಬಿಟ್ಟಿತು.

ಕೈಗಾರಿಕಾ ಕ್ರಾಂತಿಯ ಫಲವಾಗಿ ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಸ್ವಯಂಚಲಿ–ಇಂಧನ ಸಂಬಂಧ ಅವಿಭಾಜ್ಯವಾಯಿತು. ಪೆಟ್ರೋರಾಸಾಯನಿಕ ಕೈಗಾರಿಕೆಯಲ್ಲಿ ಅತಿ ಪ್ರಮುಖ ಕಚ್ಚಾ ಸಾಮಗ್ರಿಯಾದ ಪೆಟ್ರೋಲಿಯಮ್, ಸ್ವಯಂಚಲಿಗಳಿಗೆ ಶಕ್ತಿ ಪೂರೈಕೆ ಮಾಡುವ ಇಂಧನವಾಯಿತು. ಗರಿಷ್ಠ ಶಕ್ತಿಯನ್ನು ಕನಿಷ್ಠ ವೆಚ್ಚದಲ್ಲಿ ಬೇಕಾದಾಗ ಬೇಕಾದಲ್ಲಿ ಉತ್ಪಾದಿಸಬಲ್ಲ ಅಕ್ಷಯ ಪಾತ್ರೆಯೇ ಇದಾಯಿತು. ಇದನ್ನು ಆಧರಿಸಿಯೇ ಮಾನವ ಸಮುದಾಯದ ವರ್ತಮಾನ ಹಾಗೂ ಭವಿಷ್ಯ ಆರ್ಥಿಕತೆ ನಿಂತಿತು.

೧೮೦೦ರಿಂದ ಈಚೆಗಿನ ಸುಮಾರು ಇನ್ನೂರು ವರ್ಷಗಳಲ್ಲಿ ವಿಜ್ಞಾನ ಮತ್ತು ತಂತ್ರವಿದ್ಯೆಯಲ್ಲಿ ಮಾನವ ಸಾಧಿಸಿರುವ ಪ್ರಗತಿ, ಗಳಿಸಿರುವ ಹಿರಿಮೆ ಮತ್ತು ಏರಿರುವ ಎತ್ತರ ಎಷ್ಟೆಂಬುದನ್ನು ಒಂದೇ ವಾಕ್ಯದಲ್ಲಿ ಹೇಳುವುದಾದರೆ ಆತನ ಜ್ಞಾನವಿಂದು ಪರಮಾಣುವಿನ ಅಂತರಾಳದ ಹೂರಣದಿಂದ ತೊಡಗಿ ಬ್ರಹ್ಮಾಂಡದ ವ್ಯೋಮ ವಿಸ್ತಾರದ

ವರೆಗೂ ಹಬ್ಬಿದೆ. ಜನನ ಮರಣಗಳ ಮೇಲೆ ಒಂದೆಂದೂ ಇದ್ದಿರದಷ್ಟು ಹತೋ
ಯನ್ನು ಇಂದು ಆತ ಗಳಿಸಿದ್ದಾನೆ. ನವ ಶಕ್ತಿ ಮೂಲಗಳನ್ನು ಕಂಡುಕೊಂಡಿದ್ದಾನೆ
ಸಮಗ್ರವಾಗಿ ಹೇಳುವುದಾದರೆ ಆಧುನಿಕ ಮಾನವ ಶಕ್ತಿಯನ್ನು—ಉದಾಹರಣೆ
ವಿದ್ಯುಚ್ಛಕ್ತಿಯನ್ನು—ತನಗೆ ಬೇಕಾದಂತೆ ಕಾರ್ಯವೆಸಗಲು ವಿಧಿಸಬಲ್ಲವನಾಗಿದ್ದಾನೆ
ಶಕ್ತಿರಹಿತ ಜೀವನವಿಂದು ಊಹಾತೀತವಾಗಿದೆ. ಎಂದೇ ಆತ ಶಕ್ತಿಯ ಪ್ರಭುವ
ಹೌದು, ದಾಸನೂ ಹೌದು.

ಶಕ್ತಿ ಬದುಕನ್ನು ಚುರುಕುಗೊಳಿಸುತ್ತದೆ, ನೂತನಾವಕಾಶಗಳನ್ನು ಅನ್ವೇಷಿಸ
ವುದರತ್ತ ಮಾನವನನ್ನು ಪ್ರೇರಿಸುತ್ತದೆ. ಇಂಥ ಅನ್ವೇಷಣೆಗೆ ಅಧಿಕ ಶಕ್ತಿ ಅವಶ್ಯ
ಶಕ್ತಿಯ ಬೆನ್ನಟ್ಟಿದ ಮಾನವ ತಂತ್ರವಿದ್ಯೆಯನ್ನು ಅಭಿವರ್ಧಿಸುತ್ತಾನೆ. ಒಟ್ಟಾ
ಪ್ರಪಂಚದಲ್ಲಿ ದೂರಗಳು ಕುಗ್ಗುತ್ತವೆ. ಜನರಹಿತ ಪ್ರದೇಶಗಳು ಸಂಕೋಚಿಸುತ್ತವೆ
ಜನಸಂಚಾರ ಜಾಸ್ತಿ ಆಗುತ್ತದೆ. ಒಂದಿಗೇ ಜನಸಂಖ್ಯೆ ವರ್ಧಿಸುತ್ತದೆ.

ಜನಸಂಖ್ಯೆ ಕಳೆದ ಶತಮಾನಗಳಲ್ಲಿ ಹೇಗೆ ಬೆಳೆದುಬಂದಿದೆ ಎಂಬುದನ್ನು ಮುಂದಿ
ಯಾದಿಯಿಂದ ತಿಳಿಯಬಹುದು :

ಇಸವಿ			ಪ್ರಪಂಚ ಜನಸಂಖ್ಯೆ ಕೋಟಿಗಳಲ್ಲಿ		ವಾರ್ಷಿಕವೃದ್ಧಿ ದರ ಶೇಕಡಾ
ಕ್ರಿ.ಪೂ.	೮೦೦೦	....	೦.೮		—
ಕ್ರಿ. ಶ.	೧	....	೩೦	....	೦.೦೩೬
	೧೭೫೦	....	೮೦	....	೦.೦೫೬
	೧೮೦೦	....	೧೦೦	....	೦.೪೪
	೧೮೫೦	....	೧೩೦	....	೦.೫೨
	೧೯೦೦	....	೧೭೦	....	೦.೫೪
	೧೯೫೦	....	೨೫೦	....	೦.೭೯
	೧೯೭೦	....	೩೭೫	....	೨.೧
	೧೯೮೦	....	೪೫೦	....	೨
		....	ಅಂದಾಜು	....	ಅಂದಾಜು
	೧೯೯೦	....	೫೬೦	....	೨.೨
	೨೦೦೦	....	೬೪೦	....	೧.೪

೨೦ ನೆಯ ಶತಮಾನದಲ್ಲಿ ಜನಸಂಖ್ಯಾವೃದ್ಧಿ ದರ (ಸರಾಸರಿಯಲ್ಲಿ) ವಾರ್ಷಿ
ವಾಗಿ ಶೇಕಡಾ ೧.೪ರಲ್ಲಿ ನಿಲ್ಲುವುದೆಂದು ಹೇಳಬಹುದು. ಇದೇನೂ ಸಾಧಾರಣ
ದರವಲ್ಲ. ಹಿಂದಿನ ಯಾವ ಶತಮಾನಗಳಲ್ಲೂ ಜನಸಂಖ್ಯಾವೃದ್ಧಿದರ ಈ ಎತ್ತ
ಏರಿರಲಿಲ್ಲ ಎಂಬುದು ಮೇಲಿನ ಯಾದಿಯಿಂದ ಸ್ಪಷ್ಟವಾಗುತ್ತದೆ.

ಉದಾಹರಣೆಗೆ, ಜನಸಂಖ್ಯಾವೃದ್ಧಿ = ಜನನ ಸಂಖ್ಯೆ — ಮರಣ ಸಂಖ್ಯೆ
ವಾರ್ಷಿಕ ಜನಸಂಖ್ಯಾ ವೃದ್ಧಿ ದರ = (ಒಂದು ವರ್ಷದಲ್ಲಾಗುವ ಜನನ ಸಂಖ್ಯೆ
— ಅದೇ ವರ್ಷದಲ್ಲಾಗುವ ಮರಣಸಂಖ್ಯೆ) ÷ ಆ ವರ್ಷದ ಜನಸಂಖ್ಯೆ

ಇದನ್ನು ೧೦೦ರಿಂದ ಗುಣಿಸಿದರೆ ವಾರ್ಷಿಕ ಜನಸಂಖ್ಯಾವೃದ್ಧಿ ದರ ಶೇಕಡಾವಾರು ದೊರೆಯುತ್ತದೆ. ಆದ್ದರಿಂದ ಕ್ರಿ. ಶ. ೨೦೦೦ದಲ್ಲಿ ಜನಸಂಖ್ಯೆ ೬೪೦ ಕೋಟಿ ಮತ್ತು ಆ ಶತಮಾನದ (೨೧ ನೆಯ ಶತಮಾನದ) ಶೇಕಡಾ ವೃದ್ಧಿ ದರ ೧.೪ ಎಂದಾಗ

ಇಸವಿ ೨೦೦೦ದಲ್ಲಿ ಜನಸಂಖ್ಯೆ = ೬೪೦,೦೦,೦೦,೦೦೦
ಇಸವಿ ೨೦೦೧ರಲ್ಲಿ ಜನಸಂಖ್ಯೆ = ೬೪೦,೦೦,೦೦,೦೦೦
+ ೮,೯೬,೦೦,೦೦೦
= ೬೪೮,೯೬,೦೦,೦೦೦

ಇಸವಿ ೨೦೦೨ರಲ್ಲಿ ಎಷ್ಟು ಜನಸಂಖ್ಯೆ ಎಂದು ಗಣಿಸಲು ಈ ಮೇಲಿನ ಮೊತ್ತವನ್ನು (೬೪೦ ಕೋಟಿಯನ್ನಲ್ಲ ೬೪೮.೯೬ ಕೋಟಿಯನ್ನು) ಆಧಾರ ಸಂಖ್ಯೆಯಾಗಿ ತೆಗೆದುಕೊಳ್ಳಬೇಕು—ಚಕ್ರಬಡ್ಡಿ ಗಣನೆಯಲ್ಲಿ ಮಾಡುವುದಿಲ್ಲವೇ, ಹಾಗೆ. ಈ ರೀತಿ ಮುಂದುವರಿದದ್ದಾದರೆ ಕೇವಲ ೫೦ ವರ್ಷಗಳಲ್ಲಿ ಹಾಲಿ ಜನಸಂಖ್ಯೆ ಅದರ ಎರಡರಷ್ಟಾಗಿರುತ್ತದೆ. ಅಂದರೆ ಇಸವಿ ೧೯೮೭ ರಲ್ಲಿ ೫೦೦ ಕೋಟಿ ಇರುವ ಜನಸಂಖ್ಯೆ ೨೦೩೭ ರಲ್ಲಿ ೧೦೦೦ ಕೋಟಿಗೆ ನೆಗೆದಿರುತ್ತದೆ.

ಭಾರತದ ಪರಿಸ್ಥಿತಿ ಇನ್ನೂ ವಿಷಮತರವಾಗಿದೆ. ೧೯೮೭ರ ಜನಸಂಖ್ಯೆ ೭೬ ಕೋಟಿ, ವಾರ್ಷಿಕ ಜನಸಂಖ್ಯಾವೃದ್ಧಿ ದರ ಶೇಕಡಾ ೨.೨೧. ಅಂದರೆ ಇಸವಿ ೨೦೦೦ ದಲ್ಲಿ ನಾವು ೧೦೦ ಕೋಟಿಗೂ ೨೦೧೦ ರ ವೇಳೆಗೆ ೧೫೦ ಕೋಟಿಗೂ ತಲಪಿರುತ್ತೇವೆ. ಈ ಇಸವಿಗಳೇನೂ ಅತಿ ದೂರದ ಅಜ್ಞಾತ ಕಾಲಗರ್ಭದಲ್ಲಿ ಹುದುಗಿಕೊಂಡಿಲ್ಲ. ನಮ್ಮ ಪೈಕಿ ೬೦ ವಯಸ್ಸಿಗಿಂತ ಕಡಿಮೆ ಇರುವವರು ಖಂಡಿತ ಕಾಣಬಲ್ಲ ಇಸವಿಗಳೇ. ಈಗಲೇ ಇಷ್ಟು ಹೀನಸ್ಥಿತಿಯಲ್ಲಿರುವ ಜೀವನಮಟ್ಟ, ಪರಿಸರ, ಆಂತರಿಕ ಭದ್ರತಾ ಪರಿಸ್ಥಿತಿ ಮುಂತಾದವು ಆಗ ಹೇಗಿರಬಹುದು? ನಮ್ಮ ಹಣೆಬರಹಕ್ಕೆ ನಾವು ಪಾಕಿಸ್ತಾನವನ್ನಾಗಲಿ ಅಮೆರಿಕವನ್ನಾಗಲಿ ಶ್ರೀಲಂಕಾವನ್ನಾಗಲಿ ಆಗ ದೂರುವಂತಿಲ್ಲ—ನಮ್ಮ ಮೌಢ್ಯ, ನಮ್ಮ ಅದೃಷ್ಟವಾದಿತ್ವ, ನಮ್ಮ ಅನುಕೂಲಸಿಂಧುತ್ವ, ನಮ್ಮ ರಾಜಕೀಯ ನೀತಿ ಮುಂತಾದವನ್ನು ಬೊಬ್ಬಿಟ್ಟು ತೋರಬೇಕಾಗುತ್ತದೆ.

ಈ ಸ್ಥಿತಿಯಲ್ಲಿ ವೈಯಕ್ತಿಕವಾಗಿ ಪ್ರತಿ ದಂಪತಿಗಳೂ ಶಿಸ್ತುಬದ್ಧ ಕುಟುಂಬ ಪಾಲನೆ ಪೋಷಣೆ ಪಾಲಿಸಿದ ವಿನಾ ನಮಗೆ ಉಳಿಗಾಲವಿಲ್ಲ. ಇವು ಏನು ಹೇಗೆ ಎಂತು ಮುಂತಾದ ವಿವರಗಳು ಈಗ ಸಾರ್ವತ್ರಿಕವಾಗಿ ಸುಲಭ ಲಭ್ಯವಿವೆ—ಉದಾಹರಣೆಗೆ ಕುಟುಂಬ ಯೋಜನಾ ಕೇಂದ್ರಗಳಲ್ಲಿ, ಆಸ್ಪತ್ರೆಗಳಲ್ಲಿ, ಆರೋಗ್ಯ ಕೇಂದ್ರಗಳಲ್ಲಿ ಇತ್ಯಾದಿ. ಭಾರತ ಕುಟುಂಬ ಯೋಜನಾ ಸಂಘ, ಮೈಸೂರು ಶಾಖೆ, ೨೯೩೧, L-೪, ಅಶೋಕ

ರೋಡ್ ಈಸ್ಟ್ ಕ್ರಾಸ್ ೩೨, ಮೈಸೂರು ೫೭೦೦೦೧ —ಇವರನ್ನು ನೇರವಾಗಿ ಸಂಪರ್ಕಿಸಬಹುದು.

ಮಾನವ ಎಲ್ಲೇ ಇರಲಿ, ಯಾವ ಕಾಲದಲ್ಲೇ ಇರಲಿ, ಹೊರನೋಟಕ್ಕೆ ಹೇಗೆಯೋ ತೋರುವ ಆಹಾರ ಪದಾರ್ಥಗಳನ್ನು ಉಣ್ಣಲಿ—ಅಂತಿಮ ವಿಶ್ಲೇಷಣೆಯಲ್ಲಿ ಆತನ ಆಹಾರ ಆರು ಮುಖ್ಯ ಘಟಕಗಳನ್ನು ಒಳಗೊಂಡಿರಲೇಬೇಕು: ಶರ್ಕರಪಿಷ್ಟ (ಕಾರ್ಬೊಹೈಡ್ರೇಟ್), ಸಸಾರಜನಕ (ಪ್ರೋಟೀನ್), ಮೇದಸ್ಸು (ಫ್ಯಾಟ್), ಜೀವ ಸತ್ತ್ವ (ವೈಟಮಿನ್), ಖನಿಜ ಲವಣ (ಮಿನರಲ್ ಸಾಲ್ಟ್) ಮತ್ತು ನೀರು. ವ್ಯಕ್ತಿ ಸೇವಿಸುವ ಆಹಾರದಲ್ಲಿ ಇವು ಯುಕ್ತ ಪ್ರಮಾಣದಲ್ಲಿ ಮೇಳೈಸಿಕೊಂಡಿದ್ದು ಆತನಿಗೆ ಸಕಾಲದಲ್ಲಿ ಸೇವನಾರ್ಹ ರೂಪದಲ್ಲಿ ಒದಗಬೇಕು. ಹೀಗಾಗದಿದ್ದರೆ ಮಾನವ ಹಸಿವಿನಿಂದ ಮತ್ತು ಅಥವಾ ನ್ಯೂನ ಪೋಷಣೆಯಿಂದ ನರಳುತ್ತಾನೆ. ಇದರಿಂದ ಆತನ ಆರೋಗ್ಯ ಹದಗೆಡುತ್ತದೆ ಮತ್ತು ಕಾರ್ಯಸಾಮರ್ಥ್ಯ ಕುಗ್ಗುತ್ತದೆ.

ಪ್ರಪಂಚದ ಆಹಾರ ಪೂರೈಕೆಯ ಬಗ್ಗೆ ಖಚಿತ ಅಂಕೆ ಅಂಶಗಳನ್ನು ಒದಗಿಸುವುದು ಅತಿ ಕಷ್ಟ. ಪ್ರಾಯಶಃ ಎಂದೂ ಕೈಗೂಡದು. ವೈಜ್ಞಾನಿಕ ತರ್ಕಾಧಾರಿತ ಅಂದಾಜನ್ನು ಮಾತ್ರ ಮಂಡಿಸಬಹುದು ಅಷ್ಟೆ. ನಿಜಕ್ಕೂ ಪ್ರಪಂಚದ ಆಹಾರ ಪರಿಸ್ಥಿತಿ ಅಪಾಯ ಹಂತದಲ್ಲಿದೆ. ಆಹಾರೋತ್ಪಾದನೆಗೆ ಸಂಬಂಧಿಸಿದ ಸಮಸ್ತ ಸಮಸ್ಯೆಗಳನ್ನೂ—ಅವು ಎಷ್ಟೇ ಜಟಿಲವಾಗಿರಲಿ—ಪರಿಹರಿಸಲು ಮಾನವ ತಂತ್ರವಿದ್ಯಾತ್ಮಕವಾಗಿ ಸಾಮರ್ಥ್ಯ ಗಳಿಸಿರುವ ಈ ದಿನಗಳಲ್ಲೇ ಇಂಥ ಉಲ್ಬಣತೆ ತಲೆಹಾಕಿರುವುದೊಂದು ಐತಿಹಾಸಿಕ ವಿಪರ್ಯಾಸ. ಪ್ರಪಂಚದ ಏರು ಜನಸಂಖ್ಯೆಯ ನಾಗಾಲೋಟದೊಡನೆ ಆಹಾರೋತ್ಪಾದನೆಯ ಮಾಮೂಲಿ ಇಕ್ಕಾಲೋಟಕ್ಕೆ ಹೊಂದಿಕೊಳ್ಳಲಾಗುತ್ತಿಲ್ಲ. ಜನಸಂಖ್ಯೆ ಘಾತೀಯವಾಗಿ—ಅಂದರೆ ೧, ೨, ೪, ೮, ೧೬, ೩೨, ೬೪........ಮೊಲ ಜಿಗಿತಗಳಲ್ಲಿ—ವೃದ್ಧಿಸುತ್ತದೆ; ಆಹಾರೋತ್ಪಾದನೆಯಾದರೋ ರೇಖೀಯವಾಗಿ—ಅಂದರೆ ೧, ೨, ೩, ೪, ೫, ೬, ೭, ...ಆಮೆ ನಡಿಗೆಯಲ್ಲಿ—ತೆವಳುತ್ತದೆ. ಹೀಗಾಗಿ ಎರಡರ ನಡುವೆ ಅಗಳು ಏರ್ಪಡುವುದು ಮಾತ್ರವಲ್ಲ ಅದು ಅಗಲ ಅಗಲವೂ ಆಗುತ್ತದೆ.

೧೯೦೦ರಲ್ಲಿ ೧೭೦ ಕೋಟಿ ಇದ್ದ ಜನಸಂಖ್ಯೆ ೧೯೩೦ರಲ್ಲಿ ೨೨೦ ಕೋಟಿಗೆ ಜಿಗಿದು ೧೯೬೦ರಲ್ಲಿ ೩೧೦ ಕೋಟಿಯನ್ನು ಮೀರಿ ೧೯೮೭ರಲ್ಲಿ ೫೦೦ ಕೋಟಿ ದಾಟಿ ಸಾಗುತ್ತಿದೆ. ಪ್ರಸಕ್ತ ಶತಮಾನ ಮುಗಿಯುವ ವೇಳೆಗೆ ಪ್ರಪಂಚದಲ್ಲಿ ೬೪೦ ಕೋಟಿ, ಅಂದರೆ ೧೯೬೦ರಲ್ಲಿ ಇದ್ದುದರ ಎರಡು ಪಾಲಿಗಿಂತಲೂ ಹೆಚ್ಚು, ಆಗುವುದೆಂದು ಅಂದಾಜು. ಕೃಷಿರಂಗದಲ್ಲಿ ಭಾರತವನ್ನೂ ಒಳಗೊಂಡಂತೆ ಅನೇಕ ರಾಷ್ಟ್ರಗಳು ಸಾಧಿಸಿರುವ ಹಸುರು ಕ್ರಾಂತಿ ದವಸ ಧಾನ್ಯಗಳ ಉತ್ಪಾದನೆಯನ್ನು ಹಿಂದೆಂದೂ ಕಾಣದಿದ್ದ ಎತ್ತರಕ್ಕೆ ಒಯ್ದಿದೆ. ಅಂತೆಯೇ ಮಾಂಸೋದ್ಯಮ, ಕ್ಷೀರೋದ್ಯಮ, ಮತ್ಸ್ಯೋದ್ಯಮ, ತರಕಾರಿ ಹಣ್ಣು ಮುಂತಾದವುಗಳ ಕೃಷಿ ಕೂಡ ಉಚ್ಛ್ರಾಯ ಸ್ಥಿತಿಯಲ್ಲಿದೆ ನಿಜ. ಆದರೆ ಇವೆಲ್ಲವೂ ಶಾಶ್ವತ ಪರಿಹಾರ ಒದಗಿಸಬಹುದೆಂದಾಗಲಿ ಈಗಿನ ಉಚ್ಛ್ರಾಯ ಸ್ಥಿತಿಯಲ್ಲಿಯೇ ಇರಬಹುದೆಂದಾಗಲಿ ನಿರೀಕ್ಷಿಸುವುದು ಪೂರ್ತಿ ಸಾಧುವಾಗದೆಂಬುದು ವಿಜ್ಞಾನಿಗಳ ಅಭಿಮತ.

ಆಹಾರೋತ್ಪಾದನೆ ಯಾವ ಉನ್ನತ ಮಟ್ಟದಲ್ಲಿಯೇ ಇದ್ದರೂ ಆಹಾರ ವಿತರಣೆ ಏಕ ರೀತಿ ಆಗದೆ ಪ್ರಪಂಚ, ಉಳ್ಳವರು ಉಳ್ಳದವರು, ಅಥವಾ ಹಸಿವಿಲ್ಲದವರು (ಹೊಟ್ಟೆ ತುಂಬಿರುವವರು) ಹಸಿವಿರುವವರು (ಹೊಟ್ಟೆ ತುಂಬದವರು) ಎಂಬ ಎರಡು ಬಣಗಳಾಗಿ ಒಡೆದುಹೋಗಿದೆ. ಪ್ರಪಂಚ ಜನಸಂಖ್ಯೆಯಲ್ಲಿ ಎಂಟನೆಯ ಒಂದರಷ್ಟು ಮಂದಿಗೆ ಸಮರ್ಪಕ ಆಹಾರ ಒದಗದೆ ಅವರು ಹಸಿವು ಹಾಗೂ ನ್ಯೂನ ಪೋಷಣೆಗಳಿಂದ ಬಾಧಿತ ರಾಗಿದ್ದಾರೆಂದು ಅಂದಾಜು ಮಾಡಲಾಗಿದೆ. ಅದೇ ವೇಳೆ ಅತ್ಯಲ್ಪಾಂಶ ಮಂದಿ ಅತಿ ಪೋಷಣೆಯಿಂದ ಅಗ್ನಿ ಮಾಂದ್ಯ, ಅಜೀರ್ಣ, ಮಧುಮೇಹ ಮುಂತಾದ 'ಶ್ರೀಮಂತ' ವ್ಯಾಧಿಗಳಿಂದ ನರಳುತ್ತಿದ್ದಾರೆಂದು ತಿಳಿದಿದೆ. ಪ್ರಪಂಚದ ಪರಿಸ್ಥಿತಿ ೧೯೭೪ ರಲ್ಲಿ ಎಷ್ಟು ತೀವ್ರವಾಗಿತ್ತೆಂಬುದನ್ನು ಈ ಮುಂದಿನ ಅಂಕೆ ಅಂಶಗಳಿಂದ ತಿಳಿಯಬಹುದು:

೧ ಕೋಟಿ ಮಕ್ಕಳು ನ್ಯೂನ ಪೋಷಣೆಯಿಂದ ಪೀಡಿತರಾಗಿ ಅವರ ಬೆಳವಣಿಗೆ ಕುಂಠಿತವಾಗಿತ್ತು—ಅಂದರೆ ಪ್ರತಿ ೪೧೬ ಮಂದಿಯಲ್ಲಿ ೧ ಮಗು ಹೀಗೆ ರಿಕ್ತಸ್ಥಿತಿ ತಲಪಿತ್ತು.

೪೦ ಕೋಟಿ ಜನ ಉಪವಾಸದ (ಸ್ಟಾರ್ವೇಶನ್) ಅಂಚಿನಲ್ಲಿ ನವೆಯುತ್ತಿದ್ದರು. ಅಂದರೆ ಪ್ರತಿ ೧೦೦ ಮಂದಿಯಲ್ಲಿ ೧೦ ಮಂದಿ ನಿರಾಹಾರದಿಂದ ಕಂಗಾಲಾಗಿದ್ದರು.

೧೦೦ ಕೋಟಿ ಜನ ಹಸಿವು ಹಾಗೂ ನ್ಯೂನ ಪೋಷಣೆಯಿಂದ ಬಾಧಿತವಾಗಿದ್ದರು. ಅಂದರೆ ಪ್ರತಿ ೨೫ ಮಂದಿಯಲ್ಲಿ ಒಬ್ಬ ಅನಪೋಷಣೆಯಿಂದ ಕುಂಠಿತನಾಗಿದ್ದ.

೧೨,೦೦೦ ಮಂದಿ ಪ್ರತಿದಿನ ಹಸಿವಿನಿಂದ ಮಡಿಯುತ್ತಿದ್ದರು. ಸ್ವರ್ಗದಲ್ಲಿರುವ ತಂದೆ—ಆತ ನಿಜವಾಗಿ ಇದ್ದುದೇ ಆದರೆ—ಮಾನವ ಈ ತೆರನಾಗಿ ಭೂಲೋಕದಲ್ಲೇ ನರಕಾನುಭವ ಪಡೆಯಬೇಕೆಂದು ಖಂಡಿತ ಇಚ್ಛಿಸಲಾರ. ಹಾಗೇನಾದರೂ ಇಚ್ಛಿಸಿದ್ದು ದಾದರೆ ಆತ ತಂದೆಯೂ ಅಲ್ಲ, ಸ್ವರ್ಗದಲ್ಲಿ (ಅಥವಾ ಬೇರೆಲ್ಲಿಯೂ) ಇಲ್ಲವೂ ಇಲ್ಲ. ಮಾನವನ ಸ್ವಯಂಕೃತಾಪರಾಧದ ಫಲವಿದು!

(ಸಕೇಪ)

ಅಳಲು

ಅಳಲು ಬಂಕೆಂದು ಅತ್ತತ್ತು ಬಳಲುವುದೇ?
ಅಳಲಿಗೂ ಬದುಕುವ ಛಾತಿ ಇದ್ದೇ ಇದೆ!
ಕಳೆಬರಹವಾಗುವ ತನಕ ಹೋರಾಡು ಬಿಡದೆ-
ಇಳೆಯೊಳಗೆ ಅಳಲಿರದ ಬಾಳುಂಟೇ? ಮಣ್ಣಿನ ಮಗ.

ದೊಡ್ಡರಂಗೇಗೌಡ

ಸಾಯುತ್ತಿವೆ, ಸಾಯುತ್ತಿವೆ, ನಮ್ಮ ಸಹಜೀವಿಗಳು

ನಾರ್ಮನ್ ಮೈಯರ್ಸ್

ಈ ಬೆಳಗ್ಗೆ ಎದ್ದಾಗ ನೀವು ನೋಡಿದ ಜಗತ್ತು, ನಿನ್ನೆ ಸಂಜೆಯ ಅನಂತರದ ಅವಧಿಯಲ್ಲಿ ತನ್ನಲ್ಲಿರುವ ಜೀವಜಾತಿಗಳಲ್ಲಿ ಕನಿಷ್ಠ ಪಕ್ಷ ಒಂದನ್ನಂತೂ ಕಳೆದುಕೊಂಡಿರುವುದರಲ್ಲಿ ಸಂದೇಹವಿಲ್ಲ. ೧೯೯೦ರ ದಶಕ ಪ್ರಾರಂಭವಾಗುವಷ್ಟರಲ್ಲಿ, ಗಂಟೆಗೆ ಕನಿಷ್ಠವೆಂದರೂ ಒಂದರ ಪ್ರಮಾಣದಲ್ಲಿ, ಜಗತ್ತಿನ ವಿವಿಧ ಜೀವಜಾತಿಗಳಿಗೆ ನಾವು ಅಂತಿಮ ನಮಸ್ಕಾರ ಹೇಳುತ್ತೇವೆ. ೨೦೦೦ರ ವೇಳೆಗೆ ಒಟ್ಟು ಜೀವಜಾತಿಗಳಲ್ಲಿ ಸುಮಾರು ಐದನೆಯ ಒಂದು ಭಾಗದಷ್ಟು ಸಂಪೂರ್ಣ ಕಣ್ಮರೆಯಾಗಿರುತ್ತವೆ.

ಈ ಜಗತ್ತಿನಲ್ಲಿರುವ ಜೀವಜಾತಿಗಳ ಸಂಖ್ಯೆ ಅಪಾರ. ಇವುಗಳ ಪಟ್ಟಿಯಲ್ಲಿ ಮಾನವರಂತಹ ಸುಮಾರು ೪,೫೦೦ ಸ್ತನಿಜೀವಿಗಳು ಮತ್ತು ೪೦,೦೦೦ದಷ್ಟು ಇತರ ಕಶೇರುಕಗಳಷ್ಟೇ ಸೇರಿಲ್ಲ. ೨೫೦,೦೦೦ಕ್ಕಿಂತ ಅಧಿಕ ಸಂಖ್ಯೆಯ ಸಸ್ಯಜಾತಿಗಳೂ ಈ ಜಗತ್ತಿನಲ್ಲಿವೆ. ಅಷ್ಟೇ ಅಲ್ಲ, ಅನೇಕ ಮಿಲಿಯಗಳಷ್ಟು ಅಕಶೇರುಕಗಳೂ ಅಸ್ತಿತ್ವದಲ್ಲಿವೆ. ಇವುಗಳಲ್ಲಿ ಹೆಚ್ಚಿನವು ಕ್ರಿಮಿಕೀಟಗಳಾಗಿರುತ್ತವೆ.

ಸುಮಾರು ೧೯೫೦ರಿಂದ, ಜನಸಂಖ್ಯೆಯ ಹೆಚ್ಚಳ ಮತ್ತು ತಂತ್ರವಿದ್ಯೆಯ ಬೆಳವಣಿಗೆಯ ಪರಿಣಾಮವಾಗಿ ಜಗತ್ತಿನ ವಿವಿಧ ಭಾಗಗಳಲ್ಲಿ ಹೆಚ್ಚು ಹೆಚ್ಚು ಹುಲ್ಲುಗಾವಲು ಪ್ರದೇಶಗಳು ಕೃಷಿ ಕ್ಷೇತ್ರಗಳಾಗಿ ಹಾಗೂ ಆಧುನಿಕ ನಗರಗಳಾಗಿ ಪರಿವರ್ತಿತವಾಗುತ್ತ ಬಂದಿವೆ. ಅನೇಕ ಜೌಗುಪ್ರದೇಶಗಳು ಸಮತಟ್ಟಾಗಿ ವಾಸಯೋಗ್ಯ ಭೂಮಿಗಳಾಗಿವೆ. ಆದರೆ, ಇದರ ಜೊತೆಗೆ ಅರಣ್ಯ ಪ್ರದೇಶಗಳೂ ಹವಳದ ದಿಬ್ಬಗಳೂ ಎಲ್ಲೆಡೆ ನಾಶವಾಗುತ್ತಿವೆ.

೧೯೮೭ನೆಯ ಜೂನ್ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ 'ಅವರ್ ಫೆಲೊಸ್ಪೀಷಿಸ್ : ಗೋಯಿಂಗ್, ಗೋಯಿಂಗ್...' ಎಂಬ ಲೇಖನದ ಅನುವಾದ.

ಬಟ್ಟಿನಲ್ಲಿ ನೈಸರ್ಗಿಕ ಪರಿಸರ ನಿರ್ಮೂಲನ ಕಾರ್ಯ ಅವ್ಯಾಹತವಾಗಿ ನಡೆಯುತ್ತಲೇ ಇದೆ.

ಇವೆಲ್ಲವುಗಳಿಂದ ಎಂಥ ಸರಣಿ ಪ್ರತಿಕ್ರಿಯೆಗಳು ಉಂಟಾಗಬಹುದೆಂದು ಸ್ವಲ್ಪ ನೋಡೋಣ.

ಅಮೆರಿಕದಲ್ಲಿ ಕೆಲವು ಜಾತಿಯ ಹಾಡುಹಕ್ಕಿಗಳಿವೆ. ಚಳಿಗಾಲದಲ್ಲಿ ಸ್ವಲ್ಪ ಕಾಲ ತಂಗಲು ಇವು ಸಂಕ್ರಾಂತಿ ವೃತ್ತಪ್ರದೇಶಕ್ಕೆ ತೆರಳುತ್ತವೆ. ಈ ಅವಧಿಯಲ್ಲಿ ಅಮೆರಿಕದಲ್ಲಿ ಕೆಲವಾದರೂ ಅರಣ್ಯಗಳು ನಾಶವಾಗುವುದರಿಂದ, ಆಗ ಸ್ವಾಭಾವಿಕವಾಗಿಯೇ, ಚಳಿಗಾಲದ ತರುವಾಯ ತಮ್ಮ ಮೂಲ ಸ್ಥಳಗಳಿಗೆ ಹಿಂದಿರುಗುವ ಈ ಹಾಡುಹಕ್ಕಿಗಳ ಸಂಖ್ಯೆ ಕಡಮೆಯಾಗುತ್ತದೆ. ಹೀಗಾಗುವುದರಿಂದ, ಪಕ್ಷಿಪ್ರಿಯರಿಗೆ ವಸಂತಋತುವಿನ ಆಹ್ಲಾದ ಕಡಮೆಯಾಗುವುದಷ್ಟೇ ಅಲ್ಲದೆ, ಕೃಷಿ ಹಾಗೂ ಅರಣ್ಯಗಳ ಮೇಲೂ ಕೆಲವು ಬಗೆಯ ಪರಿಣಾಮಗಳುಂಟಾಗುತ್ತವೆ. ಈ ಹಾಡುಹಕ್ಕಿಗಳ ವಾರ್ಷಿಕ ಓಂಪಯಣದ ವೇಳೆಗೆ ಸರಿಯಾಗಿ ಕೆಲವು ಜೀವಜಾತಿಗಳ ಮರಿಹುಳುಗಳು ಅಸಂಖ್ಯ ಪ್ರಮಾಣದಲ್ಲಿ ಭೂಮಿಯಲ್ಲಿ ಉತ್ಪತ್ತಿಯಾಗುತ್ತವೆ. ಈ ಹುಳುಗಳನ್ನು ನಾಶಪಡಿಸುವುದು ಮೇಲೆ ಹೇಳಲಾದ ಹಾಡುಹಕ್ಕಿಗಳಿಗಷ್ಟೇ ಸಾಧ್ಯ. ಹಾಡುಹಕ್ಕಿಗಳ ಸಂತತಿಯೇ ಕ್ಷಯವಾಗತೊಡಗಿತು ಎಂದರೆ, ಈ ಮರಿಹುಳುಗಳು ಕ್ರಮೇಣ ಕ್ರಿಮಿಕೀಟಗಳಾಗಿ, ಅಧಿಕ ಸಂಖ್ಯೆಯಲ್ಲಿ ಬೆಳೆದು ಉಪದ್ರವಕಾರಿಯಾಗುತ್ತದೆಂದೇ ಅರ್ಥ.

ಅಮೆಜಾನ್ ಪ್ರದೇಶದಲ್ಲಿ ಯುಗ್ಲೊಸ್ಸಿನ್‌ಗಳೆಂಬ ಹೆಸರಿನ ಒಂದು ಜಾತಿಯ ನೊಣಗಳಿವೆ. ಸಸ್ಯಗಳ ಪರಾಗಾದಾನಕ್ಕೆ ನೆರವಾಗುವಂತಹ ಇವು ಸಮಗ್ರ ಅರಣ್ಯ ಸಮುದಾಯದ ಕಲ್ಯಾಣಕ್ಕೆ ಮೂಲ ಕಾರಣಗಳಿವೆ. ಮಾನವರಿಂದ ಅರಣ್ಯಪ್ರದೇಶಗಳು ನಾಶವಾದವು ಎನ್ನಿ. ಆಗ ಕೆಲವು ಸಸ್ಯಜಾತಿಗಳು, ಮುಖ್ಯವಾಗಿ ಅತ್ಯಲ್ಪ ಸಂಖ್ಯೆಯಲ್ಲಿರುವಂಥವು, ಸಂಪೂರ್ಣ ಕಾಣೆಯಾಗುತ್ತವೆ. ಪರಿಣಾಮವಾಗಿ ಯುಗ್ಲೊಸ್ಸಿನ್‌ಗಳಿಗೆ ಆಹಾರವಾಗಿರುವಂತಹ ಕೆಲವು ಸಸ್ಯೋತ್ಪನ್ನಗಳ ಕೊರತೆಯುಂಟಾಗುತ್ತದೆ. ಆಗ ಸ್ವಾಭಾವಿಕವಾಗಿ ಈ ನೊಣಗಳ ಸಂಖ್ಯೆ ಕಡಮೆಯಾಗುತ್ತದೆ ಮತ್ತು ಪರಾಗಾದಾನ ಕ್ರಿಯೆಗೆ ಇವುಗಳನ್ನೇ ಅವಲಂಬಿಸಿಕೊಂಡಿರುವಂತಹ ಸಸ್ಯಜಾತಿಗಳೂ ಅಪಾಯದ ಅಂಚನ್ನು ತಲುಪುತ್ತವೆ. ಫಲಿತಾಂಶವಾಗಿ, ಇತರ ಅನೇಕ ಕೀಟಗಳು, ಸಸ್ಯಗಳು ಹಾಗೂ ಪ್ರಾಣಿಗಳು ಕೂಡ ಆಹಾರ ಸರಬರಾಜು ಕೊರತೆಯನ್ನು ಅನುಭವಿಸುತ್ತವೆ.

ಜೀವಿಪರಿಸ್ಥಿತಿ ಶಾಸ್ತ್ರಜ್ಞನಾಗಿ ನಾನು ಗಮನಿಸಿದ ಸ್ಥೂಲ ನಿಯಮವೊಂದನ್ನು ಇಲ್ಲಿ ಹೇಳಬಹುದು. ಒಂದೇ ಒಂದು ಸಸ್ಯಜಾತಿ ನಿರ್ನಾಮವಾದರೂ ಸಾಕು. ಪರಿಣಾಮವಾಗಿ ಉಂಟಾಗುವ ಸರಣಿ ಪ್ರತಿಕ್ರಿಯೆಗಳಿಂದಾಗಿ, ಕನಿಷ್ಠ ಹತ್ತರಿಂದ ಮೂವತ್ತರಷ್ಟು ಪ್ರಾಣಿಜಾತಿಗಳು ಅಪಾಯಸ್ಥಿತಿಯನ್ನು ತಲುಪುತ್ತವೆ; ಅಥವಾ ಸಂಪೂರ್ಣ ನಾಶವಾಗುವಾಗುತ್ತವೆ ಎಂದರೂ ತಪ್ಪಾಗಲಾರದು. ಪ್ರಾಣಿಜಾತಿಗಳ ಇಂಥ ವಿನಾಶಕ್ಕೆ ಅವಕಾಶ ನೀಡುವ ಮುಖ್ಯ ಜೀವಜಾತಿಗಳೆಂದರೆ ಕೆಲವು ಕ್ರಿಮಿಕೀಟಗಳು ಮತ್ತು ಮುಖ್ಯವಾಗಿ ಚಿಟ್ಟೆಗಳು. ಅಮೆರಿಕದಲ್ಲಿ ಕಂಡುಬರುವ ಹಮ್ಮಿಂಗ್‌ಬರ್ಡ್ ಹಾಗೂ ಟೊಕಾನ್‌ಗಳಂತಹ ಕೆಲವು ಹಕ್ಕಿಗಳನ್ನೂ ಇಲ್ಲಿ ಹೆಸರಿಸಬಹುದು. ಮರಕುಟಿಕಗಳೂ ಇದೇ

ಗುಂಪಿಗೆ ಸೇರುತ್ತವೆ. ಇವುಗಳ ನಾಶ ಇವುಗಳ ಸಂಕುಲಕ್ಕಷ್ಟೆ ಸೀಮಿತವಾಗಿರುವುದಿಲ್ಲ. ಬದಲಿಗೆ ಇತರ ಪ್ರಾಣಿಜಾತಿಗಳ ಅಳಿವಿಗೂ ಕಾರಣವಾಗುತ್ತದೆ.

ಪರಾಗಾದಾನಕ್ಕೆ ಕೀಟಗಳು ಮತ್ತು ಹಕ್ಕಿಗಳಷ್ಟೇ ನೆರವಾಗುವುದಿಲ್ಲ. ಕೆಲವು ಸ್ತನಿಗಳು, ವಿಶೇಷವಾಗಿ ಬಾವಲಿಯಂಥವು ಕೂಡ ಈ ಪಾತ್ರವನ್ನು ನಿರ್ವಹಿಸುತ್ತವೆ. ಇವು ಸಾಮಾನ್ಯವಾಗಿ ಗುಹೆಗಳಲ್ಲಿ ವಾಸಿಸುತ್ತವೆ. ಬಾವಲಿಗಳಿಗೆ ವಾಸಿಸಲು ಯೋಗ್ಯವಾದ ನೈಸರ್ಗಿಕ ಗುಹೆಗಳು ಕಡಿಮೆ ಸಂಖ್ಯೆಯಲ್ಲಿರುತ್ತವೆಯಷ್ಟೇ ಅಲ್ಲ, ಸಾಮಾನ್ಯವಾಗಿ ಇವು ಪರಸ್ಪರ ದೂರವಾಗಿ ಇರುತ್ತವೆ. ಮಲಯೇಷ್ಯಾದ ಅರಣ್ಯಗಳಲ್ಲಿ ಡ್ಯೂರಿಯನ್ ಎಂಬ ಹೆಸರಿನ ಹಣ್ಣಿನ ಗಿಡಗಳಿವೆ. ಇವುಗಳಲ್ಲಿ ಪರಾಗಾದಾನಕ್ರಿಯೆ ಮುಖ್ಯವಾಗಿ ಬಾವಲಿಗಳಿಂದಲೇ ನಡೆಯುತ್ತದೆ. ಡ್ಯೂರಿಯನ್ ಹಣ್ಣುಗಳು ಸ್ಥಳೀಯ ಜನರ ಅತಿಮೆಚ್ಚುಗೆಯ ಆಹಾರವಸ್ತುವಷ್ಟೇ ಆಗಿರದೆ ಪ್ರಮುಖ ಆರ್ಥಿಕ ಬೆಳೆಯೂ ಆಗಿರುತ್ತದೆ. ಮಲಯೇಷ್ಯಾದ ಅಧಿಕ ಸಂಖ್ಯೆಯ ಬಾವಲಿಗಳು ಸುಣ್ಣಕಲ್ಲು ರಾಶಿಗಳ ಗುಹೆಗಳಲ್ಲಿ ನೆಲಸಿದ್ದುವು. ಸಿಮೆಂಟ್ ತಯಾರಕರು ಈ ಸುಣ್ಣಕಲ್ಲುಗಳನ್ನು ಸ್ವಾಧೀನಪಡಿಸಿಕೊಂಡಾಗ ಬಾವಲಿಗಳು ನಿರ್ವಸಿತವಾಗಿ ಅವುಗಳು ಕಣ್ಮರೆಯಾಗತೊಡಗಿದುವು. ಸಿಮೆಂಟಿಗಾಗಿ ನಗರದ ಜನರು ಮಾಡುವ ಹಾಹಾಕಾರವೇನೋ ತಪ್ಪಿತು. ಆದರೆ ಡ್ಯೂರಿಯನ್ ಗಿಡಗಳು ಕಡಮೆಯಾಗತೊಡಗಿ ಈ ಕೃಷಿಯನ್ನೇ ಅವಲಂಬಿಸಿದಂತಹ ಜನರು ಕಷ್ಟಕ್ಕೆ ಈಡಾದರು.

ಈ ಸರಣಿ ಪ್ರತಿಕ್ರಿಯೆಯ ಇನ್ನೊಂದು ನಿದರ್ಶನವನ್ನು ಈಗ ನೋಡೋಣ. ಸಿಂಹಗಳು, ಹುಲಿಗಳು ಹಾಗೂ ತೋಳಗಳಂತಹ ಮಾಂಸಾಹಾರಿ ಪ್ರಾಣಿಗಳು ಈ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇವುಗಳ ಸಂತತಿ ನಾಶವಾಗುವುದರಿಂದ ಏನಾಗಬಹುದು ?

ಹೊಸದಾಗಿ ನಿರ್ಮಾಣಗೊಂಡ ಪನಾಮ ಕಾಲುವೆಯ ಸುತ್ತಮುತ್ತ, ಕೆಲವು ದಶಕಗಳ ಹಿಂದೆ ಭಾರೀ ಪ್ರವಾಹ ಕಾಣಿಸಿಕೊಂಡಿತು. ಆಗ ಪ್ರವಾಹದ ಹಾವಳಿಯಿಂದಾಗಿ, ಅನೇಕ ಡಜನ್ ಚದರ ಕಿಲೋಮೀಟರ್‌ಗಳಷ್ಟು ವಿಸ್ತಾರದ ಅರಣ್ಯಪ್ರದೇಶ ಒಂದು ಪ್ರತ್ಯೇಕ ದ್ವೀಪವಾಗಿ ಮಾರ್ಪಟ್ಟಿತು. ಅಲ್ಲಿ ಅದುವರೆಗೆ ಜೀವಿಸಿದ್ದ, ಚಿರತೆಗಳು, ಕೆಂಪು ಹುಲಿಗಳು ಹಾಗೂ ಕ್ರೂರ ಹದ್ದುಗಳಂತಹ ಭೀಕರ ಪ್ರಾಣಿಗಳಿಗೆ ಸಾಕಷ್ಟು ಮಾಂಸಾಹಾರ ದೊರೆಯದೆ ಕ್ರಮೇಣ ಅವು ಹಸಿವಿನಿಂದ ಸತ್ತವು. ವನ್ಯಮೃಗಗಳು ಆಹಾರವಾಗಿ ಬಳಸಿಕೊಳ್ಳುತ್ತಿದ್ದ ಮಂಗಗಳಂತಹ ಚಿಕ್ಕಪುಟ್ಟ ಪ್ರಾಣಿಗಳ ಸಂಖ್ಯೆ ತನ್ನಂತಾನೇ ಹೆಚ್ಚಾಗತೊಡಗಿತು. ಅವು ತಮ್ಮ ಆಹಾರಕ್ಕಾಗಿ ಪಕ್ಷಿಗಳ ಗೂಡುಗಳಿಗೆ ದಾಳಿಯಿಟ್ಟವು : ಪಕ್ಷಿಗಳ ಮೊಟ್ಟೆಗಳನ್ನೂ ಮರಿಗಳನ್ನೂ ಸ್ವಾಹಾ ಮಾಡಿದುವು. ಅತ್ಯಲ್ಪ ಸಮಯದಲ್ಲಿಯೇ, ಸುಮಾರು ೧೮ ವಿಶಿಷ್ಟ ಪಕ್ಷಿಜಾತಿಗಳು ನಿರ್ವಂಶವಾದುವು ಎನ್ನಲಾಗಿದೆ.

ಕೆಲವು ನೂರು ವರ್ಷಗಳ ಹಿಂದೆ, ಹಿಂದೂಮಹಾಸಾಗರದ ನಡುವಿರುವ ಮಾರಿಷಿಯಸ್ ದ್ವೀಪದಲ್ಲಿ ಡೋಡೊ ಎಂಬ ಹೆಸರಿನ ಪಕ್ಷಿಗಳಿದ್ದುವು. ದ್ವೀಪದ ಸ್ವಾಭಾವಿಕ ಪರಿಸರದಲ್ಲಿ ಯಾವ ಭಯವೂ ಇಲ್ಲದೆ ಇವು ಶಾಂತವಾಗಿ ಬದುಕಿದ್ದುವು ; ಇವುಗಳಿಗೆ ಹಾರುವ ಕಲೆಯೂ ಮರೆತುಹೋಗಿತ್ತು. ಸುಮಾರು ೧೫೫೦ರಲ್ಲಿ ಮೊತ್ತಮೊದಲ

ಬಾರಿಗೆ ಈ ದ್ವೀಪಕ್ಕೆ ಬಂದ ಯೂರೋಪ್ ನಾವಿಕರು ಡೋಡೋಗಳ ಬೇಟೆಯಾಡ ತೊಡಗಿದರು. ಕೆಲವೇ ವರ್ಷಗಳಲ್ಲಿ ಇವುಗಳ ಸಂತತಿ ಸಂಪೂರ್ಣ ನಾಶವಾಯಿತು. ಈ ಪ್ರಸಂಗದಿಂದಾಗಿ, "ಡೋಡೊ ವಂಶ ನಿರ್ಮೂಲವಾದಂತೆ" ಎಂಬ ನುಡಿಗಟ್ಟು ಈಗ ಬಳಕೆಗೆ ಬಂದಿದೆ.

ಮುಂದಿನ ಶತಮಾನಗಳಲ್ಲಿ ಈ ದ್ವೀಪಕ್ಕೆ ನೆಲಸಲು ಬಂದ ಯಾವ ವಿದೇಶೀಯರಿಗೂ ಡೋಡೊ ಪಕ್ಷಿಸಂಕುಲದ ಅಳಿವಿನಿಂದ ನಷ್ಟವುಂಟಾಗಲಿಲ್ಲ, ನಿಜ. ಆದರೆ ಈಚೆಗೆ, ವಿಸ್‌ಕಾನ್‌ಸಿಸ್ ವಿಶ್ವವಿದ್ಯಾನಿಲಯದ ಸ್ಟ್ಯಾನ್ಲೆ ಟೆಂಪಲ್ ಅವರು ವರದಿ ಮಾಡಿದಂತೆ, ಮಾರಿಷಿಯಸ್ ದ್ವೀಪದಲ್ಲಿನ ಬಹೂಪಯುಕ್ತವಾದ ಅಪೂರ್ವ ವೃಕ್ಷ ಜಾತಿಯೊಂದು ಅಪಾಯದ ಅಂಚಿನಲ್ಲಿದೆ. ಡೋಡೊ ಹಕ್ಕಿಗಳು ಇಲ್ಲದಿರುವುದೇ ಇದಕ್ಕೆ ಕಾರಣವೆಂದರೆ ಆಶ್ಚರ್ಯವಾದೀತು. ಆದರೆ ಇದು ಸತ್ಯಸಂಗತಿ. ಈ ವೃಕ್ಷದ ಬೀಜಗಳ ಹೊರಕವಚ ಗಟ್ಟಿಯಾಗಿರುತ್ತದೆ. ಅರೆದು ಮೃದುಮಾಡದ ವಿನಾ ಇದು ಮೊಳಕೆಯೊಡುವುದಿಲ್ಲ. ಇಂಥ ಮೃದುಗೊಳಿಸುವ ಪ್ರಕ್ರಿಯೆ ನಡೆಯುವುದು ಡೋಡೊ ಹಕ್ಕಿಗಳ ಎರಡನೆಯ ಜಠರದಲ್ಲಿ ಮಾತ್ರ ಸಾಧ್ಯ.

ಇಪ್ಪತ್ತು ವರ್ಷಗಳ ಹಿಂದೆ, ಮೊದಲಬಾರಿಗೆ ಉಗಾಂಡಕ್ಕೆ ಭೇಟಿ ನೀಡಿದಾಗ, ನೈಲ್ ನದಿಯಲ್ಲಿ ಬಹುಸಂಖ್ಯೆಯಲ್ಲಿರುವ ಮೊಸಳೆಗಳನ್ನು ನೋಡಿ ನನಗೆ ಭಯವಾಯಿತಾದರೂ ಅವು ನನ್ನನ್ನು ಮರುಳುಗೊಳಿಸಿದುವು. ಅವು ಮೀನುಗಳನ್ನು ಅಧಿಕ ಸಂಖ್ಯೆಯಲ್ಲಿ ಕಬಳಿಸುತ್ತಿದ್ದುವು. ಇದರಿಂದ ಕುಪಿತರಾದ ಸ್ಥಳೀಯ ಮೀನುಗಾರರು ಮೊಸಳೆಗಳನ್ನು ನಿರ್ಮೂಲಗೊಳಿಸಲು ನಿರಂತರವಾಗಿ ಹೆಣಗುತ್ತಿದ್ದರು.

ಹತ್ತು ವರ್ಷಗಳ ಅನಂತರ ಮತ್ತೆ ಅಲ್ಲಿಗೆ ಹೋದಾಗ ನಾನು ಕಂಡುದೇನು? ಮೊಸಳೆಗಳೇನೋ ನಾಶವಾಗಿದ್ದುವು. ಆದರೆ ಬೆಸ್ತರು ನಿರೀಕ್ಷಿಸಿದ್ದಂತಹ ಸತ್ಪರಿಣಾಮವೇನೂ ಉಂಟಾಗಿರಲಿಲ್ಲ. ನಿಜ ಸಂಗತಿ ಇಷ್ಟು : ಬೆಸ್ತರು ನಂಬಿದ್ದಂತೆ, ಅವರು ಹೆಚ್ಚು ಇಷ್ಟಪಡುವ ಸವಿ ಮಾಂಸದ ಮೀನು ಜಾತಿಗಳನ್ನು ಮೊಸಳೆಗಳು ಆಹಾರಕ್ಕಾಗಿ ಧ್ವಂಸಮಾಡುತ್ತಿರಲಿಲ್ಲ. ವಾಸ್ತವವಾಗಿ ಇವು ಕಬಳಿಸುತ್ತಿದ್ದದ್ದು ಚಿಕ್ಕಪುಟ್ಟ ಮೀನುಗಳನ್ನು ಹಾಗೂ ಬೆಸ್ತರು ಹೆಚ್ಚು ಇಷ್ಟಪಡುವ ಮೀನುಗಳನ್ನು ಬೇಟೆಯಾಡುವ ಇತರ ಕೆಲವು ಜಲಪ್ರಾಣಿಗಳನ್ನು. ಹೀಗಾಗಿ ಮೊಸಳೆಗಳು ಇಲ್ಲವಾದಾಗ, ನದಿಯಲ್ಲಿ ನಿರುಪಯುಕ್ತವಾದ ಮೀನುಗಳು ಹಾಗೂ ಉಪದ್ರವಕಾರಿ ಪ್ರಾಣಿಗಳ ಸಂಖ್ಯೆ ಹೆಚ್ಚಾಯಿತಲ್ಲದೆ, ಬೆಸ್ತರಿಗೆ ಲಾಭಕರವಾದ ಮೀನುಗಳೇನೂ ಹೆಚ್ಚಾಗಲಿಲ್ಲ.

ಆದರೆ, ನಿರ್ನಾಮವಾಗುವಂತಹ ಅವಕಾಶವನ್ನು ಜಾಣತನದಿಂದ ತಪ್ಪಿಸಿಕೊಳ್ಳುವ ಕೆಲವು ಜೀವಿಗಳೂ ಇವೆ. ಉದಾಹರಣೆಗೆ ಮನೆಯೊಳಗೆ ನೆಲಸಿರುವ ನೊಣಗಳು, ಇಲಿಗಳು ಕಳೆಯೆಂದು ಪರಿಗಣಿಸಲಾದ ಕೆಲಬಗೆಯ ಸಸ್ಯಗಳು ಇತ್ಯಾದಿ. ಇವುಗಳ ವಿನಾಶ, ಕೆಲವು ಮಾಂಸಾಹಾರಿ ಹಾಗೂ ಪರಾವಲಂಬಿ ಜೀವಿಗಳಿಂದ ಆಗುವ ಸಂದರ್ಭವಿದೆಯಾದರೂ, ಈ ಮಾಂಸಾಹಾರಿ ಮತ್ತು ಪರಾವಲಂಬಿ ಜೀವಿಗಳ ಮೇಲೆ ಮನುಷ್ಯ ಸದಾ ಆಕ್ರಮಣ ನಡೆಸುತ್ತಲೇ ಇರುವುದರಿಂದ, ಈ ಜೀವಿಗಳು ಅಪಾಯದಿಂದ ಪಾರಾಗಿ ಉಳಿಯುತ್ತವೆ.

ಬೋರ್ನಿಯೊ ಸರ್ಕಾರ, ನೊಣಗಳನ್ನು ನಿಯಂತ್ರಿಸುವ ಪ್ರಯತ್ನದಲ್ಲಿ, ಗ್ರಾಮಸ್ಥರ ವಸತಿಪ್ರದೇಶಗಳಲ್ಲಿ ಡಿಡಿಟಿ ಸಿಂಪಡಿಸಿದಾಗ ಏನಾಯಿತೆಂದು ಸ್ವಲ್ಪ ನೋಡೋಣ. ಆಗ ನೆಲದ ಮೇಲೆ ಸೊಳ್ಳೆಗಳು ಸತ್ತು ರಾಶಿಬಿದ್ದುವು. ಹಲ್ಲಿಗಳಂತಹ ಕೆಲವು ಜೀವಿಗಳಿಗೆ ಇದು ಭಾರಿ ಸಮಾರಾಧನೆಯಾಯಿತೇನೋ ನಿಜ. ಆದರೆ ಸತ್ತ ಸೊಳ್ಳೆಗಳನ್ನು ಸೇವಿಸಿದ ಹಲ್ಲಿಗಳೂ ಇತರ ಜೀವಿಗಳೂ ಡಿಡಿಟಿ ವಿಷದ ಪರಿಣಾಮಕ್ಕೆ ಈಡಾಗಿ ಸತ್ತವು. ಇವುಗಳನ್ನು ಆಹಾರವಾಗಿ ಸೇವಿಸಿದ ಬೆಕ್ಕುಗಳೂ ಎಲ್ಲೆಡೆ ಸಾಯತೊಡಗಿದುವು. ಪರಿಣಾಮವಾಗಿ, ಅಂದಿನವರೆಗೆ ಸಮಸ್ಯೆಯಾಗಿರದ ಇಲಿಗಳು ಭಾರೀ ಪ್ರಮಾಣದಲ್ಲಿ ಹೆಚ್ಚಿ ಮನೆಯಲ್ಲಷ್ಟೇ ಅಲ್ಲದೆ, ಹೊಲಗಳಲ್ಲಿ ಕೂಡ ಇವುಗಳ ಕಾಟವೇ ಕಾಟವಾಯಿತು.

ಈ ಸರಣಿ ಪ್ರತಿಕ್ರಿಯೆಗಳು ಎಷ್ಟು ಸಂಕೀರ್ಣವಾಗಿವೆಯೆಂದರೆ, ನಾವು ಇವುಗಳ ಬಗ್ಗೆ ಯಾವುದೇ ಭವಿಷ್ಯ ನುಡಿಯುವಂತಿಲ್ಲ. ಒಂದು ಜೀವಿಯ ಕುಲನಾಶವಾದ ಪರಿಣಾಮವಾಗಿ ಮುಂದೆ ಬೇರೆ ಯಾವಯಾವ ಜೀವಜಾತಿಗಳು ಅಪಾಯಕ್ಕೀಡಾಗುತ್ತವೆ ಎಂದು ಹೇಳುವುದು ಸುಲಭವಲ್ಲ. ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೊಬ್ಬರು, ಜಗತ್ತಿನ ಜೀವಜಾತಿಗಳು ಸಿಕ್ಕಾಪಟ್ಟೆ ನಾಶವಾಗುತ್ತಿರುವ ಈ ಪ್ರಕ್ರಿಯೆಯನ್ನು, ವಿಮಾನವೊಂದರ ಭಾಗಗಳನ್ನು ಜೋಡಿಸಲು ಬಳಸಲಾದ ಮೊಳೆಗಳನ್ನು ಯದ್ವಾತದ್ವಾ ಕೀಳುವುದಕ್ಕೆ ಹೋಲಿಸಿದ್ದಾರೆ. ಒಂದು ಮೊಳೆಯನ್ನು ಕಿತ್ತಪಕ್ಷಕ್ಕೆ ವಿಮಾನದ ಯಂತ್ರಕ್ಕೇನೂ ಧಕ್ಕೆಯಾಗಲಾರದು, ನಿಜ. ಬದಲಿಗೆ ನೂರಾರು ಮೊಳೆಗಳನ್ನು ಕಳಚಿಬಿಡಿ. ಆಗ ಯಾರು ತಾನೇ ಆ ವಿಮಾನವನ್ನು ನಡೆಸಲು ಅಥವಾ ಅದರಲ್ಲಿ ಪಯಣಿಸಲು ಧೈರ್ಯಮಾಡುತ್ತಾರೆ? ನಮ್ಮ ಭೂಮಿಯೂ ಬಾಹ್ಯಾಕಾಶದಲ್ಲಿ ಚಲಿಸುವ ಒಂದು ಯಂತ್ರದಂತೆ, ಇಲ್ಲಿರುವ ಜೀವಜಾತಿಗಳು ನಾಶವಾಗುತ್ತ ಹೋದರೆ, ಈ ಭೂಮಿಗೆ ರಕ್ಷಣೆಯಾದರೂ ಎಲ್ಲಿ?

ಯಾವುದೇ ಜೀವಜಾತಿ ಕಣ್ಮರೆಯಾದರೂ ಮಾನವ ಜನಾಂಗಕ್ಕೆ ಕೆಡುಕು ತಪ್ಪಿದ್ದಲ್ಲ. ನಾವು ಸೇವಿಸುವ ಔಷಧಗಳಲ್ಲಿ ನಾಲ್ಕರಲ್ಲಿ ಒಂದರಷ್ಟು ಔಷಧಗಳು ಮೂಲತಃ ಸಸ್ಯೋತ್ಪನ್ನಗಳಿಂದಲೇ ತಯಾರಾಗಿರುತ್ತವೆ. ಗ್ರೀಸ್ ದೇಶದಲ್ಲಿ ಬೆಳೆಯುವ ಹೂಗಿಡವೊಂದರಿಂದ, ರಕ್ತಸಂಚಯದ ಪರಿಣಾಮವಾಗಿ ಆಗಬಹುದಾದ ಹೃದಯಾಘಾತಕ್ಕೆ ಔಷಧ ತಯಾರಿಸುತ್ತಾರೆ ಎಂದರೆ ನೀವು ನಂಬುತ್ತೀರಾ? ೧೯೬೦ರಲ್ಲಿ ರಕ್ತ ಕ್ಯಾನ್ಸರ್‌ಗೆ ತುತ್ತಾದ ಮಕ್ಕಳು ಗುಣಹೊಂದುವ ಸಂದರ್ಭ ಐದಕ್ಕೆ ಒಂದರಷ್ಟು ಮಾತ್ರವಿತ್ತು. ಆದರೆ, ಈಗ ಈ ಸಾಧ್ಯತೆ ಐದಕ್ಕೆ ನಾಲ್ಕರಷ್ಟಾಗಿದೆ. ಮಡಗಾಸ್ಕರ್‌ನಲ್ಲಿ ಬೆಳೆಯುವ ಗುಲಾಬಿ ಜಾತಿಗೆ ಸೇರಿದ ಹೂಗಿಡವೊಂದರಿಂದ ಈಚೆಗೆ ಪರಿಣಾಮಕಾರಿ ಔಷಧಗಳನ್ನು ತಯಾರಿಸಿರುವುದೇ ಇದಕ್ಕೆ ಕಾರಣ. ಅಮೆಜಾನ್ ಪ್ರದೇಶದಲ್ಲಿ, ಕ್ಯಾನ್ಸರ್‌ಗೆ ಔಷಧ ತಯಾರಿಸಲು ಸಾಧ್ಯವಾಗುವ ಕನಿಷ್ಠ ಮೂರು ಬಗೆಯ ಸಸ್ಯಗಳಿವೆ ಎನ್ನಲಾಗಿದೆ. ಇಂಥ ಗುಣಗಳನ್ನೇ ಹೊಂದಿದ ಇನ್ನೂ ಏಳು ಸಸ್ಯಜಾತಿಗಳು ಜಗತ್ತಿನ ಬೇರೆಡೆ ಇರುವುದು ತಿಳಿದುಬಂದಿದೆ. ನಮ್ಮ ಮುಂದೆ ಈಗ ಇರುವ ಪ್ರಶ್ನೆಯೆಂದರೆ ಇದು. ಈ ಸಸ್ಯಜಾತಿಗಳು ನಾಶವಾಗುವ ಮುನ್ನವೇ ವೈದ್ಯವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ನಡೆಸು

ತ್ತಿರುವ ನಮ್ಮ ಪ್ರತಿಭಾಶಾಲಿಗಳು ಕ್ಯಾನ್ಸರ್‌ಗೆ ಸಮರ್ಥ ಔಷಧವೊಂದನ್ನು ತಯಾರಿಸಬಲ್ಲರೇ?

ಸಧ್ಯದ ನಮ್ಮ ಆಹಾರ ಪದಾರ್ಥಗಳು ೨೨ ಪ್ರಮುಖ ಸಸ್ಯಜಾತಿಗಳಿಂದ ಸಿಗುತ್ತಿದ್ದರೂ, ಆಹಾರ ಯೋಗ್ಯವಾದ ಕನಿಷ್ಠ ೨೦,೦೦೦ ಜೀವಜಾತಿಗಳನ್ನು ಗುರುತಿಸಲಾಗಿದೆ. ಸಂಶೋಧನೆ ಮುಂದುವರಿದಂತೆ, ಇನ್ನಷ್ಟು ಆಹಾರ ಯೋಗ್ಯ ಸಸ್ಯಜಾತಿಗಳು ಗಮನಕ್ಕೆ ಬರಬಹುದು. ಕೆಲವೇ ವರ್ಷಗಳ ಹಿಂದೆ, ಅಮೆರಿಕ ಸಂಯುಕ್ತ ಸಂಸ್ಥಾನದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯವರು ಆಗ್ನೇಯ ಏಷ್ಯದಲ್ಲಿ, ದ್ರಾಕ್ಷಿಯನ್ನು ಹೋಲುವ ಸಸ್ಯವೊಂದನ್ನು ಕಂಡುಹಿಡಿದರು. ಪ್ರೊಟೀನ್‌ಯುಕ್ತವಾಗಿರುವಂತಹ ಈ ಆಶ್ಚರ್ಯಕರ ಸಸ್ಯವನ್ನು ಸುಮಾರು ೭೦ ಅಭಿವೃದ್ಧ ರಾಷ್ಟ್ರಗಳಿಗೆ ಪರಿಚಯಮಾಡಿಕೊಡಲಾಯಿತು. ಈಚೆಗೆ ಮೆಕ್ಸಿಕೊದ ಕಾಡುಪ್ರದೇಶದಲ್ಲಿ ಕಂಡುಬಂದ ಒಂದು ಬಗೆಯ ಮುಸುಕಿನ ಜೋಳದ ಗಿಡಗಳನ್ನೂ ಜಗತ್ತಿನ ಎಲ್ಲೆಡೆ ಬೆಳೆಸಲು ಪ್ರಯತ್ನಿಸಲಾಗುತ್ತಿದೆ.

ಈಗ ಯೂಫ್ರೋಬ್ರ್ ಸಸ್ಯಗಳ ಬಗ್ಗೆ ವಿಚಾರ ಮಾಡೋಣ. ಇತರ ಎಲ್ಲ ಸಸ್ಯಗಳಂತೆ, ಇವು ಶರ್ಕರಾಂಶದಂತಹ ಕಾರ್ಬೊಹೈಡ್ರೇಟುಗಳನ್ನಷ್ಟೇ ಮಾತ್ರ ಉತ್ಪಾದಿಸುವುದಿಲ್ಲ, ಬದಲಾಗಿ ಹೈಡ್ರೊಕಾರ್ಬನ್‌ಗಳನ್ನು ಕೂಡ ಉತ್ಪಾದಿಸುತ್ತವೆ. ಇದನ್ನು ಪೆಟ್ರೋಲಿಯಮ್‌ನಂತೆಯೂ ಬಳಸಬಹುದಾಗಿದೆ. ಬರ್‌ಕ್ಲೆಯಲ್ಲಿರುವ ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೂ, ನೋಬೆಲ್ ಪ್ರಶಸ್ತಿ ವಿಜೇತ ರಸಾಯನವಿಜ್ಞಾನಿಗಳೂ ಆಗಿರುವ ಮೆಲ್ವಿನ್ ಕಾಲ್ವಿನ್ ಅವರ ಅಭಿಪ್ರಾಯದಂತೆ, ಜಗತ್ತಿನಲ್ಲಿ ತೈಲಗಳ ತೀವ್ರ ಅಭಾವ ತಲೆದೋರಿದಾಗ, ನಾವು ಪೆಟ್ರೋಲನ್ನು "ಬೆಳೆಯಲು" ಕೂಡ ಸಾಧ್ಯವಿದೆ. ಪೆಟ್ರೋಲಿಯಮ್ ತೋಟ ಎಂದಿಗೂ ಫಲವಿಹೀನವಾಗಲಾರದು. ಇಷ್ಟೇ ಅಲ್ಲ, ಯೂಫ್ರೋಬ್ರ್ ಸಸ್ಯಗಳು, ಇತರ ಆರ್ಥಿಕ ಬೆಳೆಗಳು ಬೆಳೆಯಲಾರದ ಅತ್ಯಂತ ಒಣ ಪ್ರದೇಶಗಳನ್ನು ಬೆಳೆಯಬಲ್ಲವು. ಕೃಷಿಯೋಗ್ಯವಲ್ಲದ ನಿರುಪಯುಕ್ತ ಭೂಮಿಗಳಲ್ಲಿಯೂ ಈ ಸಸ್ಯಗಳನ್ನು ಬೆಳೆಸಲು ಸಾಧ್ಯವಿದೆ. ಮುಂದೆ ಎಂದಾದರೊಂದು ದಿನ ಮರುಭೂಮಿಯಂಥ ಪ್ರದೇಶಗಳಲ್ಲಿ ಕೂಡ ನಾವು ಹೈಡ್ರೊಕಾರ್ಬನ್‌ಗಳನ್ನು ಬೆಳೆಸುವುದು ಸಾಧ್ಯವಾಗುತ್ತದೆ.

ಪ್ರಾಯಶಃ, ಜಗತ್ತಿನ ಸುಮಾರು ೨೫೦,೦೦೦ ಸಸ್ಯಜಾತಿಗಳಲ್ಲಿ ಹತ್ತನೆಯ ಒಂದು ಭಾಗಕ್ಕಿಂತಲೂ ಸ್ವಲ್ಪ ಕಮ್ಮಿ ಸಂಖ್ಯೆಯವುಗಳನ್ನು, ಅವುಗಳಿಂದ ಆರ್ಥಿಕ ಲಾಭವೇನಾದರೂ ಇದೆಯೇ ಎಂದು ತಿಳಿಯಲು ಈಗಾಗಲೇ ವೈಜ್ಞಾನಿಕವಾಗಿ ಪರೀಕ್ಷಿಸಲಾಗಿದೆ. ಯಾವುದೇ ಸಸ್ಯ ಜಾತಿಗಳನ್ನು ಕಾಪಾಡಿಕೊಂಡು ಬರುವುದರಿಂದ, ಈ ಸಂರಕ್ಷಣಾ ಕಾರ್ಯಕ್ಕೆ ವ್ಯಯಿಸುವ ಹಣದ ಹಲವು ಮಡಿಗಳಷ್ಟು ಆರ್ಥಿಕ ಪ್ರಯೋಜನ ಉಂಟೆಂಬುದನ್ನು ನಮ್ಮ ಅನುಭವವೇ ಸಾಬೀತುಪಡಿಸಿದೆ.

ಆದರೂ ಈ ಜೀವಜಾತಿಗಳ "ಮಹಾಮರಣ" ಮುಂದುವರಿದೇ ಇದೆ. ಕಳೆದ ವರ್ಷವೊಂದರಲ್ಲಿಯೇ ಎಂದರೆ ೧೯೮೭ರಲ್ಲಿಯೆ, ನೂರಾರು ಜೀವಜಾತಿಗಳು ಇಲ್ಲವಾಗಿವೆ ಎಂದು ದಾಖಲಾಗಿದೆ. ಹೀಗೆ ನಾಶವಾದುವುಗಳಲ್ಲಿ, ಕ್ಯಾನ್ಸರ್‌ನಂಥ ಮಹಾರೋಗಕ್ಕೆ ರಾಮಬಾಣವನ್ನು ತಯಾರಿಸಲು ಅಗತ್ಯವಾದ ಗುಣಾಂಶಗಳನ್ನು ಹೊಂದಿದ ಇನ್ನೆಷ್ಟು ಸಸ್ಯಜಾತಿಗಳು ಸೇರಿವೆಯೋ ಬಲ್ಲವರಾರು?

ಸಸ್ಯಗಳ ಇರುನೆಲೆಗಳನ್ನು ಕೂಡ ಸಂರಕ್ಷಿಸಬೇಕಾದ ಅಗತ್ಯವಿದೆ. ಅಪಾಯದ ಅಂಚಿನಲ್ಲಿರುವ ಸುಮಾರು ಶೇ. ೯೯ರಷ್ಟು ಜೀವಜಾತಿಗಳು ಕಣ್ಮರೆಯಾಗಲು ಹುಲ್ಲು ನೆಲಗಳ ಮೇಲೆ ಟ್ರ್ಯಾಕ್ಟರ್‌ಗಳೂ ಮರಗಳಿಗೆ ಅಡ್ಡವಾಗಿ ಗರಗಸಗಳೂ ಸದಾ ಓಡಾಡುತ್ತ ಇರುವುದೇ ಮುಖ್ಯ ಕಾರಣ. ಈಗ ಜಗತ್ತಿನ ವಿವಿಧ ಭಾಗಗಳಲ್ಲಿ ಇರುವ ಉದ್ಯಾನಗಳು ಹಾಗೂ ಸಂರಕ್ಷಿತ ಪ್ರದೇಶಗಳ ಸಂಖ್ಯೆ ಸುಮಾರು ೩೫೦೦. ಇವುಗಳ ಒಟ್ಟು ವಿಸ್ತಾರ ಈ ಜಗತ್ತಿನ ಒಟ್ಟು ಭೂಪ್ರದೇಶದ ವಿಸ್ತಾರದ ಶೇಕಡಾ ಮೂರಕ್ಕಿಂತಲೂ ಕಡಮೆ. ಕೀನ್ಯಾ ಟಾಂಜಾನಿಯಗಳಲ್ಲಿ ಇಂಥ ಪ್ರದೇಶ ಒಟ್ಟು ಭೂ ವಿಸ್ತಾರದ ಶೇಕಡಾ ೧೨ರಷ್ಟಿವೆ. ಇಂಥ ರಾಷ್ಟ್ರಗಳಿಗೇ, ತಮ್ಮಲ್ಲಿರುವ ಎಲ್ಲ ಜೀವಜಾತಿಗಳನ್ನು ಕಾಪಾಡಲು ಇನ್ನೂ ಹೆಚ್ಚು ಪ್ರದೇಶಗಳನ್ನು ಸಂರಕ್ಷಿತ ಪ್ರದೇಶಗಳನ್ನಾಗಿ ಪರಿವರ್ತಿಸುವ ಅಗತ್ಯವಿದೆ. ಹೀಗಿರುವಾಗ ಉಳಿದ ರಾಷ್ಟ್ರಗಳ ಬಗ್ಗೆ ಏನುತಾನೇ ಹೇಳೋಣ?

ಹೆಚ್ಚುಹೆಚ್ಚು ಜೀವಜಾತಿಗಳು ಒತ್ತೊತ್ತಾಗಿ ಕಂಡುಬರುವ ಕಡೆಗಳಲ್ಲಿ ಉದ್ಯಾನಗಳು ಮತ್ತು ಸಂರಕ್ಷಿತ ಪ್ರದೇಶಗಳ ಅಗತ್ಯ ಅಧಿಕವಾಗಿರುತ್ತದೆ. ಉದಾಹರಣೆಗೆ ಸಂಕ್ರಾಂತಿವೃತ್ತ ಪ್ರದೇಶದ ಭಾಗಗಳು ಹಾಗೂ ಹವಳದ ದಿಬ್ಬಗಳು. ಸಂಕ್ರಾಂತಿವೃತ್ತ ಪ್ರದೇಶಕ್ಕೆ ಸೇರಿದ ಅರಣ್ಯಭಾಗಗಳ ಒಟ್ಟು ವಿಸ್ತಾರ ಒಟ್ಟು ಭೂ ವಿಸ್ತಾರದ ಶೇಕಡ ಎಂಟರಷ್ಟು ಮಾತ್ರ. ಇವುಗಳಲ್ಲಿ ಹೆಚ್ಚೆಂದರೆ ನಮ್ಮ ಜಗತ್ತಿನ ಜೀವಜಾತಿಗಳಲ್ಲಿ ಅರ್ಧದಷ್ಟನ್ನು ಮಾತ್ರ ಸಂರಕ್ಷಿಸಬಹುದು. ಆದ್ದರಿಂದ ಆಯ್ದ ಕೆಲವು ಸ್ಥಳಗಳನ್ನು ಸಂರಕ್ಷಿತ ಪ್ರದೇಶಗಳಾಗಿ ಘೋಷಿಸಿ ಅಲ್ಲಿನ ಜೀವಜಾತಿಗಳನ್ನು ಕಾಪಾಡಿಕೊಂಡು ಬರಬೇಕಾದುದರ ಅಗತ್ಯವನ್ನು ಎಲ್ಲ ರಾಷ್ಟ್ರಗಳೂ ಮನಗಾಣಬೇಕಾಗಿದೆ.

ನಮ್ಮ ಜಗತ್ತಿಗೆ ಸೇರಿದ ಎಲ್ಲ ಜೀವಜಾತಿಗಳನ್ನೂ ಸಂರಕ್ಷಿಸುವುದು ಸರ್ಕಾರದ ಕರ್ತವ್ಯ ಎಂಬುದನ್ನು ಆಡಳಿತಗಾರರಿಗೆ, ನಾಯಕರಿಗೆ ಪೌರರು ತಿಳಿಸಬೇಕಾದ ಅಗತ್ಯವುಂಟು. ಪ್ರಾಣಿಪಕ್ಷಿಗಳನ್ನು ಮುದ್ದಿಗಾಗಿ ಸಾಕುವ, ಮನೆಯ ಆವರಣದಲ್ಲಿ ಕೈದೋಟ ಬೆಳೆಸುವ, ಮರಗಿಡಬಳ್ಳಿಗಳನ್ನು ಮತ್ತು ಪಕ್ಷಿಪ್ರಾಣಿಗಳನ್ನು ನಮ್ಮ ಸಹಜೀವಿಗಳಂತೆ ಪ್ರೀತಿಯಿಂದ ಕಾಣುವ ಅಭ್ಯಾಸವನ್ನು ಮಕ್ಕಳಲ್ಲಿ ಬೆಳೆಸಬೇಕಾಗಿದೆ. ಈ ವಿಚಾರದಲ್ಲಿ ನಾವೆಲ್ಲರೂ ಆಸಕ್ತಿ ತೋರಿಸಿ ಸರ್ಕಾರವೂ ಆಸಕ್ತಿ ತೋರಿಸುವಂತೆ ಮಾಡಬೇಕಾಗಿದೆ.

ಅನೇಕ ಖಾಸಗೀ ಸಂರಕ್ಷಣ ತಂಡಗಳ ಸದಸ್ಯರು ಈಗಾಗಲೇ ಜೀವಜಾತಿಗಳನ್ನು ಕಾಪಾಡಿಕೊಂಡು ಬರುವ ಹೋರಾಟದಲ್ಲಿ ತೊಡಗಿದ್ದಾರೆ. ಇಂಥ ತಂಡಗಳಲ್ಲಿ ಹೆಸರಿಸಬಹುದಾದುದೇ 'ದಿ ವರ್ಲ್ಡ್ ವೈಲ್ಡ್‌ಲೈಫ್ ಫಂಡ್' ಭಾರತದಲ್ಲಿರುವ 'ವರ್ಲ್ಡ್ ಲೈಫ್ ಫಂಡ್'ಗೆ ಸಂಬಂಧಪಟ್ಟ ವಿವರಗಳಿಗಾಗಿ ಈ ವಿಳಾಸಕ್ಕೆ ಬರೆಯಬಹುದು; ವರ್ಲ್ಡ್ ವೈಲ್ಡ್ ಲೈಫ್, ಇಂಡಿಯ, ಕೇರ್ ಆಫ್ ಗೋದ್ರೆಜ್ ಅಂಡ್ ಬಾಯ್ಸ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ ಪ್ರೈವೆಟ್ ಲಿಮಿಟೆಡ್, ಲಾಲ್‌ಬಾಗ್, ಪರೇಲ್, ಮುಂಬಯಿ–೪೦೦೦೧೨ ಅಥವಾ 'ವೈಲ್ಡ್‌ಲೈಫ್ ಕನ್ಸರ್ವೇಷನ್ ಇಂಟರ್‌ನ್ಯಾಷನಲ್'.

ಈಗಾಗಲೇ ವಿಳಂಬವಾಗಿದೆ. ಅನೇಕ ಜೀವಜಾತಿಗಳು ಈಗ ಅಪಾಯದ ಅಂಚನ್ನು ತಲುಪಿವೆ. ಅವುಗಳನ್ನು ನಾಶವಾಗದಂತೆ ನೋಡಿಕೊಳ್ಳಲು ಜನರು ಸಾಮೂಹಿಕ ಪ್ರಯತ್ನ ನಡೆಸಬೇಕಾಗಿದೆ, ವೈಯಕ್ತಿಕವಾಗಿ ಪ್ರತಿಯೊಬ್ಬ ಪೌರನೂ ಈ ಪವಿತ್ರ ಕಾರ್ಯದಲ್ಲಿ ಭಾಗಿಯಾಗಬೇಕಾಗಿದೆ.

ಅನು : ಶಂಕ ಐತಾಳ

ಸೊಸೆ-ಮಗಳು

ಇಫತ್ ಮೋಹಾನಿ

ಖಾನಸಾಹೇಬರು ತಮ್ಮ ಅತ್ಯಂತ ಚಿಕ್ಕಮಗಳು ನಾಜಲೀಯ ವಿವಾಹವನ್ನು ಬಹು ವಿಜೃಂಭಣೆಯಿಂದ ಮಾಡಿದರು. ಅವಳು ಎಲ್ಲರಿಗಿಂತ ಚಿಕ್ಕವಳು. ಬಹು ಅಚ್ಚುಮೆಚ್ಚಿನವಳು. ಪಠಾಣರ ಮನೆತನದಲ್ಲಿಯೇ ಅತಿ ಚಲುವೆ. ಅವಳನ್ನು ನೋಡಿದವರೆಲ್ಲ ಈ ಜ್ಯೋತಿ ತಮ್ಮ ಮನೆಯನ್ನು ಬೆಳಗಲೆನ್ನುವರು. ಆ ಋಣ ಅಸ್ಲಮ್‌ಗೆ ಇತ್ತು. ಅವಳನ್ನು ಪಡೆದು ಅವನು ಅತ್ಯಂತ ಸಂತೋಷವಾಗಿದ್ದ. ಮೊದಮೊದಲು ನಾಜಲೀ ಕೂಡ ಸಂತೋಷವಾಗಿಯೇ ಕಾಣುತ್ತಿದ್ದಳು. ಆದರೆ ಮದುವೆಯಾಗಿ ಇನ್ನೂ ಆರು ತಿಂಗಳೂ ಕಳೆದಿರಲಿಲ್ಲ. ಸಣ್ಣಪುಟ್ಟ ಮನಃಕ್ಲೇಶಗಳು ಪ್ರಾರಂಭವಾದವು.

ಅಸ್ಲಮ್‌ನ ತಂದೆ ಉಂಡುಟ್ಟ ಸುಖ ಪುರುಷರು ಅವರ ಸಂಸಾರವೂ ದೊಡ್ಡದು. ಮಕ್ಕಳು ಸರಕಾರಿ ಸೇವೆಯಲ್ಲೂ ಕೆಲವರು ವ್ಯಾಪಾರ ಮಾಡಿಕೊಂಡೂ ಇದ್ದರು. ಇಬ್ಬರು ವಿದೇಶದಲ್ಲಿದ್ದರು. ಪ್ರತಿ ತಿಂಗಳು ತಂದೆಗೆ ಹಣ ಕಳುಹಿಸುತ್ತಿದ್ದರು. ಅಸ್ಲಮ್ ಸ್ಟೀಲ್‌ಮಿಲ್ಲಿನ ಮ್ಯಾನೇಜರ್ ಆಗಿದ್ದ. ಕೈತುಂಬ ಸಂಬಳ ಬರುತಿತ್ತು. ಆದರೆ ಹೆಚ್ಚಿನ ಹಣದ ಲೋಭ ಅವನನ್ನು ಮನುಷ್ಯತ್ವದಿಂದ ಕೆಳಗೆ ಇಳಿಸಿದ್ದಿತು. ನಾಜಲೀಯ ವಾರಗಿತ್ತಿಯರಿಬ್ಬರು ತಂದ ವರದಕ್ಷಿಣೆ ಸಾಮಾನುಗಳನ್ನು ಇಡಲಿಕ್ಕೆಂದೇ ಒಂದು ಪ್ರತ್ಯೇಕ ಮನೆ, ಅಸ್ಲಮ್ ತಂದೆ ಆಜಮ್ ಸಾಹೇಬರು ಖರೀದಿಸಬೇಕಾಯಿತು. ಅಸ್ಲಮ್‌ನ ಹೆಂಡತಿ ಒಳ್ಳೆಯ ಮನೆತನದ ಹುಡುಗಿಯರು ತರುವಂತೆ ಯೋಗ್ಯ ವರದಕ್ಷಿಣೆಯನ್ನು ತಂದಿದ್ದಳು. ಕೆಲಸಕ್ಕೆಬಾರದ ಹೆಚ್ಚಿನ ಸಿಂಗಾರ ವಸ್ತುಗಳು ಅವಳಿಗೆ ಸಿಕ್ಕಿರಲಿಲ್ಲ. ವರದಕ್ಷಿಣೆಯೆಂದು ಫ್ರಿಜ್, ಟೇಪ್‌ರಿಕಾರ್ಡರ್, ಟೀವಿ

೧೯೮೫ ಡಿಸೆಂಬರ್ ತಿಂಗಳಿನ "ಬೀಸ್ವಿಸದಿ"ಯಲ್ಲಿ ಪ್ರಕಟವಾದ ಶ್ರೀಮತಿ ಇಫತ್ ಮೋಹಾನಿಯವರ ಉರ್ದು ಕಥೆ 'ಬಹು-ಬೇಟಿ'ಯ ಕನ್ನಡಾನುವಾದ.

ಅವಳು ತಂದಿರಲಿಲ್ಲ. ಆದರೆ ಖಾನ ಸಾಹೇಬರು ಸಾಮಾಜಿಕ ಸಂಪ್ರದಾಯಕ್ಕನುಗುಣವಾಗಿ ಅಳಿಯನಿಗೆ ವರೋಪಚಾರವೆಂದು ಅತ್ಯಂತ ಸುಂದರವಾದ ಸ್ಕೂಟರ್ ಅವಶ್ಯ ಕೊಡಿಸಿದ್ದರು. ಆದರೆ ಇದರ ಬಗ್ಗೆ ಅಸ್ಲಮ್‌ಗಾಗಲಿ, ಅವನ ತಂದೆ ತಾಯಿಗಳಿಗಾಗಲಿ ಯಾವ ಗೌರವವೂ ಬೆಲೆಯೂ ಇರಲಿಲ್ಲ. ಹಿರಿಯ ಸೊಸೆಗೆ ವರದಕ್ಷಿಣೆಯ ರೂಪದಲ್ಲಿ ಅವರ ತಂದೆ ಒಂದು ಮನೆಯನ್ನೇ ಕೊಟ್ಟಿದ್ದರು. ಕಿರಿಯ ಸೊಸೆ ಭವ್ಯವಾದ ಫ್ರಿಜ್, ಉನ್ನತವಾದ ಆಟೋಮೆಟಿಕ್ ಅಲ್ಮಾರಿ ತಂದಿದ್ದಳು.

ಇವುಗಳನ್ನೆಲ್ಲ ನೋಡಿ ಅಸ್ಲಮ್‌ಗೆ ಬರುಬರುತ್ತ ತಾನು ಕೀಳೆಂಬ ಭಾವನೆ ಬರತೊಡಗಿತ್ತು. ಅತ್ತಿಗೆಯರೂ ಸೋದರಿಯರೂ ತಂದೆ ತಾಯಿಗಳೂ ತನ್ನನ್ನು ನೋಡಿ ಒಳಗೊಳಗೇ ಬಯ್ಯುತ್ತ, ಹೊರಗಡೆಗೆ ನಗುತ್ತಿರುವರೆಂದನಿಸಿತು. ತನ್ನ ವಿಶಾಲವಾದ ಹಾಲ್‌ನಲ್ಲಿಟ್ಟ ತನ್ನ ವರದಕ್ಷಿಣೆಯ ಸಾಮಾನುಗಳು ಹಳೆಯವೂ ಕಡಿಮೆ ಬೆಲೆಯವೂ ಎನಿಸತೊಡಗಿದವು. ಈ ಅಲ್ವಿನ್ ಅಲ್ಮಾರಿ, ಸಿಂಗಾರದ ಮೇಜು, ಸಾಗವಾನಿ ಪಲ್ಲಂಗ ಮತ್ತು ಸ್ಕೂಟರ್‌ಗಳು ತನ್ನ ವ್ಯಕ್ತಿತ್ವವನ್ನು ನೋಡಿ ಹೀಯಾಳಿಸುತ್ತಿರುವವೆಂದನಿಸಿತು. ಅತ್ತಿಗೆಯರ ಕೋಣೆಗಳಲ್ಲಿ ಇಣಿಕಿದರೆ ಸಾಮಾನುಗಳು ಕಣ್ಣು ಕೋರೈಸುತ್ತಿದ್ದವು. ಅವರಿಗೆ ಯಾವ ಸಾಮಾನದ ಕೊರತೆ! ಏನು ಅವರಲಿಲ್ಲ?! ಅವರು ಹೆಮ್ಮೆಪಟ್ಟುಕೊಳ್ಳುವುದೂ ನಿಜವಿತ್ತು. ಹಾಗೆ ನೋಡಿದರೆ ಅವರೇನು ಅಷ್ಟು ಚೆಲುವೆಯರಲ್ಲ. ಆದರೆ ಅವರ ನಾಲಗೆ ಬಲು ಹರಿತ. ಶೀಘ್ರ ಕೋಪಿಗಳು. ಅಲ್ಪರು ಯಾವಾಗಲೂ ತಮ್ಮ ಹೆಚ್ಚುಗಾರಿಕೆಯನ್ನು ಹೇಳಿ ಕೊಳ್ಳುವುದೇ ಅವರ ಮುಖ್ಯ ಕೆಲಸ. ಹೊಸ ಹೊಸ ವಸ್ತುಗಳನ್ನು ಬಟ್ಟೆಗಳನ್ನು ಶೇಖರಿಸುವುದರಲ್ಲಿಯೇ ದಿನಗಳೆಯುತ್ತಿದ್ದರು. ಹೆಚ್ಚಿನ ಬಟ್ಟೆಗಳನ್ನಿಡಲು ಅಲ್ಮಾರಿಗಳಲ್ಲಿ ಸ್ಥಳವಿರುತ್ತಿರಲಿಲ್ಲ. ಇಷ್ಟಿದ್ದರೂ ಅವರಿಗೆ ಇನ್ನೂ ಸಮಾಧಾನವಿಲ್ಲ. ಅದೇ ಅವರ ಜೀವನ, ದೊಡ್ಡಸ್ತಿಕೆ, ನಿಶ್ಚಿಂತತೆ ಮತ್ತು ಐಶ್ವರ್ಯದಿಂದ ತುಂಬಿತುಳುಕುವುದೇ ಜೀವನವೆಂದು ಬಗೆದಿದ್ದರು. ಅಸ್ಲಮ್, "ಇದೆಲ್ಲ ಏನು? ಬರಿಯ ಸುಂದರ ಮುಖಕ್ಕಾಗಿ ನಾನು ಮೋಸ ಹೋದೆ. ಈ ಸೌಂದರ್ಯ ಯಾವ ಕೆಲಸಕ್ಕೆ? ಈ ಸೌಂದರ್ಯವೇ ನನ್ನನ್ನು ಮನೆತನದಲ್ಲಿ ನಗೆ ಪಾಟಲಿಗೀಡುಮಾಡಿದೆ. ಏನು ತಂದಿದ್ದಾಳೆ ನನ್ನ ಹೆಂಡತಿ?" ಎಂದೆಲ್ಲ ಯೋಚಿಸುವ. "ವರೋಪಚಾರವೆಂದು ಸ್ಕೂಟರ್ ಕೊಟ್ಟಿದ್ದಾರೆ. ಅದನ್ನು ನೋಡಿದವರು ಹೀಯಾಳಿಸಿ ನಗುತ್ತಾರೆ. ಆಹಾ! ಏನು ಮಹಾ ಸ್ಕೂಟರ್? ಇತ್ತೀಚೆಗೆ ಭಂಗೀಯವರೂ ಸ್ಕೂಟರ್ ಇಟ್ಟಿರುತ್ತಾರೆ" ಎನ್ನುತ್ತಿದ್ದ.

ಅವನಿಗೆ ನಾಜಲೀನ್ ಕಂಡರೆ ಸಿಡಿಮಿಡಿ, ಒಂದಲ್ಲೊಂದು ಆಕ್ಷೇಪಣೆ. ಇದು ಅವನ ತುಟಿಯಿಂದ ಹೊರಟು ಅವನ ತಂದೆ ಅಜಮ್‌ಸಾಹೇಬ; ಅವರ ಹೆಂಡತಿ; ಅವರ ಸೊಸೆಯಂದಿರು, ಹೆಣ್ಣು ಮಕ್ಕಳವರೆಗೆ ಹೋಯಿತು. ಅವರೆಲ್ಲರಿಗೂ ಮೊದಲಿನಿಂದಲೂ ನಾಜಲೀ ಬಗ್ಗೆ ಒಳಗೊಳಗೇ ಮತ್ಸರವಿತ್ತು. ಆದರೆ ಅಸ್ಲಮ್ ಅವಳ ಮುಖ ಕಂಡು ಮರುಳಾಗಿದ್ದುದರಿಂದ, ಅವನ ಮನಸ್ಸು ನೋಯಿಸಬಾರದೆಂದು ಅವರೆಲ್ಲ ಸುಮ್ಮನಿರುತ್ತಿದ್ದರು. ಈಗ ಸ್ವತಃ ಅಸ್ಲಮ್ ತನ್ನ ಹೆಂಡತಿ ಮತ್ತು ಅವಳು ತಂದ ಸಾಮಾನುಗಳ ಬಗ್ಗೆ ಆಕ್ಷೇಪಣೆ ಮಾಡುತ್ತಿದ್ದುದನ್ನು ಕಂಡು ಎಲ್ಲರ ನಾಲಗೆಗಳೂ ಸಡಲಿದವು. ಬಾಯಿಗೆ ಬಂದಂತೆ ತೆಗಳಲು ಪ್ರಾರಂಭಿಸಿದರು.

ಆಜಮ್‌ಸಾಹೇಬರೂ ಮಹಾಲೋಭಿ, ಕೀಳುಪ್ರವೃತ್ತಿಯವರು. ಅವರು, "ಅಸ್ಲಮ್! ಇದು ನಿನ್ನ ತಪ್ಪು, ನೀನು ಹುಡುಗಿಯ ಮುಖ ನೋಡಿ ಮೋಸ ಹೋದೆ. ನಾವು ನಿನಗಾಗಿ ಒಳ್ಳೊಳ್ಳೆಯ ಹುಡುಗಿಯರನ್ನು ನೋಡಿದ್ದೆವು. ಈಗೇಕೆ ಮುಖ ಸಪ್ಪೆ ಮಾಡಿಕೊಳ್ಳುತ್ತಿ? ಅನುಭೋಗಿಸು" ಎಂದು ಡಣಾಡಂಗುರವಾಗಿ ಹೇಳುತ್ತಿದ್ದರು.

ಅಸ್ಲಮ್‌ನ ತಾಯಿ, "ಆ ಸುಡುಗಾಡು ಖಾನ್ ನಮಗೆ ಮೋಸಮಾಡಿದ. ಹುಡುಗಿ ಎಲ್ಲೂ ಖರ್ಚಾಗದೆ ಕುಳಿತಿತ್ತು. ಹೇಗೋ ಮಾಡಿ ಹುಡುಗನಿಗೆ ತೋರಿಸಿದ. ಮರುಳು ಮಾಡಿದ. ನನ್ನ ಮಗ ಮುಗ್ಧ, ಸಂಭಾವಿತ. ಅವನ ಮೇಲೆ ಏನು ಮೋಡಿ ಮಾಡಿದನೋ! ಹುಡುಗಾ ಹುಚ್ಚನಾಗಿ ಬಿಟ್ಟ, ಈಗ ಮಗನಿಗೆ ಕಣ್ಣು ತೆರೆದಿದೆ. ಆದರೆ ಏನು ಮಾಡುವುದಕ್ಕೆ ಆಗುತ್ತದೆ? ಎಂದು ಗೊಣಗಿದರು.

ಅಸ್ಲಮ್‌ನ ತಂಗಿ, "ಅಣ್ಣನಿಗೆ ಲಗ್ನವಾಗಲು ಸಾಹುಕಾರ ಹುಡುಗಿಯರ ಕೊರತೆ ಇತ್ತೆ? ಈಗಲೂ ಬೇಕಾದರೆ ಆತನ ಮನೆ ಇಂಥವರಿಂದ ತುಂಬೀತು. ನಿಜ, ಅಂದರೆ ಅಮ್ಮಾ! ನಮ್ಮ ಸ್ನೇಹಿತೆಯರ ಎದುರು, ನಾಜಲೀ ಅತ್ತಿಗೆ, ಬರಿ ಇಪ್ಪತ್ತೊಂದು ಜೊತೆ ಬಟ್ಟೆ, ಐದು ತೋಲ ಚಿನ್ನದ ಸರ ತಂದಿದ್ದಾಳೆಂದು ಹೇಳಿಕೊಳ್ಳಲು ನಾಚಿಕೆಯಾಗುತ್ತದೆ" ಎಂದಳು.

ಇನ್ನೊಬ್ಬ ತಂಗಿ, "ದೇವರ ಸತ್ಯವಾಗಿ ಹೇಳುತ್ತೇನೆ. ದೊಡ್ಡ ಅತ್ತಿಗೆಯ ತಂದೆ ಎಂಭತ್ತು ತೋಲ ಚಿನ್ನ, ಒಂದುನೂರಾ ಒಂದು ಜೊತೆ ಬಟ್ಟೆ ಕೊಟ್ಟಿದ್ದಾರೆ. ಮೇಲೆ ಅದೆಷ್ಟೋ ಉಡುಗೊರೆ. ಇಡಲಿಕ್ಕೆ ಮನೆ ಸಾಲದಾಯಿತು" ಎಂದು ವ್ಯಂಗ್ಯವಾಗಿ ನುಡಿದಳು.

ಅಕ್ಕ, "ಅಸಮಾಧಾನದಿಂದ ಇಳಿದುಹೋದ ತಮ್ಮನ ಮುಖ ನಮ್ಮಿಂದ ನೋಡುವುದಕ್ಕೆ ಆಗುತ್ತಿಲ್ಲ" ಎಂದು ಹೇಳಿದಳು.

"ನನ್ನ ಅಕ್ಕನ ಮಗಳು ಇನ್ನೂ ಕುಮಾರಿಯಾಗಿಯೇ ಇದ್ದಾಳೆ. ನಮ್ಮ ಅಕ್ಕ ಅವಳ ಹೆಸರಿಗೆ ಎರಡೂವರೆ ಲಕ್ಷ ರೂಪಾಯಿಯ ಮನೆ ಬರೆದಿಟ್ಟಿದ್ದಾಳೆ. ವರದಕ್ಷಿಣೆ ಎಷ್ಟೂಂತ ಕೇಳುವ ಹಾಗೆಯೇ ಇಲ್ಲ. ನಾಲ್ಕೈದು ಲಾರಿಗಳು ವರದಕ್ಷಿಣೆ ಸಾಮಾನುಗಳನ್ನು ತರಲಿಕ್ಕೆ ಸಾಕಾಗಲಿಕ್ಕಿಲ್ಲ. ಅಮ್ಮಾ! ನೋಡು!! ಇನ್ನೂ ಸಮಯ ಇದೆ. ನಾಜಲೀ ಮದುವೆಯಲ್ಲಿ ಗೊತ್ತುಮಾಡಿದ 'ಮೊಹರ್' ಹಣ ಅವಳಿಗೆ ವಾಪಸ್‌ಮಾಡಿ, ಅವಳನ್ನು ಬಿಟ್ಟುಬಿಡಲು ಹೇಳು. ಬೀಗತನ ಸರಿಸಮಾನದ್ದಿರಬೇಕು. ಮನೆತನದ ಇತರ ಜನರಲ್ಲೂ, ಸ್ನೇಹಿತರಲ್ಲೂ ಅಸ್ಲಮ್‌ನ ಮರ್ಯಾದೆ ಹೋಗಬಾರದು" ಎಂದು ಕಿರಿಯ ಅತ್ತಿಗೆ ಹೇಳಿದಳು.

"ಮೊದಲು ನಾನು ನಾಜಲೀಯನ್ನು ಅವಳ ತಂದೆಯ ಮನೆಗೆ ಕಳಿಸುವೆ. ಅವಳ ತಂದೆ ಖಾನರಿಗೆ, ನೀವು ನಮಗೆ ಮೋಸ ಮಾಡಿದ್ದೀರಿ. ನಮ್ಮ ಸಂಪತ್ತಿನ ಸರಿಸಮಾನ ಹುಡುಗಿ ನಮಗೆ ಬೇಕಿತ್ತು. ಫ್ರಿಜ್ಜು, ಟೀವೀ, ಆಟೋಮೆಟಿಕ್ ಅಲ್ಮಾರಿ ಮತ್ತು ವಾಷಿಂಗ್ ಮೆಷಿನ್ ನೀವು ಕೊಡುವುದಾದರೆ ನಮಗೆ ಹುಡುಗಿ ಒಪ್ಪಿಗೆ. ಇಲ್ಲದಿದ್ದರೆ, ಇಂಥ ಕಂಗಾಲು ಸೊಸೆಯರ ಹಣೇಬರಹ ಏನಾಗುತ್ತದೆಂಬುದು ನಿಮಗೆ ತಿಳಿಯದ ಮಾತೇನಲ್ಲ" ಎಂದು ಹೇಳುವೆನೆಂದು ಆಜಮ್‌ಸಾಹೇಬರು ಗುಡುಗಿದರು.

ಅವರ ಮಾತಿನ ಸುರಿಮಳೆ ನಡಿದೇ ಇತ್ತು. ಅವರ ಹೆಂಡತಿ ನಾಜಲೀಯನ್ನು ಕರೆದು ಬಾಯಿಗೆ ಬಂದಂತೆ ಬಯ್ಯುತ್ತಿದ್ದರು.

ಆಗ ಅವರ ನಾದಿನಿ, "ಅದಕ್ಕೆ ಮನಸ್ಸು ಆಗುತ್ತದೆ. ಇಂಥ ತಿಳಿಗೇಡಿಗಳಮೇಲೆ, ಸೀಮೆಎಣ್ಣೆ ಸುರಿದು ಕಡ್ಡಿ ಗೀರಬೇಕೆಂದು" ಎಂದಳು.

"ಅಕ್ಕಾ! ತಾವು ನನ್ನನ್ನು ಸುಟ್ಟುಬಿಡಿ. ನನ್ನಿಂದ ಇಷ್ಟೆಲ್ಲ ವಸ್ತುಗಳನ್ನು ತರುವುದು ಆಗದ ಮಾತು. ತಮಗೆಲ್ಲರ ಮನಸ್ಸಿಗೂ ಒಪ್ಪುವಂತೆ ಈ ಬೆಲೆ ಬಾಳುವ ವಸ್ತುಗಳನ್ನು ನಾನು ಎಲ್ಲಿಂದ ತರಲಿ?" ಎಂದು ನಾಜಲೀ ಗೋಳಿಟ್ಟಳು. ಅಳುತ್ತಲೇ ಇದ್ದಳು. ಆದರೂ ಯಾರಿಗೂ ಕನಿಕರ ಬರಲಿಲ್ಲ.

"ಜೀವಂತವಾಗಿ ತೌರಮನೆಗೆ ಹೋಗುತ್ತಿದ್ದೀಯೆ. ಉಪಕಾರ ಸ್ಮರಿಸು. ಮತ್ತೆ ಬೇರೆ ಯಾರಾದರು ಆಗಿದ್ದರೆ, ನಿಜವಾಗಲೂ ನಿನ್ನನ್ನು ಸುಟ್ಟೇ ಬಿಡುತ್ತಿದ್ದರು. ನಮಗೆ ಶ್ರೀಮಂತ–ಗೌರವಸ್ಥ ಸೊಸೆ ಬೇಕು. ನಿನ್ನಂತೆ ಕಂಗಾಲರುಬೇಡ" ಎಂದು ಎಲ್ಲರೂ ಬೆದರಿಕೆ ಹಾಕಿ ತೌರಮನೆಗೆ ಕಳಿಸಿಯೇ ಬಿಟ್ಟರು.

ಅಳುತ್ತ ಕರೆಯುತ್ತ ಅರೆಜೀವಿಯಾಗಿದ್ದ ನಾಜಲೀ ಮನೆಗೆ ಬಂದುದನ್ನು ನೋಡಿ, ನಡೆದುದನ್ನು ಕೇಳಿ, ಖಾನಸಾಹೇಬರ ಪಿತ್ತ ನೆತ್ತಿಗೇರಿತು. ಅವರು ರೋಷದಿಂದ ಕಿಡಿಕಿಡಿಯಾದರು. ಅತ್ತೆ ಮನೆಯಲ್ಲಿ ಏನು ಬೆದರಿಕೆ ಹಾಕಿದ್ದರೆಂಬುದನ್ನು ನಾಜಲೀ ಮರೆಮಾಚದೆ ತನ್ನ ತಂದೆಗೆ ಹೇಳಿದ್ದಳು.

"ನಡೆ! ನಾನೇ ನಿನ್ನನ್ನು ಅವರೆದುರಿಗೆ ಜೀವಂತ ಸುಟ್ಟುಬಿಡುತ್ತೇನೆ" ಎಂದರು. ಅವರು ಸಿಟ್ಟಿನಿಂದ ರಾಕ್ಷಸನಂತಾಗಿ ಕೈಯಲ್ಲಿ ಐದಾರು ಲೀಟರಿನ ಸೀಮೆಎಣ್ಣೆ ತುಂಬಿದ ಡಬ್ಬವನ್ನು ತೆಗೆದುಕೊಂಡರು. ಎರಡನೆಯ ಕೈಯಿಂದ ನಾಜಲೀಯ ಕೈಯನ್ನು ಹಿಡಿದುಕೊಂಡು ನಾಜಲೀಯ ಅತ್ತೆ ಮನೆಗೆ ನಡೆದರು. ಅಲ್ಲಿ ಎಲ್ಲರೂ ಕೂಡಿ ಚಹ ಕುಡಿಯುತ್ತಿದ್ದ ಸರಿಯಾದ ಸಮಯಕ್ಕೆ ಮುಟ್ಟಿದರು. ಈ ತಂದೆ ಮಗಳನ್ನು ನೋಡುತ್ತಲು ಅವರೆಲ್ಲ ಗಡಗಡ ನಡುಗಿದರು. ಕೆಲವರು ಎದ್ದು ನಿಂತರು. ಕೆಲವರ ಕೈಯಲ್ಲಿಯ ಚಹದ ಕಪ್ಪುಗಳು ಕಂಪಿಸಿದವು. ಆಜಮ್‌ಸಾಹೇಬರು ಭಯಭೀತರಾಗಿ, ಖಾನರನ್ನು ದುರುದುರು ನೋಡತೊಡಗಿದರು.

ಖಾನಸಾಹೇಬರ ಕೋಪದಿಂದ ಸಿಡಿದೆದ್ದ ಭಯಂಕರ ಜ್ವಾಲೆಗೆ ತಂಪನೆರೆಯುವುದು ಈಗ ಸಾಧ್ಯವಿರಲಿಲ್ಲ. ಅವರು ಸಿಟ್ಟಿನ ಪರಮಾವಧಿಯಿಂದ ಘುಡುಘುಡಿಸುವ ಧ್ವನಿಯಲ್ಲಿ "ಆಜಮ್‌ಸಾಹೇಬರೇ! ನಿಮ್ಮ ಅಪ್ಪಣೆಯ ಪ್ರಕಾರ ಸೀಮೆಎಣ್ಣೆ ಮತ್ತು ಬೆಂಕಿಕಡ್ಡಿಯನ್ನು ಜೊತೆಗೇ ತಂದಿದ್ದೇನೆ. ನನ್ನ ಮಗಳನ್ನು ಸುಡಲು ನಿಮ್ಮ ಎಣ್ಣೆಯನ್ನೇಕೆ ಖರ್ಚುಮಾಡುವಿರಿ? ಆದರೆ ಸುಡಿಸಿಕೊಳ್ಳುವವಳು ನಾಜಲೀ ಒಬ್ಬಳೇ ಅಲ್ಲ. ಜೊತೆಗೆ ನಿಮ್ಮ ಇಬ್ಬರು ಹೆಣ್ಣು ಮಕ್ಕಳೂ ಸುಟ್ಟುಹೋಗುವರು. ಏಕೆಂದರೆ ಮಗಳಾಗಲೀ ಸೊಸೆಯಾಗಲೀ ಒಂದೇ ಬಗೆಯಾಗಿ ಸುಡುವುರೆಂಬುದು ತಮಗೆ ಗೊತ್ತಾಗಲಿ. ದುಃಖ ಆಘಾತ ಒಂದೇ ರೀತಿ. ಅವರ ತಂದೆಯ ಮೇಲೆ ಆಗುವುದು. ಒಂದೇ ರೀತಿಯ ಕಿಚ್ಚು ಹಡೆದ ತಾಯಿಯ ಹೊಟ್ಟೆಯಲ್ಲಿ ಸುರಿಯುವುದು. ಬೇಗ ಮಹಾಶಯರೇ! ಕೂಡಿಸಿರಿ ಮೂವರನ್ನೂ ಇಲ್ಲಿ. ಒಂದೇ ಸಾಲಿನಲ್ಲಿ. ಅವರನ್ನು

ನಾನು ಸೀಮೆಎಣ್ಣೆ ಸುರಿದು ಸುಡುವೆ. ಶೂಲಕ್ಕೆ ನಾನು ಏರುವೆ. ನನಗೆ ಎಳ್ಳಷ್ಟೂ ಭೀತಿ ಇಲ್ಲ" ಎಂದು ಗರ್ಜಿಸಿದರು.

ಅಜಮ್‌ಸಾಹೇಬರು ಭಯದಿಂದ ಸ್ತಂಭಿತರಾದರು. ಏನೋ ಹೇಳಬೇಕೆಂದು ಬಯಸಿದರು. ಬಾಯಿಯಿಂದ ಉಸಿರೇ ಹೊರಡಲಿಲ್ಲ. ಹುಡುಗಿಯರೆಲ್ಲ ಬೆದರಿ ನಡಗುತ್ತಿದ್ದರು. ಅಸ್ಲಮ್ ಮೌನವಾಗಿದ್ದ. ಅವನ ತಾಯಿಗೆ ಈ ತಲೆತಿರುಕ ಪಠಾಣ ಎಲ್ಲರನ್ನೂ ಸುಟ್ಟು ಬೂದಿ ಮಾಡಿಯಾನೆಂಬ ಭಯ.

"ಇವತ್ತು ವರದಕ್ಷಿಣೆಯ ಲೋಭ ಅನೇಕ ಮನೆಗಳನ್ನು ಮಸಣಗಳನ್ನಾಗಿ ಮಾಡಿದೆ. ವರದಕ್ಷಿಣೆಗೆ ಬೆಲೆ ಇದೆ. ಜೀವಕ್ಕೆ ಬೆಲೆಯಿಲ್ಲ. ಅರೆ! ನೀವೆಷ್ಟು ನಾಚಿಕೆ ಇಲ್ಲದವರು? ಹುಡುಗಿಯ ಹಣದ ಮೇಲೆ ಸುಖಭೋಗ ಪಡೆಯಬೇಕೆಂದಿದ್ದೀರಿ. ಅವಳು ಬಡವೆಯಾಗಿದ್ದರೆ ನಿಮಗೆ ಕನಿಕರ ಬರುವುದಿಲ್ಲ. ಅವಳ ಚಿತೆಯನ್ನೇ ಸಿದ್ಧ ಮಾಡುತ್ತೀರಿ. ಏಕೆ? ನಿಮ್ಮ ಹೆಣ್ಣುಮಕ್ಕಳು ದುಃಖ ಸಂಕಟದಿಂದ ಪಾರಾಗಿದ್ದಾರಿಯೆ? ಈ ಸೊಸೆಯನ್ನು ಕೆಸರಿನ ಮೇಲಿಂದ ಎತ್ತಿ ತಂದಿದ್ದೀರಾ? ಇವಳ ಮೇಲೆ ಕ್ರೂರತನದ ಪರ್ವತವನ್ನೇ ಹೇರಿದ್ದೀರಿ. ಅದೇ ನಿಮ್ಮ ಮಗಳ ಮೇಲೆ ಕಷ್ಟ ಬಂದರೆ ನಿಮ್ಮ ಎದೆ ಒಡೆದು ನೀರಾಗುತ್ತದೆ. ಇದೆಯೇ ನಿಮ್ಮ ನ್ಯಾಯ? ನೀವೂ ಸ್ವತಃ ಮಗಳ ತಂದೆಯಲ್ಲವೆ? ನಾನು ಕೇಳುತ್ತೇನೆ; ನಿಮ್ಮ ಸೊಸೆ ಕಡಿಮೆ ವರದಕ್ಷಿಣೆ ತಂದರೆ ಅವಳದೇನು ತಪ್ಪು? ಜೀವಂತವಾಗಿ ಸುಟ್ಟುಹೋಗುವುದು, ಶೂಲಕ್ಕೆ ಏರುವುದು, ಕುತ್ತಿಗೆಯನ್ನು ಕತ್ತಿಯ ಬಾಯಿಗೆ ಕೊಡುವುದು ಅವಳ ಜವಾಬ್ದಾರಿ ಅಲ್ಲ. ತಪ್ಪಿತಸ್ಥರು ನಾವು. ಕತ್ತನ್ನು ಹಿಸುಕಿಸಿಕೊಳ್ಳುವವರು ನಾವು. ಜೀವಂತವೇ ಸುಟ್ಟು ಬೂದಿಯಾಗುವವರು ನಾವು; ನಾವು! ಅವರ ತಂದೆ ತಾಯಿಗಳು!! ಕುಂಬಾರನ ಮೇಲೆ ನಿಮ್ಮ ಆಟ ನಡೆಯದಿದ್ದರೆ ಅವನ ಕತ್ತೆಯ ಕಿವಿಯನ್ನು ಕೊಯ್ಯುತ್ತೀರಾ? ಏನು? ಇದೆಯೇ ಮಾವನ ಪೌರುಷ? ಗಂಡನ ಶೌರ್ಯ? ಇದೆಯೆ ನಾದಿನಿಯರು ತೋರುವ ಅಕ್ಕತಂಗಿಯರ ಪ್ರೀತಿ? ಇದೆಯೆ ಅತ್ತೆ ತೋರುವ ತಾಯಿಯ ಮಮತೆ? ನನಗೆ ಉತ್ತರ ಕೊಡಿ. ಇವತ್ತು ನಾನು ಒಂದು ನಿರ್ಣಯ ಮಾಡಿ ನಿಮ್ಮಿಂದ ಉತ್ತರ ಪಡೆದೇ ಹೋಗುತ್ತೇನೆ. ಇಲ್ಲಾ ಈ ಕಡೆಗೆ ಇಲ್ಲಾ ಆ ಕಡೆಗೆ. ಈ ಒಂದೇಸವನೆ ಕೊಡುತ್ತಿರುವ ಸಂಕಟ, ನನ್ನ ಮಗಳಿಂದಲೂ ನನ್ನಿಂದಲೂ ಸಹಿಸಲಸಾಧ್ಯ. ಬೀಗ ಮಹಾಶಯರೇ! ನಾನು ನಿಮ್ಮನುದ್ದೇಶಿಸಿಯೇ ಮಾತನಾಡುತ್ತಿರುವುದು. ನೀವು ದೇವರ ದಯದಿಂದ ಈ ಮನೆತನದ ಮುಖ್ಯ ಯಜಮಾನರು. ನೀವು ಯಾವ ಹಾದಿಯನ್ನು ತುಳಿಯುತ್ತೀರೋ ಅದೇ ಜಾಡಿನಲ್ಲಿ ಈ ಲೋಭಿ, ಆಶೆಬುರುಕ, ಬಹಿರೂಪಿ ನಟನೆಮಾಡುವ ಎಲ್ಲ ನಿಮ್ಮವರೂ ಹೆಜ್ಜೆಯನ್ನು ಹಾಕುತ್ತಾರೆ. ನನಗೆ ಇವರುಗಳಲ್ಲಿ ಯಾರ ಮೇಲೂ ಕೋಪವಿಲ್ಲ. ನನ್ನ ಆಕ್ಷೇಪಣೆ ಇರುವುದು ನಿಮ್ಮೊಡನೆ. ತಾವು ಮುಸಲ್ಮಾನರು. ಪೂಜ್ಯರು, ಅನುಭವಿಗಳು. ತಮಗೆ ಇಸ್ಲಾಮಿ-ವರದಕ್ಷಿಣೆಯ ಬಗ್ಗೆ ತಿಳುವಳಿಕೆಯೂ ಇದೆ. ಯಾರು ಕೊಡಬಲ್ಲರು? ಯಾರಿಂದ ಏನೂ ಕೊಡಲಾಗುವುದಿಲ್ಲೆಂಬ ತಿಳುವಳಿಕೆಯೂ ನಿಮಗಿದೆ. ನಾಳೆ ದೇವರಿದಿರು ಮುಖ ತೋರಿಸಿ ಸತ್ಯ ನುಡಿಯಬೇಕಾಗುವುದೆಂಬುದನ್ನೂ ಬಲ್ಲಿರಿ. ಹೀಗಿದ್ದ ಮೇಲೆ ನೀವೇ ನನಗೆ ತಿಳಿಸಿ ಕೊಡಿ. ಇದು

ಏನು ನಿಮ್ಮ ರೀತಿ? ಸರಿಯಾದ ಅಪ್ಪಣೆ ಕೊಡಬಲ್ಲವರಾಗಿದ್ದರೆ ಈಗಲೂ ಸಮಯವಿದೆ. ಇಲ್ಲದಿದ್ದರೆ ಇಂದು ನಾನು ಜೀವ ತೆಗೆದುಕೊಳ್ಳುವ ಅಥವಾ ಕಳೆದುಕೊಳ್ಳುವ ನಿರ್ಣಯ ಮಾಡಿ ಹೊರಟಿದ್ದೇನೆ. ಆ ಕೆಲಸ ಮಾಡಿಯೇ ತೀರುತ್ತೇನೆ."

ಆಜಮ್ ಸಾಹೇಬರು ಗಂಟಲನ್ನು ಸರಿಮಾಡಿಕೊಳ್ಳುತ್ತ ನಡುಗುವ ಸ್ವರದಲ್ಲಿ, "ಸೋ....ದ....ರ....ಖಾನ್! ಸಂಸಾರದಲ್ಲಿ ಪರಸ್ಪರ ಇಂಥ ಕಚ್ಚಾಟಗಳು ನಡೆಯುತ್ತಲೇ ಇರುತ್ತವೆ. ನೀವು ಇಷ್ಟು ಗಂಭೀರವಾಗಿ, ನಿಜವಾಗಲೂ ಕೊಲ್ಲಲು ಸಾಯಲು ಸಿದ್ಧರಾಗಿರುವುದನ್ನು ಕಂಡು ನನಗೆ ಸೋಜಿಗವೆನಿಸುತ್ತದೆ. ಅರೆ! ನಿಮ್ಮ ಮಗಳು. ನನ್ನ ಮಗಳಲ್ಲವೆ? ಈಗ ಈ ಹೆಂಗಸರು, ಈ ತಿಳಿಗೇಡಿ ಅಸ್ಲಮ್ ಏನಾದರೂ ಅಂದಿದ್ದರೆ, ಅದು ಅವರ ತಪ್ಪು. ಅದರಿಂದ ದೊಡ್ಡವರಾದ ನಾವೂ ನೀವೂ ಮನಸ್ತಾಪ ಮಾಡಿಕೊಳ್ಳಬಾರದು. ಈ ಸೀಮೆಎಣ್ಣೆ ಏಕೆ ಎತ್ತಿಕೊಂಡು ಬಂದಿರುವಿರಿ? ಏನು? ಎಲ್ಲ ತಿಳುವಳಿಕೆಯನ್ನು ಮಾರಿಕೊಂಡಿದ್ದೀರಾ?" ಎಂದರು.

"ಆಜಮ್‌ಸಾಹೇಬರೇ! ಸಾಕು ಒಂದು ಪ್ರತಿಜ್ಞೆ ನಿಮ್ಮಿಂದ ಮಾಡಿಸಿಕೊಳ್ಳಬೇಕೆಂದಿದ್ದೇನೆ. ಮತ್ತೆ ಎಂದೂ ನಾಜಲೀಯ ಮನಸ್ಸು ನೋಯಿಸಬಾರದು. ಅವಳಿಗೆ ಏನೂ ಕಷ್ಟ ಕೊಡಬಾರದು. ಕೊಟ್ಟಿದ್ದೇ ಆದರೆ ಜಗತ್ತಿನಲ್ಲಿ ನಾನು ಮತ್ತೇನನ್ನೂ ಮಾಡದೆ ಇರಬಹುದು. ಆದರೆ ನಿಜವಾದ ನ್ಯಾಯಮೂರ್ತಿಯ ಎದುರಿಗೆ ನಿಮ್ಮ ಕತ್ತು ಬಗ್ಗಿಸಿ ನಿಲ್ಲಿಸೇನು! ಕೈ ಚಾಚಿ ಬೇಡಿ ಕೊಂಡೇನು" ಎಂದು ಖಾನ ಸಾಹೇಬರು ಹೇಳಿದರು ಮತ್ತು, "ನೋಡಿ! ಅವಳ ಮೇಲೆ ಮತ್ತೆಂದಾದರು ಸಿಟ್ಟು ಬಂದರೆ ಅವಳನ್ನು ಬಯ್ಯಬೇಡಿ. ಹುಡುಗಿ ಪಾಪ ಮೂಕಪ್ರಾಣಿ. ಕೈಲಾಗದವಳು. ಕಷ್ಟಕಾರ್ಪಣ್ಯಕ್ಕೆ ಒಳಗಾದವಳು. ಅವಳು ಎಂದಿಗೂ ಸಾಂಪ್ರದಾಯಿಕ ಹಸು. ಯಾರ ಕೈಯಲ್ಲಿ ಅದರ ಕತ್ತಿನ ಹಗ್ಗ ಕೊಡುವಿರೋ ಅವರ ಹಿಂದೆ ಅದು ಹೋಗುವುದು" ಎಂದು ನುಡಿದರು.

"ಅಸ್ಲಮ್! ಚಿಕ್ಕಪ್ಪ ಅವರನ್ನು ಕ್ಷಮಿಸಿ ಎಂದು ಕೇಳಿಕೊ" ಎಂದು ಆಜಮ್ ಸಾಹೇಬರು ಹೇಳಿದರು. ಪ್ರಾಯಶಃ ಇದರಲ್ಲಿಯೇ ಅವರು ಹಿತವಾಗಬಹುದೆಂದು ತಿಳಿದರು. ಆಗಾಗ ಕಣ್ಣಿನ ಕೊನೆಯಿಂದ ಸೀಮೆಎಣ್ಣೆಯ ಡಬ್ಬವನ್ನು ನೋಡುತ್ತಿದ್ದರು.

"ಮಗು ಅಸ್ಲಮ್! ನನಗೆ ಅವಕಾಶ ಕೊಡು. ನಾನು ನಿನ್ನ ಎಲ್ಲ ಬೇಡಿಕೆಯನ್ನೂ ಪೂರ್ತಿಮಾಡುವೆ. ಮನೆಯನ್ನು ಮಾರಿಬಿಡುವೆ. ಅಂಗಡಿಯನ್ನು ಮಣ್ಣುಗೂಡಿಸಿಬಿಡುವೆ. ನನಗೆ ನಿನ್ನ ಮೇಲಿನ ಪ್ರೀತಿ ಎಲ್ಲದಕ್ಕಿಂತಲೂ ಅಧಿಕ. ಅದೇ ನನಗೆ ಸಂತಸ ಕೊಡುವ ವಸ್ತು. ಆದರೆ ನಿರ್ಜೀವ ವಸ್ತುವಿನ ಆಶೆಯಲ್ಲಿ ಸಜೀವ ವಸ್ತುವನ್ನು ಅಗೌರವದಿಂದ ಕಾಣಬೇಡ," ಎಂದರು ಖಾನರು.

"ಚಿಕ್ಕಪ್ಪ! ನನ್ನನ್ನು ಕ್ಷಮಿಸಿಬಿಡಿ. ನನಗೆ ಇನ್ನು ಏನೂ ಬೇಡ. ತಾವು ನಿಜ ಹೇಳುತ್ತಿದ್ದೀರಿ. ವಿಶ್ವಾಸಿಕ ಸೌಜನ್ಯವತಿಯಾದ ಸತಿಯೇ ಬೆಲೆ ಬಾಳುವ ವರದಕ್ಷಿಣೆಯೆಂದು ನನಗೆ ಈಗ ಸಂಪೂರ್ಣ ಅರಿವಾಗಿದೆ" ಎಂದು ಅತ್ಯಂತ ದೈನ್ಯದಿಂದ ಅಸ್ಲಮ್ ಖಾನಸಾಹೇಬರ ಪಾದಕ್ಕೆ ನಮಸ್ಕರಿಸಿದ.

ಖಾನ ಸಾಹೇಬರ ಕಣ್ಣುಗಳಲ್ಲಿ ನೀರೂರಿದವು.

ಅನು : ಮಾಧವರಾವ್ ಮುಧೋಳ್

ವಿಶ್ವ ಸಾಕ್ಷರತಾ ಸಪ್ತಾಹ

ನಾಗರಾಜೇಗೌಡ

ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸೆಪ್ಟಂಬರ್ ೮ ರಿಂದ ಸೆಪ್ಟಂಬರ್ ೧೪ರ ವರೆಗೆ, ವಿಶ್ವದಲ್ಲೆಡೆ ಸಭೆ, ಸಮ್ಮೇಳನ ಮತ್ತು ವಿಚಾರಗೋಷ್ಠಿಯ ವಾರ ಇದು. ವಿಶ್ವ ಸಾಕ್ಷರತಾ ವಾರ. ಅಂತರರಾಷ್ಟ್ರೀಯ ಮಟ್ಟದಲ್ಲಿ 'ವಯಸ್ಕರ ಶಿಕ್ಷಣ' ಎಂಬ ಪದಗಳು ಹೆಚ್ಚಾಗಿ ಬಳಕೆಯಾದದ್ದು ಎರಡನೇ ಮಹಾಯುದ್ಧಾನಂತರ. ಯುದ್ಧದ ಭೀಕರ ಪರಿಣಾಮದಿಂದ ನೊಂದ ಜನತೆ ಬಂದೂಕವೊಂದೇ ಸಮಸ್ಯೆಯನ್ನು ಬಗೆಹರಿಸಲಾರದು ಎಂಬುದನ್ನು ಮನಗಂಡು ಜನಾಂಗಗಳ ನಡುವೆ ಹೊಂದಾಣಿಕೆ, ಸಹಕಾರ, ಪರಸ್ಪರ ಅರಿವು ಮೂಡಿಸಲು ವಯಸ್ಕರ ಶಿಕ್ಷಣದ ಅಗತ್ಯದ ಬಗ್ಗೆ ಪ್ರಚಾರವೂ ಆಗಬೇಕೆಂದು ಬಯಸಿದರು. ಈ ದಿಸೆಯಲ್ಲಿ ಸಂಯುಕ್ತ ರಾಷ್ಟ್ರಸಂಸ್ಥೆಯ ಅಂಗ ಸಂಸ್ಥೆಗಳಲ್ಲಿ ಒಂದಾದ 'ಯುನೆಸ್ಕೊ' ಅತ್ಯಂತ ಹೆಸರಾದುದು. 'ಯುನೆಸ್ಕೊ ಫಂಡಮೆಂಟಲ್ ಎಜುಕೇಷನ್' ಎಂಬ ಹೆಸರಿನಿಂದ ಸಾಕ್ಷರತಾ ಕಾರ್ಯವನ್ನು ಆರಂಭಿಸಿ ಸಾಕ್ಷರತಾ ಸಾಧನೆಗಾಗಿ ವಿಶ್ವದ ಮಟ್ಟದಲ್ಲಿ ಹಲವು ಸಭೆ ಸಮ್ಮೇಳನಗಳನ್ನು ನಡೆಸಿದೆ. ಅಂತಹ ಸಭೆ ಸಮ್ಮೇಳನಗಳಲ್ಲಿ ೧೯೬೫ ರ ಟೆಹರಾನ್ ಸಮ್ಮೇಳನವೂ ಒಂದು.

ಇರಾನ್ ದೇಶದ 'ಟೆಹರಾನ್' ನಗರದಲ್ಲಿ ಸೆಪ್ಟೆಂಬರ್ ೮ ರಿಂದ ೧೮ ರವರೆಗೆ ವಿಶ್ವದ ಅಭಿವೃದ್ಧಿಶೀಲ ರಾಷ್ಟ್ರಗಳ ಶಿಕ್ಷಣ ಮಂತ್ರಿಗಳ ಸಭೆ ಸೇರಿಸಿ ವಿವಿಧ ರಾಷ್ಟ್ರಗಳಲ್ಲಿ ಜರುಗಿದ ಸಾಕ್ಷರತಾ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಲಾಯಿತು. ಅದುವರೆಗೆ ಕೈಗೊಂಡ ಸಾಕ್ಷರತಾ ಕಾರ್ಯ ಯಶಸ್ವಿಯಾಗಿಲ್ಲ ಎಂಬುದು ಎಲ್ಲ ರಾಷ್ಟ್ರಗಳ ಒಟ್ಟಾಭಿಪ್ರಾಯ. ಕಾರಣಗಳೂ ಸ್ಪಷ್ಟವಾಗಿದ್ದು—ಅವುಗಳೆಂದರೆ ಸಾಕ್ಷರತಾ ಕಾರ್ಯ ಕೇವಲ ಅಕ್ಷರ ಕಲಿಸುವುದಕ್ಕೆ ಸೀಮಿತವಾಗಿದ್ದು ಕಲಿಕೆ ವಯಸ್ಕರ ನಿತ್ಯ ಜೀವನದಲ್ಲಿ ಉಪಯೋಗಕ್ಕೆ ಬರಲಿಲ್ಲ. ಅಂದರೆ ಸಾಕ್ಷರತೆಗೂ ಮತ್ತು ವಯಸ್ಕರ ಕಸುಬಿಗೂ ಸಂಬಂಧವಿರಲಿಲ್ಲ. "ಸಾಕ್ಷರತೆ ಸಾಕ್ಷರತೆಗಾಗಿ ಮಾತ್ರ" ಎಂಬ ಕಲ್ಪನೆ ವಯಸ್ಕರ ಶಿಕ್ಷಣದ ಹಿನ್ನಡೆಗೆ ಕಾರಣವಾಯಿತು. ಅದರ ಫಲವಾಗಿ ಜನ ಸಾಕ್ಷರತೆಯನ್ನು ತಿರಸ್ಕರಿಸಿದರು. ಸಮಾಲೋಚನೆಯ

ನಂತರ ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೆ ಒಂದು ಹೊಸ ರೂಪು ಕೊಡಲು ನಿರ್ಧರಿಸಿದರು. ಅದೇ 'ಕ್ರಿಯಾತ್ಮಕ ಸಾಕ್ಷರತೆ."

ಹೊಸ ತಿರುವು :

ಅನಕ್ಷರತೆಯೆಂಬ ಪೆಡಂಭೂತವನ್ನು ಬಡಿದೋಡಿಸಲು, ಸಭೆ ತೆಗೆದುಕೊಂಡ ತೀರ್ಮಾನಗಳೆಂದರೆ, ನಿರಕ್ಷರತಾ ನಿವಾರಣಾ ಯೋಜನೆಯನ್ನು ಆಯಾ ರಾಷ್ಟ್ರದ ಆರ್ಥಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಅಳವಡಿಸುವುದು. ಈ ಕಾರ್ಯಕ್ರಮವನ್ನು ಹೆಚ್ಚಿನ ಆಸಕ್ತಿಯುಳ್ಳ ಕ್ಷೇತ್ರಗಳಲ್ಲಿ ಕಾರ್ಯಗತ ಮಾಡಿ, ಓದು ಬರಹ ಕಲಿಸುವುದರ ಜೊತೆಗೆ ಕಲಿಯುವವರ ಉದ್ಯೋಗದ ಬಗ್ಗೆ ಹೆಚ್ಚಿನ ಮಾಹಿತಿ ಕೊಡಲು ನಿರ್ಧರಿಸಿ ತತ್ಸಂಬಂಧವಾದ ತಾಂತ್ರಿಕ ಜ್ಞಾನ ಮತ್ತು ತರಬೇತಿಯನ್ನು ನಿರಕ್ಷರಕುಕ್ಷಿಗಳು ಹೊಂದಬೇಕು. ನಿರಕ್ಷರತಾ ನಿವಾರಣೆಗೆ ಸರ್ಕಾರಿ ಹಾಗೂ ಖಾಸಗಿ ಮೂಲಗಳಿಂದ ಮತ್ತು ಕಾರ್ಖಾನೆಗಳು ತಮ್ಮ ಸಂಪನ್ಮೂಲಗಳಿಂದ ಹಣದ ಪೂರೈಕೆ ಮಾಡಬೇಕೆಂದು ತೀರ್ಮಾನಿಸಲಾಯಿತು.

ಗ್ರಾಮಾಂತರ ಪ್ರದೇಶಗಳಿಂದ ಜನ ಉದ್ಯೋಗ ಹುಡುಕಿಕೊಂಡು ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುವುದು ತಪ್ಪಬೇಕಾದರೆ, ದುಡಿಯುವ ಜನರು ಉತ್ಪಾದನೆ ಮತ್ತು ಉತ್ಪಾದನಾ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕಾದರೆ ಹಾಗೂ ಶ್ರಮಜೀವಿಗಳ ಕಲಿಕೆ ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮುಂದುವರಿಯಬೇಕಿದ್ದರೆ ವಯಸ್ಕರ ಶಿಕ್ಷಣದಲ್ಲಿ ಹೊಸ ತಿರುವಿನ ಅಗತ್ಯ ಬಹಳವಾಗಿತ್ತು.

ಹೊಸ ಕಲ್ಪನೆ :

ಹೊಸ ಕಲ್ಪನೆ ಕಸುಬಿನೊಂದಿಗೆ ಹೊಂದಿಕೊಂಡಿದೆ. ಯಾವುದಾದರೊಂದು ನಿರ್ದಿಷ್ಟ ಕಸುಬಿನ ಜೊತೆಗೆ ಸಾಕ್ಷರತೆಯನ್ನುಂಟು ಮಾಡಿ ಆಯಾ ಕಸುಬಿಗೆ ಸಂಬಂಧಿಸಿದಂತೆ ಪತ್ರ ವ್ಯವಹಾರಗಳ ಜತೆಗೆ ನಿಗದಿತ ನಮೂನೆಗಳನ್ನು ಭರ್ತಿ ಮಾಡುವ ಅರ್ಹತೆ ಬೆಳೆಸುವುದೇ ಹೊಸ ಕಲ್ಪನೆ.

'ಯುನೆಸ್ಕೊ' ನೇತೃತ್ವದ ಟೆಹರಾನ್ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಒಟ್ಟು ರಾಷ್ಟ್ರಗಳು ೮೯. ಈ ಸಾಕ್ಷರತಾ ಕಾರ್ಯವನ್ನು ಪ್ರಾಯೋಗಿಕವಾಗಿ ೧೩ ರಾಷ್ಟ್ರಗಳಲ್ಲಿ ಕೈಗೊಳ್ಳಲು ನಿರ್ಧಾರ ತೆಗೆದುಕೊಂಡಾಗ ಈ ಗುಂಪಿನಲ್ಲಿ ಭಾರತವೂ ಒಂದು. ೧೯೬೯ ನೇ ಇಸವಿಯಿಂದ ಒಂದೇ ಘಟ್ಟದಲ್ಲಿ ಎರಡೂವರೆ ವರ್ಷಗಳು ವ್ಯವಸಾಯಕ್ಕೆ ಸಂಬಂಧಿಸಿದಂತೆ ೧೦೦ ಆಯ್ದ ಜಿಲ್ಲೆಗಳಲ್ಲಿ ಕಾರ್ಯಗತವಾಯಿತು.

ರಾಷ್ಟ್ರಾಭಿವೃದ್ಧಿಗಾಗಿ ಕೈಗೊಂಡ ಮೊದಲ ಪಂಚವಾರ್ಷಿಕ ಯೋಜನೆಗಳಲ್ಲಿ ಖರ್ಚಾದ ಹಣ ೯೬೧೧ ಕೋಟಿ ರೂ.ಗಳು. ಸಾಮಾಜಿಕ ಮತ್ತು ಆರ್ಥಿಕ ರಂಗದ ವರದಿಯೊಂದರಂತೆ, ನಮ್ಮ ದೇಶದ ಜನರಲ್ಲಿ ಸುಮಾರು ಶೇ. ೪೬ರಷ್ಟು ಮಂದಿ ದಾರಿದ್ರ್ಯ ರೇಖೆಗಿಂತಲೂ ಕೆಳಮಟ್ಟದ ಜೀವನ ನಡೆಸುತ್ತಿದ್ದಾರೆ. ಇದಕ್ಕೆ ಕಾರಣ ರಾಷ್ಟ್ರದ ಬಡಜನತೆ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿಲ್ಲ.

ಅಂದರೆ 'ಕ್ರಿಯಾತ್ಮಕ ಕಲಿಕೆ' ಇನ್ನೂ ಮೂಡಿಲ್ಲ. ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯಲ್ಲಿ ತಮ್ಮ ಪಾತ್ರ, ಹಕ್ಕು-ಬಾಧ್ಯತೆಗಳ ಹಾಗೂ ಸೌಲಭ್ಯ-ಸವಲತ್ತುಗಳ ಅರಿವಿಲ್ಲ. ಈ ಸ್ಥಿತಿಗೆ ಕಾರಣ ಅಧಿಕ ಸಂಖ್ಯೆಯಲ್ಲಿ ಜನ ಅನಕ್ಷರರಾಗಿಯೇ ಉಳಿದಿರುವುದು.

ವಯಸ್ಕರ ಶಿಕ್ಷಣಕ್ಕೆ ಹೆಚ್ಚಿನ ಒತ್ತುಕೊಟ್ಟು ೧೯೯೦ರ ವೇಳೆಗೆ ಸಾಕ್ಷರತೆಯ ಸಾಧನೆಗಾಗಿ ಆರು ಮತ್ತು ಏಳನೇ ಪಂಚವಾರ್ಷಿಕ ಯೋಜನೆಗಳಲ್ಲೂ ಅಳವಡಿಸಿಕೊಂಡಿದ್ದು, ೬ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೨೫೫ ಲಕ್ಷ ಅನಕ್ಷರಸ್ಥರನ್ನು ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ದಾಖಲು ಮಾಡಿಕೊಳ್ಳಲು ಮತ್ತು ೭ನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ೮೭೫ ಅನಕ್ಷರಸ್ಥರನ್ನು ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ದಾಖಲು ಮಾಡಿಕೊಂಡು ಸಾಕ್ಷರರನ್ನಾಗಿಸಲು ಯೋಜಿಸಲಾಗಿದೆ. ವಯಸ್ಕರ ಶಿಕ್ಷಣ ಕಾರ್ಯ ಕಷ್ಟ ಸಾಧ್ಯವಾದ ಕೆಲಸ. ಆದ್ದರಿಂದ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ೧೯೯೫ರ ಸಮಯಕ್ಕೆ ಮುಂದೂಡಲಾಗಿದೆ.

ಪ್ರಚಾರ ಕಾರ್ಯ :

ಸೆಪ್ಟಂಬರ್ ೮ ರಿಂದ ಒಂದು ವಾರ ವಯಸ್ಕರ ಶಿಕ್ಷಣ ಪ್ರಚಾರಕ್ಕೇನೂ ಕೊರತೆಯಿಲ್ಲ. ಸಮುದಾಯದ ಮಟ್ಟದಲ್ಲಿ, ಕ್ಷೇತ್ರದ ಮಟ್ಟದಲ್ಲಿ ಇನ್ನೂ ಹೆಚ್ಚಿನ ಮಟ್ಟದ ಪ್ರಚಾರಕಾರ್ಯದ ಅಗತ್ಯವಿದೆ. ಇಲ್ಲಿ ಸಮೂಹ ಮಾಧ್ಯಮಗಳ ಹಿರಿಮೆ ಮಹತ್ವಪೂರ್ಣ. ವಯಸ್ಕರ ಶಿಕ್ಷಣದಿಂದಾಗುವ ಅನುಕೂಲಗಳು ಸಾಮಾನ್ಯ ಜನರ ಮನಮುಟ್ಟಬೇಕು. ಅನಕ್ಷರತೆ, ಅಜ್ಞಾನ ಮತ್ತು ಬಡತನಗಳಿಗಿರುವ ಪರಸ್ಪರ ಸಂಬಂಧಗಳ ಅರಿವು ಮೂಡಿಸುವಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಮಹತ್ವಪೂರ್ಣವಾದುದು.

ವಯಸ್ಕರ ಶಿಕ್ಷಣ ಪ್ರಚಾರಕ್ಕೆ ಸಂಬಂಧಿಸಿದ ಸಭೆ ಸಮ್ಮೇಳನಗಳು ಹೆಚ್ಚು ಹೆಚ್ಚು ಗ್ರಾಮಾಂತರ ಪ್ರದೇಶಗಳಲ್ಲಿ, ಬಡ ಜನರಿಗೆ ಸಮೀಪದಲ್ಲಿಯೇ ನಡೆಯುಬೇಕು. ವಿಚಾರ ಗೋಷ್ಠಿಗಳನ್ನು ಮುಕ್ತ ವಾತಾವರಣದಲ್ಲಿ ಏರ್ಪಡಿಸಬೇಕು. ಇಲ್ಲಿ ಸಾಮಾನ್ಯ ಜನರೂ ಪಾಲ್ಗೊಂಡು ಚರ್ಚಿಸಲು ಅವಕಾಶ ನೀಡಬೇಕು. ಆಗ ಮಾತ್ರ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯ ಪೂರ್ಣ ಅರಿವಾಗುವುದು.

ವಿಶ್ವ ಸಾಕ್ಷರತಾ ದಿನಗಳಲ್ಲಿ ಏರ್ಪಡಿಸುವ ಸಭೆ, ಸಮ್ಮೇಳನ, ವಿಚಾರ ಸಂಕಿರಣಗಳ ತೀರ್ಮಾನಗಳು ಕೇವಲ ಅಲ್ಲಿಯೇ ಪರ್ಯಾವಸಾನಗೊಳ್ಳಬಾರದು. ಅಲ್ಲಿ ನಡೆಯುವ ಯಾವುದೇ ಕಾರ್ಯ ಚಟುವಟಿಕೆಯಾಗಲಿ ಅವು ಸಾಮಾನ್ಯರ ಅಗತ್ಯಗಳನ್ನು ಪೂರೈಸಲು ಬಳಕೆಗೆ ಬರುವಂತಹವುಗಳಾಗಬೇಕು.

ಜನಸಾಮಾನ್ಯರಿಗೆ ಅರಿವು :

ಗ್ರಾಮೀಣ ಜನರಿಗೆ ಅರಿವು ಮೂಡಿಸಲು ಈ ಅವಧಿಯ ಸದುಪಯೋಗ ಅಗತ್ಯ. ಬಡವರ ಹಿತಕ್ಕಾಗಿ ಹಲವಾರು ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಿದೆ. ಉದಾಹರಣೆಗಾಗಿ—ವೃದ್ಧಾಪ್ಯ ವೇತನ, ಋಣ ಪರಿಹಾರ, ಭೂಸುಧಾರಣೆ, ಹರಿಜನ ಗಿರಿಜನರಿ

ಗಾಗಿ ನಿವೇಶನಗಳ ಹಂಚಿಕೆ, ಸಾಲ ಸೌಲಭ್ಯ, ಕುಟುಂಬ ಕಲ್ಯಾಣ ಯೋಜನೆ, ಸರ್ಕಾರಿ ಭೂಮಿ ಹಂಚಿಕೆ, ಶಾಲಾ ಶುಲ್ಕ ವಿನಾಯಿತಿ, ಉಚಿತ ಕಾನೂನಿನ ನೆರವು, ಜೀತ ವಿಮೋಚನೆ ಮತ್ತು ಗೃಹ ನಿರ್ಮಾಣ ಇತ್ಯಾದಿ. ಇವುಗಳನ್ನು ಪಡೆಯುವ ಅರಿವನ್ನು ಜನಸಾಮಾನ್ಯರಿಗೆ ಉಂಟುಮಾಡಿದಲ್ಲಿ ತಮ್ಮ ಸ್ಥಿತಿಗತಿಯನ್ನು ಉತ್ತಮಪಡಿಸಿಕೊಂಡು ತಮ್ಮ ಅಭಿವೃದ್ಧಿಯ ಜತೆಗೆ ಸಮಾಜ ಹಾಗೂ ದೇಶದ ಅಭಿವೃದ್ಧಿಗೆ ನೆರವಾಗುವರು.

ಆರೋಗ್ಯವೇ ಭಾಗ್ಯ. ಇದಕ್ಕಾಗಿ ಸ್ವಚ್ಛತೆ, ಶುದ್ಧಗಾಳಿ ಹಾಗೂ ಬೆಳಕಿನ ಅಗತ್ಯತೆ, ಪೌಷ್ಟಿಕ ಆಹಾರ, ಶಿಶು ಸಂರಕ್ಷಣೆ ಗರ್ಭಿಣಿಯರ ಆರೈಕೆ, ಶುದ್ಧವಾದ ನೀರಿನ ಬಳಕೆ, ಸಾಮಾನ್ಯ ಕಾಯಿಲೆಗಳ ನಿವಾರಣೋಪಾಯ ಎಂಬಿವೇ ಮುಂತಾದುವುಗಳ ಬಗ್ಗೆ ಅರಿವು ಮೂಡಿಸಲು ಇದು ಸೂಕ್ತ ಸಮಯ.

ವೈಜ್ಞಾನಿಕ ತಿರುವು

ಸಾಮಾಜಿಕ ಜೀವಿಯಾಗಿ, ಸಮಾಜದಲ್ಲಿ ಸುಖ, ಶಾಂತಿ ಮತ್ತು ನೆಮ್ಮದಿಯ ಜೀವನಕ್ಕಾಗಿ ನೆಮ್ಮದಿಯ ಕುಟುಂಬ ವ್ಯವಸ್ಥೆಯ ಬಗ್ಗೆ ಅರಿವು ಮೂಡಿಸಬೇಕು. ಮೂಢ ನಂಬಿಕೆಗಳಿಗೆ ವೈಜ್ಞಾನಿಕ ತಿರುವು ಕೊಡುವ ಪ್ರಯತ್ನಗಳಾಗಬೇಕು.

ಕಸುಬಿನಲ್ಲಿನ ಪರಿಣತಿಯನ್ನು ಉತ್ತಮಪಡಿಸಿಕೊಳ್ಳಲು ಅಭಿವೃದ್ಧಿ ಯೋಜನೆಗಳ ಸದುಪಯೋಗ ಪಡೆದುಕೊಳ್ಳುವುದರ ಉಳಿತಾಯ ಯೋಜನೆಯ ಪರಿಚಯ, ಗುಡಿ ಕೈಗಾರಿಕೆಗಳಿಂದ ಹೆಚ್ಚು ಉತ್ಪತ್ತಿ ಹೊಂದುವ ಬಗೆ, ಸಣ್ಣ ಹಿಡುವಳಿದಾರರು ಸಾಲ ಸೌಲಭ್ಯ ಪಡೆದು ಉತ್ತಮ ಬೆಳೆ ಬೆಳೆಯುವ ರೀತಿ ನೀತಿ ಹಾಗೂ ಆಹಾರ ಧಾನ್ಯಗಳನ್ನು ಕ್ರಿಮಿ–ಕೀಟ, ಇಲಿ-ಹೆಗ್ಗಣಗಳಿಂದ ರಕ್ಷಿಸುವ ವಿಧಾನಗಳ ಬಗ್ಗೆ ಹೆಚ್ಚಿನ ಪ್ರಚಾರ ಕೈಗೊಂಡು ಅರಿವು ಮೂಡಿಸಬೇಕು.

ಮಂಡಲ್ ಪಂಚಾಯಿತಿ ಕಾರ್ಯಕ್ರಮ, ಪೌರನ ಹಕ್ಕು ಮತ್ತು ಕರ್ತವ್ಯ, ಮೂಲಭೂತ ಹಕ್ಕುಗಳು, ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಮತ ಮತ್ತು ಅದರ ಚಲಾವಣೆ ಬಗ್ಗೆ ಅರಿವು ಮೂಡಿಸುವ ಪ್ರಯತ್ನಗಳಾಗಬೇಕು.

ಕಳೆದ ೨೨ ವರ್ಷಗಳಿಂದ ಸೆಪ್ಟೆಂಬರ್ 8 'ವಿಶ್ವ ಸಾಕ್ಷರತಾ ದಿನ' ಮಹತ್ವದ ದಿನವೆಂದು ಕರೆದು ಈ ಒಂದು ವಾರವನ್ನು 'ವಿಶ್ವ ಸಾಕ್ಷರತಾ ವಾರ' ಮಹತ್ವದ ವಾರ ಎಂದು ಪರಿಗಣಿಸಿ ಈ ದಿಸೆಯಲ್ಲಿ ಪ್ರಚಾರ ಹಾಗೂ ಪ್ರಯತ್ನಗಳು ಆಗಿವೆ. ವಿಶ್ವದ ಅಂದಾಜು ಅನಕ್ಷರಸ್ಥರ ಸಂಖ್ಯೆ ೮೨೪ ಮಿಲಿಯನ್. ಈ ಸಂಖ್ಯೆಗೆ ಭಾರತದ ಕೊಡುಗೆ ೪೨೪ ಮಿಲಿಯನ್. ೧೯೮೧ರ ಜನಗಣತಿಯಂತೆ ಭಾರತದ ಒಟ್ಟು ಸಾಕ್ಷರತೆ ೩೬.೧೭, ಪುರುಷರು ಶೇ. ೪೬.೭೪ ಹಾಗೂ ಮಹಿಳೆಯರಲ್ಲಿ ಶೇ. ೨೪.೮೮, ಗ್ರಾಮೀಣ ಮಹಿಳೆಯರಲ್ಲಿ ಸಾಕ್ಷರತೆ ಕೇವಲ ೧೭.೯೯. ಈಗ ಹೇಳಿ ಇದುವರೆಗಿನ ಪ್ರಯತ್ನ ಪ್ರಚಾರ ಸಾಕೆ?

ಪ್ರಪಂಚದಲ್ಲಿರುವ ಒಟ್ಟು ಅನಕ್ಷರಸ್ಥರ ಪೈಕಿ ಸುಮಾರು ಅರ್ಧದಷ್ಟು ಮಂದಿ ಏಷ್ಯಾ ಖಂಡದಲ್ಲಿದ್ದಾರೆ. ಏಷ್ಯಾ ಖಂಡದಲ್ಲಿನ ಒಟ್ಟು ಅನಕ್ಷರಸ್ಥರಲ್ಲಿ ಸುಮಾರು ಅರ್ಧ

ದಷ್ಟು ಭಾರತದಲ್ಲಿದ್ದಾರೆ. ಪ್ರಪಂಚದ ಅನಕ್ಷರಸ್ಥರ ಸಾಲಿನಲ್ಲಿ ಪ್ರತಿ ಎರಡನೆಯವರಾಗಿ ನಮ್ಮ ದೇಶದ ಅನಕ್ಷರಸ್ಥರನ್ನು ನಿಲ್ಲಿಸಿ ನೋಡಿದರೆ ಕೊನೆಯ ಸಾಲಿನಲ್ಲಿ ಉಳಿಯುವವರೆಲ್ಲರೂ ಭಾರತೀಯರೆ ಎಂದಾಗ ನಮಗೆ ಸೋಜಿಗವೆನಿಸುತ್ತದೆ. ಇದೇ ಗತಿಯಲ್ಲಿ ಸಾಕ್ಷರತಾ ಸಾಧನೆ ಮುಂದುವರಿದರೆ ಕ್ರಿ. ಶ. ೨೦೦೧ರ ಹೊತ್ತಿಗೆ ಪ್ರಪಂಚದಲ್ಲಿ ಭಾರತ ಒಂದೇ ಅನಕ್ಷರಸ್ಥರಿರುವ ಕಗ್ಗತ್ತಲ ದೇಶವಾಗಿ ಉಳಿಯುತ್ತದೆ ಎಂಬುದು ಯುನೆಸ್ಕೊ ತಜ್ಞರ ಅಭಿಮತ. ಇದನ್ನು ಸುಳ್ಳಾಗಿಸುವಲ್ಲಿ ವಿದ್ಯಾವಂತ ಯುವಕರು, ಸ್ವಯಂಸೇವಾ ಸಂಸ್ಥೆಗಳು, ವಿಚಾರವಂತರು, ರೈತ ನಾಯಕರು, ಕಾರ್ಮಿಕ ನಾಯಕರು, ಅಭಿವೃದ್ಧಿ ಇಲಾಖಾಧಿಕಾರಿಗಳು, ಸಮಾಜವಾದಿಗಳು, ರಾಜಕೀಯ ಧುರೀಣರು ಹಾಗೂ ವಯಸ್ಕರ ಶಿಕ್ಷಣ ಕಾರ್ಯಕರ್ತರು ಕಂಕಣಬದ್ಧರಾಗಬೇಕು.

ಸಾವು

ಹೇಳಲಾಗದು ಯಾರೂ ಸಾವು ಬರುವ ಕ್ಷಣವ
ಕೇಳಲಾಗದು ಎಂದೂ ವಿಸ್ತರಣೆಯ ವರವ ;
ಬಾಳ ಗಡು ತೀರಲು ಬಿಡಲೇಬೇಕೆಲ್ಲರೂ ಜಗವ
ಏಳು ಕಾಣಲೇಬೇಕು ಬೀಳು...ಮಣ್ಣಿನ ಮಗ.

ಜೀವನ : ಚಂದನ

ಬರಡಲ್ಲವೀ ಬಾಳು ; ತೆಯ್ದರೆ ಚಂದನದ ಕೊರಡು
ಬರೀ ಕೊರಡಲ್ಲಸೀ ಬದುಕು ; ನಿತ್ಯ ಮಲ್ಲಿಗೆ ಕಂಪು-
ಅರಿತವರಿಗೆಲ್ಲ ಇಹದ ಜೀವನ ಸಗ್ಗದ ಸೈಪು
ಗುರಿ ಇರದವರಿಗಂತೂ ಇರವೆಲ್ಲ ಗೋರಿ...ಮಣ್ಣಿನ ಮಗ.

ದೊಡ್ಡರಂಗೇಗೌಡ

ಶ್ರೀಸಾಮಾನ್ಯ ಉವಾಚ—ಸಂಜೆಗಣ್ಣಿನ ಹಿನ್ನೋಟ

ಪ್ರೊ|| ಎ. ಎನ್. ಮೂರ್ತಿರಾವ್

ಮುಂದುವರಿದುದು

೭. ತಂದೆಯ ಕೋಪ, ಮಗನ ಮೊಂಡತನ

ನಾನು ಅಯ್ಯನ ಮನೆಯಲ್ಲಿದ್ದದ್ದು ಮೂರು ವರ್ಷಕಾಲ— ೧೯೧೪-೧೫-೧೬ನೇ ವರ್ಷಗಳಲ್ಲಿ. ೧೯೧೬ರ ಕೊನೆಕೊನೆಗೆ ಎಂದು ನೆನಪು—ನಮ್ಮ ಸಂಸಾರ ಅಕ್ಕಿಹೆಬ್ಬಾಳನ್ನು ಬಿಟ್ಟು ಗಂಟು ಮೂಟೆಗಳೊಡನೆ ಮೈಸೂರಿಗೆ ಬಂದು ಕೊತ್ವಾಲರಾಮಯ್ಯನ ಬೀದಿ (ಅಯ್ಯನ ಮನೆಯಿದ್ದ ಬೀದಿಯೇ)ಯಲ್ಲಿ ಒಂದು ಸಣ್ಣ ಮನೆ ಯನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿ ನೆಲಸಿತು. ಬಾಡಿಗೆ: ಎರಡುವರೆ ರೂಪಾಯಿ! ಆ ಮನೆಯಲ್ಲಿ ನಾವು ಸುಮಾರು ಎರಡು ವರ್ಷ ಇದ್ದಿರಬಹುದು. ಆ ಕಾಲದಲ್ಲೇ ಅಯ್ಯ ಅದೇ ಬೀದಿಯಲ್ಲಿ ತಮ್ಮ ಮನೆಗೆ ೫೦-೬೦ ಗಜ ದೂರದಲ್ಲಿದ್ದ ಮನೆದಳವನ್ನು ನಮಗೆ ೪೦೦ ರೂಪಾಯಿಗೆ ಕೊಡಿಸಿದರು. ನಮ್ಮ ತಂದೆಗೆ ಸ್ವತಃ ನಿಂತು ಮನೆ ಕಟ್ಟಿಸುವುದು ಕಷ್ಟವಾಗುತ್ತಿತ್ತು. ಆದ್ದರಿಂದ ಅಯ್ಯ ತಾವೇ ಆ ಕೆಲಸ ವಹಿಸಿಕೊಂಡರು. ಮನೆಗೆ ಸುಮಾರು ಎರಡುಸಾವಿರ ರೂಪಾಯಿ ಖರ್ಚಾಯಿತೆಂದು ನೆನಪು. ನಾವು ಆ ಮನೆಗೆ ಹೋಗಿ ನೆಲಸಿದಂದಿನಿಂದ ಅಕ್ಕಿಹೆಬ್ಬಾಳಿನವರಾಗಿರುವು ದನ್ನು ಬಿಟ್ಟು ಮೈಸೂರು ನಗರದ ಪೌರರಾದೆವು. ಆದರೆ ಹಳ್ಳಿಯ ಸಂಬಂಧವೇನೂ ಕಡಿದುಹೋಗಲಿಲ್ಲ. ನಾನು ನವರಾತ್ರಿ ಕ್ರಿಸ್‌ಮಸ್ ಬೇಸಗೆ ರಜಾಗಳಲ್ಲಿ ಊರಿಗೆ (ನನ್ನ ಪಾಲಿಗೆ 'ಊರು' ಎಂದರೆ ಅಕ್ಕಿಹೆಬ್ಬಾಳು) ಓಡಿಹೋಗುತ್ತಿದ್ದೆ. ಅಲ್ಲಿ ಗೋವಿಂದ ಚಿಕ್ಕಪ್ಪನ ಮನೆಯಲ್ಲಿ ಬಿಡಾರ. ಗೋವಿಂದನ ಭಾವಮೈದುನ ಎಚ್. ಎಲ್. ಹರಿಯಪ್ಪನೂ (ಇವನು ನನ್ನ ಸಹಪಾಠಿ ಸಹೋದ್ಯೋಗಿ, ಸಂಸ್ಕೃತದ ಪ್ರೊಫೆಸರಾಗಿ ನೇಮಕವಾಗಲಿದ್ದು ಅಷ್ಟರಲ್ಲೇ ತೀರಿಕೊಂಡ) ನಾನೂ ತೊಂಡು ಮೇಯಲು ಹೊರಟ ದನಗಳಂತೆ ತಿಂದು, ಅಲೆದು, ಹಳ್ಳಿಯಿಂದ ಹಳ್ಳಿಗೆ ಸುತ್ತಿ ಕಾಲ ಕಳೆಯುತ್ತಿದ್ದೆ.

ನಮ್ಮ ಮನೆಯವರೆಲ್ಲ ಮೈಸೂರಿಗೆ ಬಂದ ಮೇಲೆ ನನ್ನ ಸ್ವಾತಂತ್ರ್ಯ ಹೆಚ್ಚಿತು. ಅಯ್ಯನ ಮನೆಯಲ್ಲಿ ಸ್ವಾತಂತ್ರ್ಯ ಕೊಡುತ್ತಿರಲಿಲ್ಲವೆಂದಲ್ಲ, ನಾನು ತೆಗೆದುಕೊಳ್ಳುತ್ತಿರಲಿಲ್ಲ. ಅವರ ಮನೆಯನ್ನು ಬಿಟ್ಟು ನಮ್ಮ ಮನೆಗೇ ಬಂದಾಗ ನಾನು ಐದನೇ ಫಾರಂಗೆ (ಎಸ್.ಎಸ್.ಎಲ್.ಸಿ ಕ್ಲಾಸಿಗಿಂತ ಒಂದು ಕ್ಲಾಸು ಹಿಂದೆ) ಬಂದಿದ್ದೆನಾದ್ದರಿಂದ ನನ್ನ ಪ್ರತಿಷ್ಠೆ (ಒಳ್ಳೆಯ ಮತ್ತು ಕೆಟ್ಟ ಅರ್ಥಗಳೆರಡರಲ್ಲೂ) ಹೆಚ್ಚಿತ್ತು. ನಾಲ್ಕು ವರ್ಷ ಮೈಸೂರಿನಲ್ಲಿದ್ದವನು, ಇನ್ನೇನು ಎಸ್.ಎಸ್.ಎಲ್.ಸಿ. ಪ್ಯಾಸು ಮಾಡಲಿರುವವನು, ಇಂಗ್ಲಿಷ್ ಓದಬಲ್ಲವನು ಮಾತಾಡಬಲ್ಲವನು—"ಅರರೇ ಎನ್ನಯ ಸಮಾನರಾರೊ, ಧರಣಿಯೊಳಾರಿಹರು" ಎಂದುಕೊಳ್ಳಬಹುದಲ್ಲವೆ! ಮನೆಯಲ್ಲಿ ಯಾವುದಾದರೂ ಚರ್ಚೆ ಬಂದಾಗ ನನ್ನ ಮಾತಿನಲ್ಲಿ ಈ ಪ್ರತಿಷ್ಠೆ ಕಾಣಿಸಿಕೊಳ್ಳುತ್ತಿತ್ತೋ ಏನೊ, ಅಂತೂ ತಂದೆಗೂ ನನಗೂ ಆಗಾಗ ಘರ್ಷಣೆಗಳಾಗುತ್ತಿದ್ದವು, ನನಗೆ ಏಟೂ ಬೀಳುತ್ತಿತ್ತು. ಘರ್ಷಣೆಗೆ ಕಾರಣ; ಒಂದುಕಡೆ ನನ್ನ ಮೊಂಡುತನ, ಮತ್ತೊಂದು ಕಡೆ ನನ್ನ ತಂದೆಯ ಮನಸ್ಸಿಗೆ ನೆಮ್ಮದಿಯಿಲ್ಲದ್ದು.

ಮೈಸೂರಿಗೆ ಬಂದ ಹೊಸದರಲ್ಲಿ ನಾವು ಅಷ್ಟೇನೂ ಸುಖವಾಗಿರಲಿಲ್ಲ. ಅಯ್ಯ ನಮಗೆ ಎಷ್ಟೇ ಸಹಾಯಮಾಡಿದರೂ ಮನೆ ಕಟ್ಟುತ್ತಿದ್ದ ಕಾಲದಲ್ಲಿ ನಮ್ಮ ತಂದೆಗೂ ತ್ರಾಸವಾಗುತ್ತಿತ್ತು. ಇದಲ್ಲದೆ ಕೆಲವು ಅನಿರೀಕ್ಷಿತ ತೊಂದರೆಗಳು ಒದಗಿಬಂದವು. ನಮ್ಮ ಪಾಲಿಗೆ ಬಂದಿದ್ದ ಜಮೀನೊಂದರ ಮೇಲೆ ಯಾವುದೋ ಹಳೆಯ ಸಾಲ—೧೫೦ ರೂಪಾಯಿ—ಇತ್ತಂತೆ. ಸಾಲಗಾರನ ಹೆಸರು ಜ್ಞಾಪಕವಿದೆ, ಆದರೆ ಅದನ್ನು ಕಾಣಿಸುವುದು ಯುಕ್ತವಲ್ಲ. ಅವನನ್ನು ನಾಣಿ ಎಂದು ಕರೆಯುತ್ತೇನೆ. ಅವನು ನಮಗೆ ದೂರದ, ಬಹು ದೂರದ, ದಾಯಾದಿ. ಅವನು ನಮ್ಮ ಮೇಲೆ ದಾವಾ ಹಾಕಿದ್ದ—ನಮ್ಮ ಸಂಸಾರ ಅಕ್ಕಿಹೆಬ್ಬಾಳಿನಲ್ಲಿದ್ದಾಗಲೇ.ದಾವಾದ ನೋಟೀಸು ಬಂದದ್ದು ನಮಗೆ ತಿಳಿಯದು. ಅಥವಾ ತಿಳಿದಿದ್ದರೂ ಯಾರಿಗೂ ನೆನಪಿಲ್ಲ. ನಾವು ಕೋರ್ಟಿಗೆ ಹಿಯರಿಂಗಿನ ದಿನ ಹೋಗಲಿಲ್ಲವಾದ್ದರಿಂದ ನಾಣಿಯ ಪರವಾಗಿ ಎಕ್ಸ್‌ಪಾರ್ಟಿ ಡಿಕ್ರಿಯಾಯಿತು. ಅದೂ ನಮಗೆ ತಿಳಿಯದು. "ಹಣ ಇಂಥ ದಿನದೊಳಗೆ ಪಾವತಿಯಾಗದಿದ್ದರೆ ನಿಮ್ಮ ಮನೆಯ ಸಾಮಾನು ಜಫ್ತಿಮಾಡಿ ಹರಾಜು ಹಾಕಿಸಲಾಗುತ್ತೆ" ಎಂಬ ನೋಟೀಸನ್ನು "ವಿಳಾಸದಾರರು ಸಿಕ್ಕಲಿಲ್ಲ" ಎಂಬ ನೆಪಹಾಕಿಕೊಂಡು ಹೇಗೋ ಜಾರಿಯ ಶಾಸ್ತ್ರ ಮಾಡುವುದು ಸಾಧ್ಯವಂತೆ, ನಾಣಿ ಹಾಗೆ ಮಾಡಿದ್ದ. ಅವನು ನಮ್ಮ ಮೇಲೆ ಏನು ನಚ್ಚು ಇಟ್ಟುಕೊಂಡಿದ್ದನೋ ಕಾಣೆ—ಏನೂ ಇಲ್ಲದೆ ಅವನ ಸ್ವಭಾವವೇ ಕ್ರೌರ್ಯಲೋಲುಪವಾದದ್ದಿರಬಹುದು. ನನಗೆ ವಿವರಗಳು ನೆನಪಿಲ್ಲ. ಅಂತೂ ಒಂದು ದಿನ ಬೆಳಗ್ಗೆ ಇದ್ದಕ್ಕಿದ್ದ ಹಾಗೇ ಅವನು ಅಮೀನರೊಡನೆ ಪ್ರತ್ಯಕ್ಷವಾದ, ಕೋರ್ಟಿನ ಆರ್ಡರು ತೋರಿಸಿ ನಮ್ಮ ಮನೆಯ ಸಾಮಾನನ್ನು ಹೊರಕ್ಕೆ ಹಾಕಿಸಲಾರಂಭಿಸಿದ. ನಾನು ಓಡಿಹೋಗಿ ಅಯ್ಯನನ್ನು ಕರೆದುಕೊಂಡು ಬಂದೆ. ಅವರು ನಾಣಿಯ ಯೋಗ್ಯತೆಯನ್ನು ಬಲ್ಲವರು. "ಎರಡು ದಿನ ಮುಂಚೆ ನಮಗೆ ತಿಳಿಸಿ, ಹಣ ಕೂಡಿಸಿಕೊಳ್ಳಲು ನಮಗೆ ಅವಕಾಶಕೊಟ್ಟಿದ್ದರೆ ನಿಮ್ಮಪ್ಪನ ಗಂಟೇನು ಹೋಗುತ್ತಿತ್ತು? ಭ್ರಷ್ಟ, ನಿನ್ನ ಯೋಗ್ಯತೆಗೆ ಬೆಂಕಿ ಹಾಕ!" ಎಂದು ನಾಣಿಯನ್ನು ಮನಸಾರ ಬೈದು, ನಮ್ಮ ತಾಯಿಯ ಅಡ್ಡಿಕೆಯನ್ನು ಅಡವಿಟ್ಟು,

ಅರ್ಧಘಂಟೆಯ ಒಳಗಾಗಿ ಹಣ ತರಿಸಿ ಪಾವತಿಮಾಡಿ, "ಇನ್ನು ಮೇಲೆ ನಮ್ಮ ಮನೆಯ ಹತ್ತಿರ ಬಂದರೆ ನಿನ್ನ ಕಾಲುಮುರಿದು ಕೈಗೆ ಕೊಟ್ಟೇನು, ಜೋಕೆ !" ಎಂದು ನಾಣಿಗೆ ಎಚ್ಚರಿಕೆ ಕೊಟ್ಟರು. ನಾಣಿಯ ಮೇಲೆ ಅಯ್ಯನ ಕೋಪ ಏನೇನೂ ಪರಿಣಾಮ ಉಂಟುಮಾಡಲಿಲ್ಲ. ಅವನ ಅಸಹ್ಯ ಮುಖಚಹರೆ ನನಗೆ ಈಗಲೂ ಜ್ಞಾಪಕವಿದೆ. ತೃಪ್ತಿ ಪಡೆದ ಕ್ರೌರ್ಯದ ನಗೆಯನ್ನು ನಗುತ್ತ ಅವನು ಹೊರಟುಹೋದ. ನಮ್ಮ ಎಡಬಲದ ಮನೆಯವರು ನಮಗಾಗಿ ಮರುಗುತ್ತ ಸಾಮಾನನ್ನು ಮತ್ತೆ ಒಳಕ್ಕೆ ಸಾಗಿಸಲು ಸಹಾಯಮಾಡಿದರು. ನಮ್ಮ ತಂದೆಗೆ "ನಮ್ಮ ಮಾನ ಹೀಗೆ ಬೀದಿಗೆ ಬಂತಲ್ಲ" ಎಂದು ಬಹಳ ಸಂಕಟವಾಯಿತು.

ಅವರ ದೇಹಸ್ಥಿತಿ ಆ ವೇಳೆಗೆ ಉತ್ತಮಗೊಂಡಿತ್ತು ; ವಯಸ್ಸಿಗೆ ತಕ್ಕ ಶಕ್ತಿಯೂ ಇತ್ತು. ಮಾತಿನಲ್ಲಿ ಸ್ವಲ್ಪ ತೊದಲು ಇದ್ದಿತಾದರೂ ಅರ್ಥವಾಗುವ ಮಟ್ಟಿಗೆ ಉಚ್ಚಾರಣೆ ಸ್ಫುಟವಾಗಿತ್ತು. ಆದರೆ ತಿಂಗಳಿಗೋ ಎರಡು ತಿಂಗಳಿಗೋ ಒಮ್ಮೆ ವಾಯು ಬರುತ್ತಲೇ ಇತ್ತು. ಅವರು ಕೆಲಸದಿಂದ ನಿವೃತ್ತರಾಗಿ ೧೭ ೧/೨ ರೂಪಾಯಿ ಪಿಂಚಿನ್ ಪಡೆಯುತ್ತಿದ್ದರು. ಬೇರೆ ಎಲ್ಲೂ ಕೆಲಸ ಸಿಕ್ಕುವಂತಿಲ್ಲ, ಸಿಕ್ಕಿದರೆ ಮಾಡುವಂತೆಯೂ ಇಲ್ಲ. ಮನೆ ಕಟ್ಟಲು ಸಾಲವಾಗಿತ್ತು. ಸಂಸಾರ ದೊಡ್ಡದು ; ಅಕ್ಕಿಹೆಬ್ಬಾಳಿನ ಬಂಧುಗಳು ಬಂದು ಹೋಗುವುದು ಹೆಚ್ಚು—ಅದು ನಮಗೆ ಹಿತವಾದದ್ದೇ ಆದರೂ ಸಂಸಾರವನ್ನು ತೂಗುವುದು ಕಷ್ಟ. ಬಂಧುಗಳ ಮನೆಯ ಹುಡುಗರು ಯಾರಾದರೂ ಸಾಮಾನ್ಯವಾಗಿ ಓದುವುದಕ್ಕಾಗಿ ನಮ್ಮ ಮನೆಯಲ್ಲಿರುತ್ತಿದ್ದರು—ನಾನು ಅಯ್ಯನ ಮನೆಯಲ್ಲಿದ್ದಂತೆ. ಆ ಕಾಲದಲ್ಲಿ ಬಡವರ ಮನೆಯಲ್ಲಿ ಕೂಡ ಒಬ್ಬರಿಬ್ಬರು ವಿದ್ಯಾರ್ಥಿಗಳಿಗೆ ವಾರ ಕೊಡುವುದು (ಅಂದರೆ ವಾರದಲ್ಲಿ ಒಂದು ದಿನ ವಿದ್ಯಾರ್ಥಿಗೆ ಊಟದ ಸೌಕರ್ಯ ಒದಗಿಸುವುದು), ಭಿಕ್ಷಾನ್ನ ಹಾಕುವುದು, ಮನೆಯಲ್ಲಿ ಬಂಧುಗಳ ಮಕ್ಕಳನ್ನು ಇಟ್ಟುಕೊಂಡು ಅವರ ವಿದ್ಯಾಭ್ಯಾಸಕ್ಕೆ ನೆರವಾಗುವುದು — ಇದೆಲ್ಲ ಸರ್ವಸಾಮಾನ್ಯ . ನಾನು ಕೆಲಸಕ್ಕೆ ಸೇರಿ ಸಂಪಾದನೆಮಾಡುವವನಾಗಿ ಸಂಸಾರ ಹೂಡಿದ ಮೇಲೆ, ನನ್ನದೇ ಆದ ಸಂಸಾರ ಕೊನೆಗಂಡು ನಾನು ಒಂಟಿಯಾಗುವವರೆಗೂ ಈ ಸಂಪ್ರದಾಯ ನಿಲ್ಲಲಿಲ್ಲ ಎಂಬುದನ್ನು ನೆನೆಯುವುದು ನನ್ನ ಮನಸ್ಸಿಗೆ ನೆಮ್ಮದಿ. ಇಂದಿನ ಸ್ಥಿತಿಗತಿಗಳು ಬೇರೆ ; ಹಿಂದಿನಂತೆ ಜನ ಒಂದು ಕಡೆ ನಿಲ್ಲುವುದು ಸಾಧ್ಯವಲ್ಲ. ದಿಲ್ಲಿ ದ್ವೀಪಾಂತರಗಳಲ್ಲಿ, ಪ್ರಪಂಚದ ಎಲ್ಲ ದೇಶಗಳಲ್ಲಿ ಬಂಧುಗಳು ಹಂಚಿಹೋಗುತ್ತಾರೆ. ಹಿಂದಿನ ಸಂಪ್ರದಾಯವನ್ನು ನಡಸುವ ಪ್ರವೃತ್ತಿಯುಳ್ಳವರಿಗೂ ಅದು ಸಾಧ್ಯವಲ್ಲ—ಆ ಪ್ರವೃತ್ತಿ ಬೇರೆ ಯಾವುದೋ ರೂಪದಲ್ಲಿ ಕಾರ್ಯಕ್ಕೆ ಇಳಿಯುತ್ತದೆ. ಜನರ ಮನಸ್ಸಿನಲ್ಲಿ ಆ ಪ್ರವೃತ್ತಿ ಇರಬೇಕಾದದ್ದು ಮುಖ್ಯ. ಸಮಾಜದ ಸ್ಥಿತಿ ಬದಲಾಯಿಸಿತಲ್ಲ, 'ತೇ ಹಿ ನೋ ದಿವಸಾ ಗತಾಃ' ಎಂದು ಅಲವತ್ತುಕೊಂಡು ಪ್ರಯೋಜನವಿಲ್ಲ.

ಆಗ ನಮಗೆ ಇದೆಲ್ಲ ಹಿತವೆಂಬುದೂ ನಿಜ, ಅದರಿಂದ ಕಷ್ಟವಾಯಿತೆಂಬುದೂ ನಿಜ. ನಮ್ಮ ತಂದೆಯ ಮನಸ್ಸಿಗೆ ನೆಮ್ಮದಿಯಿಲ್ಲದಿದ್ದಕ್ಕೆ ಈ ಕಷ್ಟ ಒಂದು ಕಾರಣ. ಅದಕ್ಕಿಂತ ಬಲವಾದ ಕಾರಣವೂ ಇತ್ತು. ಇನ್ನೂ ನಡುವಯಸ್ಸಿಗೆ ಕಾಲಿಡುತ್ತಿರುವಾಗಲೇ —ಮೈಸೂರಿಗೆ ಬಂದು ನೆಲಸಿದಾಗ ಅವರಿಗೆ ನಲವತ್ತು ವರ್ಷ—ಕೆಲಸಕಾರ್ಯಗಳೇನೂ

ಇಲ್ಲದೆ, ಸಂಪಾದನೆಯಿಲ್ಲದೆ ಮನೆಯಲ್ಲಿ ಕೂತಿರಬೇಕಾದರೆ ಸುಖವೆಲ್ಲಿ ಬಂತು! ಮೇಲೆ ಹೇಳಿದ ನಾಣಿಯ ಪ್ರಸಂಗದಂಥ ಸಂದರ್ಭಗಳಲ್ಲಿ ಮಾತ್ರವಲ್ಲ, ಹೊರಗೆ ಓಡಾಡಿ ನಿರ್ವಹಿಸಬೇಕಾದ ಯಾವ ಕೆಲಸಕ್ಕಾಗಲಿ ಅವರು ಮತ್ತೊಬ್ಬರ ಕೈ ಕಾಯಬೇಕಾಗಿತ್ತು. ಇದೆಲ್ಲ ಅವರಿಗೆ ಬೇಸರ ತಂದಿತ್ತು, ಆತ್ಮವಿಶ್ವಾಸವನ್ನು ಕುಗ್ಗಿಸಿತ್ತು. ಅವರು ಹಿಂದಿಗಿಂತ ಹೆಚ್ಚಾಗಿ ಸಂಧ್ಯಾವಂದನೆ, ಗಾಯತ್ರೀಜಪ, ದೇವರ ಪೂಜೆ ಇತ್ಯಾದಿಗಳಲ್ಲಿ ಬೇಸರ ಮರೆಯುವ, ನೆಮ್ಮದಿ ಪಡೆಯುವ ಪ್ರಯತ್ನ ಮಾಡಿದರು. ಅದರಿಂದ ಹೆಚ್ಚೇನೂ ಫಲ ದೊರಕಲಿಲ್ಲ ಎಂದು ತೋರುತ್ತದೆ. ಮನಸ್ಸಿನ ಅಶಾಂತಿಯ ಜೊತೆಗೆ ರೋಗದ ಪಿರ್ಚೂ ಸೇರಿತು. ಅಸಹನೆ, ಸಿಡುಕು, ಕೋಪತಾಪಗಳು, ಎಲ್ಲ ಹೆಚ್ಚಾದವು. ಒಂದೊಂದು ವೇಳೆ ಕೋಪ ಉಲ್ಬಣವಾದಾಗ ಅವರನ್ನು ತಡೆಯುವುದು ಕಷ್ಟವಾಗುತ್ತಿತ್ತು. ಅವರನ್ನು ಹದಕ್ಕೆ ತರಬಲ್ಲವರೆಂದರೆ ನಮ್ಮ ಅಜ್ಜಿಯೊಬ್ಬರೇ. ಅವರು ಬಂದು "ಇದೇನಿದು, ಸುಬ್ರಾಯ?" ಎಂದರೆ ಸಾಕು, ತಂದೆ ಆ ಸ್ಥಳ ಬಿಟ್ಟು ಹೊರಟುಹೋಗಿ ಜಗಲಿಯ ಮೇಲೆ ಕೂತು "ಕೋಪ ಬಿಡಬೇಕು, ಕೋಪ ಬಿಡಬೇಕು" ಎಂದು ರಾಗವಾಗಿ ಮಂತ್ರ ಜಪಿಸಿದಂತೆ ಅರ್ಧ ಘಂಟೆ ಜಪಿಸುತ್ತಿದ್ದರು.

ಅದರಿಂದಲೇ—ಆ ಜಪದಿಂದಲೇ—ನನಗೆ ತಿಳಿಯಬೇಕಾಗಿತ್ತು, "ಇವರಿಗೆ ತಮ್ಮ ಕೋಪದ ಅರಿವಿದೆ, ಆದರೆ ಅದನ್ನು ಸ್ವಾಧೀನಕ್ಕೆ ತಂದುಕೊಳ್ಳುವ ಶಕ್ತಿಯಿಲ್ಲ" ಎಂದು. ಆಗ ನಾನೇನೂ ಅರಿಯದ ಹಸುಳೆಯಲ್ಲ. ೧೫–೧೬ ವರ್ಷದವನು; ಅವರ ಕಷ್ಟ ನನಗೆ ಅರ್ಥವಾಗಬೇಕಾಗಿತ್ತು, ಆದರೆ ಆಗಲಿಲ್ಲ. ನನ್ನ ಮನಸ್ಸು ಬೆಳೆದಿರಲಿಲ್ಲ; ಅಥವಾ ನನ್ನಲ್ಲಿ ಏನೋ ಒಂದು ವಕ್ರತೆ ಮನೆಮಾಡಿಕೊಂಡಿತ್ತು. ಖಾಯಿಲೆಯಿಂದ ನರಳುತ್ತಿದ್ದ ತಂದೆಯನ್ನು ರೇಗಿಸುವಂಥ ಮಾತನ್ನು ನಾನು ಆಡಿದ್ದು ಅಪರೂಪವೇನಲ್ಲ. ಅವರು 'ಕೋಪ ಬಿಡಬೇಕು' ಎಂದು ಜಪಿಸುತ್ತಿದ್ದದ್ದನ್ನು ಅವರು ಎದುರಿಗಿಲ್ಲದಿದ್ದಾಗ ಹಾಸ್ಯಮಾಡಿ ನನ್ನ ತಾಯಿಯ ಕಣ್ಣಿಗೆ ನೀರು ತಂದದ್ದೂ ಉಂಟು. ಅದನ್ನು ನೆನೆದುಕೊಂಡರೆ ಈಗ ಭೂಮಿಗಿಳಿದು ಹೋಗುವಂತಾಗುತ್ತದೆ. ಅಂತೂ ನನಗೂ ತಂದೆಗೂ ಕೆಲವು ವರ್ಷಕಾಲ ಘರ್ಷಣೆ ಆಗುತ್ತಲೇ ಇತ್ತು; ಅದರ ಪರಿಣಾಮವಾಗಿ ಏಟು ಬೀಳುತ್ತಲೂ ಇತ್ತು. ಈ ಘರ್ಷಣೆ ಶಿಖರವನ್ನು ಮುಟ್ಟಿದ್ದು ನನ್ನ ೧೫ನೇ ವರ್ಷ ಮುಗಿಯುವುದರಲ್ಲಿದ್ದ ಕಾಲದಲ್ಲಿ. ಒಂದು ದಿನ ನಾನು ಬಾಳೆಯ ಹಣ್ಣನ್ನು ಮುರಿದು ಬಾಯಿಗೆ ಹಾಕಿಕೊಂಡು ಉಳಿದ ಭಾಗವನ್ನು ಕೈಯಲ್ಲಿ ಹಿಡಿದಿದ್ದೆ; ಹಿಡಿದಿದ್ದ ರೀತಿ ನಾನು ಕಚ್ಚಿ ತಿಂದಿದ್ದರೆ ಹೇಗೋ ಹಾಗಿತ್ತು ಎಂದು ತೋರುತ್ತದೆ. ನನ್ನ ಬಾಯಲ್ಲಿ ಹಣ್ಣಿದೆ, ಮುರಿದ ಭಾಗ ಮೇಲಾಗಿ ಹಣ್ಣನ್ನು ಕೈಯಲ್ಲಿ ಹಿಡಿದಿದ್ದೇನೆ. ತಂದೆ "ಎಂಜಲುಮಾಡದೆ ತಿನ್ನಬಾರದೆ? ಕತ್ತೆಗೆ ಬಂದ ಹಾಗೆ ಬಂತು, ನಿನಗೆ ಬುದ್ಧಿ! ಮುರಿದು ತಿನ್ನುವುದೇನು ಕಷ್ಟವೆ!" ಎಂದರು. ನಾನು ಮುರಿದುಕೊಂಡೇ ಮಾತಾಡಿದೆ:

"ನಾನೇನು ಕಚ್ಚಿ ತಿನ್ನಲಿಲ್ಲ."

"ಸುಳ್ಳು ಹೇಳುತ್ತೀಯ?"—ಒಂದೇಟು ಕೊಟ್ಟರು.

"ನಾನೇನು ಸುಳ್ಳು ಹೇಳಲಿಲ್ಲ"—ನನ್ನ ದನಿಯಲ್ಲಿ ಮೊಂಡುತನವಿತ್ತು.

"ಮತ್ತೆ ಅದೇ ಜೊಗಳೀತೀಯ? ಕಚ್ಚಿದ್ದುಂಟು ಅಂತ ಒಪ್ಪಿಕೊ" ಇನ್ನೆರಡುಏಟು.

"ನಾನು ಕದ್ದಿಲ್ಲ. ಒಪ್ಪಿಕೊಳ್ಳೋದಿಲ್ಲ. ತಪ್ಪು ಮಾಡದಿದ್ದರೂ ಯಾಕೆ ಒಪ್ಪಿಕೊಳ್ಳಲಿ?"—ಮತ್ತೆ ಎರಡು ಏಟು, ಮೊದಲಿಗಿಂತಲೂ ಜೋರಾಗಿ. ನಾನು ಮತ್ತೆ :

"ಹೊಡಿ. ಎಷ್ಟು ಹೊಡೀತೀಯೊ ಹೊಡಿ. ನಾನು ಒಪ್ಪಲ್ಲ."

ಅಷ್ಟು ಹೊತ್ತಿಗೆ ಅವರ ಕೋಪ ಯದ್ವಾ ತದ್ವಾ ಹದ ಮೀರಿ ಹೋಯಿತು. ನನ್ನ ಮೈಯೆಲ್ಲ ಬಾಸುಂಡೆ ಬರುವವರೆಗೂ ಹೊಡೆದರು. ನನ್ನ ತಾಯಿಗೆ ಅವರನ್ನು ತಡೆಯುವ ಧೈರ್ಯವಿಲ್ಲ. ಇನ್ನೂ ಹೊಡೆಯುತ್ತಿರುವಾಗಲೇ ನನ್ನ ಅಜ್ಜಿ ಎಲ್ಲೋ ಹೋಗಿದ್ದವರು ಒಳಗೆ ಬಂದರು. ನನ್ನನ್ನು ಎಳೆದು ತಮ್ಮ ಹತ್ತಿರ ನಿಲ್ಲಿಸಿಕೊಂಡು, ಮತ್ತೆ ನನ್ನನ್ನು ಸ್ವಲ್ಪ ಮುಂದಕ್ಕೆ ಚಾಚಿದಂತೆ ಮಾಡಿ ಕಣ್ಣೀರು ಸುರಿಸುತ್ತ ಹೇಳಿದರು : "ಹೊಡಿ, ಸುಬ್ರಾಯ, ಹೊಡಿ ! ನಿನ್ನ ಕೆಲಸ ಮುಗಿಸು. ನನ್ನ ಮಗ ನನ್ನ ಮೊಮ್ಮಗನ್ನ ಕೈಯಾರ ಕೊಂದದ್ದನ್ನ ನೋಡಬೇಕು ಅನ್ನೊ ಆಸೆಯಿಂದಲ್ಲವೆ, ನಾನು ಸಾಯದೆ ಬದುಕಿರೋದು ?"

ತಂದೆ ಆ ಸ್ಥಳ ಬಿಟ್ಟು ಹೊರಟುಹೋದರು.

ಅವತ್ತು ರಾತ್ರಿಯೆಲ್ಲ ನನಗೆ ನಿದ್ದೆಯಿಲ್ಲ. ನರಳುತ್ತ ಮಲಗಿದ್ದೆ. ಜ್ವರವೂ ಬಂದಿರ ಬಹುದು. ಬಹುಶಃ ತಂದೆಗೂ ನಿದ್ದೆಯಿಲ್ಲ. ಬೆಳಗಾದ ಮೇಲೆ ಅವರು "ನರಸಿಂಹ ಮೂರ್ತಿೀನ ಕೂಗು" ಎಂದದ್ದು ಕೇಳಿಸಿತು. ಅಮ್ಮನೇ (ಅಜ್ಜಿಯನ್ನು ನಾವೆಲ್ಲ 'ಅಮ್ಮ' ಎಂದೇ ಕರೆಯುತ್ತಿದ್ದೆವು. ನಮ್ಮ ತಾಯಿ 'ಪುಟ್ಟ') ಬಂದು ಕೂಗಿದಳು :

"ಸುಬ್ರಾಯ ಕರೀತಾನೆ. ಬಾಪ್ಪ"

"ನಾನು ಬರಲ್ಲ."

"ಹಟ ಮಾಡಬೇಡ ಮಗು. ಅವನಿಗೆ ರೋಗದ ಪಿತ್ಥ ಕಣೋಪ್ಪಾ.ಇಲ್ಲದಿದ್ದರೆ ಯಾರಾದರೂ ಹಾಗೆ ದನ ಬಡಿದ ಹಾಗೆ ಬಡೀತಾರೆಯೆ ! ಎದ್ದು ಬಾಪ್ಪ.ಅವನು ಏನು ಹೇಳಿದರೂ ಎದುರುಮಾತಾಡಬೇಡ. ಸುಮ್ಮನಿದ್ದು ಬಿಡು."

ನಾನು ಎದ್ದು ಬಂದು ಮೌನವಾಗಿ ತಂದೆಯೆದುರು ನಿಂತೆ : ಅವರೂ ಮಾತಿಲ್ಲದೆ ಒಂದೆರಡು ಕ್ಷಣ ನನ್ನನ್ನು ನೋಡಿ, ಕೋಪವಾಗಲಿ ಮರುಕವಾಗಲಿ ಬೇರೆ ಭಾವಗಳಾಗಲಿ ಯಾವುದೂ ಇಲ್ಲದ ಸಮತಲದ ದನಿಯಲ್ಲಿ "ಮಡಿ ಉಟ್ಟುಕೊಂಡು (ಅಂದರೆ : ಸ್ನಾನ ಮಾಡಿ) ವಿಭೂತಿ ಇಟ್ಟುಕೊಂಡು ಬಾ" ಎಂದರು. ಅವರು ಆ ವೇಳೆಗಾಗಲೆ ಸ್ನಾನ ಮಾಡಿ ಮಡಿ ಪಂಚೆಯನ್ನುಟ್ಟು ಮೈಮೇಲೆ ಒಂದು ಚೌಕವನ್ನು ಹಾಕಿಕೊಂಡಿದ್ದರು. ನಾನು ಸ್ನಾನ ಮಾಡಿ ಬಂದಮೇಲೆ "ನನ್ನ ಜೊತೆ ಬಾ" ಎಂದು, ನಮ್ಮ ಮನೆಗೆ ೧೦–೨೦ ಮಾರು ದೂರದಲ್ಲಿ ವೆಂಕಟರಮಣಸ್ವಾಮಿಯ ಗುಡಿಗೆ ಕರೆದುಕೊಂಡು ಹೋದರು. ತಾವು ಮೊದಲು ದೇವರಿಗೆ ದೀರ್ಘದಂಡ ಪ್ರಣಾಮ ಮಾಡಿ, "ನಮಸ್ಕಾರ ಮಾಡು" ಎಂದರು. ನಾನೂ ನಮಸ್ಕರಿಸಿ ಎದ್ದಮೇಲೆ "ನನಗೆ ಕೋಪ ಬಂದಾಗ ನಾನು ಹೇಳಿದ್ದನ್ನು ಒಪ್ಪಿಕೊ ; ಅಥವಾ ಏನೂ ಮಾತಾಡದೆ ಸುಮ್ಮನೆ ಹೊರಟುಹೋಗು" ಎಂದರು. ಅದು ಅವರು ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದ ರೀತಿ. ಅವರು ಬಹಳ ಸಂಕಟಪಟ್ಟಿರಬೇಕೆಂಬುದು ನನಗೆ ಈಗ ತಿಳಿಯುತ್ತದೆ. ತಾವು ನಂಬಿದ ದೈವದ ಸನ್ನಿಧಿ ಯಲ್ಲಿ "ನನಗೆ ಸಂಯಮವನ್ನು ಕೊಡು" ಎಂದು ಪ್ರಾರ್ಥಿಸಿದ್ದಿರಬೇಕು.

ಗುಡಿಯಿಂದ ಹೊರಗೆ ಬಂದಮೇಲೂ ನನ್ನಲ್ಲಿ ಕೋಪ ಹೊಗೆಯಾಡುತ್ತಲೇ ಇತ್ತು—ತಂದೆಯಲ್ಲಿ ಪಶ್ಚಾತ್ತಾಪ ಹೊಗೆಯಾಡುತ್ತಿದ್ದಿರಬೇಕು. ಆ ಪ್ರಸಂಗವನ್ನು ನಾನು ವಿಶ್ಲೇಷಣೆಗೆ ಗುರಿಮಾಡಿಕೊಂಡಿದ್ದೇನೆ. ನನ್ನ ಆಗಿನ ದೃಷ್ಟಿ ಹೀಗಿತ್ತು: ನಾನು ಪಶ್ಚಾತ್ತಾಪ ಪಡಬೇಕಾದ್ದಿಲ್ಲ. ನನ್ನ ತಂದೆ ಅಪರಾಧಿ. ನಾನೊ—"ಸತ್ಯವಂತರಿಗಿದು ಕಾಲವಲ್ಲ" ಎಂದು ಹಾಡಬಹುದಾದವನು! ನನ್ನ ಕೋಪ righteous indignation—ಧರ್ಮಪರವಾದ ಕೋಪ. ನಾನು Martyr—ಸತ್ಯಕ್ಕಾಗಿ ಹಿಂಸೆಗೆ ಗುರಿಯಾದವನು, ಹುತಾತ್ಮ; ಹಿಂಸೆಗೆ ಹೆದರಿ ಅನ್ಯಾಯಕ್ಕೆ ತಲೆಬಾಗುವವನಲ್ಲ, ಕೆಚ್ಚೆದೆಯಿಂದ ಅದನ್ನು ಎದುರಿಸುವನು. (ಆ ವೇಳೆಗೆ ನಾನು ಸಾಹಿತ್ಯದಲ್ಲಿ ಇಂಥ ಪಾತ್ರಗಳ ಪರಿಚಯಮಾಡಿಕೊಂಡಿದ್ದೆ. ಅವರಿಗಿಂತ ನಾನೇನು ಕಡಿಮೆ?! ಪೆಟ್ಟು ತಿನ್ನುತ್ತಿದ್ದಾಗ ನಾನು ಈ ಹುತಾತ್ಮ-ಪಾತ್ರವನ್ನು ನಿರ್ವಹಿಸುತ್ತಿದ್ದೆ, ಸ್ವಲ್ಪ ಹೆಮ್ಮೆಯಿಂದ. ಅದರಲ್ಲಿ ಆತ್ಮಾನುಕಂಪವೂ ಸೇರುತ್ತಾದ್ದರಿಂದ ಅದು ಹಿತ!

ಇಷ್ಟೇ ಆಗಿದ್ದರೆ ಅದನ್ನು ನೆನೆದು ನಗಬಹುದು. ಆದರೆ ಅವತ್ತು ನನ್ನ ಮನಸ್ಸಿನಲ್ಲಿ ಇದಕ್ಕಿಂತ 'ಸೀರಿಯಸ್' ಆದ ಎಳೆಯೊಂದಿತ್ತು. ನನ್ನ ತಂದೆ ನನ್ನನ್ನು ದಂಡಿಸಿದ್ದಕ್ಕೆ ಕಾರಣವಿರಲಿಲ್ಲ; ಆದರೆ ಇತ್ತು ಅವರು ನಂಬಿದ್ದರು. ಅವರ ತಪ್ಪು error judgment—ವಿಚಾರಮಾಡದೆ ತೀರ್ಮಾನಕ್ಕೆ ಬಂದದ್ದು. ಅವರ ಕೋಪವೂ righteous indignation. ಮೊದಲು ರೇಗಿದವರು ಅವರೇ ಆದರೂ ಅವರ ಕೋಪವನ್ನು ಹೆಚ್ಚಿಸಿದವನು ನಾನು. ಸಿಡುಕಿಲ್ಲದೆ "ನಾನು ತಪ್ಪು ಮಾಡಲಿಲ್ಲ. ನಿನ್ನ ಸಮಾಧಾನಕ್ಕಾಗಿ 'ಮಾಡಿದೆ' ಎಂದು ಹೇಳಬಹುದು. ಆದರೆ ಅದು ನಿಜವಾದ ಮಾತಾಗುವುದಿಲ್ಲ. ಏನು ಮಾಡಲಿ, ಹೇಳು" ಎಂದು ಸಮತಲದ ದನಿಯಲ್ಲಿ ಹೇಳಿದ್ದರೆ ಬಹುಶಃ ಅವರ ಕೋಪ ಇಳಿದುಹೋಗುತ್ತಿತ್ತು. ಆದರೆ ನನ್ನ ಮನಸ್ಸು "ಅವರು ಹೊಡೆದರೆ ಅವರ ಕ್ರೌರ್ಯವೇ ಅವರಿಗೆ ಪಶ್ಚಾತ್ತಾಪ ತರುತ್ತದೆ. ತಮ್ಮ ಕೆಲಸನ್ನು ನೋಡಿ ಸಂಕಟ ಅನುಭವಿಸುತ್ತಾರೆ. ಅನುಭವಿಸಲಿ! ಎಲ್ಲರೂ ನನಗೆ ಕನಿಕರ ತೋರುತ್ತಾರೆ, ಅವರನ್ನು ದೂರುತ್ತಾರೆ, ದೂರಿಸಿಕೊಳ್ಳಲಿ!" ಎನ್ನುವ ಸ್ಥಿತಿಯಲ್ಲಿತ್ತು. ಅವರು ನನ್ನ ದೇಹಕ್ಕೆ ಪೆಟ್ಟುಕೊಡುತ್ತಿದ್ದಾರೆ, ಅವರ ಮನಸ್ಸಿಗೆ ಪೆಟ್ಟಾಗಲಿ! ಈ ಮನೋವೃತ್ತಿಯಲ್ಲಿ ಕ್ರೌರ್ಯದ ಅಂಶವಿದೆ.

ಈ ಸಂದರ್ಭವನ್ನು ನಾನು ವಿಶ್ಲೇಷಿಸಿರುವುದು ವಸ್ತುನಿಷ್ಠ ವಿಶ್ಲೇಷಣೆಯಿಂದ ಪ್ರಯೋಜನವುಂಟು ಎಂಬ ದೃಷ್ಟಿಯಿಂದ, ಅಷ್ಟೆ. ನನ್ನನ್ನು ನಾನು ನಿಂದಿಸಿಕೊಳ್ಳುತ್ತಿಲ್ಲ. ಆಗಿನ ಪರಿಸ್ಥಿತಿಯನ್ನೂ ನನ್ನ ವಯಸ್ಸನ್ನೂ ಗಮನಿಸಿದರೆ ನನ್ನ ನಡತೆ ಬಾಲಿಶ ಎಂದರೂ "ಪಾಪೋಹಂ ಪಾಪಕರ್ಮಾಹಂ" ಎಂದು ಹಳಿದುಕೊಳ್ಳುವಂಥದಲ್ಲ. ಹೊಗಳಿಕೊಳ್ಳುವಂಥದೂ ಅಲ್ಲ!

ನನಗೂ ನನ್ನ ತಂದೆಗೂ ಆಗುತ್ತಿದ್ದ ಘರ್ಷಣೆಗಳಿಗೆ ನನ್ನ ಮೊಂಡುತನವೂ ತಂದೆಯ ರೋಗ ಮತ್ತು ಮಾನಸಿಕ ಅಶಾಂತಿಗಳೂ ನೇರವಾದ ಕಾರಣ ಎಂಬುದೇನೊ ನಿಜ. ಆದರೆ ಅಂದಿನ ಸಂಸಾರವ್ಯವಸ್ಥೆಯಲ್ಲೇ ದೋಷವೊಂದಿತ್ತು. ಅದರಿಂದಾಗಿ ತಂದೆ ಮಕ್ಕಳು, ಅಣ್ಣತಮ್ಮಂದಿರು, ಕೊನೆಗೆ ಗಂಡಹೆಂಡತಿಯರು—ಘರ್ಷಣೆ ಬರದಂತೆ

ಒಬ್ಬರನ್ನೊಬ್ಬರು ಅರಿತುಕೊಳ್ಳುವುದು ಕಷ್ಟವಾಗುತ್ತಿತ್ತು. ಆಗಿನ ಬದುಕು ಬೇಸಾಯವನ್ನು ಅವಲಂಬಿಸಿದ್ದು. ಜಮೀನು ಚಿಕ್ಕಚಿಕ್ಕ ಗತಾಕುಗಳಾಗಿ ಹಂಚಿಹೋದರೆ ಬೇಸಾಯ ಕಷ್ಟ. ಆದ್ದರಿಂದ ಕುಟುಂಬಗಳು ಸಾಧ್ಯವಾದ ಮಟ್ಟಿಗೆ ಅವಿಭಕ್ತವಾಗಿರುತ್ತಿದ್ದವು. ಈಗಿನ 'ನ್ಯೂಕ್ಲಿಯರ್' ಕುಟುಂಬ—ಅಂದರೆ ಗಂಡಹೆಂಡತಿ, ಇನ್ನೂ ಪ್ರಾಯಕ್ಕೆ ಬಂದಿಲ್ಲದ ಮಕ್ಕಳು ಇಷ್ಟುಮಾತ್ರ—ಆಗ ಅಪರೂಪ. ನಮ್ಮದು ನ್ಯೂಕ್ಲಿಯರ್ ಕುಟುಂಬವೇ ಆದರೂ ಅದರಲ್ಲಿ ಹಿಂದಿನಿಂದ ಬಂದ ಅವಿಭಕ್ತ ಕುಟುಂಬದ ಲಕ್ಷಣಗಳು ಉಳಿದಿದ್ದವು. ತಂದೆ ಮಕ್ಕಳು, 'ಕಸಿನ್'ಗಳು, ಅಣ್ಣತಮ್ಮಂದಿರು ಮತ್ತು ಅವರ ಹೆಂಡತಿಮಕ್ಕಳು, ಎಲ್ಲ ಒಟ್ಟಿಗಿರುವುದು ಸಾಮಾನ್ಯ. ಇಂಥ ದೊಡ್ಡ ಸಂಸಾರಗಳಲ್ಲಿ ಗಂಡಹೆಂಡಿರಾಗಲಿ ತಂದೆಮಕ್ಕಳಾಗಲಿ ತಾವುತಾವೇ ಅಲಕ್ಕಾಗಿ ಕುಳಿತು ಬಿಗುಪಿಲ್ಲದೆ ಬಿಚ್ಚುಮನಸ್ಸಿನಿಂದ ವಿರಾಮವಾಗಿ ಸಲಿಗೆಯಿಂದ ಮಾತುಕಥೆ ನಡೆಸುವುದಕ್ಕೆ ವ್ಯವಧಾನ ಸಿಕ್ಕುವುದು ಕಷ್ಟ. ಪ್ರೀತಿವಾತ್ಸಲ್ಯಗಳು ಇರಲೇ ಇಲ್ಲವೆಂದಲ್ಲ; ಅವನ್ನು ಇತರರೆದುರಿಗೆ ಪ್ರದರ್ಶಿಸುವುದು ಸಭ್ಯನಡತೆಯಲ್ಲ ಎಂದು ಆಗಿನ ಭಾವನೆ. ಕುಟುಂಬದಲ್ಲಿ ಪ್ರೀತಿಗಿಂತ ಹೆಚ್ಚಾಗಿ ಗೌರವಕ್ಕೆ, ಹಿರಿಯರಿಗೆ ಸಲ್ಲಬೇಕಾದ ಮನ್ನಣೆಗೆ, ಪ್ರಾಶಸ್ತ್ಯ. ಮನೆಯ ಯಜಮಾನನ ಅಧಿಕಾರವನ್ನು ಎಲ್ಲರೂ ಒಪ್ಪಿಕೊಂಡು ಅವನಿಗೆ ವಿಧೇಯರಾಗಿ ನಡೆದುಕೊಳ್ಳಬೇಕು. ಮಕ್ಕಳ ಮನಸ್ಸಿನಲ್ಲಿ ತಂದೆಯೆಂದರೆ ಪ್ರೀತಿಗಿಂತ ಹೆಚ್ಚಾಗಿ ಭಯಮಿಶ್ರಿತವಾದ ಭಕ್ತಿ; ತಂದೆಯ ಮನಸ್ಸಿನಲ್ಲಿ ಪ್ರೀತಿಗಿಂತ ಹೆಚ್ಚಾಗಿ "ಸಂಸಾರದಲ್ಲಿ ಬಿಗಿಯಿರಬೇಕು, ಅದು ಲಗಾಮಿಲ್ಲದ ಕುದುರೆಯಾಗಬಾರದು" ಎನ್ನುವ ಮನೋವೃತ್ತಿ.

ಪಾಶ್ಚಾತ್ಯರಲ್ಲಿ "Children should be seen, not heard" (ಮಕ್ಕಳನ್ನು ನೋಡುವಂತಿರಬೇಕು; [ಅವರ ಹುಯಿಲನ್ನು] ಕೇಳುವಂತಿರಬಾರದು) ಎಂಬ ಮಾತಿದೆ. ಅವರ ಮನೆಗಳಿಗೆ ಅತಿಥಿಗಳು ಬಂದಾಗ ಮಕ್ಕಳಿಗೆ ಮುಂಚೆ ಊಟಮಾಡಿಸಿ ಕಳಿಸಿಬಿಡುತ್ತಾರೆ. ನಮ್ಮ ಜನ ಮಕ್ಕಳಿಗೆ ತಮ್ಮ ಜೊತೆಯಲ್ಲಿರುವ ಸ್ವಾತಂತ್ರ್ಯವನ್ನೇನೊ ಕೊಡುತ್ತಾರೆ. ಆದರೆ ಅವರೊಡನೆ ಯಾವ ಸಮಸ್ಯೆಯನ್ನೂ ಚರ್ಚೆ ಮಾಡುವುದಿಲ್ಲ; ನಮ್ಮ ಅಭಿಪ್ರಾಯಕ್ಕೆ ವಿರುದ್ಧವಾದ ಮಾತಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ತಂದೆಯ ಮಾತಿಗೆ ಪ್ರತಿಯಾಗಿ ನ್ಯಾಯವಾದ ಮಾತನ್ನೇ ಹೇಳಿದರೂ "ಆಗಲೇ ಎದುರು ಮಾತಾಡುವುದಕ್ಕೆ ಪ್ರಾರಂಭಿಸಬಿಟ್ಟ!" ಎಂಬ ಆಕ್ಷೇಪಣೆ ಬರುತ್ತದೆ. ಇದರಿಂದಾಗಿ ಒಬ್ಬರನ್ನೊಬ್ಬರು ಅರಿತುಕೊಳ್ಳುವುದು ಕಷ್ಟವಾಗುತ್ತಿತ್ತು. ಮಕ್ಕಳ ಮನಸ್ಸು ಸ್ವತಂತ್ರವಾಗಿ ಬೆಳೆಯಲು ಬೇಕಾದಷ್ಟು ಅವಕಾಶವಿರಲಿಲ್ಲ. ಈಗ ಪರಿಸ್ಥಿತಿ ಬದಲಾಯಿಸಿದೆ. ತಂದೆಮಕ್ಕಳು ಒಟ್ಟಿಗೆ ಕೂತು ಸಲಿಗೆಯಿಂದ ಸರಿಸಮನಾಗಿ ಮಾತಾಡುವುದನ್ನು ಪರಸ್ಪರ ಹಾಸ್ಯಮಾಡಿ ನಕ್ಕು ನಲಿಯುವುದನ್ನೂ ಎಷ್ಟೋ ಮನೆಗಳಲ್ಲಿ ನೋಡಿ ಆನಂದಪಟ್ಟಿದ್ದೇನೆ.

ತಂದೆಗೆ ಅಸಮಾಧಾನ ತರುವಂಥ ಇನ್ನೆರಡು ಕೆಲಸಗಳನ್ನು ನಾನು ಮಾಡುತ್ತಿದ್ದೆ. ಅವುಗಳಲ್ಲಿ ಒಂದು—ಮನೆಯಲ್ಲಿ ಪಠ್ಯಪುಸ್ತಕಗಳನ್ನು ಓದದೆ ಯಾವುದೋ 'ಹಾಳುಮೂಳು' ಪುಸ್ತಕಗಳನ್ನು ಓದುವ ಹವ್ಯಾಸದ—ಪ್ರಸ್ತಾಪ ಹಿಂದೆಯೇ ಬಂದಿದೆ.

ಅವರು ಅಕ್ಕಿಹೆಬ್ಬಾಳಿನಲ್ಲಿದ್ದಾಗ ಮೈಸೂರಿನಲ್ಲಿ ನನ್ನ ವಿದ್ಯಾಭ್ಯಾಸ ಹೇಗೆ ನಡೆಯುತ್ತಿತ್ತು ಎಂಬ ವಿಷಯವನ್ನು ಅವರು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. "ಕಲಿಕೆ ತನ್ನ ಪಾಡಿಗೆ ತಾನು ನಡೆಯುತ್ತಿದೆ, ಅಯ್ಯ ನೋಡಿಕೊಳ್ಳುತ್ತಾನೆ" ಎಂದುಕೊಂಡು ನೆಮ್ಮದಿಯಿಂದಿದ್ದರು. ಮೈಸೂರಿಗೆ ಬಂದ ಮೇಲೆ ಎರಡು ಮೂರು ತಿಂಗಳು ನೋಡಿದ್ದರಲ್ಲಿ ನಾನು ಸ್ಕೂಲು ಪುಸ್ತಕಗಳನ್ನು ಕಡೆಗಣಿಸುತ್ತಿದ್ದೆನೆಂಬುದು ಸ್ಪಷ್ಟವಾಯಿತು. "ಅವನ್ನೆಲ್ಲ ಓದಿ ಕಾಲ ಕಳೆಯಬೇಡ" ಎಂದು ಹೇಳಿ ಹೇಳಿ ಸಾಕಾಗಿ ಬೇಸರಗೊಂಡಿದ್ದರು. ಅದು ಸ್ವಾಭಾವಿಕ. ಆಗಿನ ಕಾಲದ ಶಿಕ್ಷಕರು ಅಧ್ಯಯನದಲ್ಲಿ ವಿಸ್ತಾರಕ್ಕಿಂತ ಆಳಕ್ಕೆ ಹೆಚ್ಚು ಗಮನ ಕೊಡುತ್ತಿದ್ದರು. ಅದು ಸಂಪೂರ್ಣವಾಗಿ ತಪ್ಪು ಎಂದೂ ಹೇಳಲಾಗುವುದಿಲ್ಲ. ಹಿಂದಿನ ಕಾಲದವರ ಬಾಯಲ್ಲಿ 'ಶತಶ್ಲೋಕೀಸ ಪಂಡಿತಃ' ಎಂಬ ಮಾತು ಆಗಾಗ ಕೇಳಿಬರುತ್ತಿತ್ತು. ಈ ಮಾತು ಸಂಪೂರ್ಣವಾಗಿಯಲ್ಲದಿದ್ದರೂ ಬಹುಮಟ್ಟಿಗೆ ಸಾಹಿತ್ಯದ ಅಧ್ಯಯನಕ್ಕೆ ಅನ್ವಯವಾಗುತ್ತಿತ್ತು. ಕಳೆದ ಶತಮಾನದಲ್ಲಿ ಹಳೆಯ ಕಾಲದ ವಿದ್ವಾಂಸರ ಅಧ್ಯಯನ ಬಹುಮಟ್ಟಿಗೆ ಸಾಹಿತ್ಯ, ಧರ್ಮಶಾಸ್ತ್ರ, ತತ್ತ್ವಶಾಸ್ತ್ರ ಇತ್ಯಾದಿ ನಾಲ್ಕೈದು ವಿಷಯಗಳಿಗೆ ಸೀಮಿತವಾಗುತ್ತಿತ್ತು. ಈಗಿರುವಂತೆ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಭೌತಶಾಸ್ತ್ರ, ಭೂಗರ್ಭಶಾಸ್ತ್ರ—ಇತ್ಯಾದಿಗಳು ಬೃಹತ್ತಾಗಿ ಬೆಳೆದಿರಲಿಲ್ಲ; ಬೆಳೆದು ಒಡೆದು ಮರಿಶಾಸ್ತ್ರಗಳನ್ನು ಉತ್ಪತ್ತಿಮಾಡಿಯೂ ಇರಲಿಲ್ಲ. ಆದ್ದರಿಂದ ಆಳವಾದ ಅಧ್ಯಯನಕ್ಕೆ ಹೆಚ್ಚು ಗಮನ ಸಂದದ್ದು ಸ್ವಾಭಾವಿಕ. ಅಂದಿನ ಅಧ್ಯಯನಕ್ರಮವನ್ನು ಪರಿಶೀಲಿಸಿದರೆ "ನೂರು ಶ್ಲೋಕಗಳನ್ನು ತಿಳಿದುಕೊಂಡವನು ಪಂಡಿತ" ಎಂಬ ಮಾತು ಮೇಲುನೋಟಕ್ಕೆ ಕಾಣುವಷ್ಟು ಹುಚ್ಚುಮಾತಲ್ಲ ಎಂಬುದು ಸ್ಪಷ್ಟವಾಗಬಹುದು. ಇದರ ಮಾತು ಮುಂದೆ ಬರುತ್ತದೆ.

ನನಗೆ ಕ್ಲಾಸಿನಲ್ಲಿ ಕೆಲವು ಬಹುಮಾನಗಳು ಬಂದವೆಂಬುದು ತಂದೆಗೆ ತಿಳಿದಮೇಲೆ ನನ್ನ ಓದಿಗೆ ಸಂಬಂಧಪಟ್ಟ ಅಸಮಾಧಾನವೇನೋ ಮಾಯವಾಯಿತು. ಆದರೆ ಇನ್ನೊಂದು ಅಸಮಾಧಾನ ಅಷ್ಟು ಸುಲಭವಾಗಿ ಹೋಗುವಂಥದಲ್ಲ. ಅದು ನನಗೆ ಸಂಗೀತದಲ್ಲಿದ್ದ ಆಸಕ್ತಿಯನ್ನು ಕುರಿತದ್ದು. ನಾನು ಚಿಕ್ಕರಾಮರಾಯರ ಮನೆಯ ಭಜನೆಗೆ ಹೋಗುತ್ತಿದ್ದದರ ಪ್ರಸ್ತಾಪ ಹಿಂದೆಯೇ ಬಂದಿದೆ. ನನ್ನ ಸಹಪಾಠಿ ಹೆಚ್. ಎಸ್. ಮಾಧವರಾಯರು ಚಿಕ್ಕರಾಮರಾಯರಿಗೆ ಹತ್ತಿರದ ಸಂಬಂಧ—ಅವರ ಮನೆಯಲ್ಲೇ ಇದ್ದರೇನೊ ಅವರು ಇದ್ದದ್ದು ಮಾರ್ಕೆಟ್‌ಚೌಕದಿಂದ ಗಾಂಧಿಚೌಕಕ್ಕೆ ಹೋಗುವ ರಸ್ತೆಯ ಸಣ್ಣ ಮನೆಯೊಂದರಲ್ಲಿ. ಅಲ್ಲಿ ಪ್ರತಿ ಗುರುವಾರ ನಡೆಯುತ್ತಿದ್ದ ಭಜನೆಗೆ ಹೋಗುವ ಅಭ್ಯಾಸ ಬೆಳೆಯಿತು—ನಮ್ಮ ಮನೆಯಿಂದ ಆ ಮನೆಗೆ ಕೇವಲ ಹತ್ತು ನಿಮಿಷದ ನಡಗೆ. ಭಜನೆಗಳಲ್ಲಿ ಸಾಮಾನ್ಯವಾಗಿ ದನಿಯ ಇಂಪಿಗಿಂತ, ರಾಗದ ಸ್ವಾರಸ್ಯಕ್ಕಿಂತ ಸಾಮೂಹಿಕ ಉತ್ಸಾಹ. ಹತ್ತಾರು ಜನರ ಕಂಠ ಒಟ್ಟುಗೂಡುವುದು, ಚಪ್ಪಾಳೆಯ ಅಥವಾ ಬೇರೆ ರೀತಿಯ, ತಾಳ—ಇವೇ ಎದ್ದು ಕಾಣುತ್ತವೆ. ಅವರಿಗೆ ಭಕ್ತಿ ಮುಖ್ಯ. ಚಿಕ್ಕರಾಮರಾಯರ ಮನೆಯಲ್ಲಿ—ಎಲ್ಲ ಸಂಗೀತಗಾರರ ಮನೆಯಲ್ಲಿ ಹೇಗೊ ಹಾಗೆ—ಭಜನೆಯೆಂದರೆ ಶಾಸ್ತ್ರೀಯ ಸಂಗೀತ. ಪಿಟೀಲು ಮೃದಂಗ ಇತ್ಯಾದಿ ಪಕ್ಕ ವಾದ್ಯಗಳಿರಲಿ ಇಲ್ಲದಿರಲಿ (ಅವು ಇಲ್ಲದಿದ್ದ, ಕೇವಲ ತಂಬೂರಿಯ ಶ್ರುತಿ ಮಾತ್ರ ಇದ್ದ ಭಜನೆಕಚೇರಿಗಳನ್ನೂ

ಕೇಳನ್ನೆ(ನೆ) ಅದು ಶಾಸ್ತ್ರೀಯ ಸಂಗೀತವೇ. ಇಂಥ ಭಜನೆಗಳಿಗೂ ಸಂಗೀತ ಕಛೇರಿಗಳಿ ಇದ್ದ ವ್ಯತ್ಯಾಸವೆಂದರೆ: ಭಜನೆ ಕಚೇರಿಗಳಲ್ಲಿ ಜಾವಳಿಗಳಿಗೆ ಸ್ಥಾನವಿಲ್ಲ. ತೆಲು ಭಾಷೆಯ ಪರಿಚಯವಿಲ್ಲದ ಗಾಯಕರೊಬ್ಬರು 'ಶಿವದೀಕ್ಷಾಪರು ರಾಲನು ರಾ' ಎ ಹಾಡನ್ನು ಶಿವಸ್ತೋತ್ರ ಎಂದು ಭಾವಿಸಿ ಭಜನೆಯಲ್ಲಿ ಹಾಡಿದರಂತೆ—ರಾಳ್ಲ ಅನಂತಕೃಷ್ಣ ಶರ್ಮರು ಇದನ್ನು ನನಗೆ ಹೇಳಿದರು. (ಆ ಹಾಡಿನ ಅರ್ಥ ನನಗೆ ತಿಳಿದದ ಶರ್ಮರಿಂದಲೇ) ಇಂಥ ಪ್ರಸಂಗಗಳು ಅಪರೂಪ.

ಭಜನೆಗಳಿಗೂ ಸಂಗೀತ ಕಛೇರಿಗಳಿಗೂ ಇದ್ದ—ಇನ್ನೊಂದು ವ್ಯತ್ಯಾಸವೆಂದ ಭಜನೆಯಲ್ಲಿ 'ದೇವರನಾಮ'ಗಳಿಗೆ, ಅಂದರೆ ಪುರಂದರ ಕನಕಾದಿ ದಾಸರ ರಚನೆಗ ಸ್ವಲ್ಪ ಹೆಚ್ಚು ಸ್ಥಾನ ದೊರೆಯುತ್ತಿದ್ದದ್ದು. ಆಗಿನ ಕಾಲದ ಕಛೇರಿಗಳ ಪೂರ್ವಭಾಗದ ಅಂದರೆ ರಾಗ ತಾನ ಪಲ್ಲವಿಗಳಿಗಿಂತ ಮುಂಚೆ, ದೇವರ ನಾಮಗಳನ್ನು ಹಾಡುತ್ತಿದ್ದದ ಅಪರೂಪ: ಇಲ್ಲವೇ ಇಲ್ಲ ಎನ್ನಬಹುದೇನೊ. ಪಲ್ಲವಿಯೂ ಮೃದಂಗದ ತನಿಯ ಮುಗಿದ ಮೇಲೆ, ಕಾವಡಿಚಿಂದು ತಿರುಪ್ಪುಗಳ್ ಮುಂತಾದ ಚುಟುಕಗಳನ್ನು ಹಾಡು ದಕ್ಕೆ ಮುಂಚೆ, ಒಂದೆರಡು ದಾಸರ ಪದಗಳನ್ನು ಹಾಡುತ್ತಿದ್ದರು. ಈಗ ಪರಿ ಬದಲಾಯಿಸಿದೆ. 'ಗಜವದನ ಬೇಡುವೆ' ಎಂಬ ಹಾಡಿನಿಂದ ಕಛೇರಿ ಆರಂಭವಾ ವುದು ಅಪರೂಪವೇನಲ್ಲ. ದೀಕ್ಷಿತರ ತ್ಯಾಗರಾಜರ ಕೃತಿಗಳ ನಡುವೆ ಒಂದೊ ದೇವರನಾಮ ಬರುವುದೂ ಅದಕ್ಕೆ ನೆರವಲು ಸ್ವರಕಲ್ಪನೆಗಳ ತೊಡಿಗೆ ಕೊಡುವು ಅಪರೂಪವಲ್ಲ.

ಚಿಕ್ಕರಾಮರಾಯರ ಮನೆಯ ಭಜನೆಯಲ್ಲಿ ದೇವರನಾಮಗಳಿಗೆ ಸ್ವಲ್ಪ ಹೆ ಸ್ಥಾನವಿತ್ತು, ನಿಜ: ಆದರೂ ಒಟ್ಟಿನಲ್ಲಿ ತೆಲುಗು ಸಂಸ್ಕೃತಗಳ ಕೃತಿಗಳೇ ಹೆಚ್ಚು. ನಾ ಆಗ, ಅಂದರೆ ೧೯೧೫ರ ಸುಮಾರಿನಲ್ಲಿ, ಮುತ್ತುಸ್ವಾಮಿ ದೀಕ್ಷಿತರ ಮತ್ತು ಶ್ಯಾ ಶಾಸ್ತ್ರಿಗಳ ಹೆಸರನ್ನು ಕೇಳಿರಲಿಲ್ಲ. ಅವರ ಕೃತಿಗಳಲ್ಲಿ ಕೆಲವನ್ನಾದರೂ ಕೇಳಿದ್ದಿರಬೇ 'ಸರೋಜದಳನೇತ್ರಿ, ಹಿಮಗಿರಿಪುತ್ರಿ'ಯನ್ನು ಕೇಳಿದ್ದು ಚೆನ್ನಾಗಿ ನೆನಪಿದೆ. ಆ 'ಶ್ಯಾಮಕೃಷ್ಣ', 'ಗುರುಗುಹ' ಇತ್ಯಾದಿ ಅಂಕಿತಗಳು ನನ್ನ ಮನಸ್ಸಿನಲ್ಲಿ ಯಾವ ಕ ಯನ್ನು ಮಿಡಿಯುತ್ತಿರಲಿಲ್ಲ. ತ್ಯಾಗರಾಜರ ಹೆಸರನ್ನು ಕೇಳಿದ್ದೆ: ಸಂಗೀತ ಪ್ರಪಂಚ ಅವರಿಗೆ ಎಂಥ ಗೌರವದ ಸ್ಥಾನವಿದೆ ಎಂಬುದೂ ಸ್ವಲ್ಪ ಮಟ್ಟಿಗೆ ತಿಳಿದಿತ್ತು. ಆದರ ಅರ್ಥವಾಗುವ ಪುರಂದರ-ಕನಕಾದಿ ದಾಸರ ರಚನೆಗಳಿರುವಾಗ ಈ ಗಾಯಕರು ಅ ವಾಗದ ಯಾವುದೋ ಭಾಷೆಯ ಕೃತಿಗಳನ್ನೇಕೆ ಹಾಡುತ್ತಾರೆ? ಈ ಸಮಸ್ಯೆ ನನ್ನ ಕಾಡುತ್ತಿತ್ತು. ಆಗ ನನ್ನ ಮನಸ್ಸಿನಲ್ಲಿದ್ದದ್ದು ಕನ್ನಡವನ್ನು ಕುರಿತ ಅಭಿಮಾನವ ಸಂಗೀತಕ್ಕೆ ಅರ್ಥದಿಂದ ಪುಷ್ಟಿ ಬರುತ್ತದೆ ಎಂಬ ಅಭಿಪ್ರಾಯವೂ ಅಲ್ಲ. ಕೇವಲ ಪರಿ ವಾದದ್ದನ್ನು ಸ್ವಾಗತಿಸುವ ಮತ್ತು ಅಪರಿಚಿತವಾದದ್ದನ್ನು ದೂರೀಕರಿಸುವ ಮನ ವೃತ್ತಿ. ಆಗಲೂ ನನಗೆ ಆನಂದವನ್ನು ಕೊಡುತ್ತಿದ್ದದ್ದು ಗಾನವೇ, ಅರ್ಥವಲ್ಲ. ಆದರ ಗಾನ ಪರಿಚಿತವಾದ ಭಾಷೆಯ ಉಡುಪನ್ನು ಧರಿಸಿ ಬರಬೇಕು. 'ಪುರಣಕಾಲದ ಅಜಾಮಿಳಗೊಲಿದೆ, ಗಜವಧ್ಯಜನುಬೊಚಿರುದಿಂದ'—ಎಲ್ಲ ನನಗೆ ತಿಳಿದ ಪದಗ

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಯುದ್ಧ ಮತ್ತು ಶಾಂತಿ

ಅನುವಾದ

ಪ್ರೊ॥ ದೇಜಗೌ



ಅನುಮೋದನೆಯ ಕುರುಹಿಗಾಗಿ ತಲೆ ಮಣಿದನು. ಅವನು ಬಲಕ್ಕೆ ಸರಿದು, ಸಹಾಯಾಧಿಕಾರಿಯ ಮೂಲಕ ಫ್ರೆಂಚರ ಮೇಲೆ ಧಾಳಿ ನಡಸುವಂತೆ ಅಶ್ವಾನೀಕಿನಿಗೆ ನಿರೂಪ ಕಳಿಸಿದನು. ಆದರೆ ಈ ಸಹಾಯಾಧಿಕಾರಿ ಅರ್ಧಗಂಟೆಯ ನಂತರ ಹಿಂದಿರುಗಿ, ಫ್ರೆಂಚರ ಗುಂಡಿಗೆ ಬಹುಜನ ಆಹುತಿಯಾಗಲಾಗಿ ಪ್ರಪಾತದಿಂದ ಹಿಮ್ಮೆಟ್ಟಬೇಕಾಯಿತೆಂದೂ, ಕಾಡಿನ ಕಡೆಗೆ ಕೆಲವು ಮಂದಿ ಕೋವಿ ಗುರಿಗಾರರನ್ನು ಕಳಿಸಬೇಕಾಯಿತೆಂದೂ ಅಶ್ವದಳಪತಿ ಹೇಳಿಕಳಿಸಿದ ಸುದ್ದಿಯನ್ನು ಮುಟ್ಟಿಸಿದನು.

'ಆಗಲಿ' ಎಂದು ಬಗ್ರೇಷನ್ ನುಡಿದು, ಫಿರಂಗಿ ದಿಣ್ಣೆಯಿಂದ ಮುಂದುವರಿಯುವಷ್ಟರಲ್ಲಿ ವಾಮ ಪಾರ್ಶ್ವದಿಂದ ಸಹ ಗುಂಡಿನ ಸದ್ದು ಕಿವಿಯನ್ನು ತಾಕಿತು. ಆ ಜಾಗ ದೂರವಿದ್ದುದರಿಂದ ತಾನೇ ಅಲ್ಲಿಗೆ ಹೋಗಲು ಸಮಯವಿರಲಿಲ್ಲ. ದಕ್ಷಿಣ ಪಾರ್ಶ್ವದ ಸೈನ್ಯ ಬಹುಕಾಲ ಫ್ರೆಂಚರ ಪರಾಕ್ರಮವನ್ನೆದುರಿಸಲಾರದೆಂದೂ, ಆದ್ದರಿಂದ ಆದಷ್ಟು ಬೇಗ ಪೃಷ್ಠ ದೇಶದಲ್ಲಿದ್ದ ಕಂದರದ ಹಿಂಗಡೆಗೆ ಹಿಂದಿರುಗಬೇಕೆಂದೂ ಅಲ್ಲಿಯ ದಳಪತಿಗೆ ಝುರ್ಕೋವ್ ಮೂಲಕ ಹೇಳಿ ಕಳಿಸಿದನು. ಹಿಂದೊಮ್ಮೆ ಬ್ರೌನಾ ಊರಿನಲ್ಲಿ ಕುತುಜೋವನ ಮುಂದೆ ಆ ದಳಪತಿ ತನ್ನ ತುಕಡಿಯನ್ನು ಪ್ರದರ್ಶಿಸಿದ್ದನು. ಈ ಮಧ್ಯೆ ತೂಷಿನ್ ಮತ್ತು ಅವನ ಫಿರಂಗಿ ರಾಶಿಯ ಕಾವಲಿಗಿದ್ದ ತುಕಡಿಯೆಲ್ಲ ಮರೆತು ಹೋಯಿತು. ಬಗ್ರೇಷನ್ ಮತ್ತು ದಳಪತಿಗಳ ನಡುವಣ ಸಂಭಾಷಣೆಯನ್ನೂ, ಸೇನಾನಿ ನೀಡಿದ ನಿರೂಪಗಳನ್ನೂ ಆಂಡ್ರೂ ಎಚ್ಚರಿಕೆಯಿಂದ ಕೇಳಿಸಿಕೊಂಡನು. ಅವನಿಗಾದ ಸೋಜಿಗವೆಂದರೆ, ವಾಸ್ತವವಾಗಿ ಸೇನಾನಿ ನಿರೂಪವನ್ನೇ ನೀಡಿರಲಿಲ್ಲ. ಆವಶ್ಯಕತೆಯ ಒತ್ತಡದಿಂದಲೋ, ಆಕಸ್ಮಿಕವಾಗಿಯೋ, ಅಥವಾ ಅಧೀನ ದಳಪತಿಗಳ ಸಂಕಲ್ಪದಿಂದಲೋ ಕೆಲವು ಘಟನೆಗಳು ಜರುಗಿದ್ದುವಷ್ಟೆ. ಅವುಗಳಿಗೆ ತನ್ನ ನೇರ ನಿರೂಪಗಳು ಕಾರಣವಲ್ಲವಾದರೂ, ತನ್ನ ಉದ್ದೇಶಕ್ಕನುಗುಣವಾಗಿ ಅವು ನಡೆಯುತ್ತಿದ್ದುವೆಂಬಂತೆ ಅಭಿಪ್ರಾಯ ಮೂಡಿಸಲು ಅವನು ಹವಣಿಸುತ್ತಿದ್ದನು. ಅವು ಆಕಸ್ಮಿಕವೆಂಬಂತೆ ತೋರುತ್ತಿದ್ದರೂ, ಅವುಗಳಲ್ಲಿ ಸೇನಾನಿಯ ಪಾತ್ರ ಇಲ್ಲವೆಂಬಂತೆ ತೋರುತ್ತಿದ್ದರೂ, ಬಗ್ರೇಷನ್ನನ ಔಚಿತ್ಯ ಪ್ರಜ್ಞೆಯೂ, ಅವನ ಹಾಜರಿಯೂ ಅತ್ಯಮೂಲ್ಯವಾಗಿದ್ದುವೆಂದು ರಾಜಕುಮಾರ ಆಂಡ್ರೂವಿಗೆ ಮನವರಿಕೆಯಾಗಿತ್ತು. ಪ್ರಕ್ಷುಬ್ಧಚಿತ್ತರಾಗಿ ಸೇನಾನಿಯ ಬಳಿ ಬಂದ ಅಧಿಕಾರಿಗಳು ಪ್ರಶಾಂತರಾಗುತ್ತಿದ್ದರು; ಅವನ ಸಮ್ಮುಖದಲ್ಲಿ ಸೈನಿಕರು ಹರ್ಷೋತ್ಸಾಹಗಳಿಂದ ವಿಜೃಂಭಿಸುತ್ತಿದ್ದುದಲ್ಲದೆ, ಅವನೆದುರಿಗೆ ತಮ್ಮ ಶೌರ್ಯಸಾಹಸಗಳನ್ನು ಪ್ರದರ್ಶಿಸಬೇಕೆಂದು ಕಾತರರಾಗಿರುತ್ತಿದ್ದರು.

ಅಧ್ಯಾಯ ೧೮

ದಕ್ಷಿಣ ಪಾರ್ಶ್ವದ ಶಿಖರಸ್ಥಾನದಲ್ಲಿ ಅಡ್ಡಾಡಿದ ನಂತರ ಬಗ್ರೇಷನ್ ಇಳುಕಲ ಮುಖವಾಗಿ ಸವಾರಿಸಿದನು. ಆ ಕಡೆಯಿಂದ ಮದ್ದುಗುಂಡುಗಳ ಸಿಡಿತ ಕೇಳಿಸುತ್ತಿತ್ತೇ ಹೊರತು, ಹೊಗೆಯಿಂದಾಗಿ ಏನೊಂದು ವಸ್ತುವೂ ಕಾಣಿಸುತ್ತಿರಲಿಲ್ಲ. ಕಮರಿ ಸನ್ನಿಹಿತವಾದಂತೆಲ್ಲ ಹೊಗೆ ದಟ್ಟವಾಗುತ್ತಿತ್ತು. ದೃಗನುಭವ ಕುಂಠಿತಗೊಂಡರೂ, ತಾವು ರಣರಂಗದ ಸಾನ್ನಿಧ್ಯದಲ್ಲಿದ್ದ ಭಾವನೆ ಪ್ರಬಲವಾಗುತ್ತಿತ್ತು. ಗಾಯಾಳುಗಳು ಅವರಿಗೆದುರಾ

ದರು. ತಲೆಗೆ ಟೋಪಿಯಿಲ್ಲದ, ನೆತ್ತರು ಸ್ರವಿಸುತ್ತಿದ್ದ ಗಾಯಾಳುವನ್ನು ಸೈನಿಕರಿಬ್ಬರು ತೋಳು ಹಿಡಿದು, ಎಳೆತರುತ್ತಿದ್ದರು. ಅವನ ಗಂಟಲಲ್ಲಿ ಗುಳುಗುಳು ಶಬ್ದವಾಗುತ್ತಿತ್ತು; ಆಗಾಗ್ಗೆ ರಕ್ತ ಉಗಿಯುತ್ತಿದ್ದನು. ಅವನ ಗಂಟಲಿಗೋ ಬಾಯಿಗೋ ಗುಂಡು ತಗುಲಿತ್ತು. ಮತ್ತೊಬ್ಬ ಬಂದೂಕವಿಲ್ಲದೆ, ಬೇರೆಯವರ ನೆರವಿಲ್ಲದೆ, ದೃಢವಾಗಿ ನಡೆಯುತ್ತಿದ್ದನು. ಅದೆ ತಾನೆ ಗಾಯಗೊಂಡಿದ್ದ ತೋಳನ್ನು ತೂಗಾಡಿಸುತ್ತ, ಗಟ್ಟಿಯಾಗಿ ನರಳುತ್ತಿದ್ದನು. ಸೀಸೆಯಿಂದಲೆಂಬಂತೆ ಗಾಯದಿಂದ ರಕ್ತ ಹರಿದು, ಅವನ ಮೇಲಂಗಿ ಒದ್ದೆಯಾಗಿತ್ತು. ಅವನ ಮುಖದ ಮೇಲೆ ಹಿಂಸೆಗಿಂತ ಮಿಗಿಲಾಗಿ ಭಯ ಮುದ್ರೆಗೊಂಡಂತಿತ್ತು. ಅವರು ರಸ್ತೆಯನ್ನು ದಾಟಿ, ಕಡಿದಾದ ಇಳುಕಲಲ್ಲಿಳಿದಾಗ ನೆಲದ ಮೇಲೆ ಬಿದ್ದು ಕೊಂಡಿದ್ದ ಯೋಧರು ಕಣ್ಣಿಗೆ ಬಿದ್ದರು. ಅವರಲ್ಲಿ ಕೆಲವರು ಗಾಯಗೊಂಡಿರಲಿಲ್ಲ. ಸೈನಿಕರು ಜೋರಾಗಿ ಉಸಿರಾಡುತ್ತ ಬೆಟ್ಟ ಹತ್ತುತ್ತಿದ್ದರು. ಸೇನಾನಿಯು ಸಮ್ಮುಖದಲ್ಲಿಯೂ ಅವರು ಗಟ್ಟಿಯಾಗಿ ಹರಟೆ ಹೊಡೆಯುತ್ತ, ಅಂಗ ಚೇಷ್ಟೆಗಳಲ್ಲಿ ತಲ್ಲೀನರಾಗಿದ್ದರು. ಅವರೆದುರಿಗೆ ಹೊಗೆಯ ಮೂಲಕ ಬೂದು ಬಣ್ಣದ ಬಟ್ಟೆಗಳ ಸಾಲುಗಳು ಕಾಣಿಸುತ್ತಿದ್ದುವು. ಬಗ್ರೇಷನ್ ದೃಷ್ಟಿಗೆ ಬಿದ್ದೊಡನೆಯೆ, ಅಧಿಕಾರಿಯೊಬ್ಬ ಹಿಮ್ಮೆಟ್ಟುತ್ತಿದ್ದ ಗುಂಪಿನ ಹಿಂದೆ ದೌಡೋಡುತ್ತ, ಹಿಂದಿರುಗುವಂತೆ ಕೂಗಿಕೊಳ್ಳುತ್ತಿದ್ದನು. ಆದೇಶ ಘೋಷಗಳನ್ನು ಕಂಠಧ್ವನಿಗಳನ್ನು ಮುಳುಗಿಸುತ್ತಿದ್ದ ಗುಂಡಿನ ಚಟ ಚಟ ಶಬ್ದಗಳು ಅಲ್ಲೊಮ್ಮೆ ಇಲ್ಲೊಮ್ಮೆ ಸೈನಿಕರ ಪಂಕ್ತಿಯಲ್ಲಿ ಸಿಡಿಯುತ್ತಿದ್ದುವು. ಬಗ್ರೇಷನ್ ಆ ತನಕ ಸವಾರಿಸಿದನು. ಇಡೀ ವಾತಾವರಣ ಧೂಮಮಯವಾಗಿತ್ತು. ಸೈನಿಕರ ಉದ್ರಿಕ್ತ ಮುಖಗಳು ಹೊಗೆಯಿಂದ ಕಪ್ಪಾಗಿದ್ದುವು. ಕೆಲವರು ಸಲಾಕಿಗಳನ್ನು ಬಳಸುತ್ತಿದ್ದರು, ಇತರರು ದಬರೆಗಳಲ್ಲಿ ಮದ್ದು ತುಂಬುತ್ತಿದ್ದರು, ಇಲ್ಲವೆ ತಮ್ಮ ತೊಗಲು ಚೀಲಗಳಿಂದ ಗುಂಡುಗಳನ್ನು ತೆಗೆದು ಕೊಳ್ಳುತ್ತಿದ್ದರು. ಬೇರೆಯವರು ಗುಂಡು ಹಾರಿಸುತ್ತಿದ್ದರು. ಅವರು ಯಾರ ಮೇಲೆ ಗುಂಡು ಹಾರಿಸುತ್ತಿದ್ದರೆಂಬುದು ಕಾಣಿಸುತ್ತಿರಲಿಲ್ಲ. ಏಕೆಂದರೆ ಗಾಳಿ ಇಲ್ಲದೆ ಹೊಗೆ ಚೆದರುತ್ತಿರಲಿಲ್ಲ. ಗುಂಡುಗಳ ಮಧುರ ಮೊಳಗು ಮೊರೆತಗಳಂತು ಮೇಲಿಂದ ಮೇಲೆ ಕಿವಿಗಳ ಮೇಲೆ ಬೀಳುತ್ತಿದ್ದುವು. 'ಈ ಮೊರೆತ ಏನಿರಬಹುದು?' ಎಂದು ಆಂಡ್ರ್ಯೂ ಸೈನಿಕರ ಸನಿಹಕ್ಕೆ ಬರುತ್ತಿದ್ದಂತೆ ಮನದಲ್ಲೆಣಿಸಿಕೊಂಡನು. 'ಅವರು ಚಲಿಸುತ್ತಿಲ್ಲವಾದ್ದರಿಂದ, ಆಕ್ರಮಣವಿರಲಾರದು; ಅವರನ್ನು ಸನಿನವಾಗಿ ನಿಲ್ಲಿಸದಿರುವುದರಿಂದ ಸೇನಾವ್ಯೂಹವಿರಲಾರದು.'

ನಡುಗಣ್ಣುಗಳವರೆಗೆ ಜೋತು ಬಿದ್ದಿದ್ದ ರೆಪ್ಪೆಗಳುಳ್ಳ, ದುರ್ಬಲ ದೃಷ್ಟಿಯ, ಕೃಶಗಾತ್ರದ, ಮೃದುಸ್ವಭಾವದ ಪಡೆವಳ ಬಗ್ರೇಷನ್ ಬಳಿಗೆ ಧಾವಿಸಿ, ಆತಿಥೇಯ ಗೌರವಾರ್ಹನಾದ ಅತಿಥಿಗೆ ಮರ್ಯಾದೆ ಸಲ್ಲಿಸುವ ರೀತಿಯಲ್ಲಿ, ಅವನನ್ನು ಸ್ವಾಗತಿಸಿದನು. ಫ್ರೆಂಚ್ ಅಶ್ವದಳ ತನ್ನ ಮೇಲೆ ಆಕ್ರಮಣ ನಡಸಿತೆಂದೂ, ಅದನ್ನು ಹಿಮ್ಮೆಟ್ಟಿಸಿದರೂ ಅರ್ಧಕ್ಕಿಂತ ಹೆಚ್ಚು ಸೈನ್ಯ ನಷ್ಟವಾಗಿತ್ತೆಂದೂ ಅವನು ವರದಿ ಮಾಡಿದನು. ಹಾಗವನು ವರದಿ ಮಾಡಿದರೂ, ತನ್ನ ವಶದಲ್ಲಿದ್ದ ತುಕಡಿಗೆ ಆ ಅರ್ಧ ಗಂಟೆಯ ಅವಧಿಯಲ್ಲಿ ಏನು ಗತಿ ಒದಗಿತ್ತೆಂಬ ವಾಸ್ತವ ಸಂಗತಿ ಅವನಿಗರಿವಾಗಿರಲಿಲ್ಲ. ಆಕ್ರಮಣವನ್ನು ವಿಫಲಗೊಳಿಸಲಾಗಿತ್ತೋ ಅಥವಾ ತುಕಡಿ ಧ್ವಂಸ ಗೊಂಡಿತ್ತೋ ಅವನು ನಿಶ್ಚಿತ

ವಾಗಿ ಹೇಳುವಂತಿರಲಿಲ್ಲ. ಕಾರ್ಯಾಚರಣೆಯ ಪ್ರಾರಂಭದಲ್ಲಿ ಮದ್ದು ಗುಂಡುಗಳು ಸಿಡಿದು ಸೈನ್ಯದ ಮೇಲೆಲ್ಲ ಎರಚಾಡಿದ್ದು, ಸೈನಿಕರನ್ನು ಘಾತಗೊಳಿಸಿದ್ದು, ಅನಂತರ ಯಾರೋ ಒಬ್ಬರು 'ಅಶ್ವ ಸೈನ್ಯ'ವೆಂದು ಕೂಗಿದ್ದು, ನಮ್ಮವರು ಗುಂಡು ಹಾರಿಸಲು ಶುರು ಮಾಡಿದ್ದು–ಇಷ್ಟೇ ಅವನಿಗೆ ಗೊತ್ತಿದ್ದದ್ದು. ಅಶ್ವಸೈನ್ಯ ಕಣ್ಮರೆಯಾದನಂತರವೂ, ಕಮರಿಗೆ ಬಂದು ನಮ್ಮ ಸೈನ್ಯದ ಮೇಲೆ ಆಕ್ರಮಣ ನಡಸುತ್ತಿದ್ದ ಅವರ ಪದಾತಿದಳದ ಮೇಲೆ ಗುಂಡಿನ ಮಳೆ ಕರೆಯಲಾಗಿತ್ತು. ಎಲ್ಲವೂ ತನ್ನ ನಿರೀಕ್ಷೆಯಂತೆ ನಡೆದಿತ್ತೆಂಬುದರ ಸಂಕೇತವಾಗಿ ರಾಜಕುಮಾರ ಬಗ್ರೇಷನ್ ತಲೆಯನ್ನೊಲೆದನು. ತನ್ನ ಸಹಾಯಾಧಿಕಾರಿಯ ಕಡೆಗೆ ತಿರುಗಿ, ಆರನೆಯ ಪದಾತಿದಳದ ಎರಡು ತುಕಡಿಗಳನ್ನು ಬರಮಾಡುವಂತೆ ಆಜ್ಞೆಮಾಡಿದನು. ಆಕ್ಷಣದಲ್ಲಿ ರಾಜಕುಮಾರ ಬಗ್ರೇಷನ್ನನ ಮುಖಚರ್ಯೆಯಲ್ಲಾದ ಬದಲಾವಣೆಯನ್ನು ಕಂಡು ಆಂಡ್ರೂ ಆಶ್ಚರ್ಯಚಕಿತನಾದನು. ನಿದ್ದೆಗಣ್ಣಿನ ಮಂಕು ತನವಾಗಲೀ, ಗಾಢಾಲೋಚನೆಯ ಕೃತಕತೆಯಾಗಲೀ ಅವನ ಮುಖದಲ್ಲಿ ಕಾಣುತ್ತಿರಲಿಲ್ಲ. ಅವನ ಚಲನವಲನಗಳು ವಿಲಂಬವಾದರೂ ಕ್ರಮಬದ್ಧವಾದರೂ, ಅವನ ದುಂಡನೆಯ ತತ್ತರಿಸದ ಗಿಡಗನೋಟ ಮಾತ್ರ ಎಲ್ಲಿಯೂ ವಿಶ್ರಾಂತವಾಗದೆ ಕಾತರತೆಯಿಂದ, ಅಷ್ಟೇ ಅಲ್ಲ, ಒಂದು ರೀತಿಯ ತಿರಸ್ಕಾರದಿಂದ ಸುಳಿದಾಡುತ್ತಿತ್ತು.

ಅವರಿದ್ದೆಡೆ ನಿಲ್ಲುವುದು ಅಪಾಯಕಾರಿಯಾದದ್ದರಿಂದ, ಹಿಂದಕ್ಕೆ ಹೋಗುವುದು-ಚಿತವೆಂದು ಪಡೆನಳ ರಾಜಕುಮಾರ ಬಗ್ರೇಷನ್ ಮುಂದೆ ವಿನಂತಿ ಮಾಡಿಕೊಂಡನು. 'ಪ್ರಭುಗಳೆ, ದೇವರಾಣೆ ತಾವಿಲ್ಲಿರಬಾರದು' ಎಂದವನು ತನ್ನ ಬೆಂಬಲಕ್ಕಾಗಿ ಪರಿವಾರದ ಅಧಿಕಾರಿಯ ಕಡೆಗೆ ಕಣ್ಣು ಮಿಟುಕಿಸಿದನು. ಆದರೆ ಆ ಅಧಿಕಾರಿ ಬೇರೆಡೆಗೆ ನಡೆದನು. 'ಅಗೋ ಅಲ್ಲಿ ನೋಡಿ' ಎಂದವನು ತಮ್ಮ ಸುತ್ತ ನಿರಂತರವಾಗಿ ಮೊಳಗುತ್ತಿದ್ದ ಗುಂಡುಗಳ ಕಡೆಗೆ ರಾಜಕುಮಾರನ ಗಮನ ಸೆಳೆದನು. ಕೊಡಲಿಯನ್ನೆತ್ತಿಕೊಂಡ ಸಭ್ಯ ಗೃಹಸ್ಥನನ್ನೆಂತು ಬಡಗಿ ನಿಂದೆ ವಿನಂತಿಗಳ ಧ್ವನಿಯಲ್ಲಿ ಮಾತಾಡಿಸುತ್ತಾನೆಯೋ ಅಂತೆಯೇ ಅವನು ರಾಜಕುಮಾರನನ್ನು ಮಾತಾಡಿಸಿದನು : 'ಈ ಜೀವನಕ್ಕೆ ನಾವು ಒಗ್ಗಿಕೊಂಡಿದ್ದೇವೆ. ನಿಮಗಿದು ತಡೆಯುವುದಿಲ್ಲ. ಕೈ ಸುಟ್ಟುಕೊಳ್ಳಬೇಕಾಗುತ್ತದೆ.' ಗುಂಡುಗಳು ತನ್ನನ್ನು ಕೊಲ್ಲಲಾರವೆಂಬ ಧಾಟಿಯಲ್ಲಿ ಅವನು ಮಾತಾಡಿದನು. ಅವನ ಅರೆಮುಚ್ಚಿದ ಕಣ್ಣುಗಳು ಅವನ ಮಾತುಗಳಿಗೆ ಸಮರ್ಥನೆ ನೀಡುವಂತೆ ತೋರುತ್ತಿದ್ದುವು. ಸಿಬ್ಬಂದಿಯ ಮೇಲ್ವಿಚಾರಕ ಅವನ ವಿನಂತಿಗಳನ್ನನುಮೋದಿಸಿದನು. ಆದರೆ ಬಗ್ರೇಷನ್ ಮಾರ್ನುಡಿಯಲಿಲ್ಲ. ಗುಂಡು ಹಾರಿಕೆಯನ್ನು ನಿಲ್ಲಿಸಿ, ಅಲ್ಲಿಗೆ ಆಗಮಿಸಲಿದ್ದ ಎರಡು ತುಕಡಿಗಳಿಗೆ ಅವಕಾಶ ಮಾಡಿಕೊಡುವ ಸಲುವಾಗಿ ಪಂಕ್ತಿಯನ್ನು ಪುನರ್ರಚಿಸುವಂತೆ ಆಜ್ಞಾಪಿಸಿದನು. ಗಾಳಿ ಏಳಲಾಗಿ, ಕಂದಕವನ್ನು ಮುಸುಕಿದ್ದ ಹೊಗೆಯ ತೆರೆ, ಅದೃಶ್ಯಹಸ್ತದ ಕೈವಾಡದಿಂದಲೆಂಬಂತೆ, ಬಲದಿಂದ ಎಡಕ್ಕೆ ಚಲಿಸಲಾರಂಭಿಸಿತು. ಫ್ರೆಂಚ್ ಸೈನ್ಯ ಸುಳಿದಾಡುತ್ತಿದ್ದ ಎದುರಿಗಿನ ಬೆಟ್ಟ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಸಮತಟ್ಟಲ್ಲದ ಭೂಮಿಯ ಮೇಲೆ ಬಳಸಿಕೊಂಡು ತಮ್ಮ ಕಡೆಗೆ ಬರುತ್ತಿದ್ದ ಫ್ರೆಂಚ್ ಸೈನ್ಯದ ಮೇಲೆ ಅವರ ದೃಷ್ಟಿ ಅನೈಚ್ಛಿಕವಾಗಿಯೆಂಬಂತೆ ನಾಟಿದುವು. ಸೈನಿಕರ ಸೊಟ್ಟಪಟ್ಟಾದ ಟೋಪಿಗಳ ಮೇಲಿಂದ, ಅವರನ್ನೂ ಅಧಿಕಾರಿಗಳನ್ನೂ ಸ್ಪಷ್ಟವಾಗಿ ಗುರುತಿಸಬಹುದಿತ್ತು.

‘ಅವರ ಪ್ರಸ್ಥಾನ ಅದ್ಭುತವಾಗಿದೆ’ ಎಂದು ಬಗ್ರೇಷನ್ ಪರಿವಾರದ ಆಸಾ
ಯೊಬ್ಬ ನುಡಿದನು.

ತುಕಡಿಯ ನಾಯಕ ಆ ಹೊತ್ತಿಗಾಗಲೇ ಕವಾಯಿತಿಗಿಳಿದಿದ್ದನು. ಅದರ
ಪಾರ್ಶ್ವದಲ್ಲಿ ಕಲಹ ಸಂಘಟಿಸುವುದಿತ್ತು.

ಕಾರ್ಯನಿರತವಾಗಿದ್ದ ನಮ್ಮ ತುಕಡಿಗಳು ಬಹುಬೇಗನೆ ಅಣಿಗೊಂಡು, ಬಲಗಡೆ
ಗಮಿಸಿದುವು. ವಿಲಂಬಗತಿಯ ಜನರನ್ನು ದೂರಮಾಡಿ, ಆರನೆಯ ಕಾಲಾಳು ಪಡೆ
ಎರಡು ತುಕಡಿಗಳು ಸುವ್ಯವಸ್ಥೆಯಿಂದ ಅವರ ಹಿಂದೆಯೆ ಬಂದು ನೆರೆದುವು. ಸೈನಿ
ಪ್ರಗಮನದ ಸಮಯದ ಕ್ರಮಬದ್ಧ ಪದಹತಿಯ ಶಬ್ದ ದೂರದಿಂದಲೇ ಕೇಳಿಸುತ್ತಿತ್ತು
ಅವರ ವಾಮಪಾರ್ಶ್ವದಲ್ಲಿ, ಬಗ್ರೇಷನ್‌ನಿಗೆ ತೀರ ಹತ್ತಿರದಲ್ಲಿಯೇ ಪಡೆವಳ ಚೆ
ಯಾಗಿ ಹೆಜ್ಜೆ ಹಾಕುತ್ತಿದ್ದನು. ಹಿಂದೆ ತಡಿಕೆ ಗುಡಿಸಿಲಿಂದ ಓಡಿಹೋಗಿದ್ದ ದುಂ
ಮೋರೆಯ ಆಸಾಮಿಯೇ ಆತ. ಸೇನಾನಿಯ ಮುಂದೆ ಹೆಜ್ಜೆ ಹಾಕುವಾಗ ತಾನೊ
ಬಿಟ್ಟನೆಂದು ತೋರ್ಪಡಿಸಿಕೊಳ್ಳಬೇಕೆಂಬುದೊಂದೇ ಅವನ ಸರ್ವ ಚಿಂತೆಯಾಗಿತ್ತು.

ಪರೀಕ್ಷಾ ಪ್ರದರ್ಶನದ ಸೈನಿಕನ ಆತ್ಮತೃಪ್ತಿಯಿಂದ, ಅಪ್ರಯತ್ನವಾಗಿ ತನ್ನೆತ್ತರ
ಹಿಗ್ಗುತ್ತ, ಮಾಂಸಲವಾದ ಪಾದಗಳಿಂದ ಹಗುರವಾಗಿ ಹೆಜ್ಜೆಯಿಡುತ್ತಿದ್ದನು. ಅವನೆ
ಸರಾಗವಾಗಿ ಹೆಜ್ಜೆ ಹಾಕುತ್ತಿದ್ದನೋ, ಅವನೊಡನೆ ಸಾಗುತ್ತಿದ್ದ ಸೈನಿಕರು ಅ
ಭಾರವಾಗಿ ಹೆಜ್ಜೆ ಹಾಕುತ್ತಿದ್ದರು. ಅವನ ಕಾಲಿಗಂಟಿಕೊಂಡಂತೆ ನಿಜವಾದ ಆಯು
ದಂತಲ್ಲದ ಕೋಶರಹಿತವಾದ ಸಣ್ಣ ಬಾಗು ಕತ್ತಿಯೊಂದು ನೇತಾಡುತ್ತಿತ್ತು. ಹೆಜ್ಜೆ
ಕ್ರಮ ತಪ್ಪದೆ, ಅವನೊಮ್ಮೆ ಹಿರಿಯ ಅಧಿಕಾರಿಗಳ ಕಡೆಗೂ, ಮತ್ತೊಮ್ಮೆ ಹಿ
ಬರುತ್ತಿದ್ದ ಸೈನಿಕರ ಕಡೆಗೂ ದೃಷ್ಟಿ ಹಾಯಿಸುತ್ತಿದ್ದನು. ಹಾಗೆ ಹಾಯಿಸುವಾ
ಅವನ ಬಲಿಷ್ಠ ಕಾಯ ಮೇಣದಂತೆ ಮಣಿಯುತ್ತಿತ್ತು. ಸೇನಾನಿಯ ಮುಂದೆ ಸಾ
ವಾಗ, ತನ್ನಾತ್ಮಶಕ್ತಿಯನ್ನೆಲ್ಲ ಕೇಂದ್ರೀಕರಿಸಿ, ಶ್ರೇಷ್ಠಮಟ್ಟದ ಯೋಧನ ಶೈಲಿಯ
ಅಂಗಾಭಿನಯವನ್ನು ನೆರೆದ ತೃಪ್ತಿ ಅವನ ಮನವನ್ನೆಲ್ಲ ವ್ಯಾಪಿಸಿಕೊಂಡಿತ್ತು. ಪ್ರ
ಯೊಂದು ಪರ್ಯಾಯ ಪದಪಾತದಲ್ಲಿಯೂ ಅವನು ತನ್ನಷ್ಟಕ್ಕೆ ತಾನೆ ‘ಲೆಫ್ಟ್...
ಲೆಫ್ಟ್....ಲೆಫ್ಟ್’ ಎಂದು ಮತ್ತೆ ಉಚ್ಚರಿಸುತ್ತಿದ್ದನು. ಆ ಉಚ್ಚಾರಕ್ಕನುಸಾರವಾ
ಗಂಭೀರವಾದ, ಆದರೆ ವಿವಿಧ ಮುಖ ಚರ್ಯೆಯ, ಬೆನ್ನುಚೀಲ ಮತ್ತು ಬಂದೂಕ
ಭಾರವನ್ನು ಹೊತ್ತ ಸೈನಿಕರು ಹೆಜ್ಜೆ ಹೆಜ್ಜೆಯಾಗಿ ಪ್ರಗಮಿಸುತ್ತಿದ್ದರೆ, ಹಾಗೆ ಪ್ರಗಮಿ
ವಾಗ ನೂರಾರು ಸೈನಿಕರು ಪರ್ಯಾಯ ಪದಪಾತದೊಡನೆ ತಮ್ಮಷ್ಟಕ್ಕೆ ತಾನೆ ‘ಲೆಫ್ಟ್...
ಲೆಫ್ಟ್....ಲೆಫ್ಟ್’ ಎಂದು ಪುನರುಚ್ಚರಿಸುತ್ತಿದ್ದರು. ಸ್ಥೂಲಕಾಯದ ಒಬ್ಬ ಮೇಜ
ಹೆಜ್ಜೆ ತಪ್ಪಿ, ಏದುತ್ತ ತನ್ನಂಗಿಯನ್ನು ಸರಿಪಡಿಸಿಕೊಂಡನು. ಹಿಂದೆಬಿದ್ದ ಸೈನಿಕನೊ
ಭಯವನ್ನು ಪ್ರದರ್ಶಿಸುತ್ತ, ಮೇಲುಸಿರೆಳೆಯುತ್ತ, ಸಂಗಡಿಗರ ಜತೆ ಸೇರುವ ಸ
ವಾಗಿ ಕುಲುಕಾಟದಿಂದ ಓಡುತ್ತಿದ್ದನು. ಅದೇ ಸಮಯದಲ್ಲಿ ಗುಂಡೊಂದು ಗಾ
ಯನ್ನು ಸೀಳಿಕೊಂಡು ಬಗ್ರೇಷನ್ ಮತ್ತು ಅವನ ಪರಿವಾರದ ಜನರ ತಲೆಗಳ ಮೇ
ಹಾದು, ಲಯಬದ್ಧವಾಗಿ ಹೆಜ್ಜೆ ಹಾಕುತ್ತಿದ್ದ ಸೈನಿಕರ ಸಾಲಿನಲ್ಲಿ ಬಿದ್ದಿತು. ‘ಒ
ಬನ್ನಿ’ ಎಂಬುದಾಗಿ ತುಕಡಿಯ ನಾಯಕನ ಸೋತ್ಸಾಹ ಧ್ವನಿ ಕೇಳಿಸಿತು. ಗುಂ

...ತ್ತಿದೆ ಅರ್ಥ ಪ್ರಶ್ನಾರ್ಥಕವಾಗಿ, ಸೈನಿಕರು ಮುಂದುವರಿದರು. ತನ್ನ ಬದಿಯ ಪಕ್ಕ ...ನಿಂತಿದ್ದ, ನಾಸನಡಿಗೆ ಮುಖ್ಯನ ರಾವ್ರತ ಸಾಲು ಸೇರಿಕೊಳ್ಳುವ ಸಲುವಾಗಿ ಓಡಿ ...ನು. ಒಂದೇ ಒಂದು ಕಪ್ಪುಳಿಕೆಯಲ್ಲಿ ತನ್ನ ಜಾಗ ಸೇರಿ, ಒಂದಕ್ಕೆ ಕುಟಿತ ದೃಷ್ಟಿ ...ರಿದನು. ಶಕ್ತಿಪೂರ್ಣವಾದ ಶಾಂತಿಯುಳ್ಳ ವಾತಾವರಣದಲ್ಲಿ, ಲಯಬದ್ಧವಾದ ...ಪ್ರಾಕಿನ ಸಾಂಗತ್ಯದ ಮೂಲಕ 'ಲೆಫ್ಟ್....ಲೆಫ್ಟ್....ಲೆಫ್ಟ್' ಎಂಬ ಧ್ವನಿಗಳು ...ಯು ಹೊಸೆದು ಬಿದ್ದಂತೆ ಭಾಸವಾಗುತ್ತಿತ್ತು.

'ಭೇಷ್, ಭೇಷ್, ಹುಡುಗರಿರಾ' ಎಂದು ರಾಜಕುಮಾರ ಬಗ್ರೇಷನ್ ನುಡಿದನು.

'ಶಕ್ತಿಮೀರಿ ನೀಡಿ ನಲ್ಲಿನಲು ತಯಾರಾಗುತ್ತದೆ, ಪ್ರಭು' ಎಂಬ ಗೊಂದಲದ ...ಗು ಸಾಲುಗಳ ಗುಂಪಿನಿಂದ ಕೇಳಿಸಿತು. ಎಡಗಡೆ ನಡೆಯುತ್ತಿದ್ದ ಒಬ್ಬ ...ಪದ ಮೋರೆಯವನು ಕೂಗುತಾ ಕತ್ತಿದ್ದಂತೆ ಬಗ್ರೇಷನ್ನನ ಕಡೆಗೆ ತಿರುಗಿ ನೋಡಿ ...ನು. 'ನಮ್ಮ ವಿಚಾರ ನಮಗೆ ತಿಳಿದಿದೆ' ಎಂದು ಹೇಳುವಂತೆ ಕಾಣುತ್ತಿತ್ತು ಅವನ ...ಭಾವನೆ. ಮತ್ತೊಬ್ಬ ಎತ್ತಲೂ ಕಣ್ಣು ತಿರುಗಿಸದೆ, ಬಗೆ ಸಡಿಲಗೊಳಿಸಲು ...ಕ ತೆರೆದು, ಬಾಯಿ ಬಿಗಿದು, ಕೂಗುತ್ತ, ಮುಂದೆ ನಡೆದನು.

ಸೈನಿಕರು ನಿಂತು ಬೆನ್ನು ಚೀಲಗಳನ್ನು ಕೆಳಗಿಳಿಸುವಂತೆ ಅಜ್ಞೆಯಾಯಿತು.

ಬಗ್ರೇಷನ್ ಮುಂದೆ ಸರಿದಿದ್ದ ಅವನ ಪಂಕ್ತಿಯ ಸಮೀಪ ಸವಾರಿಗೆ, ಕುದುರೆ ...ಇಳಿದನು: ಲಗಾಮನ್ನು, ಫೆಲ್ಟ್ ಕೋಟನ್ನು, ಕೊಸಾಕನ ಕೈಗೆ ಕೊಟ್ಟು, ...ಕಾಲುಗಳನ್ನು ಅಗಲಿಸಿ, ಟೋಪಿಯನ್ನು ಸರಿಪಡಿಸಿಕೊಂಡನು. ಫ್ರೆಂಚ್ ಪಡೆಯ ...ಮುಖ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಬೆಟ್ಟದ ತಪ್ಪಲಲ್ಲಿ ಕಾಣಿಸಿಕೊಂಡಿತು.

'ಸಾವಿಗೆ ಹೆದರದೆ ಮುಂದುವರಿಯಿರಿ' ಎಂದು ಬಗ್ರೇಷನ್ ಅಗ್ರಪಂಕ್ತಿಯ ಕಡೆಗೆ ...ಒಮ್ಮೆ ತಿರುಗಿ, ನಾದಪೂರ್ಣವಾಗಿ ನಿಶ್ಚಿತಧ್ವನಿಯಲ್ಲಿ ನುಡಿದನು. ತನ್ನ ಕಾಲುಗಳ ...ನ್ನು ಬೀಸುತ್ತ, ಅಸ್ಥಿರವಾಗಿದ್ದರೂ ವಿಚಿತ್ರಗತಿಯಲ್ಲಿ ಉಬ್ಬುತಗ್ಗುಗಳ ನೆಲದಮೇಲೆ ...ದಿರಿಯಿಂದ ಮುಂದುವರಿದನು. ಅಗೋಚರ ಶಕ್ತಿಯೊಂದು ಅವನನ್ನು ಮುನ್ನಡೆಸು ...ತ್ತಿದೆಯೆಂದು ರಾಜಕುಮಾರ ಆಂದ್ರೆ ಭಾವಿಸಿಕೊಂಡು, ಆನಂದ ತುಂದಿಲನಾದನು.

ಆ ಹೊತ್ತಿಗಾಗಲೇ ಫ್ರೆಂಚ್ ಪಡೆ ಬಹಳ ಸಮೀಪಕ್ಕೆ ಬಂದಿತ್ತು. ಬಗ್ರೇಷನ್ ಬದಿಯಲ್ಲಿ ...ನಡೆಯುತ್ತಿದ್ದ ಆಂದ್ರೆ ಅವರ ತೋಳುಪಟ್ಟಿಗಳನ್ನು, ಕೆಂಪು ಅಲಂಕಾರದ ಭುಜಕೀರ್ತಿ ...ಗಳನ್ನು, ಕೊನೆಗೆ ಅವರ ಮುಖಗಳನ್ನೂ ಗುರುತಿಸಬಹುದಿತ್ತು. ಕಾಲುಚೀಲ ...ಯಿಸ್ಸಾದ ಫ್ರೆಂಚ್ ಅಧಿಕಾರಿಯೊಬ್ಬ ಕಷ್ಟದಿಂದ ಬೆಟ್ಟ ಹತ್ತುತ್ತಿದ್ದುದನ್ನವನು ...ಗಮನಿಸಿದನು. ಬಗ್ರೇಷನ್ ಮತ್ತೆ ಆಜ್ಞೆಗಳನ್ನು ಕೊಡದೆ, ನಿಶ್ಶಬ್ದವಾಗಿ ಮುಂದಿನ ...ಸಾಲಿನಲ್ಲಿ ನಡೆದನು. ಫ್ರೆಂಚ್ ಪಡೆಯಿಂದ ಹಠಾತ್ತನೆ ಒಂದಾದಮೇಲೊಂದು ಗುಂಡು ...ಹಾರಾಡಿದುವು. ನಮ್ಮಲ್ಲಿ ಬಹುಮಂದಿ ಕೆಳಗೆ ಬಿದ್ದರು. ಸಾಹಸಿಕ ಹಾಗೂ ಸಂತೃಪ್ತ ...ಉತ್ಸಾಹದಿಂದ ಹೆಜ್ಜೆ ಹಾಕುತ್ತಿದ್ದ ದುಂಡುಮುಖದ ಅಧಿಕಾರಿಯೂ ನೆಲಕ್ಕೊರಗಿ ...ದನು. ಆದರೆ ಆ ಕ್ಷಣದಲ್ಲಿ ಬಂದ ಧ್ವನಿ ನಡೆದಿಯನ್ನೇರಿದ ಬಗ್ರೇಷನ್ ಸುತ್ತಲೂ ...ನೋಡಿ ಉದ್ಘೋಷ ಮಾಡಿದನು.

...ಕಣ್ಣು ಕಾಯಿಸಿ 'ಹುರ್ರೇ, ಭಲೇ' ಎಂದು ... ಎಂಬ ದೀರ್ಘಧ್ವನಿ ನಮ್ಮ ದಳಗಳಿಂದ ಹೊರಹೊಮ್ಮಿದ 'ಹುರ್ರೇ, ಹ್ರೈ, ಹ್ರೈ' ಎಂಬ ದೀರ್ಘಧ್ವನಿ ...ಹೊಂದಿದ ಸ್ವರಗಳಲ್ಲಿ ಅನುರಣನಗೊಂಡಿತು. ನಮ್ಮ ಸೈನಿಕರು ಸಮಸ್ತರ ಸ್ವರಗಳಂತೆ

ಮೇಲುಗೈ ಪಡೆಯುತ್ತ, ಬ್ಲೂಷರ್ ನನ್ನು ದಾಟಿ, ಸೈನ್ಯಕ್ಕೆ ಸೇರಿದ್ದವರೂ ಕೂಡ ಸಂದಣಿಯಿಂದ ಬೆಟ್ಟದ ಬುಡದಲ್ಲಿ ಅಸ್ತವ್ಯಸ್ತಗೊಂಡಿದ್ದ ಆತ್ತ ಸೈನ್ಯದ ಮೇಲೆ ಮಾಡಿದರು.

ಅಧ್ಯಾಯ ೧೯

ಫ್ರೆಂಚ್ ಸೈನ್ಯದ ಆರನೆಯ ಪದಾತಿದಳದ ಮೇಲೆ ಧಾಳಿ ನಡೆಸಿದ ಪ್ರಷ್ಯಾ ಬಲಭಾಗದ ಸೈನ್ಯ ಹಿಂದಿರುಗಲಾರಂಭಿಸಿತು. ಮಧ್ಯಭಾಗದಲ್ಲಿದ್ದ ಹಿರಿಯರ ದಳ ಗ್ರೌಚ್ಚಿಗೆ ಬೆಂಬಲವಾಗಿ ಫ್ರೆಂಚ್ ಮುನ್ನಡೆ ಗೊಂಡಿತು. ರಾತ್ರಿಯ ವೇಳೆಯಾದುದರಿಂದ ಹಿಮ್ಮೆಟ್ಟಿದ್ದ ಅವ್ಯವಸ್ಥೆಯುಂಟಾಗಿ ಗೊಂದಲ ಉಂಟಾಯಿತು. ಮಧ್ಯಭಾಗದ ಸೈನ್ಯವಂತು ಕಂದಕದ ಹತ್ತಿರದ ಬಯಲಿನ ಕಡೆಗೆ ಸರಿಯಿತು. ಆದರೆ ಅಜೋರ್ ಮತ್ತು ಪಿರೋಲ್ ಗಳ ... ಪಾಪ್ಲೋಗ್ರಾಫ್ ಅಶ್ವದಳಗಳ ತಂಡವನ್ನು ಒಳಗೊಂಡಿದ್ದ ವಾಮಭಾಗದ ಲಾನ್ ನ ನೇತೃತ್ವದಲ್ಲಿ ಅತ್ಯಂತ ನಡೆಸಿದ ಪ್ರಬಲ ಫ್ರೆಂಚ್ ಸೈನ್ಯದ ಪದಾತಿ ತುಕಡಿ ಗೊಂದಲಕ್ಕೀಡಾಯಿತು. ಕೂಡಲೇ ಆ ತಂಡಗಳು ಹಿಮ್ಮೆಟ್ಟಿದವು. ಬ್ಲೂಷರ್ ಅವುಗಳ ನಾಯಕನಿಗೆ ರುಜೋರಿನ್ ಮೂಲಕ ಅಪ್ಪಣೆ ಮುಟ್ಟಿಸಿದನು.

ತನ್ನ ಹಿಂದೆಯೇ ಮೇಲೆಬಿದ್ದುಕೊಂಡಿದ್ದ ಶತ್ರುವನ್ನು ನೆಪೋಲಿಯನ್ ರುಜೋ ಕಾಲುವೆಯನ್ನು ತಲುಪಿ, ದಾಟಲಾಯಿಸಿದನು. ಆದರೆ ಬ್ಲೂಷರ್ನಿಂದ ದೂರ ತಿದ್ದಂತೆ ಅವನ ಸೈನ್ಯ ಕರಗುತ್ತಿತ್ತು. ಅವನು ಗಾಬರಿಯಿಂದ ದಿಕ್ಕು ತೋಚದೆ ಅರಮನೆಯ ಕಡೆಗೆ ಹೋಗಲು ಹಿಂಜರಿದನು. ಗುಂಡಿನ ಕಾಳಗ ನಡೆಯುವಾಗ ಆರಮನೆಯ ಕಡೆಗೆ ಹೋಗದೆ ಬಿಡಲಾರದೆ ನಾಯಕನನ್ನು ಅವನ ಸಿಬ್ಬಂದಿವರ್ಗ ಸುತ್ತುವರಿದಿತ್ತು. ಹೀಗೆ, ಅಪ್ಪಣೆಯನ್ನು ಅವರಿಗೆ ಮುಟ್ಟಿಸಲಾಗಲಿಲ್ಲ.

ಬ್ರಿಗೇಡಿನಲ್ಲಿ ಕಾರುಸೋರ್ ಪಡೆಯಲ್ಲಿನ ನಡೆಸಿದ್ದ ತುಕಡಿಯ ಪಡೆಯ ಸೇನಾಪತಿಯು ಶತ್ರು ಸೈನ್ಯವಾಗಿ ವಾಮಭಾಗದ ದಳದ ನಾಯಕನಾಗಿ ಬೊಲಿವರ್ ಆ ದಳದಲ್ಲಿ ಸಾಮಾನ್ಯ ಸೈನಿಕನಂತೆ ಸೇವೆ ಸಲ್ಲಿಸುತ್ತಿದ್ದನು. ಆ ದಳದ ಅಂತಿಮ ವಿಭಾಗದ ನಾಯಕತ್ವ ಪಾಪ್ಲೋಗ್ರಾಫ್ ತುಕಡಿಯ ಪಡೆಯನ್ನು ರೋಸ್ಟ್ರಿನ್ ಆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದನು. ಆ ಇಬ್ಬರು ನಾಯಕರ ವಿರುದ್ಧ ಹೋರಾಡುತ್ತಿತ್ತು. ಅವರಿಬ್ಬರೂ ಧಾರ್ಮಿಕ ಶ್ರದ್ಧೆಯವರಾಗಿ, ದಕ್ಷಿಣ ಫ್ರೆಂಚರು ಕಲಹವಾದರೂ. ಮುನ್ನುಗ್ಗುತ್ತಿದ್ದಾಗಲೂ, ವಾಕ್ಯಲಾಪದಲ್ಲಿ ತಲ್ಲೀನರಾದರು. ಪರಸ್ಪರ ಧರ್ಮನಿಷ್ಠೆ ಅವರ ವಾಕ್ಯಲಾಪದ ಗುರಿಯಾಗಿತ್ತು. ಪದಾತಿ ಬಲದ ಅಶ್ವದಳಗಳಿ ಕಾರ್ಯಾಚರಣೆ ಸಿದ್ಧವಾಗಲಿಲ್ಲ. ಸೈನಿಕರಾಗಲಿ, ನಾಯಕರಾಗಲಿ ಯುದ್ಧವನ್ನು ಮರೆತು, ಕೊನೆಯಿಲ್ಲದ ಮೋಕ್ಷ ಕಾಣುವ, ಗೆದ್ದ ಸಂಸ್ಥಾಪಿಸುವ ಕಾರ್ಯಗಳಲ್ಲಿ ಮಗ್ನರಾಗಿದ್ದರು.

ಅಶ್ವದಳದವರ ಪಡೆಯ ಕರ್ನಲ್ ಅತ್ಯಂತ ನೇತ್ರನಾಗಿ, ಸಂದರ್ಭಕ್ಕೆ ತಕ್ಕ ಪ್ರಧಾನವನ್ನು, ಗಂಭೀರವಾಗಿ 'ಅವನು ದರ್ಶನದಲ್ಲಿ ನಡೆಸಿದ ...

ತೀರ್ಗಡೆಯಾದರು. ಗುಂಡಿನ ಗುರಿಯಿಂದ ಮೊದಲು ದೂರ ಸರಿದವನೆಂಬ ಅಪಾ ತನ್ನ ತಲೆಗೆ ಬರಬಾರದೆಂದು, ಅವರಿಬ್ಬರೂ ಎಚ್ಚರಿಕೆಯಿಂದಿದ್ದರು. ಪರಸ್ಪರ ಧೈರ್ಯ ಪರೀಕ್ಷೆಗಾಗಿ ಎಷ್ಟು ಹೊತ್ತಾದರೂ ನಿಲ್ಲಲು ಅವರಲ್ಲಿ ಸಿದ್ಧರಾಗಿದ್ದರು. ಅಷ್ಟರ ಬಂದೂಕದ ಪಟಪಟ ಸದ್ದೂ, ತಮ್ಮ ಹಿಂದೆಯೇ ಕಾಡಿನಿಂದ ದಮನಗೊಂಡಂತೆ ಬೊಬ್ಬೆಯೂ ಕೇಳತೊಡಗಿದುವು. ಕುರುಚಲು ಗಿಡದಲ್ಲಿ ಸೌದೆಯನ್ನಾರಿಸುತ್ತಿದ್ದ ಸೈನಿ ಮೇಲೆ ಫ್ರೆಂಚರು ಧಾಳಿ ನಡೆಸಿದ್ದರು. ತಾವು ನಿಂತಿದ್ದೆಡೆ ಅನಾನುಕೂಲವಾಗಿತ್ತಾದರೂ ತಮ್ಮ ಬಚಾವಿಗಾಗಿ ಕೈಮಾಡುವುದು ಅನಿವಾರ್ಯವಾಗಿತ್ತು.

ರೊಸ್ತೋವನ ತುಕಡಿ ಕುದುರೆಯೇರಬೇಕೆನ್ನುವಷ್ಟರಲ್ಲಿ ಶತ್ರುಸೈನ್ಯ ಎ ರಾಯಿತು. ಮತ್ತೆ ಅದಕ್ಕೆ ಎನ್ಸ್ ಸೇತುವೆಯ ನೆನಪಾಯಿತು. ತುಕಡಿ ಮತ್ತು ಹಗೆ ನಡುವೆ ಏನೇನೂ ಅಡ್ಡಿಯಿರಲಿಲ್ಲ. ಸತ್ತವರಿಂದ ಜೀವಂತ ವ್ಯಕ್ತಿಗಳನ್ನು ಬೇರ್ಪಡಿಸು ರೇಖೆಯನ್ನು ಹೋಲುವಂಥ ಅನಿಶ್ಚಯಭಯಗಳ ನಡುವಣ ಘೋರರೇಖೆಯೊಂ ಅವರ ಕಣ್ಣಿಗೆ ಕಟ್ಟಿದಂತಿತ್ತು. ಈ ಅಗೋಚರ ರೇಖೆಯ ಪ್ರಜ್ಞೆ ಅವರ ಮನಸ್ಸನ್ನೆ ಆವರಿಸಿಕೊಂಡಿತ್ತು. ತಾವದನ್ನು ದಾಟಲು ಸಾಧ್ಯವೋ ಇಲ್ಲವೋ, ದಾಟುವುದಾದರೆ ಹೇಗೆ ಎಂಬ ಪ್ರಶ್ನೆ ಅವರನ್ನೆಲ್ಲ ಕಾಡುತ್ತಿದ್ದುವು.

ಕರ್ನಲ್ ಮುಂಭಾಗಕ್ಕೆ ಕುದುರೆ ಓಡಿಸಿದನು. ಅಧಿಕಾರಿಗಳು ಹಾಕಿದ ಪ್ರ ಗಳಿಗೆ ಸಿಡುಕಿನಿಂದಲೇ ಎಂಥದೋ ಉತ್ತರವಿತ್ತನು. ನಿರಾಶೆಯಿಂದ ತಾನು ಹೇಳಿದ್ದೆ ನಡೆಯಬೇಕೆಂದು ಒತ್ತಾಯಿಸುವ ಮನುಷ್ಯನಂತೆ ಆಜ್ಞೆಯನ್ನು ಘೋಷಿಸಿದನು ಯಾರೂ ನಿರ್ದಿಷ್ಟವಾಗಿ ಏನನ್ನೂ ಹೇಳುವಂತಿರಲಿಲ್ಲ. ಆದರೆ ಧಾಳಿಯ ಸುದ್ದಿ ಮಾತ್ರ ತುಕಡಿಯಲ್ಲೆಲ್ಲ ಹಬ್ಬಿತು. ಸೈನ್ಯ ಸಜ್ಜಾಗಿ ನಿಲ್ಲಬೇಕೆಂಬ ಸೂಚನೆಯ ಘೋಷ ಕೇಳಿಸಿತು. ಕತ್ತಿಗಳನ್ನು ಒರೆಗಳಿಂದೆಳೆಯುವ ಚೀತ್ಕಾರ ಕಿವಿದೆರೆಯನ್ನು ಸೋಕಿತು. ಆದರೆ ಯಾರೂ ಚಲಿಸಲಿಲ್ಲ. ಮುಂದೇನು ಮಾಡಬೇಕೆಂಬ ಸಂಗತಿ ಪಡೆವಳನಿಗೆ ಗೊತ್ತಿರಲಿಲ್ಲವೆಂ ಭಾವನೆ ವಾಮಪಾರ್ಶ್ವದ ಸೈನ್ಯದಲ್ಲಿ ಮೈದೋರಿ, ಎಲ್ಲೆಲ್ಲೂ ಅನಿಶ್ಚಯತೆ ತಾಂಡವವಾಡ ತ್ತಿತ್ತು.

'ಅವರಾದರೂ ಬೇಗಬೇಗನೆ ಮುಂದಾಗಿದ್ದರೆ' ಎಂದು ರೊಸ್ತೋವ್, ತನ ಸೋದರ ಅಶ್ವಾರೋಹಿಗಳಿಂದ ಕೇಳಿ ತಿಳಿದುಕೊಂಡಿದ್ದ. ಮುತ್ತಿಗೆಯ ಸವಿಯನ್ನನು ಭವಿಸುವ ಕಾಲ ಕೊನೆಗಾದರೂ ಒದಗಿತೆಂದು ಹರ್ಷಿಸಿದನು.

'ಮುನ್ನುಗ್ಗಿ ಹುಡುಗರೆ, ಸಾವಿಗಂಜಬೇಡಿ. ಕುಕ್ಕುಲೋಟದಲ್ಲಿ ಮುಂದೆ ಸಾಗಿ ಎಂದು ಡೆನಿಸೋವ್‌ನ ದನಿ ಅನುರಣನಗೈದಿತು.

ಮುಂದಿನ ಸಾಲಿನಲ್ಲಿ ಅಶ್ವಗಳ ಪೃಷ್ಠಗಳು ತೊನೆದಾಡಲಾರಂಭಿಸಿದುವು. ರೂ ಲಗಾಮುಗಳನ್ನು ಜಗ್ಗಿಸಿ, ಕರ್ನಿಷ್ಟಬಂದಂತೆ ಸಾಗಿತು.

ಎದುರಿಗೆ ಬಲಪಕ್ಕದಲ್ಲಿ ಅಗ್ರಪಂಕ್ತಿಗಳಲ್ಲಿ ರೊಸ್ತೋವ್ ತನ್ನ ತುಕಡಿಯ ಅಶ್ವಾ ರೋಹಿಗಳನ್ನು ವೀಕ್ಷಿಸಿದನು. ಮುಂದುಗಡೆ ಕಪ್ಪುಸಾಲೊಂದು ಕಾಣಿಸಿತು. ಅದ ಸ್ಪಷ್ಟವಾಗಿರಲಿಲ್ಲ. ಹಗೆಯ ಪಡೆಯಿರಬೇಕೆಂದವನು ಭಾವಿಸಿದನು. ಸ್ವಲ್ಪ ದೂರದಲ್ಲಿ ಗುಂಡು ಸಿಡಿತ ಕೇಳಿಸುತ್ತಿದ್ದುವು.

‘ಬೇಗ, ಬೇಗ’ ಎಂಬ ಆಜ್ಞಾ ಘೋಷಣೆ ಕಿವಿಗೆಬಿದ್ದಿತು. ರೂಕ್ ನಾಗಾಲೋಟವೆತ್ತಿದಾಗ ಅದರ ಅಕ್ಕೆ ಜೋರಾಗುತ್ತಿದ್ದಂತೆ ರೊಸ್ತೋವನಿಗೆ ಭಾಸವಾಯಿತು.

ತನ್ನ ಕುದುರೆಯ ತೀಕ್ಷ್ಣ ಗಮನವನ್ನವನು ನಿರೀಕ್ಷಿಸಿದ್ದನು. ಅದರಿಂದಾಗಿ ಅವನು ಆನಂದ ತುಂದಿಲನಾದನು. ತನ್ನ ಮುಂದೊಂದು ಒಂಟಿಮರ ಕಾಣಿಸಿತು. ಅದು ಭಯಂಕರವಾಗಿ ತೋರುತ್ತಿದ್ದ ರೇಖೆಯ ಮಧ್ಯಭಾಗದಲ್ಲಿತ್ತು. ಅವನದನ್ನು ದಾಟಿದನು. ಅಲ್ಲಿ ಯಾವುದೂ ಭೀಕರವಾಗಿ ಕಾಣಲಿಲ್ಲ. ಅದಕ್ಕೆ ಬದಲಾಗಿ ಪ್ರತಿಯೊಂದು ವಸ್ತುವೂ ಸುಖಕರವಾಗಿ ಹಾಗೂ ಚೈತನ್ಯಯುಕ್ತವಾಗಿ ತೋರುತ್ತಿತ್ತು. ತನ್ನ ಕತ್ತಿಯ ಹಿಡಿಕೆಯನ್ನು ಹಿಡಿದುಕೊಂಡು ‘ಈಗವನನ್ನು ಕತ್ತರಿಸಿಬಿಡುತ್ತೇನೆ’ ಎಂದವನು ಆಲೋಚಿಸಿದನು.

‘ಹುರ್ರೇ, ಹುರ್ರೇ’ ಎಂದು ಹಲವು ಧ್ವನಿಗಳು ಗರ್ಜಿಸಿದುವು. ‘ಹಾಕುತ್ತಿದ್ದವರು ನನ್ನೆದುರಿಗ ಬರಲಿ’ ಎಂದು ರೊಸ್ತೋವ್, ಇತರರನ್ನತಿಕ್ರಮಿಸಿ ಮುಂದೆ ಹೋಗುವ ಸಲುವಾಗಿ, ಹಿಮ್ಮಡಿ ಮುಳ್ಳನ್ನು ರೂಕ್ ಕುದುರೆಯ ಹೊಟ್ಟೆಗೆ ತಾಕಿಸಿ, ನಾಗಾಲೋಡಿಸಿದನು. ಮುಂದುಗಡೆ ಶತ್ರು ಸೈನ್ಯ ಸ್ಪಷ್ಟವಾಗಿ ಕಾಣುತ್ತಿತ್ತು. ಹಠಾತ್ತನೆ ಭಾರೀಗಾತ್ರದ ಪೊರಕೆಯಂಥ ವಸ್ತುವೊಂದು ತುಕಡಿಯ ಮೇಲೆ ಹಾದುಹೋದಂತೆ ಭಾಸವಾಯಿತು. ರೊಸ್ತೋವ್ ಪ್ರಹಾರಿಸುವ ಸಲುವಾಗಿ ಕತ್ತಿಯೆತ್ತಿದನು. ಆದರೆ ಅದೇ ಕ್ಷಣದಲ್ಲಿ ಮುಂದೆಮುಂದೆ ನಾಗಾಲೋಟದಿಂದ ಧಾವಿಸುತ್ತಿದ್ದ ಸೈನಿಕ ನಿಕಿಟೆಂಕೊ ಮುಂದುಹಾರಿಸಿದನು. ಕನಸಿನಲ್ಲೆಂತೋ ಅಂತೆ ತನ್ನನ್ನು ಅಮಾನುಷವೇಗದಿಂದ ಹೊತ್ತುಕೊಂಡು ಹೋಗುತ್ತಿದ್ದಂತೆ ರೊಸ್ತೋವನಿಗೆ ಭಾಸವಾಯಿತು. ಆದರೆ ಅವನು ನಿಂತ ಜಾಗದಿಂದ ಕದಲಿರಲಿಲ್ಲ. ಬೊಂಡಾರಚೂಕ್ ಎಂಬ ಪರಿಚಯದ ಅಶ್ವಾರೋಹಿಯೊಬ್ಬ ಹಿಂಬದಿಯಿಂದ ಅವನಿಗೆ ಡಿಕ್ಕಿ ಹೊಡೆದು, ಅವನ ಕಡೆಗೆ ಕುಪಿತದೃಷ್ಟಿ ಬೀರಿದನು. ಅವನ ಕುದುರೆ ಪಕ್ಕಕ್ಕುರುಳಿದಾಗ, ನಾಗಾಲೋಟದಿಂದ ಓಡಿತು.

‘ನಾನು ಚಲಿಸುತ್ತಿಲ್ಲವಲ್ಲ, ಏಕೆ? ನಾನು ಬಿದ್ದುಬಿಟ್ಟಿದ್ದೇನೆ. ನಾನು ಕೊಲ್ಲಲ್ಪಟ್ಟಿದ್ದೇನೆ’ ಎಂದು ರೊಸ್ತೋವ್ ತನ್ನಷ್ಟಕ್ಕೆ ತಾನೆ ಪ್ರಶ್ನೋತ್ತರಗಳನ್ನು ಮುಗಿಸಿದನು. ಆ ಹೊಲದ ನಡುವೆ ಅವನು ಏಕಾಕಿಯಾಗಿದ್ದನು. ಚಲಿಸುವ ಕುದುರೆ ಹಾಗೂ ಅಶ್ವಾರೋಹಿಗಳ ಬೆನ್ನುಗಳಿಗೆ ಬದಲಾಗಿ ಅವನು ತನ್ನ ಮುಂದೆ ಮತ್ತು ಸುತ್ತಮುತ್ತ ಚಲನರಹಿತ ಭೂಮಿಯನ್ನೂ ಕೂಳೆಯನ್ನೂ ಕಂಡನು. ಅವನ ತೋಳುಗಳ ಕೆಳಗೆ ಬಿಸಿನೆತ್ತರು ಪ್ರವಹಿಸುತ್ತಿತ್ತು. ‘ನಾನು ಗಾಯಗೊಂಡಿದ್ದೇನೆ. ಕುದುರೆ ಕೊಲೆಗೊಂಡಿದೆ.’ ಕುದುರೆ ಮುಂಗಾಲುಗಳ ಮೇಲೆ ಏಳಲು ಪ್ರಯತ್ನಿಸಿ, ಹಾಗೆಯೇ ಸವಾರನ ಕಾಲುಗಳಿಗಂಟಿಕೊಂಡಂತೆ ಹಿಂದಕ್ಕುರುಳಿತು. ಅದರ ತಲೆಯಿಂದ ರಕ್ತ ಹರಿಯುತ್ತಿತ್ತು; ಎಷ್ಟು ಹೋರಾಡಿದರೂ ಮೇಲೇಳಲಾಗಲಿಲ್ಲ. ರೊಸ್ತೋವ್ ಮೇಲೇಳಲು ಪ್ರಯತ್ನಿಸಿ, ಹಿಂದಕ್ಕೆ ಬಿದ್ದುಬಿಟ್ಟನು. ಅವನ ಚರ್ಮದ ಕತ್ತಿ ಚೀಲ ಹಲ್ಲಣದಲ್ಲಿ ತೊಡರಿಕೊಂಡಿತು. ನಮ್ಮ ಅಥವಾ ಫ್ರೆಂಚ್ ಸೈನಿಕರ ನೆಲೆಯನ್ನವನು ಅರಿಯದಾದನು. ಒಬ್ಬರೂ ಅವನ ಬಳಿಯಿರಲಿಲ್ಲ.

ಕಷ್ಟದಿಂದ ಕಾಲು ಬಿಡಿಸಿಕೊಂಡು ಅವನು ಮೇಲೆದ್ದನು. 'ಎರಡು ಸೈನ್ಯಗಳನ್ನು ವಿಭಜಿಸಿದ್ದ ಸೂಕ್ಷ್ಮರೇಖೆ ಎಲ್ಲಿದೆ?' ಎಂದವನು ತನ್ನಷ್ಟಕ್ಕೆ ತಾನೆ ಪ್ರಶ್ನಿಸಿಕೊಂಡನು. ಉತ್ತರ ಸಿಗಲಿಲ್ಲ. 'ತನಗೇನಾದರೂ ಕೆಟ್ಟದ್ದು ಸಂಭವಿಸಿದೆಯೆ?' ಎಂದವನು ಮೇಲೇಳುತ್ತಿದ್ದಂತೆ ಸೋಜಿಗಗೊಂಡನು. ಮರಗಟ್ಟಿದ ತನ್ನ ಎಡತೋಳಿನ ಮೇಲೆ ಅನಾವಶ್ಯಕ ವಸ್ತುವೊಂದು ನೇತಾಡುತ್ತಿದ್ದಂತೆ ಅವನಿಗೆ ಭಾಸವಾಯಿತು. ಹಿಡಿ ತನ್ನದಲ್ಲವೆಂಬ ಭಾವನೆ ಉದಿಸಿತು. ಕೈಯಲ್ಲಿ ರಕ್ತವಿದೆಯೆ ಎನ್ನುವುದನ್ನು ತಿಳಿಯುವ ಸಲುವಾಗಿ ಅದನ್ನು ಪರೀಕ್ಷಿಸಿದನು. ತನ್ನ ಕಡೆಗೆ ಓಡೋಡಿ ಬರುತ್ತಿದ್ದ ಕೆಲವು ಸೈನಿಕರನ್ನು ಕಂಡು 'ಅಹ, ಜನ ಈ ಕಡೆಗೆ ಬರುತ್ತಿದ್ದಾರೆ' ಎಂದೆಣಿಸಿದನು. 'ಅವರು ನನಗೆ ಸಹಾಯ ಮಾಡಿಯಾರು!' ಶಾಮಲವರ್ಣದ, ಬಿಸಿಲು ಮಚ್ಚೆಯ ಮೈಯ, ಕೊಕ್ಕೆಮೂಗಿನ, ವಿಚಿತ್ರಟೋಪಿಯನ್ನೂ ನೀಲಿ ನಿಲವಂಗಿಯನ್ನೂ ಧರಿಸಿದ್ದ ಮನುಷ್ಯನೊಬ್ಬ ಅವನ ಮುಂದೆ ಹಾಜರಾದನು. ಅನಂತರ ಇನ್ನಿಬ್ಬರು, ಮತ್ತೆ ಹಲವರು ಅವನ ಹಿಂದೆಯೇ ಓಡೋಡಿ ಬಂದರು. ಅವರಲ್ಲೊಬ್ಬ ಚಿತ್ರವಿಚಿತ್ರವಾಗಿ ಮಾತಾಡಿದನು. ರಷ್ಯನ್ ಭಾಷೆಯಲ್ಲಲ್ಲ. ಇತರರಂತೆ ಟೋಪಿಯನ್ನು ಧರಿಸಿದ್ದ ರಷ್ಯನ್ ಅಶ್ವಾರೋಹಿಯೊಬ್ಬ ಎಲ್ಲರಿಗಿಂತ ಹಿಂದೆ ಬಂದನು. ಯಾರೊ ಅವನ ತೋಳಿಗೆ ಊರೆಯಾಗಿದ್ದರು. ಹಿಂದುಗಡೆಯಿಂದ ಅವನ ಕುದುರೆಯನ್ನು ಹಿಡಿದು ತರಲಾಗುತ್ತಿತ್ತು.

'ಅವನು ನಮ್ಮಲ್ಲೊಬ್ಬನಾಗಿರಬೇಕು. ಅಹುದು. ಅವರು ನನ್ನನ್ನು ಒಯ್ಯಬಹುದಲ್ಲವೆ? ಈ ಜನ ಯಾರು? ಅವರು ಫ್ರೆಂಚರಿರಬಹುದೆ?' ಎಂದು ರೊಸ್ತೋವ್ ತನ್ನ ಕಣ್ಣುಗಳನ್ನು ನಂಬಲಾರದೆ ಹೋದನು. ಕ್ಷಣಕ್ಷಣಕ್ಕೂ ಫ್ರೆಂಚ್ ಸೈನಿಕರು ಸನ್ನಿಹಿತವಾಗುತ್ತಿದ್ದರು. ಕೆಲವು ಕ್ಷಣಗಳ ಹಿಂದೆ ಅವರನ್ನು ಕೊಚ್ಚಿಹಾಕುವುದೆಂದು ಯೋಚಿಸಿದ್ದ ಅವನು ಅವರ ಸಾನ್ನಿಧ್ಯದಿಂದ ಭೀತಚೇತಸನಾದನು. 'ಅವರು ಯಾರು? ಅವರೇಕೆ ಓಡುತ್ತಿದ್ದಾರೆ? ಅವರು ನನ್ನ ಬಳಿಗೆ ಬರುತ್ತಿರಬಹುದೆ? ಏಕೆ? ನನ್ನನ್ನು ಕೊಲ್ಲಲೆಂದೆ? ಎಲ್ಲರ ಪ್ರೀತಿಗೂ ಪಾತ್ರನಾದ ನನ್ನನ್ನು' ತನ್ನ ಬಗೆಗಿದ್ದ ತಾಯಿಯ, ಕುಟುಂಬದ ಮತ್ತು ಗೆಳೆಯರ ಪ್ರೀತಿಯನ್ನು ನೆನೆದನು. ಅವರು ತನ್ನನ್ನು ಕೊಲ್ಲುವ ಉದ್ದೇಶವಿಟ್ಟುಕೊಂಡಿರಲಾರರೆಂದು ಬಗೆದನು. 'ಪ್ರಾಯಶಃ ಕೊಂದಾರು? ಪರಿಸ್ಥಿತಿಯನ್ನು ಗ್ರಹಿಸಲಾರದೆ, ಅತ್ತಿತ್ತಲುಗಾಡದೆ ಅವನು ಹತ್ತು ಕ್ಷಣಗಳ ಕಾಲ ಒಂದೆಡೆ ನಿಂತನು. ಕೊಕ್ಕೆ ಮೂಗಿನ ಫ್ರೆಂಚ್ ಸೈನಿಕ ಎಷ್ಟು ಹತ್ತಿರಕ್ಕೆ ಬಂದಿದ್ದನೆಂದರೆ, ಅವನ ಮುಖಭಾವವನ್ನು ಸಹ ಸ್ಪಷ್ಟವಾಗಿ ಗುರುತಿಸಬಹುದಿತ್ತು. ನೇತಾಡುತ್ತಿದ್ದ ಕೋವಿಯಲಗೂ, ಉಸಿರುಕಟ್ಟಿದ ಹಗುರೋಟವೂ, ಉದ್ರೇಕಗೊಂಡಿದ್ದ ಅವನ ಅಪರಿಚಯ ಮುಖವೂ ರೊಸ್ತೋವ್‌ನನ್ನು ಥರಗುಟ್ಟಿಸಿದುವು. ಅವನು ಫ್ರೆಂಚ್ ಸೈನಿಕನ ಮೇಲೆ ಪಿಸ್ತೂಲನ್ನೆಸೆದು, ಶಕ್ತಿಮೀರಿ ಪೊದೆಗಾಡಿನ ಕಡೆಗೆ ಓಡಿದನು. ಎನ್ಸ್ ಸೇತುವೆಯನ್ನು ದಾಟುವಾಗ ಅವನನುಭವಿಸಿದ್ದ ಸಂಶಯ ಸಂಘರ್ಷಭಾವವೀಗ ಗೈರುಹಾಜರಾಗಿತ್ತು. ಬೇಟೆನಾಯಿಗಳಿಂದ ತಪ್ಪಿಸಿಕೊಂಡು ಓಡಿ ಹೋಗುವ ಮೊಲದ ಅಂಜಿಕೆ, ಆ ಏಕಮಾತ್ರ ಭಾವನೆ ಸುಖಜೀವನದ ತರುಣನ ಇಡೀ ವ್ಯಕ್ತಿತ್ವವನ್ನು ಆಕ್ರಮಿಸಿಕೊಂಡಂತಿತ್ತು. ವೇಗವೇಗವಾಗಿ ನೆಗಿಲಗೆರೆಗಳನ್ನು ಜಿಗಿಯುತ್ತ, ಹಿಡಿಯುವಾಟದಲ್ಲಿ ತೋರಿಸುತ್ತಿದ್ದ

ಆವೇಶದಿಂದ ಅವನು ಹೊಲದ ಗಡಿಯನ್ನು ದಾಟಿದನು. ಬಿಳಿಚಿಕೊಂಡಿದ್ದ ಸತ್‌ಸ್ವಭಾವದ ಅವನ ತರುಣಮುಖ ಮೇಲಿಂದ ಮೇಲೆ ಹಿಂದಿರುಗಿ ನೋಡುತ್ತಿತ್ತು. ಭೀತಿಯ ನಡುಕ ಅವನ ಅಂಗಾಂಗಗಳಲ್ಲಿ ಪ್ರವಹಿಸಿತು. 'ಹಿಂದಕ್ಕೆ ನೋಡದಿರುವುದೇ ಕ್ಷೇಮ' ಎಂದವನು ನಿರ್ಧರಿಸಿಕೊಂಡನು. ಕುರುಚಲು ಗಿಡವನ್ನು ಸೇರಿದನಂತರ ಅವನು ಮತ್ತೊಮ್ಮೆ ಸುತ್ತಲೂ ದಿಟ್ಟಿ ಹಾಯಿಸಿದನು. ಫ್ರೆಂಚ್ ಸೈನಿಕರು ಹಿಂದೆ ಬಿದ್ದಿದ್ದರು. ಅಗ್ರಸ್ಥಾನದಲ್ಲಿದ್ದ ಸೈನಿಕ ಓಟವನ್ನು ನಡಗೆಗೆ ಕುಗ್ಗಿಸಿ, ಹಿಮ್ಮೊಗವಾಗಿ, ದೂರದಲ್ಲಿದ್ದ ಗೆಳೆಯನೊಬ್ಬನನ್ನು ಗಟ್ಟಿಯಾಗಿ ಕೂಗಿದನು. ರೊಸ್ತೋವ್ ತುಸು ನಿಂತನು. 'ಏನೋ ತಪ್ಪಿರಬೇಕು. ಅವರು ನನ್ನನ್ನು ಕೊಲ್ಲಬಯಸರು' ಎಂದಂದುಕೊಂಡನು. ಎಡದೋಳಿಗೆ ನಲವತ್ತು ಪೌಂಡ್ ತೂಕದ ಭಾರವನ್ನು ಕಟ್ಟಿದ್ದಂತೆ ಅವನಿಗನುಭವವಾಯಿತು. ಅವನು ಓಡಲಾಗಲಿಲ್ಲ. ಫ್ರೆಂಚ್ ಯೋಧ ಸಹ ನಿಂತು, ಗುರಿ ಹಿಡಿದನು. ರೊಸ್ತೋವ್ ಕಣ್ಣು ಮುಚ್ಚಿ ಕೆಳಗೆ ಬಾಗಿದನು. ಒಂದಾದಮೇಲೊಂದು ಗುಂಡುಗಳು ಅವನ ಪಕ್ಕದಲ್ಲಿ ಹಾದು ಹೋದುವು. ಉಳಿದಿದ್ದ ಅಷ್ಟಿಷ್ಟು ಶಕ್ತಿಯನ್ನು ಒಟ್ಟುಗೂಡಿಸಿಕೊಂಡು, ಬಲಗೈಯಿಂದ ಎಡಗೈಯನ್ನು ಹಿಡಿದುಕೊಂಡು, ಪೊದೆಗಳನ್ನು ಪ್ರವೇಶಿಸಿದನು. ಅವುಗಳ ಹಿಂದೆ ಕೆಲವು ಒಳ್ಳೆಯ ರಷ್ಯನ್ ಗುರಿಗಾರರು ಅಡಗಿದ್ದರು.

ಅಧ್ಯಾಯ ೨೦

ಕುರುಚಲುಗಿಡದ ಗಡಿಯಲ್ಲಿ ಅನಿರೀಕ್ಷಿತ ಆಕ್ರಮಣಕ್ಕೊಳಗಾಗಿದ್ದ ಪದಾತಿಬಲದ ತುಕಡಿಗಳು ತಪ್ಪಿಸಿಕೊಂಡು, ಚೆಲ್ಲಾಪಿಲ್ಲಿಯಾಗಿ ಹಿಮ್ಮೆಟ್ಟಿದುವು. 'ಕೆಟ್ಟೆವು, ಸತ್ತೆವು' ಎಂಬುದಾಗಿ ಅಂಜುಬುರುಕ ಸೈನಿಕನೊಬ್ಬ ಅರ್ಥಹೀನವಾಗಿ ಕೂಗಿಕೊಂಡನು. ಅಂಥ ಕೂಗು ಯುದ್ಧರಂಗದಲ್ಲಿ ಭಯಂಕರ ಪರಿಣಾಮ ಬೀರುತ್ತದೆ. ಅದು ಇಡೀ ಗುಂಪಿನಲ್ಲಿ ಸಾಂಕ್ರಾಮಿಕವಾಗಿ ಹಬ್ಬಿ, ಗಾಬರಿಯುಂಟುಮಾಡಿತು.

'ಸುತ್ತುಗಟ್ಟಿದ್ದಾರೆ! ಕೊಲೆಗೊಂಡಿದ್ದೇವೆ! ನಮ್ಮಗತಿ ಮುಗಿಯಿತು!' ಎಂದು ಪಲಾಯನ ಶೂರರು ಕೂಗಿಕೊಂಡರು.

ಹಿಂದುಗಡೆಯಿಂದ ಗುಂಡಿನ ಸದ್ದು ಮತ್ತು ಕೂಗುಗಳು ಕೇಳಿಸಿದೊಡನೆಯೆ ತನ್ನ ತುಕಡಿ ಭಯಂಕರ ವಿಪತ್ತಿಗೊಳಗಾಗಿದೆಯೆಂದು ಸೇನಾಪತಿ ಗ್ರಹಿಸಿದನು. ದೀರ್ಘಾವಧಿಯ ಸೇವೆಯಲ್ಲಿ ಅವನು ಆದರ್ಶ ಅಧಿಕಾರಿಯೆಂದು ಹೆಸರು ಪಡೆದಿದ್ದನು. ಉಪೇಕ್ಷೆಗೆ ಅಥವಾ ಅದಕ್ಷತೆಗೆ ತಾನು ಹೊಣೆಗಾರನೆಂದು ಕೇಂದ್ರಕಚೇರಿ ಭಾವಿಸಿದ್ದಾದರೆ, ತನ್ನ ಹೆಸರಿಗೆ ಮಸಿಸೇರಿಕೊಳ್ಳುವುದಾದರೆ ತನಗೆ ಭಾರಿ ಅವಮಾನವಾಗುತ್ತದೆಂದವನು ಹೆದರಿದನು. ಶಠಸ್ವಭಾವದ ಕರ್ನಲನನ್ನು ಮರೆತನು, ಮುಂದಿದ್ದ ಅಪಾಯವನ್ನೂ ಆತ್ಮರಕ್ಷಣೆಯ ವಿಷಯವನ್ನೂ ಮರೆತನು. ಜೀನಿನ ಪೃಷ್ಠಭಾಗವನ್ನು ಬಿಗಿಹಿಡಿದನು. ಕುದುರೆಯನ್ನು ಚೋದಿಸಿ, ಗುಂಡುಗಳ ಮುಸಲಧಾರೆಯ ನಡುವೆ ತನ್ನ ತುಕಡಿಯ ಕಡೆಗೆ ದೌಡಾಯಿಸಿದನು. ಪುಣ್ಯವಶಾತ್ ಅವನಿಗೆ ಗುಂಡು ತಗುಲಲಿಲ್ಲ. ಅಲ್ಲಿ ಜರುಗುತ್ತಿದ್ದ ಘಟನೆಗಳನ್ನರಿಯುವುದು, ತನ್ನಿಂದ ತಪ್ಪಾಗಿದ್ದರೆ ಅದನ್ನು ಸರಿಪಡಿಸುವುದು, ಅವಮಾನದಿಂದ ಪಾರಾಗುವುದು, ಇದೇ ಅವನ ಹೆಬ್ಬಯಕೆಯಾಗಿತ್ತು.

ಅವನು ಫ್ರೆಂಚ್ ಸೈನ್ಯವನ್ನು ದಾಟಿ, ಪೊದೆಗಿಡದ ಹಿಂದಿನ ಹೊಲವನ್ನು ಪ್ರವೇಶಿಸಿದನು. ನಮ್ಮ ಸೈನಿಕರು ಆಜ್ಞೆಗಳನ್ನು ಧಿಕ್ಕರಿಸಿ, ಓಡೋಡಿ, ಕಂದರದಲ್ಲಿಳಿಯುತ್ತಿದ್ದರು. ಸಂಗ್ರಾಮಗಳ ಹಣೆಬರಹವನ್ನು ನಿರ್ಣಯಿಸುವ ನೈತಿಕ ಸಂದೇಹದ ಸಮಯ ಪ್ರಾಪ್ತವಾಗಿತ್ತು. ಅಸ್ತವ್ಯಸ್ತವಾಗಿ ಓಡುತ್ತಿರುವ ಸೈನ್ಯ ತನ್ನ ಹುಕುಮನ್ನು ಪಾಲಿಸುವುದೆ ಅಥವಾ ಪಲಾಯನವನ್ನು ಮುಂದುವರಿಸುವುದೆ? ಎಂಬ ಪ್ರಶ್ನೆ ಸೇನಾಪತಿಯ ಮುಂದೆ ಹೆಡೆಯೆತ್ತಿ ನಿಂತಿತು. ತಮಗೆ ಭೀಕರ ಶಕುನವಾಗಿ ಕೇಳಿಸುತ್ತಿದ್ದ ನಿರಾಶೆಯ ನಿರೂಪಗಳನ್ನು, ಕೋಪಾಟೋಪದಿಂದ ವಿಕಾರಗೊಂಡಿದ್ದ ಸೇನಾಪತಿಯ ಮುಖವನ್ನು, ಝಳಪಿಸುತ್ತಿದ್ದ ಅವನ ಕತ್ತಿಯನ್ನು ಲೆಕ್ಕಿಸದೆ ಸೈನಿಕರು ಹರಟುತ್ತ, ಆಕಾಶಕ್ಕೆ ಗುಂಡು ಹಾರಿಸುತ್ತ ಒಂದೇ ಸಮನೆ ಓಡುತ್ತಿದ್ದರು. ನೈತಿಕ ಸಂಶಯ ಭಯಜ್ವರವಾಗಿ ಪರಿಣಮಿಸಿತ್ತು.

ಅರಚುಕಿರಿಚುಗಳ ಮತ್ತು ಮದ್ದು ಹೊಗೆಯ ಪರಿಣಾಮವಾಗಿ ಸೇನಾಪತಿ ನಿರಂತರವಾಗಿ ಕೆಮ್ಮುತ್ತ, ಭಗ್ನಾಶೆಯಿಂದ ಗಕ್ಕನೆ ನಿಂತು ಬಿಟ್ಟನು. ಸರ್ವನಾಶವಾದಂತೆ ಅವನಿಗೆ ಭಾಸವಾಯಿತು. ಅಷ್ಟರಲ್ಲಿ ಆಕ್ರಮಣೋನ್ಮತ್ತರಾಗಿದ್ದ ಫ್ರೆಂಚ್ ಸೈನಿಕರು ಹಠಾತ್ತನೆ ಹಿಮ್ಮೆಟ್ಟಿ, ಮರೆಯಾದರು. ಪೊದೆಯ ಹಿಂದಿದ್ದ ರಷ್ಯಾದ ಚುರುಕು ಗುರಿಗಾರರಿಗೆ ತಮ್ಮ ಸಾಮರ್ಥ್ಯವನ್ನು ತೋರಿಸುವ ಅವಕಾಶ ಸಂಪ್ರಾಪ್ತವಾಗಿತ್ತು. ಟಿಮೋಖಿನ್ನನ ತುಕಡಿಮಾತ್ರ ಶಿಸ್ತಿನಿಂದ ಕೂಡಿದ್ದು, ಹಳ್ಳದಲ್ಲಿ ಹೊಂಚು ಹಾಕುತ್ತಿದ್ದು, ಅನಿರೀಕ್ಷಿತವಾಗಿ ಫ್ರೆಂಚ್ ಸೈನ್ಯದ ಮೇಲೆ ಬಿದ್ದಿತ್ತು. ಟಿಮೋಖಿನ್ನನ ಬಳಿಯಿದ್ದದ್ದು ಒಂದೇ ಒಂದು ಕತ್ತಿ. ಅವನು ಉಚ್ಚ ಕಂಠದಿಂದ ಬೊಬ್ಬಿರಿಯುತ್ತ, ಉನ್ಮತ್ತನ ದೃಢ ಸಂಕಲ್ಪದಿಂದ ಶತ್ರುವಿನ ಮೇಲೆ ನುಗ್ಗಿದನು. ಅವನ ಆವೇಶದಿಂದ ಭಯಚಕಿತರಾದ ಫ್ರೆಂಚ್ ಸೈನಿಕರು ಬಂದೂಕಗಳನ್ನು ಬಿಸಾಡಿ ಪಲಾಯನಸೂತ್ರ ಹಿಡಿದರು. ಟಿಮೋಖಿನ್ನನ ಪಕ್ಕದಲ್ಲಿದ್ದ ದೊಲೊಖೊವ್ ಫ್ರೆಂಚ್ ಯೋಧನನ್ನು ಕೊಂದು, ಶರಣಾಗತನಾಗಲಿದ್ದ ಫ್ರೆಂಚ್ ಅಧಿಕಾರಿಯ ಕೊರಳಪಟ್ಟಿಯನ್ನು ಹಿಡಿದೆಳೆಯುತ್ತಿದ್ದನು. ನಮ್ಮ ಪಲಾಯನಿಗಳು ಹಿಂದಿರುಗಿದರು. ಮತ್ತೆ ತುಕಡಿಗಳು ಕ್ರಮವಾಗಿ ವ್ಯವಸ್ಥೆಗೊಂಡುವು. ನಮ್ಮ ವಾಮ ಪಾರ್ಶ್ವದ ಸೈನ್ಯವನ್ನು ಆರ್ಧಗೊಳಿಸಿದ್ದ ಫ್ರೆಂಚ್ ಸೈನ್ಯ ತುಸು ಹೊತ್ತು ಹಿಮ್ಮೆಟ್ಟುವಂತಾಯಿತು. ನಮ್ಮ ಮೀಸಲು ಪಡೆಗಳು ಬಂದು ಸೇರಿಕೊಳ್ಳಲಾಗಿ, ದಿನದ ಯುದ್ಧ ಮುಗಿಯಿತು. ತುಕಡಿಯ ನಾಯಕ ಮತ್ತು ಮೇಜರ್ ಇಕೊನೊಮೋವ್ ಇಬ್ಬರೂ ಸೇತುವೆಯ ಬಳಿ ನಿಂತು, ಹಿಮ್ಮೆಟ್ಟುತ್ತಿದ್ದ ತುಕಡಿಗಳು ತಮ್ಮ ಮುಂದೆ ಹೋಗಲನುವು ಮಾಡಿಕೊಡುತ್ತಿದ್ದರು. ಆಗೊಬ್ಬ ಸೈನಿಕ ನಾಯಕನ ಬಳಿ ಬಂದು, ಅವನ ರಿಕಾಪು ಹಿಡಿದುಕೊಂಡು, ಅವನ ಶರೀರದ ಮೇಲೊರಗಿಕೊಂಡನು. ಸೈನಿಕ ಜೋಡಿ ಪನ್ನದ ನೀಲಿಕೋಟು ಧರಿಸಿದ್ದನು. ಬೆನ್ನುಚೀಲವಾಗಲಿ ಟೋಪಿಯಾಗಲಿ ಅವನ ಬಳಿ ಇರಲಿಲ್ಲ. ಅವನ ತಲೆಗೆ ಪಟ್ಟಿ ಸುತ್ತಿತ್ತು. ಅವನ ಭುಜದ ಮೇಲೆ ಫ್ರೆಂಚರು ಬಳಸುತ್ತಿದ್ದ ಮದ್ದಿನ ತೊಗಲು ಚೀಲವೊಂದು ನೇತಾಡುತ್ತಿತ್ತು. ಅವನ ಕೈಯಲ್ಲಿ ಅಧಿಕಾರಿಯ ಖಡ್ಗವಿತ್ತು. ಅವನ ಮುಖ ಬಿಳಿಚಿಕೊಂಡಿತ್ತು. ಅವನ ನೀಲಿಗಣ್ಣುಗಳು ನಿರ್ಲಜ್ಜೆಯಿಂದ ನಾಯಕನ ಮುಖದಲ್ಲಿ ನಾಟಿದ್ದುವು. ಅವನ ತುಟಿಗಳಲ್ಲಿ

ಮುಗುಳ್‌ನಗೆ ತೇಲುತ್ತಿತ್ತು. ಮೇಜರ್ ಇಕೊನೊಮೋವ್‌ನಿಗೆ ಸೂಚನೆ ನೀಡುವಲ್ಲಿ ನಾಯಕ ತಲ್ಲೀನನಾಗಿದ್ದರೂ, ಅವನ ಕಣ್ಣು ಸೈನಿಕನ ಕಡೆಗೆ ಹೊರಳಿತು.

'ಪ್ರಭು, ಇಗೋ ನೋಡಿ, ಇಲ್ಲೆರಡು ವಿಜಯ ಸ್ಮಾರಕಗಳಿವೆ' ಎಂದು ದೊಲೊಖೊವ್ ಫ್ರೆಂಚ್ ಖಡ್ಗ ಮತ್ತು ತೊಗಲು ಚೀಲಗಳನ್ನು ತೋರಿಸಿದನು. 'ನಾನೊಬ್ಬ ಅಧಿಕಾರಿಯನ್ನು ಸೆರೆ ಹಿಡಿದಿದ್ದೇನೆ. ತುಕಡಿಯೊಂದನ್ನು ತಡೆಗಟ್ಟಿದೆ' ಎಂದವನು ಬಳಲಿಕೆಯಿಂದ ಏದುತ್ತಿದ್ದನು; ವಾಕ್ಯಗಳನ್ನು ಮುರಿದು ಮುರಿದು ಬಳಸುತ್ತಿದ್ದನು. 'ನಮ್ಮ ಇಡೀ ತುಕಡಿಯೇ ನನ್ನ ಮಾತಿಗೆ ಸಾಕ್ಷಿಯಾಗಿದೆ. ಮಹಾಪ್ರಭುಗಳೆ, ಈ ಸಂಗತಿಯನ್ನು ನೆನಪಿನಲ್ಲಿಟ್ಟುಕೊಂಡಿರಬೇಕೆಂದು ಪ್ರಾರ್ಥಿಸುತ್ತೇನೆ.'

'ಸರಿ, ಸರಿ' ಎಂದು ನಾಯಕ ಉತ್ತರಿಸಿ ಮೇಜರನ ಕಡೆಗೆ ಮುಖವಾದನು.

ಆದರೆ ದೊಲೊಖೊವ್ ಅಲ್ಲಿಂದ ಸರಿಯಲಿಲ್ಲ; ತಲೆಯನ್ನು ಸುತ್ತಿದ್ದ ಚೌಕವನ್ನು ಬಿಚ್ಚಿದನು; ಕೂದಲಲ್ಲಿ ಹೆಪ್ಪುಗಟ್ಟಿಕೊಂಡಿದ್ದ ರಕ್ತವನ್ನು ತೋರಿಸಿದನು.

'ಇದು ಕೋವಿಯಲಗಿನ ಗಾಯ. ನಾನು ಅಗ್ರಭಾಗದಲ್ಲಿದ್ದೆ. ದಯೆಯಿಟ್ಟು ನೆನಪಿಡಿ, ಪ್ರಭು.'

* * *

ತೂಷಿನ್ನನ ತುಪಾಕಿ ಪಂಕ್ತಿ ಎಲ್ಲರಿಗೂ ಮರೆತುಹೋಗಿತ್ತು. ಕಾರ್ಯಾಚರಣೆಯ ಅಂತ್ಯದಲ್ಲಿ ರಾಜಕುಮಾರ ಬಗ್ರೇಷನ್ನನಿಗೆ ನೆನಪಾಗಿ, ತನ್ನ ಸಿಬ್ಬಂದಿಯ ಅಧಿಕಾರಿಯನ್ನೂ, ಅನಂತರ ಆಂಡ್ರೂವನ್ನೂ ಕಳಿಸಿ, ಆದಷ್ಟು ಬೇಗ ಹಿಂದಿರುಗುವಂತೆ ಹುಕುಂ ಮುಟ್ಟಿಸಿದನು. ಕಾರ್ಯಾಚರಣೆಯ ಮಧ್ಯದಲ್ಲಿ ತುಪಾಕಿ ಪಂಕ್ತಿಯ ಊರೆಗಳನ್ನು ತೆಗೆಯಲಾಗಿ, ತುಪಾಕಿಗಳು ಸತತವಾಗಿ ಗುಂಡು ಕಾರುತ್ತಿದ್ದುವು. ಅದರಿಂದಾಗಿ ರಷ್ಯನ್ ಸೈನ್ಯ ಮಧ್ಯಭಾಗದಲ್ಲಿ ಕೇಂದ್ರೀಕೃತಗೊಂಡಿರಬೇಕೆಂದು ಫ್ರೆಂಚರು ಬಗೆದರು. ಆ ಗೊತ್ತಿನಲ್ಲಿ ಧಾಳಿ ನಡಸಲು ಅವರು ಎರಡು ಸಾರಿ ಪ್ರಯತ್ನಿಸಿದ್ದರು. ಗೊಂಚಲು ಗುಂಡುಗಳ ಪ್ರಯೋಗದಿಂದ ಎರಡು ಸಾರಿಯೂ ಅವರನ್ನು ಹಿಂದಕ್ಕಟ್ಟಲಾಗಿತ್ತು.

ಬಗ್ರೇಷನ್ ತನ್ನಿಂದ ಸರಿದ ಕೂಡಲೇ ತೂಷಿನ್ ಷಾನ್‌ಗ್ರಾಬರ್ನ್ ಗ್ರಾಮಕ್ಕೆ ಅಗ್ನಿಸ್ಪರ್ಶ ಮಾಡಿಸಿದನು. 'ನೋಡಿ, ನೋಡಿ, ಅವರು ದಿಕ್ಕಾಪಾಲಾಗಿ ಓಡುತ್ತಿದ್ದಾರೆ! ಅದು ಉರಿಯುತ್ತಿದೆ! ಹೊಗೆ ನೋಡಿ! ಭಲೆ, ಭೇಷ್! ಹೊಗೆ, ಹೊಗೆ, ಎಲ್ಲೆಲ್ಲೂ ಹೊಗೆ!' ಎಂದು ಫಿರಂಗಿದಳದ ಜನ ಸೋತ್ಸಾಹದಿಂದ ಕೂಗಿಕೊಂಡರು.

ಹುಕುಮಿಗೆ ಕಾಯದ ಎಲ್ಲಾ ಬಂದೂಕಗಳೂ ದಳ್ಳುರಿಯ ದಾರಿಯಲ್ಲಿ ಕ್ರಿಯಾಶೀಲವಾಗಿದ್ದುವು. ಒಂದೊಂದು ಗುಂಡು ಸಿಡಿದಾಗಲೂ ಪರಸ್ಪರ ಪ್ರಚೋದನೆಗೆನ್ನುವಂತೆ 'ಭಲೆ! ಭೇಷ್! ಆ ಕಡೆ ನೋಡು....ಅದ್ಭುತ!' ಎಂಬ ಉದ್ಗಾರಗಳು ಅಬ್ಬರಿಸುತ್ತಿದ್ದುವು. ಗಾಳಿಯ ನೆರವಿನಿಂದ ಬೆಂಕಿ ವೇಗವಾಗಿ ಹರಡುತ್ತಿತ್ತು. ಹಳ್ಳಿಯನ್ನು ದಾಟಿದ್ದ ಫ್ರೆಂಚ್ ಸೈನ್ಯ ಹಿಂಜರಿದು, ಸೋಲಿನ ಸೇಡು ತೀರಿಸಿಕೊಳ್ಳಲೆಂಬಂತೆ, ಹಳ್ಳಿಯ ಬಲಬದಿಯಲ್ಲಿ ಹತ್ತು ಫಿರಂಗಿಗಳನ್ನಿರಿಸಿ, ತೂಷಿನ್ನನ ಫಿರಂಗಿಯೊಡ್ಡಿನ ಕಡೆಗೆ ಗುಂಡುಹಾರಿಸುತ್ತಿದ್ದರು.

ಗುಂಡಿನ ಮಳೆಯಿಂದ ಶತ್ರುಸೈನ್ಯವನ್ನು ಹಿಮ್ಮೆಟ್ಟಿಸಿದ ಅದೃಷ್ಟಕ್ಕಾಗಿ ನಮ್ಮ ಫಿರಂಗಿ ಯೋಧರರು ಮಕ್ಕಳಂತೆ ಆನಂದಸಾಗರದಲ್ಲಿ ಮುಳುಗಿದರು. ಆ ಆನಂದೋನ್ಮಾದದಲ್ಲಿ ಅವರು ಹಗೆಯ ಕೈವಾಡವನ್ನು ಗಮನಿಸಲಿಲ್ಲ. ಮೊದಲೊಂದು ಗುಂಡು, ಅನಂತರ ನಾಲ್ಕು ನಮ್ಮ ಫಿರಂಗಿಯೊಡ್ಡಿನ ನಡುವೆ ಬಿದ್ದಾಗ, ಎರಡು ಕುದುರೆಗಳು ಬಿದ್ದು, ಮದ್ದುಬುಡಿಯ ಚಾಲಕನ ಕಾಲು ಹರಿದಾಗಲೇ ಇತರರಿಗೆ ಎಚ್ಚರವಾದದ್ದು. ಅವರ ಉತ್ಸಾಹ ಕುಗ್ಗದಿದ್ದರೂ ಅದರ ಸ್ವರೂಪ ಮಾತ್ರ ಬದಲಾಯಿಸಿತು. ಮೀಸಲು ಪಡೆಯಿಂದ ಮತ್ತೆರಡು ಕುದುರೆಗಳನ್ನು ತಂದು ಜೋಡಿಸಲಾಯಿತು, ಗಾಯಾಳುಗಳನ್ನು ಹೊರಗೆ ಸಾಗಿಸಲಾಯಿತು, ಗುಂಡು ಸಿಡಿಸುತ್ತಿದ್ದ ಹಗೆಯ ಕಡೆಗೆ ಗುರಿ ಕಟ್ಟಲಾಯಿತು. ತೂಷಿನ್ನನ ಸಹಾಯಾಧಿಕಾರಿ ಕಾರ್ಯಾಚರಣೆಯ ಪ್ರಾರಂಭದಲ್ಲಿಯೇ ಹಗೆಯ ಗುಂಡಿಗೆ ಬಲಿಯಾಗಿದ್ದನು; ಮುಂದಿನ ಒಂದು ಗಂಟೆಯಲ್ಲಿ ನಲವತ್ತು ಜನರ ಪೈಕಿ ಹದಿನೇಳು ಜನ ನಿಶ್ಶಕ್ತರಾದರು. ಇಷ್ಟಾದರೂ ಗೋಲಂದಾಜ ಪಡೆಯಲ್ಲಿ ಚೈತನ್ಯೋತ್ಸಾಹಗಳು ಕುಗ್ಗಿರಲಿಲ್ಲ. ಕೆಳಗಿನಿಂದ ಫ್ರೆಂಚ್ ಸೈನಿಕರು ತಲೆಹಾಕುತ್ತಿದ್ದುದನ್ನವರು ಎರಡು ಸಾರಿ ಗಮನಿಸಿದಾಗ, ಅವರ ಮೇಲೆ ಗೊಂಚಲು ಗುಂಡು ಹಾರಿಸಿದರು.

ತೂಷಿನ್ ಬಳಲಿದವನಂತೆ ವಿಕಾರವಾಗಿ ಕಾಲು ಹಾಕುತ್ತ, ಆಗಾಗ್ಗೆ ಸೇವಕನಿಂದ ನಳಿಕೆಗೆ ಹೊಗೆಸೊಪ್ಪು ತುಂಬಿಸಿಕೊಳ್ಳುತ್ತ, ಅದೇ ನಳಿಕೆಯಿಂದ ಕಿಡಿಗಳನ್ನು ತೂರುತ್ತ, ಹಣೆಗಯ್ಯಾಗಿ ಹಗೆಯನ್ನು ನೋಡುತ್ತ, ಮುಂದೆ ಮುಂದೆ ಓಡುತ್ತಿದ್ದನು. ತಾನೇ ಬಂದೂಕುಗಳನ್ನು ಬಾರುಮಾಡುತ್ತ, 'ಹುಡುಗರೆ, ಇರಿಯಿರಿ, ತಿವಿಯಿರಿ' ಎಂದು ಬೊಬ್ಬೆಹಾಕುತ್ತಿದ್ದನು. ಬಾಯಿಂದ ನಳಿಕೆ ತೆಗೆಯದೆಯೆ, ಗುಂಡು ಸಿಡಿದಾಗಲೆಲ್ಲ ಜಿಗಿಯುತ್ತ, ಹೊಗೆಯ ನಡುವೆಯೆ ಅವನು ಗುರಿಯಿಡುತ್ತ, ಮದ್ದುಗುಂಡುಗಳನ್ನು ಎಣಿಸುತ್ತ, ಫಿರಂಗಿಯಿಂದ ಫಿರಂಗಿಯೆಡೆಗೆ ಪ್ರಗಮಿಸುತ್ತಿದ್ದನು. ಸತ್ತವರ ಜಾಗದಲ್ಲಿ ಹೊಸಬರನ್ನು ನೇಮಿಸುತ್ತ, ಗಾಯಗೊಂಡ ಕುದುರೆಗಳಿಗೆ ಬದಲಾಗಿ ಹೊಸವನ್ನು ಹೂಡುತ್ತ, ಅನಿಶ್ಚಿತವಾದ ಎತ್ತರದ ದನಿಯಲ್ಲಿ ಬೊಬ್ಬಿರಿಯುತ್ತ, ಆಜ್ಞೆಗಳನ್ನು ಘೋಷಿಸುತ್ತಿದ್ದನು. ಅವನ ಮುಖ ಗಳಿಗೆಗಳಿಗೆಗೂ ಚೈತನ್ಯದ ಚೆಲುವೆಯಾಗುತ್ತಿತ್ತು. ಯೋಧನೊಬ್ಬ ಕೊಲೆಗೊಂಡಾಗ ಅಥವಾ ಗಾಯಗೊಂಡಾಗ ಮಾತ್ರ ಅವನು ಹುಬ್ಬುಗಂಟಿಕ್ಕಿಕೊಂಡು, ಬೇರೆಡೆಗೆ ತಿರುಗುತ್ತಿದ್ದನು. ಸತ್ತವರನ್ನಾಗಲೀ ಗಾಯಗೊಂಡವರನ್ನಾಗಲೀ ಸಾಗಿಸಲು ಹಿಂಜರಿಯುವ ಜನರ ಮೇಲೆ ರೇಗಾಡುತ್ತಿದ್ದನು. ಸಾಮಾನ್ಯವಾಗಿ ಚೆಲುವು ಗಾತ್ರ ಎತ್ತರಗಳಲ್ಲಿ ಗೋಲಂದಾಜ ಸೈನಿಕರು ತಮ್ಮ ಅಧಿಕಾರಿಗಳಿಗಿಂತ ಎದ್ದುಕಾಣುತ್ತಿದ್ದರು. ಆದರೆ ಕಠಿನ ಪರಿಸ್ಥಿತಿಯಲ್ಲಿ ಅವರು ಹಸುಮಕ್ಕಳಂತೆ ತಮ್ಮ ನಾಯಕನ ಕಡೆಗೆ ಕಣ್ಣಾಗುತ್ತಿದ್ದರು. ನಾಯಕನ ಮುಖಭಾವ ಯಾವಾಗಲೂ ಅವರ ಮುಖಗಳಲ್ಲಿ ಪ್ರತಿಬಿಂಬಿಸುತ್ತಿತ್ತು.

ಘೋರ ಗರ್ಜನೆ ಹಾಗೂ ಎಡೆಬಿಡದ ಚಟುವಟಿಕೆಯಿಂದಾಗಿ, ಜತೆಗೆ ಏಕಾಗ್ರತೆಯ ಆವಶ್ಯಕತೆಯಿಂದಾಗಿ ತೂಷಿನ್ ಕಿಂಚಿತ್ತಾದರೂ ಭಯವನ್ನನುಭವಿಸಲಿಲ್ಲ. ತಾನು ಬಲಿಗೊಳ್ಳಬಹುದೆಂಬ ಅಥವಾ ಗಾಯಗೊಳ್ಳಬಹುದೆಂಬ ಅರಿವೂ ಅವನ ಮನಸ್ಸಿನಲ್ಲಿ

ಮೂಡಲಿಲ್ಲ. ಶತ್ರುವನ್ನು ಗುರುತಿಸಿ, ಅವನ ಮೇಲೆ ಮೊದಲ ಗುಂಡು ಸಿಡಿಸಿದಾಗಿನಿಂದ ಒಂದು ದಿನ ಕಳೆದಿತ್ತು. ನಿಂತ ಹೊಲದ ಮೂಲೆಯಲ್ಲಿಯೇ ಅವನ ಚಟುವಟಿಕೆ ಮುಂದುವರಿದಿತ್ತು. ಅತ್ಯುತ್ತಮ ಅಧಿಕಾರಿಯಂತೆ ಅವನು ಕೂಲಂಕಷವಾಗಿ ಆಲೋಚಿಸಿದ್ದ, ಸಮರ್ಪಕವಾಗಿ ಕಾರ್ಯನಿರ್ವಹಿಸಿದ್ದ. ಆದರೂ ಅವನ ಸ್ಥಿತಿ ಉನ್ಮತ್ತತೆಗೆ ಅಥವಾ ಬುದ್ಧಿ ವಿಕಲ್ಪಕ್ಕೆ ಸನ್ನಿಹಿತವಾಗಿತ್ತು. ಕಿವುಡುಗೆಯ್ಯುತ್ತಿದ್ದ ಸ್ವಂತ ಫಿರಂಗಿಗಳ ಆರ್ಭಟ, ಶತ್ರುಪಕ್ಷದ ಫಿರಂಗಿಗಳ ಢಂಕೃತಿ, ಫಿರಂಗಿಗಳ ಸುತ್ತ ನಿಂತಿದ್ದ ಸೈನಿಕರ ಬೆವರಿಳಿಯುವ ಮುಖಗಳು, ಸೈನಿಕರ ಹಾಗೂ ವಾಜಿಗಳ ರಕ್ತಪ್ರವಾಹ, ಫಿರಂಗಿಗಳ ಸಿಡಿತದಿಂದುಣ್ಮುವ ಧೂಮಮೇಘ, ಈ ಎಲ್ಲ ದೃಶ್ಯಗಳಿಂದಾಗಿ ಅವನು ಭ್ರಮಾಲೋಕವೊಂದನ್ನು ಸೃಷ್ಟಿಸಿಕೊಂಡು, ಆನಂದಸಾಗರದಲ್ಲಿ ತೇಲಿಹೋದನು. ಶತ್ರುವಿನ ಫಿರಂಗಿಗಳು ಅವನ ಕಣ್ಣಿಗೆ ಹೊಗೆಯುಗುಳುವ ಬರಿಯ ನಳಿಕೆಗಳಾಗಿ ತೋರಿದುವು.

ಬೆಟ್ಟದಿಂದ ಸಣ್ಣ ಮೋಡವೊಂದೆದ್ದು, ಗಾಳಿಯಿಂದ ಕಪ್ಪುಗೆರೆಯಾಗಿ ಪರಿಣಮಿಸಿದ್ದನ್ನು ಕಂಡ ತೂಷಿನ್ 'ಅಗೋ....ಅಲ್ಲಿ...ಅವನು ಮತ್ತೆ ಹೊಗೆಬಿಡುತ್ತಿದ್ದಾನೆ' ಎಂದು ತನ್ನೊಳಗೆ ತಾನು ಗೊಣಗಿಕೊಂಡನು. 'ಆ ಗುಂಡನ್ನು ಹುಡುಕಿ....ಹಿಂದಕ್ಕೆ ಬಿಸಾಡೋಣ'

ಬಳಿಯಲ್ಲಿಯೇ ನಿಂತುಕೊಂಡು, ಅವನ ಗೊಣಗನ್ನು ಕೇಳಿಸಿಕೊಂಡ ಯೋಧ 'ಏನು ಬೇಕು, ಬುದ್ಧಿ ?' ಎಂದು ಪ್ರಶ್ನಿಸಿದನು.

'ಏನೂ ಇಲ್ಲ....ಗುಂಡು ಮಾತ್ರ' ಎಂದವನು ಉತ್ತರವಿತ್ತನು.

'ಬಾ ಇಲ್ಲಿ, ನನ್ನ ಮತ್ವೇವ್ನಾ' ಎಂದವನು ಮತ್ತೆ ತನ್ನಷ್ಟಕ್ಕೆ ತಾನು ಪಿಸುಗುಟ್ಟಿದನು. ಬೃಹದಾಕಾರದ, ಹಳೆಯ ಮಾದರಿಯ ದೂರದ ಫಿರಂಗಿಗೆ ಅವನ ಕಲ್ಪನೆ ಕೊಟ್ಟ ಹೆಸರು ಮತ್ವೇವ್ನಾ (ಮ್ಯಾಥ್ಯೂವಿನ ಮಗಳ ಹೆಸರದು). ಫಿರಂಗಿಗಳ ಸುತ್ತ ಮುತ್ತಿಕೊಂಡಿದ್ದ ಫ್ರೆಂಚ್ ಸೈನಿಕರು ಅವನ ಕಣ್ಣಿಗೆ ಇರುವೆಗಳಂತೆ ಕಂಡರು. ಎರಡನೆಯ ತಂಡದ ಮೊದಲನೆಯ ವ್ಯಕ್ತಿಗೆ, ಅಂದರೆ ರೂಪವಂತನಾದ ಕುಡುಕನಿಗೆ ಅವನಿತ್ತ ಹೆಸರು 'ಚಿಕ್ಕಪ್ಪ.' ತೂಷಿನ್ ಇತರರಿಗಿಂತ ಹೆಚ್ಚಾಗಿ ಅವನನ್ನೇ ನೋಡುತ್ತಿದ್ದನು. ಅವನ ಪ್ರತಿಯೊಂದು ಚಲನೆಯೂ ತೂಷಿನ್ನನ ಮನಸ್ಸಿನಲ್ಲಿ ಆನಂದವನ್ನುಕ್ಕಿಸುತ್ತಿತ್ತು. ಬೆಟ್ಟದ ಬುಡದಲ್ಲಿ ಏರಿಳಿಯುತ್ತಿದ್ದ ಬಂದೂಕವ ಸದ್ದು ಶ್ವಾಸೋಚ್ಛ್ವಾಸದಂತೆ ತೋರುತ್ತಿತ್ತು. ಆ ಸ್ವನ ಸಮುದ್ರದ ಉಬ್ಬರವಿಳಿತಗಳನ್ನವನು ಎಚ್ಚರಿಕೆಯಿಂದ ಆಲಿಸುತ್ತಿದ್ದನು.

'ಆಹ, ಉಸಿರಾಟ, ಮತ್ತೆ ಉಸಿರಾಟ !' ಎಂದವನು ಗೊಣಗಿಕೊಂಡನು.

ತಾನು ಎರಡು ಕೈಗಳಿಂದಲೂ ಫ್ರೆಂಚರ ಕಡೆಗೆ ಫಿರಂಗಿ ಗುಂಡೆಸೆಯುತ್ತಿದ್ದ ಉನ್ನತಾಕಾರದ, ಭೀಮಶಕ್ತಿಯ ಪರಾಕ್ರಮಿಯೆಂದು ಸ್ವಾರಾಧನೆಯಲ್ಲಿ ತೊಡಗಿದ್ದನು.

'ಮತ್ವೇವ್ನಾ, ನನ್ನ ಮುದ್ದು ಬಾಲೆ, ಇಗೋ ಈಗ ನನ್ನನ್ನು ಕೈಬಿಡಬೇಡ!' ಎಂದವನು ಫಿರಂಗಿಯನ್ನುಳಿದು ಹೊರಟಾಗ ಹೇಳಿಕೊಳ್ಳುತ್ತಿದ್ದನು. ಅಷ್ಟರಲ್ಲಿ ಅಪರಿಚಯವೂ ವಿಚಿತ್ರವೂ ಆದ ಧ್ವನಿಯೊಂದು ತಲೆಯಮೇಲಿಂದ 'ಕಫ್ತಾನ್ ತೂಷಿನ್ ! ಕಫ್ತಾನ್' ಎಂದು ಕೂಗಿತು.

ತೂಷಿನ್ ಗಾಬರಿಯಿಂದ ತಿರುಗಿದನು. ಗ್ರಂಥ್‌ಗ್ರಾಮದ ಮಳಿಗೆಯಿಂದ ಅವನನ್ನು ಹೊರಗಟ್ಟಿದ್ದ ಸಿಬ್ಬಂದಿಯಧಿಕಾರಿಯೇ ಅಲ್ಲಿ ಪ್ರತ್ಯಕ್ಷವಾಗಿದ್ದನು. 'ನಿನಗೇನು ಹುಚ್ಚೆ?....ಹಿಂದಿರುಗುವಂತೆ ನಿನಗೆ ಎರಡು ಸಾರಿ ಆಜ್ಞೆ ಕಳಿಸಿದ್ದಾಗಿದೆ.... ನೀನು....' ಎಂದವನು ಏದುತ್ತ ಕಿರಿಚಿಕೊಂಡನು.

ತೂಷಿನ್ ಹಿರಿಯಧಿಕಾರಿಯು ಕಡೆಗೆ ಗಾಬರಿಯಿಂದ ನೋಡುತ್ತ 'ಅವರೇಕೆ ನನ್ನ ಮೇಲೆ ಬೀಳುತ್ತಿದ್ದಾರೆ?' ಎಂದು ಉದ್ಗರಿಸಿದನು.

ಟೋಪಿಗೆ ಎರಡು ಬೆರಳುಗಳನ್ನೊರಗಿಸಿ 'ನನಗೆ....ಗೊತ್ತಿಲ್ಲ....ನನಗೆ ...' ಎಂದು ಸಿಬ್ಬಂದಿಯಧಿಕಾರಿ ತೊದಲಿದನು.

ಅವನು ಮಾತು ಮುಗಿಸುವ ಮುನ್ನವೆ, ಫಿರಂಗಿ ಗುಂಡೊಂದು ತನ್ನ ಕಡೆಗೆ ಬರುತ್ತಿರಲಾಗಿ, ಕುದುರೆಯ ಮೇಲೆ ವಾಲಿಕೊಂಡನು. ಅವನು ಮತ್ತೆ ಮಾತು ಮುಂದುವರಿಸಲು ಹವಣಿಸುವಷ್ಟರಲ್ಲಿ ಮತ್ತೊಂದು ಗುಂಡು ಸಿಡಿಯಿತು. ಅವನು ಕುದುರೆಯನ್ನು ತಿರುಗಿಸಿ, ನಾಗಾಲೋಟದಿಂದ ಓಡಿಸಿದನು.

'ಹಿಂದಿರುಗಿ! ಎಲ್ಲರೂ ಹಿಂದಿರುಗಿ!' ಎಂದವನು ದೂರದಿಂದ ಕೂಗಿಕೊಂಡನು.

ಸೈನಿಕರು ನಕ್ಕರು. ಒಂದು ಕ್ಷಣದ ನಂತರ ಅಂಥದೇ ನಿರೂಪದೊಡನೆ ಸಹಾಯಾಧಿಕಾರಿ ಆಗಮಿಸಿದನು.

ಬಂದವನು ರಾಜಕುಮಾರ ಆಂಡ್ರೂ. ತೂಷಿನ್ನನ ಫಿರಂಗಿಯೊಡ್ಡಿನ ಕಡೆಗೆ ಸವಾರಿಸಿದಾಗ, ಅವನ ಕಣ್ಣಿಗೆ ಮೊದಲು ಬಿದ್ದದ್ದು ಗಾಡಿಗೆ ಹೂಡಿದ ಕುದುರೆಗಳ ಬಳಿ ಕರುಣಾಜನಕವಾಗಿ ಆಕ್ರಂದಿಸುತ್ತ ಬಿದ್ದಿದ್ದ, ಮುರಿದ ಕಾಲಿನ, ಸಜ್ಜುಗೊಳ್ಳದ ಕುದುರೆ. ಅದರ ಕಾಲಿನಿಂದ ಕಾರಂಜಿಯಂತೆ ರಕ್ತ ಚಿಮ್ಮುತ್ತಿತ್ತು. ಕಳಚು ಬಂಡಿಗಳ ನಡುವೆ ಹಲವು ಹೆಣಗಳು ಬಿದ್ದಿದ್ದುವು. ಗುಂಡಿನ ಮೇಲೆ ಗುಂಡು ಹಾರಾಡುತ್ತಿದ್ದುವು. ಬೆನ್ನು ನರದಲ್ಲಿ ನಡುಕ ಹರಿದಂತೆ ಅವನಿಗನುಭವವಾಯಿತು. ಭಯದ ಭಾವನೆಯೇ ಅವನನ್ನು ಮತ್ತೆ ಜಾಗೃತಗೊಳಿಸಿತು. 'ಭಯಸಲ್ಲದು' ಎಂದಂದುಕೊಂಡು ಅವನು ಫಿರಂಗಿಗಳ ನಡುವೆ ನಿಧಾನವಾಗಿ ಇಳಿದನು. ಸರ್ವರಿಗೂ ಆಜ್ಞೆ ಮುಟ್ಟಿಸಿದನು. ಆದರೆ ಫಿರಂಗಿಯೊಡ್ಡಿನಿಂದ ಜಾರಲಿಲ್ಲ. ಫಿರಂಗಿಗಳ ಸ್ಥಳಾಂತರ ತನ್ನ ಸಮ್ಮುಖದಲ್ಲಿಯೇ ಸಾಗಬೇಕೆಂದವನು ನಿಶ್ಚಯಿಸಿಕೊಂಡನು. ಶವಗಳನ್ನು ತುಳಿದುಕೊಂಡು ಶತ್ರುವಿನ ಅಗ್ನಿವರ್ಷದ ನಡುವೆಯೇ, ತೂಷಿನ್ನನ ನೆರವಿನಿಂದ ಫಿರಂಗಿಗಳ ಸಾಗಾಣಿಕೆಯನ್ನು ಪೂರೈಸಿದನು.

'ಒಂದು ನಿಮಿಷದ ಹಿಂದೆ ಸಿಬ್ಬಂದಿಯಧಿಕಾರಿಯೊಬ್ಬ ಇಲ್ಲಿದ್ದು ನುಸುಳಿಕೊಂಡು ಓಡಿಹೋದ' ಎಂದು ಯೋಧನೊಬ್ಬ ರಾಜಕುಮಾರ ಆಂಡ್ರೂವಿನೊಡನೆ ನುಡಿದನು. 'ಅವನು ತಮ್ಮಂತಲ್ಲ.'

ಆಂಡ್ರೂ ತೂಷಿನ್ನನೊಡನೆ ಮಾತಾಡಲಿಲ್ಲ. ಕೆಲಸದ ಒತ್ತಡದಲ್ಲಿ ಅವರು ಪರಸ್ಪರ ಗಮನಿಸಿದಂತೆ ಕಾಣಲಿಲ್ಲ. ನಾಲ್ಕರಲ್ಲಿ ಅಳಿದುಳಿದ ಎರಡು ಫಿರಂಗಿ ಬಂಡಿಗಳನ್ನು ಕಳಚು ಗಾಡಿಗಳಿಗೆ ಸೇರಿಸಿ, ಕೆಳಬೆಟ್ಟದ ಕಡೆಗೆ ದಾರಿ ತೋರಿಸಿ, ಆಂಡ್ರೂ ತೂಷಿನ್ನನ ಬಳಿಗೆ ಸವಾರಿಸಿದನು. ಅವನ ಕೈ ಹಿಡಿದಲುಗಿಸುತ್ತ 'ನಾವು ಮತ್ತೆ ಸೇರುವತನಕ....' ಎಂದು ಆಂಡ್ರೂ ನುಡಿದನು.

'ನಮಸ್ಕಾರ, ಪ್ರಿಯಮಿತ್ರ. ಪ್ರಿಯ ಆತ್ಮನೆ, ನಿನಗಿದೊ ನಮಸ್ಕಾರ' ಎಂದು ಹೇಳುತ್ತಿದ್ದಂತೆ ತೂಷಿನ್ನನ ನೇತ್ರಗಳು ಬಾಷ್ಪ ಪೂರ್ಣವಾದುವು. ಆ ಬಾಷ್ಪದ ಕಾರಣ ಮಾತ್ರ ಅಜ್ಞಾತವಾಗಿತ್ತು.

ಅಧ್ಯಾಯ ೨೧

ಗಾಳಿ ನಿಂತಿತ್ತು. ಮದ್ದಿನ ಹೊಗೆಯಲ್ಲಿ ವಿಲಯನಗೊಂಡ ಕೃಷ್ಣಮೇಘಗಳು ರಣರಂಗಕ್ಕೆ ನೇರವಾಗಿ ದಿಗಂತದಲ್ಲಿ ತೂಗಾಡುತ್ತಿದ್ದುವು. ಅಂಧಕಾರ ಕವಿಯುತ್ತಿತ್ತು. ದಳ್ಳುರಿಗಳ ಜ್ವಾಲೆ ಹೆಚ್ಚುಹೆಚ್ಚು ಪ್ರಕಾಶವಾಗುತ್ತಿತ್ತು. ಗುಂಡಿನ ಮಳೆ ನಿಂತಿದ್ದರೂ, ಬಂದೂಕದ ರಟಚಟತ್ಕಾರ ಹಿಂದುಗಡೆ ಮತ್ತು ಬಲಗಡೆ ಎಡೆಬಿಡದೆ ಕಿವಿಯ ಮೇಲೆ ಬೀಳುತ್ತಿತ್ತು. ತೂಷಿನ್ ತನ್ನ ದಳದೊಡನೆ ಎಲ್ಲಿಯೂ ನಿಲ್ಲದೆ ಮುಂದುವರಿದು, ಶತ್ರು ಪಕ್ಷದ ಅಗ್ನಿವಲಯವನ್ನು ದಾಟಿ, ಕಂದರದಲ್ಲಿಳಿದ ಕೂಡಲೇ ಸಿಬ್ಬಂದಿಯ ಕೆಲವು ಜನ ದಾರಿಯಲ್ಲಿ ಅಡ್ಡವಾದರು. ಅವರಲ್ಲಿ ಸಿಬ್ಬಂದಿಯಧಿಕಾರಿ ಮತ್ತು ಝುರ್ಕೋವ್ ಸೇರಿದ್ದರು. ತೂಷಿನ್ನನ ಫಿರಂಗಿಯೊಡ್ಡಿನ ಕಡೆಗೆ ಅವರಿಬ್ಬರನ್ನು ಎರಡು ಸಾರಿ ಅಟ್ಟಲಾಗಿತ್ತು. ಆದರೆ ಅವರದನ್ನು ಮುಟ್ಟಲಾಗಲಿಲ್ಲ. ಅವರೆಲ್ಲರೂ ನಡುನಡುವೆ ಬಾಯಿಹಾಕುತ್ತ, ಅವನನ್ನು ದೂರುತ್ತ ಆಕ್ಷೇಪಿಸುತ್ತ, ಹೇಗೆ ಮುನ್ನಡೆಯಬೇಕೆಂಬುದರ ಬಗ್ಗೆ ಮೇಲಿನವರ ಆಜ್ಞೆಯನ್ನು ಅವನ ಗಮನಕ್ಕೆ ತರುತ್ತಿದ್ದರು; ಅಷ್ಟೇ ಅಲ್ಲ, ತಾವೂ ಹುಕುಮಿಸುತ್ತಿದ್ದರು. ತೂಷಿನ್ ಮೌನವಾಗಿ ದಳದ ಹಿಂದೆ ತನ್ನ ತಟ್ಟಿನಮೇಲೆ ಸವಾರಿಸುತ್ತಿದ್ದನು. ಮಾತಾಡುವುದೆಂದರೆ ಅವನಿಗೆ ಭಯ; ಏಕೆಂದರೆ ಒಂದೊಂದು ಮಾತಿನೊಡನೆಯೂ ಕಣ್ಣೀರು ಬರುವಂತಾಗುತ್ತಿತ್ತು. ಗಾಯಾಳುಗಳನ್ನು ತೊರೆಯಬೇಕೆಂಬ ನಿರೂಪವಿದ್ದರೂ, ಅವರಲ್ಲಿ ಹಲವರು ದಳಗಳ ಹಿಂದೆ ಪ್ರಯಾಸದಿಂದ ಕಾಲೆಳೆದುಕೊಂಡು ದೇಕುತ್ತಿದ್ದರು; ಫಿರಂಗಿ ಗಾಡಿಗಳಲ್ಲಿ ಜಾಗಕ್ಕೆಂದು ಬಾಯ್ ಬಾಯ್ಬಿಡುತ್ತಿದ್ದರು. ಯುದ್ಧಕ್ಕೆ ಮುಂಚೆ ತೂಷಿನ್ನನ ತಡಿಕೆಮನೆಯಿಂದ ಓಡಿ ಹೋಗಿದ್ದ ಪದಾತಿದಳದ ಖುಷಿಪ್ರವೃತ್ತಿಯ ಅಧಿಕಾರಿಯನ್ನು ಮತ್ವೇವ್ನಾ ವಾಹನದಲ್ಲಿ ಮಲಗಿಸಲಾಗಿತ್ತು. ಅವನ ಹೊಟ್ಟೆಯಲ್ಲೊಂದು ಗುಂಡು ಹೊಕ್ಕಿತ್ತು. ಮುಖ ಬಿಳಿಚಿಕೊಂಡಿದ್ದ ಅಶ್ವಾರೋಹಿ ಸೈನಿಕ ವಿದ್ಯಾರ್ಥಿಯೊಬ್ಬ ಒಂದು ಕೈಗೆ ಮತ್ತೊಂದುಕೈಯನ್ನು ಊರೆಕೊಟ್ಟುಕೊಂಡು, ಬೆಟ್ಟದ ಬುಡದಲ್ಲಿ ತೂಷಿನ್ನನ ಬಳಿಗೆ ಹೋಗಿ, ತನಗೊಂದು ಸ್ಥಳಬೇಕೆಂದು ಯಾಚಿಸಿದನು.

'ಕಪ್ತಾನನೆ, ದಮ್ಮಯ್ಯ ಅಂತೀನಿ! ನನ್ನ ತೋಳು ಮುರಿದಿದೆ....ದಮ್ಮಯ್ಯ.... ನಾನು ನಡೆಯಲಾರೆ....ನಿಮ್ಮ ದಮ್ಮಯ್ಯ' ಎಂದವನು ಥರಥರಗುಟ್ಟುತ್ತ ದಮ್ಮಯ್ಯ ಗುಡ್ಡೆ ಹಾಕಿದನು. ಅವನಾಗಲೇ ಅನೇಕಸಾರಿ ಬಿದ್ದು ಬೇಡಿಕೊಂಡಿದ್ದ. ಮತ್ತೆ ಕರುಣಾಜನಕ ಧ್ವನಿಯಲ್ಲಿ 'ಅವರಿಗೆ ಹೇಳಿ, ನನಗೊಂದು ಜಾಗಮಾಡಿಕೊಡಿ ಅಂತ, ನಿಮ್ಮ ಕಾಲಿಗೆ ಬೀಳ್ತೇನಿ!' ಎಂದು ಗೋಳಾಡಿದನು.

'ಅವನಿಗೊಂದು ಜಾಗಮಾಡಿಕೊಡಯ್ಯ, ಹುಡುಗ. ಅವನು ಕುಳಿತುಕೊಳ್ಳಲಿ, ಒಂದು ಬಟ್ಟೆಹಾಸು' ಎಂದು ತೂಷಿನ್ ತನ್ನ ಮೆಚ್ಚಿನ ಯೋಧನಿಗೆ ತಾಕೀತುಮಾಡಿದನು. 'ಗಾಯಗೊಂಡ ಅಧಿಕಾರಿ ಎಲ್ಲಿ?'

'ಅವರು ಅಸು ನೀಗಿದರು' ಎಂದೊಬ್ಬ ಉತ್ತರಿಸಿದ.

'ಅವನ ಕೈಹಿಡಿದೆತ್ತು. ಕುಳಿತುಕೊ, ಮಿತ್ರ. ಕುಳಿತುಕೋ. ಬಟ್ಟೆ ಹಾಸು, ಆಂಟೊನೋವ್!'

ರೊಸ್ತೋವನೇ ಆ ಸೈನಿಕ ವಿದ್ಯಾರ್ಥಿ. ಅವನ ದವಡೆ ಕಂಪಿಸುತ್ತಿತ್ತು. ಜ್ವರ ಬಂದಂತೆ ದೇಹ ನಡುಗುತ್ತಿತ್ತು. ಅವನನ್ನು ಮತ್ತೀವ್ನಾದಲ್ಲಿರಿಸಿದರು. ಅದರಲ್ಲಿದ್ದ ಅಧಿಕಾರಿಯ ಶವವನ್ನು ಸ್ವಲ್ಪ ಹೊತ್ತಿಗೆ ಮುಂಚೆ ತೆಗೆದು ಬಿಸಾಡಿದ್ದರು. ಸೈನಿಕ ವಿದ್ಯಾರ್ಥಿಯು ಕೆಳಗೆ ಹಾಸಿದ್ದ ಬಟ್ಟೆ ರಕ್ತಸಿಕ್ತವಾಗಿತ್ತು. ಅದರಿಂದಾಗಿ ಅವನ ತೋಳು ಷರಾಯಿಗಳಿಗೆ ರಕ್ತದ ಕಲೆ ಅಂಟಿಕೊಂಡುವು.

'ಮಗು, ನಿನಗೆ ತುಂಬ ಗಾಯವಾಗಿದೆಯೆ?' ಎಂದು ತೂಷಿನ್ ರೊಸ್ತೋವ್ ಕುಳಿತಿದ್ದ ಗಾಡಿಯ ಬಳಿ ಬಂದನು.

'ಇಲ್ಲ. ಉಳುಕಿದೆ.'

'ಹಾಗಾದರೆ ಗಾಡಿಯಲ್ಲಿ ಚೆಲ್ಲಿರುವ ರಕ್ತ ಎಲ್ಲಿಂದ ಬಂತು?' ಎಂದು ತೂಷಿನ್ ವಿಚಾರಿಸಿದ.

'ಅದು ಅಧಿಕಾರಿಯ ರಕ್ತ, ಬುದ್ಧಿ' ಎಂದು ಯೋಧ ಉತ್ತರಿಸಿ, ಕ್ಷಮೆ ಯಾಚಿಸುವವನಂತೆ ತನ್ನ ಕೋಟಿನ ತೋಳಿಂದ ರಕ್ತವನ್ನೊರಸಿದನು.

ಕಾಲ್ಬಲದ ನೆರವಿನೊಡನೆ ಫಿರಂಗಿಗಾಡಿಗಳನ್ನು ಠಿಟ್ಟೆನತನಕ ಸಾಗಿಸಲಾಯಿತು. ಗ್ರುಂಟರ್ಸ್ ಡಾರ್ಫ್‌ಗ್ರಾಮದ ಬಳಿ ಸೈನ್ಯ ಬಿಡಾರಹೂಡಿತು. ಕತ್ತಲು ಎಷ್ಟು ದಟ್ಟವಾಗಿತ್ತೆಂದರೆ, ಹತ್ತು ಹೆಜ್ಜೆ ದೂರದಲ್ಲಿದ್ದ ಸೈನಿಕರ ಸಮವಸ್ತ್ರಗಳನ್ನು ಗುರುತಿಸುವುದು ಸಹ ಕಷ್ಟವಾಗಿತ್ತು. ಗುಂಡುಗಳ ಹಾರಾಟ ಕ್ಷೀಣವಾಗುತ್ತಿತ್ತು. ಇದ್ದಕ್ಕಿದ್ದಂತೆ, ಬಲಗಡೆ ತೀರ ಹತ್ತಿರದಲ್ಲಿ ಬೊಬ್ಬೆಯಬ್ಬರವೂ ಬಂದೂಕಗಳ ಆರ್ಭಟವೂ ಕೇಳಿಸಲಾರಂಭಿಸಿದುವು. ಗುಲಿಕಾಪ್ರಕ್ಷೇಪದಿಂದ ಸಂಭವಿಸಿದ ಮಿಂಚು ಕತ್ತಲೆಯನ್ನು ಸೀಳಿತು. ಇದು ಫ್ರೆಂಚರ ಕೊನೆಯ ಧಾಳಿ. ಹಳ್ಳಿಯ ಮನೆಗಳಲ್ಲಿ ಆಶ್ರಯ ಪಡೆದಿದ್ದ ಸೈನಿಕರು ಆ ಧಾಳಿಯನ್ನೆದುರಿಸಿದರು. ತೂಷಿನ್ನನ ಫಿರಂಗಿಗಳು ಸ್ಥಗಿತಗೊಂಡಿದ್ದುವು. ಅವನು ಮತ್ತು ಅವನೊಡನಿದ್ದವರು ವಿಧಿಲಿಖಿತವನ್ನು ಪರೀಕ್ಷಿಸುತ್ತ, ಮೌನದೃಷ್ಟಿಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಕ್ರಮೇಣ ಗುಲಿಕಾ ಪ್ರಯೋಗ ಕ್ಷೀಣಗೊಂಡಿತು. ಸೈನಿಕರು ಮಾತಿನಲ್ಲಿ ಕಾತರತೆಯನ್ನು ವ್ಯಕ್ತಪಡಿಸುತ್ತ, ಪಕ್ಕದಗಲ್ಲಿಯಿಂದ ಹೊರಬಿದ್ದರು.

'ಗಾಯಗೊಳ್ಳಲಿಲ್ಲವೆ, ಪೆತ್ರೋವ್?' ಎಂದೊಬ್ಬ ಪ್ರಶ್ನಿಸಿದನು.

'ಅವರಿಗೆ ಬಿಸಿ ತೋರಿಸಿದ್ದೇವೆ, ಗೆಳೆಯ! ಅವರು ಸದ್ಯದಲ್ಲಿ ಮೇಲೆ ಬೀಳಲಾರರು' ಎಂದು ಮತ್ತೊಬ್ಬ ನುಡಿದನು.

'ಒಂದು ಸಂಗತಿ ನಿನ್ನ ಕಣ್ಣಿಗೆ ಬೀಳಲಿಲ್ಲವೆಂದು ತೋರುತ್ತದೆ. ತಮ್ಮ ಜನರ ಕಡೆಗೆ ಅವರು ಗುಂಡುಹಾರಿಸಿದರು. ಯಾವುದೂ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ಗಾಢಾಂಧಕಾರ, ತಮ್ಮ. ಕುಡಿಯಲಿಕ್ಕೇನೂ ಇಲ್ಲವೆ?'

ಆ ಕಗ್ಗತ್ತಲಲ್ಲಿ ತೂಷಿನ್ನನ ಫಿರಂಗಿ ಬಂಡಿ ಮುಂದೆ ಸಾಗಿತು. ಮೊರೆಯುತ್ತಿದ್ದ ಕಾಲ್ಬಲ ಅವನನ್ನು ಸುತ್ತುಗಟ್ಟಿತ್ತು. ಮಾತು ಮತ್ತು ಗೊರಸುಗಾಲಿಗಳ ಮೊರೆತದಿಂದ ಕೂಡಿದ, ಮುಂಕುಮುಂಕಾದ ಅಗೋಚರವಾಹಿನಿಯೊಂದು ಸದಾ ಏಕಮುಖವಾಗಿ

ಪ್ರವಹಿಸುತ್ತಿದ್ದಂತೆ ಕಾಣುತ್ತಿತ್ತು. ಇತರ ಸದ್ದುಗಳಿಗಿಂತ ಗಾಯಾಳುಗಳ ನರಳು ನೋವುಗಳ ಗೋಳ್ದನಿ ಆ ಇರುಳುಗತ್ತಲಲ್ಲಿ ಭೀಕರವಾಗಿ ಕೇಳಿಸುತ್ತಿತ್ತು. ಇಡೀ ಸೈನ್ಯವನ್ನಾಚ್ಛಾದಿಸಿದ್ದ ವಿಷಾದದಲ್ಲಿ ಗೋಳ್ದನಿ ಕರಗಿ ಹೋದಂತಿತ್ತು. ವಿಷಾದ ವಿಭಾವರಿಯಲ್ಲಿ ವಿಲಯನಗೊಂಡು ಅಂಧಕಾರ ಹೆಪ್ಪುಗಟ್ಟಿದಂತಿತ್ತು. ತುಸು ಹೊತ್ತಿನನಂತರ ಚಲನ ಶೀಲವಾದ ಮುದ್ದೆ ಕ್ಷುಬ್ಧಗೊಂಡಂತಾಯಿತು. ಒಬ್ಬಾನೊಬ್ಬ ವ್ಯಕ್ತಿ ತನ್ನ ಪರಿವಾರದೊಡನೆ ಬಿಳಿಯ ಕುದುರೆಯ ಮೇಲೆ ಸವಾರಿಸುತ್ತಿದ್ದನು. ಏನನ್ನೊ ಸೊಲ್ಲಿಸಿದನು. 'ಅವನೇನು ಹೇಳಿದ? ಈಗೆಲ್ಲಿಗೆ? ತಂಗಣೆಗಾಗಿಯೆ? ಅವನು ನಮಗೆ ಕೃತಜ್ಞತೆ ತಿಳಿಸಿದನೆ?' ಎಂಬ ಕುತೂಹಲದ ಪ್ರಶ್ನೆಗಳು ಒಮ್ಮೆಗೇ ಎಲ್ಲ ಕಡೆಗಳಿಂದ ತೂರಿ ಬಂದುವು. ನಿಕಟಸ್ಥವಾಗುವ ಸಲುವಾಗಿ ಇಡೀ ಸೈನ್ಯ ಮುನ್ನುಗ್ಗಿದಾಗ ಒತ್ತಡ ಅಧಿಕವಾಯಿತು. ಸೈನ್ಯದ ನಿಲುಗಡೆಗೆ ಆಜ್ಞೆಯಾಗಿದೆಯೆಂಬ ಸುದ್ದಿ ಹಬ್ಬಿತು. ಅಗ್ರಭಾಗದ ಸೈನಿಕರಂತು ನಿಂತುಬಿಟ್ಟರು. ಎಲ್ಲರೂ ಕೆಸರಿಡಿದ ರಸ್ತೆಯ ಮಧ್ಯದಲ್ಲಿ ಎಲ್ಲೆಂದರಲ್ಲಿ ಸುಸ್ಥಿತರಾದರು.

ಬೆಂಕಿ ಪುಟಗೊಂಡಿತು; ಮಾತು ಜೋರಾಯಿತು. ಸೈನಿಕ ವಿದ್ಯಾರ್ಥಿಯ ಇಲಾಜಿಗಾಗಿ ಔಷಧಿಶಾಲೆಯನ್ನೋ ವೈದ್ಯನನ್ನೋ ತಲಾಶುಮಾಡಿಕೊಂಡು ಬರುವಂತೆ ತೂಷಿನ್ ಸೈನಿಕನೊಬ್ಬನನ್ನು ಕಳಿಸಿ, ಶಿಬಿರಾಗ್ನಿಯ ಬಳಿ ಕುಳಿತನು. ರೊಸ್ತೋವ್ ಸಹ ಬೆಂಕಿಯ ಬಳಿಗೆ ತೆವಳಿಕೊಂಡು ಬಂದನು. ನೋವು ನೆಗಡಿ ಶೀತಗಳಿಂದಾಗಿ ಭಯಂಕರ ಚಳಿ ಅವನ ಇಡೀ ದೇಹವನ್ನು ನಡುಗಿಸಿತ್ತು. ಅದಮ್ಯ ಸ್ವರೂಪದ ನಿದ್ರಾಲಸ್ಯ ಅವನನ್ನು ಬಿಗಿಹಿಡಿದಿತ್ತು. ಆದರೆ ಅತಿ ತೀಕ್ಷ್ಣವಾದ ತೋಳಿನ ವೇದನೆ ಕಣ್ಣನ್ನು ಮುಚ್ಚಗೊಡುತ್ತಿರಲಿಲ್ಲ. ಅದನ್ನು ಹೇಗಿಟ್ಟುಕೊಂಡರೂ ನೋವು ಶಮನವಾಗುತ್ತಿರಲಿಲ್ಲ. ಅರೆಕ್ಷಣ ಕಣ್ಣು ಮುಚ್ಚಿದರೆ ಹಲವು ಕ್ಷಣ ಬೆಂಕಿಯನ್ನೆ ನೋಡುತ್ತಿದ್ದನು. ಕೆಲವೊಮ್ಮೆ ತನ್ನ ಬಳಿ ತುರುಕನಂತೆ ಕತ್ತರಿಗಾಲಾಗಿ ಕುಳಿತಿದ್ದ ದುಂಡುದೋಳಿನ ದುರ್ಬಲಗಾತ್ರದ ತೂಷಿನ್ನನ ಕಡೆಗೆ ಕಣ್ಣಾಡಿಸುತ್ತಿದ್ದನು. ಸಹಾನುಭೂತಿ ಕರುಣೆಗಳು ಮಡುಗೊಂಡಿದ್ದ ತೂಷಿನ್ನನ ವಿಶಾಲ ನೇತ್ರಗಳು ಅವನಲ್ಲಿಯೇ ನಾಟಿದ್ದುವು. ಅವನಿಗೆ ತೂಷಿನ್ನನ ಇಂಗಿತ ಅರ್ಥವಾಗಿತ್ತು. ಅವನಿಗೆ ಸಹಾಯ ಮಾಡಲು ತೂಷಿನ್ ಕಾತರನಾಗಿದ್ದರೂ, ಸಾಧ್ಯವಾಗಿರಲಿಲ್ಲ.

ಎಲ್ಲ ಕಡೆಗಳಿಂದಲೂ ಹೆಜ್ಜೆ ಹಾಗೂ ಮಾತುಕತೆಗಳು ಕೇಳಿಸುತ್ತಿದ್ದವು. ಕಾಲ್ಬಲ ಬಿಡಾರ ಹೂಡಲು ಸಜ್ಜುಗೊಳ್ಳುತ್ತಿತ್ತು. ಕೆಸರಿನಲ್ಲಿ ಚಲಿಸುತ್ತಿದ್ದ ಕುದುರೆಯ ಗೊರಸು ದನಿ, ಉರಿಯುತ್ತಿದ್ದ ಸೌದೆಯ ಚಟಪಟ ಧ್ವನಿ ಮತ್ತು ಮನುಷ್ಯರ ಸದ್ದುಗಳೆಲ್ಲ ಒಂದಾಗಿ ಕರಗಿ ಏಕಮಾತ್ರ ನಿಸ್ವನವಾಗಿ ತೋರುತ್ತಿತ್ತು. ಹಿಂದಿನ ವಾಹಿನಿ ಉಕ್ಕುತ್ತಿದ್ದ ಕಪ್ಪು ಕಡಲಾಗಿ ಪರಿವರ್ತನೆಗೊಂಡಿತು. ಕೊನೆಗದು ಜಂಝಾವಾತ ನಿಂತಮೇಲಿನ ಶಾಂತ ಸಮುದ್ರದಂತಾಯಿತು. ರೊಸ್ತೋವ್ ಸುತ್ತಮುತ್ತ ನಡೆಯುತ್ತಿದ್ದುದೆಲ್ಲವನ್ನು ನಿರುತ್ಸಾಹದಿಂದ ನೋಡುತ್ತಿದ್ದನು. ಪದಾತಿಯೊಬ್ಬ ಬೆಂಕಿಯ ಬಳಿ ಬಂದು, ಹಿಮ್ಮಡಿಯ ಮೇಲೆ ಕುಳಿತುಕೊಂಡು, ಉರಿಗೆ ತನ್ನ ಕೈಯೊಡ್ಡಿ, ಮುಖವನ್ನು ಮತ್ತೊಂದು ಕಡೆಗೆ ತಿರುಗಿಸಿಕೊಂಡನು.

ಅವನು ತೂಷಿನ್ನನನ್ನು ಕುರಿತು 'ನನ್ನ ತುಕಡಿಯೆಲ್ಲ ಹಾಳಾಗಿದೆ, ಮಹಾಸ್ವಾಮಿ. ಎಲ್ಲೆಂಬುದು ಗೊತ್ತಿಲ್ಲ....ದುರದೃಷ್ಟ. ಇದರಿಂದ ನಿಮಗೆ ಬೇಸರವಾಗದಿದ್ದರೆ ಸಾಕು, ಸ್ವಾಮಿ' ಎಂದು ದೈನ್ಯದಿಂದ ನುಡಿದನು.

ಅಷ್ಟರಲ್ಲಿ ಕೆನ್ನೆಗೆ ಪಟ್ಟಿಯಂಟಿಸಿಕೊಂಡಿದ್ದ ಪದಾತಿದಳದ ಅಧಿಕಾರಿಯೊಬ್ಬ ಬೆಂಕಿಯ ಬಳಿಗೆ ಬಂದು, ತನ್ನ ಸಾಮಾನು ಗಾಡಿ ಹೋಗಲು ಜಾಗವಾಗುವಂತೆ ಫಿರಂಗಿ ಬಂಡಿಯನ್ನು ತುಸು ಪಕ್ಕಕ್ಕೆ ಸರಿಸಬೇಕೆಂದು ತೂಷಿನ್ನನನ್ನು ಕೇಳಿಕೊಂಡನು. ಅವನು ಮುಂದೆ ಸರಿದ ನಂತರ ಸೈನಿಕರಿಬ್ಬರು ಶಿಬಿರಾಗ್ನಿಯೆಡೆಗೆ ನುಗ್ಗಿದರು. ತಾನು ಬಿಗಿಯಾಗಿ ಹಿಡಿದುಕೊಂಡಿದ್ದ ಬೂಟೊಂದನ್ನು ಕಿತ್ತುಕೊಳ್ಳುವ ಪ್ರಯತ್ನದಲ್ಲಿ ಅವರಿಬ್ಬರೂ ಹತಾಶೆಯಿಂದ ಕೈಕೈ ಮಿಲಾಯಿಸುತ್ತಿದ್ದರು.

'ಅದು ನಿನಗೆ ಸಿಕ್ಕಿದ್ದೇನು ?....ಖಂಡಿತ ಇಲ್ಲ ! ನೀನು ಬಹಳ ಕಿಲಾಡಿ !' ಎಂದು ಅವರಲ್ಲೊಬ್ಬ ಒರಟೊರಟಾಗಿ ಕೂಗುತ್ತಿದ್ದನು.

ಅನಂತರ ರಕ್ತಸಿಕ್ತ ಪಟ್ಟಿಯನ್ನು ಕೊರಳಿಗಂಟಿಸಿಕೊಂಡಿದ್ದ ತೆಳ್ಳನೆಯ ಬಿಳಿಚು ಮೋರೆಯ ಯೋಧನೊಬ್ಬ ಅಲ್ಲಿಗೆ ಬಂದು ನೀರು ಬೇಕೆಂದು ಗೋಲಂದಾಜ ಸೈನಿಕರ ಮೇಲೆ ಕೆರಳಿದನು. 'ಮನುಷ್ಯ ಶುನಕನಂತೆ ಸಾಯಬೇಕೇನು ?' ಎಂದವನು ಪ್ರಶ್ನಿಸಿದನು.

ಅವನಿಗೆ ನೀರು ಕೊಡುವಂತೆ ತೂಷಿನ್ ಸೈನಿಕರಿಗೆ ಸನ್ನೆ ಮಾಡಿದನು. ಅನಂತರ ಮತ್ತೊಬ್ಬ ಯೋಧ ಉಲ್ಲಾಸದಿಂದ ಓಡಿ ಬಂದು, ಪದಾತಿದಳಕ್ಕೆ ಬೆಂಕಿಬೇಕೆಂದು ಕೇಳಿಕೊಂಡನು.

'ಪದಾತಿ ದಳಕ್ಕೆ ಸಣ್ಣದೊಂದಿಯೊಂದು ಸಾಕು ! ಸೋದರ ಬಾಂಧವರೆ, ನಿಮಗೆ ಶುಭವಾಗಲಿ ! ಬೆಂಕಿಗಾಗಿ ನಿಮಗೆ ಧನ್ಯವಾದಗಳು ! ಅದನ್ನು ಬಡ್ಡಿ ಸಹಿತ ಹಿಂದಿರುಗಿಸುತ್ತೇವೆ' ಎಂದವನು ಪ್ರಕಾಶಮಾನವಾದ ದೊಂದಿಯೊಂದನ್ನು ಕತ್ತಲ ಬಸಿರಿಗೊಯ್ಯುತ್ತ ನುಡಿದನು.

ಮುಂದೆ ನಾಲ್ವರು ಸೈನಿಕರು ಬಟ್ಟೆಯಲ್ಲಿ ಭಾರವಾದ ವಸ್ತುವೊಂದನ್ನು ಹೊತ್ತುಕೊಂಡು ಶಿಬಿರಾಗ್ನಿಯ ಮುಂದೆ ಹಾದುಹೋದರು. ಅವರಲ್ಲೊಬ್ಬ ಮುಗ್ಗುರಿಸಿದನು.

'ಯಾವನೋ ಪಿಶಾಚಿ ರಸ್ತೆಗಡ್ಡಲಾಗಿ ದಿಮ್ಮಿಗಳನ್ನಿರಿಸಿದ್ದಾನೆ' ಎಂದವನು ಗುರುಗುಟ್ಟಿದನು.

'ಅವನು ಸತ್ತುಹೋಗಿದ್ದಾನೆ. ಹೊತ್ತುಕೊಂಡು ಹೋಗುವುದೇಕೆ ?' ಎಂದು ಮತ್ತೊಬ್ಬ ಉದ್ಗರಿಸಿದನು.

'ಮುಚ್ಚು ಬಾಯ್.'

ಅವರು ತಮ್ಮ ಹೊರೆಯೊಡನೆ ಕತ್ತಲಲ್ಲಿ ಮರೆಯಾದರು.

'ಇನ್ನೂ ನೋಯುತ್ತಿದೆಯೆ ?' ಎಂದು ತೂಷಿನ್ ರೊಸ್ತೋವ್‌ನನ್ನು ಪಿಸುದನಿಯಲ್ಲಿ ಪ್ರಶ್ನಿಸಿದನು.

'ಹೌದು ?'

'ಮಹಾಸ್ವಾಮಿ, ಸೇನಾನಿಯಿಂದ ಅಪ್ಪಣೆಯಾಗಿದೆ. ನೀವವರನ್ನು ನೋಡ

ಬೇಕಂತೆ. ಅವರು ಪಕ್ಕದ ಕುಟೀಯಲ್ಲಿದ್ದಾರೆ' ಎಂದು ಬಂದೂಕುಧಾರಿಯೊಬ್ಬ ತೂಷಿನ್ನನ ಬಳಿ ಬಂದು ನಿವೇದಿಸಿಕೊಂಡನು.

'ಇಗೋ ಬಂದೆ, ಮಿತ್ರ.'

ತೂಷಿನ್ ಮೇಲೆದ್ದು, ನಿಲವಂಗಿಯ ಗುಂಡಿ ಹಾಕಿಕೊಂಡು, ಅದನ್ನೆಳೆದು ಸರಿಪಡಿಸಿಕೊಳ್ಳುತ್ತ, ಮುಂದೆ ಸಾಗಿದನು.

ರಾಜಕುಮಾರ ಬಗ್ರೇಷನಿಗಾಗಿ ಸಮೆದಿದ್ದ ಕುಟಿ ಗೋಲಂದಾಜ ದಳದ ಶಿಬಿರಾಗ್ನಿಯಿಂದ ದೂರವಿರಲಿಲ್ಲ. ಅವನು ಊಟ ಮಾಡುತ್ತ ಅಧಿಕಾರಿಗಳೊಡನೆ ಚರ್ಚೆ ನಡೆಸುತ್ತಿದ್ದನು. ಅರೆವಿವೆದೆರೆದ, ತೆಳುಮಯ್ಯ ಮುದುಕ ಅತ್ಯಾಶೆಯಿಂದ ಮೂಳೆ ಜಗಿಯುತ್ತಿದ್ದನು. ಭೋಜನ ಮತ್ತು ಮದ್ಯಗಳನ್ನು ಸವಿದ ಸೇನಾನಿ ಕಳೆಯೇರಿದ್ದನು. ಮೊಹರುಂಗುರದ ಸಿಬ್ಬಂದಿಯಧಿಕಾರಿ ಮತ್ತು ಝುರ್ಕೋವ್ ನಿರುತ್ಸಾಹದಿಂದ ಅಲ್ಲಿದ್ದವರನ್ನು ನೋಡುತ್ತಿದ್ದರು. ಕೆಂಡದಂತೆ ರಗರಗಿಸುತ್ತಿದ್ದ ಕಣ್ಣುಗಳ, ಬಿಳಿಚಿಕೊಂಡಿದ್ದ ಮೋರೆಯ ರಾಜಕುಮಾರ ಆಂಡ್ರೂ ತುಟಿಗಳನ್ನದುಮಿಕೊಂಡಿದ್ದನು.

ಕುಟಿಯ ಮೂಲೆಯೊಂದರಲ್ಲಿ ಫ್ರೆಂಚರಿಂದ ಕಸಿದು ತಂದಿದ್ದ ಧ್ವಜವೊಂದು ನಿಂತಿತ್ತು. ನಿಷ್ಕಪಟ ಮನೋಭಾವದ ಲೆಕ್ಕಿಗ ಅದರ ನೇಯ್ಗೆಯ ಮೇಲೆ ಕೈಯಾಡಿಸುತ್ತ, ಅದರಲ್ಲಿ ವಿಶೇಷಾಸಕ್ತಿಯಿತ್ತೆಂಬುದನ್ನು ತೋರಿಸಲೆಂಬಂತೆ ಆಗಾಗ್ಗೆ ತಲೆಯಲ್ಲಾಡಿಸುತ್ತಿದ್ದನು. ಅವನು ಹಸಿದಿದ್ದುದೂ ನಿಜ. ಆದರೆ ಊಟಕ್ಕೆ ಜಾಗವಿರಲಿಲ್ಲ. ಊಟಮಾಡುತ್ತಿದ್ದವರ ಕಡೆ ನೋಡಿದಾಗ ಮನಸ್ಸಿಗೆ ಮುಜುಗರವಾಗುತ್ತಿದ್ದುದೂ ನಿಜ. ನಮ್ಮ ರಾಹುತರು ಸೆರೆ ಹಿಡಿದಿದ್ದ ಫ್ರೆಂಚ್ ಕರ್ನಲ್ ಪಕ್ಕದ ಗುಡಿಸಿಲಲ್ಲಿದ್ದನು. ಅವನನ್ನು ನೋಡುವ ಸಲುವಾಗಿ ನಮ್ಮ ಅಧಿಕಾರಿಗಳು ಅಲ್ಲಿ ಮುತ್ತಿಕೊಂಡಿದ್ದರು. ರಾಜಕುಮಾರ ಬಗ್ರೇಷನ್ ಪ್ರತಿಯೊಬ್ಬ ನಾಯಕನನ್ನು ವಂದಿಸುತ್ತ, ಕಾರ್ಯಾಚರಣೆಯ ಹಾಗೂ ಸಾವುನೋವುಗಳ ವಿವರಗಳನ್ನು ವಿಚಾರಿಸುತ್ತಿದ್ದನು. ಬ್ರೌನೌನಲ್ಲಿ ತಾನು ಯಾವ ತುಕಡಿಯನ್ನು ಸಮಾಕ್ಷಿಸಿದ್ದನೋ ಆ ತುಕಡಿಯ ನಾಯಕನೇ ಮೊದಲು ವಿವರ ನೀಡಿದನು. ಕಾರ್ಯಾಚರಣೆ ಪ್ರಾರಂಭವಾದ ಕೂಡಲೇ ಸೌದೆ ಕಡಿಯುತ್ತಿದ್ದ ಸೈನಿಕರನ್ನು ತಾನು ಒಟ್ಟುಗೂಡಿಸಿದುದಾಗಿಯೂ, ಫ್ರೆಂಚ್ ಸೈನ್ಯ ಮುಂದೆ ಹಾದುಹೋದಾಗ ಹಿಂದಿನಿಂದ ಬಂದೂಕಧಾಳಿ ನಡಸಿ ಅವರನ್ನು ಚೆದುರಿಸಿದುದಾಗಿಯೂ ಅವನು ತಪಸೀಲು ನೀಡಿದನು: 'ಮಹಾಸ್ವಾಮಿ, ಅವರ ಮೊದಲ ತುಕಡಿ ಅವ್ಯವಸ್ಥಿತವಾಗಿದ್ದುದನ್ನು ಕಂಡಿದ್ದೆ. ರಸ್ತೆಯಲ್ಲಿ ನಿಂತೆ. ಯೋಚಿಸಿದೆ. ಅವರ ಮೇಲೆ ಸೈನ್ಯ ನುಗ್ಗಿಸಿದೆ.'

ಅವನು ಹೇಳಿದ್ದು ನಿಜವೋ ಸುಳ್ಳೋ ಗೊತ್ತಿಲ್ಲ. ಆ ಗೊಂದಲದಲ್ಲಿ ಏನು ನಡೆಯಿತು, ಏನು ನಡೆಯಲಿಲ್ಲವೆಂದು ಹೇಳುವುದು ಕಠಿನ. ತಾನು ವಿವರಿಸಿದ ರೀತಿಯಲ್ಲಿಯೇ ಕಾರ್ಯಾಚರಣೆ ನಡಸಬೇಕೆಂದು ನಾಯಕ ಯೋಚಿಸಿದ್ದ. ಆ ಯೋಚನೆ ಕಾರ್ಯಗತವಾಗಿರಬೇಕೆಂದು ಅವನು ನಂಬಿಕೊಂಡಿದ್ದ.

ಕುತುಜೋವ್‌ನೊಡನೆ ದೊಲಖೋವ್ ನಡಸಿದ ಸಂದರ್ಶನ ಸಂಭಾಷಣೆಗಳನ್ನು ನೆನೆಸಿಕೊಳ್ಳುತ್ತ 'ಮಹಾಸ್ವಾಮಿ, ಒಂದು ವಿಷಯ ಮರೆತಿದ್ದೆ. ಅದನ್ನು ನಿಮಗೆ ತಿಳಿಸಬೇಕಾಗಿದೆ' ಎಂದವನು ಮಾತು ಮುಂದುವರಿಸಿದನು. ದೊಲಖೋವ್‌ನ ದರ್ಜೆಯನ್ನು

ಕೆಳಗಿಳಿಸಲಾಯಿತು. ಅವನು ಫ್ರೆಂಚ್ ಅಧಿಕಾರಿಯನ್ನು ನನ್ನೆದುರಿಗೇ ಸೆರೆಹಿಡಿ
ಅಸ್ಪೃತ ಪೌರುಷವನ್ನು ಮೆರೆದ.'

'ನಾನಲ್ಲಿ ಪಾವ್ಲೊಗ್ರಾದ್ ಅಶ್ವದಳದ ಧಾಳಿ ನೋಡಿದೆ, ಪ್ರಭು' ಎಂ
ಝುರ್ಕೋವ್ ಆ ಈ ಕಡೆ ಕಳವಳದಿಂದ ನೋಡುತ್ತ ಮಾತು ಜೋಡಿಸಿದ
ಇಡೀ ದಿನವೆಲ್ಲ ಅವನು ರಾಹುತರನ್ನು ನೋಡಿರಲಿಲ್ಲ. ಆದರೆ ಪದಾತಿದಳದ ಅಧಿ
ಯಿಂದ ಅವುಗಳ ವಿಚಾರ ತಿಳಿದುಕೊಂಡಿದ್ದನು. 'ಅವರು ಚೆಲ್ಲಾಪಿಲ್ಲಿಯಾದ
ಪ್ರಭು.'

ಝುರ್ಕೋವನ ಮಾತುಗಳಲ್ಲಿ ನಾಟಕೀಯ ಹಾಸ್ಯವನ್ನು ನಿರೀಕ್ಷಿಸಿದ
ಮುಗುಳುನಗೆ ಬೀರಿದರು. ಅವನು ಹೇಳುತ್ತಿದ್ದುದೆಲ್ಲ ತಳಬುಡವಿಲ್ಲದ ಸುಳ್ಳೆಂಬ ವಿಷ
ಸರ್ವರಿಗೂ ವೇದ್ಯವಾಗಿತ್ತು. ಆದರೆ ಅವನ ಮಾತಿನಲ್ಲಿ ನಮ್ಮ ಸೈನ್ಯದ ಕೀರ್ತಿಯ
ಹೆಚ್ಚಿಸುವ ಪ್ರೇರಕ ದ್ರವ್ಯವಿದ್ದದ್ದರಿಂದ, ಜತೆಗೆ ಅಂದಿನ ಕಾರ್ಯಾಚರಣೆಗೆ ಸಂಬಂಧಿ
ಪ್ರಶಂಸೆಯಿದ್ದದ್ದರಿಂದ ಅವರು ಗಂಭೀರಭಾವದಿಂದ ಆಲಿಸುತ್ತಿದ್ದರು. ರಾಜಕುಮಾ
ಬಗ್ರೇಷನ್ ಹಿರಿಯ ಕರ್ನಲ್ ಕಡೆ ತಿರುಗಿ,

'ಸಜ್ಜನರೆ, ನಿಮಗೆ ನನ್ನ ಧನ್ಯವಾದಗಳು. ಸಕಲ ಸೈನಿಕರೂ ಸಾಹಸ ಪರಾಕ್ರ
ಗಳನ್ನು ಪ್ರಕಟಿಸಿದ್ದಾರೆ. ಕಾಲ್ಬಲ, ಅಶ್ವದಳ, ಫಿರಂಗಿಪಾಳಿ, ಎಲ್ಲ. ಹೀಗಿರುವ
ಮಧ್ಯದಲ್ಲಿ ಎರಡು ಫಿರಂಗಿಯೊಡ್ಡುಗಳನ್ನು ತೊರೆದದ್ದೇಕೆ?' ಎಂದು ಅನ್ವೇಷಕ ದ
ಯಿಂದ ಸುತ್ತಮುತ್ತ ನೋಡಿದನು. (ನಾನು ಪಾರ್ಶ್ವದ ಫಿರಂಗಿಯೊಡ್ಡುಗಳ
ಅವನು ಚಕಾರವೆತ್ತಿರಲಿಲ್ಲ. ಕಾರ್ಯಾಚರಣೆಯ ಪ್ರಾರಂಭದಲ್ಲಿಯೇ ಅವನ್ನೆಲ್ಲ ವಿಸರ್ಜಿ
ಲಾಗಿತ್ತೆಂಬ ಸಂಗತಿ ಅವನಿಗೆ ತಿಳಿದಿತ್ತು) 'ನಾನು ನಿಮ್ಮನ್ನು ಕಳಿಸಿದ್ದೆನಲ್ಲವೆ
ಎಂದವನು ಹಾಜರಿದ್ದ ಸಿಬ್ಬಂದಿಯಧಿಕಾರಿಯ ಕಡೆಗೆ ನೋಡಿದನು.

'ಒಂದಕ್ಕೆ ಜಖಂ ಆಗಿತ್ತು; ಮತ್ತೊಂದು ಏನಾಯಿತೋ ತಿಳಿಯದು.
ಸಮಯದಲ್ಲಿ ನಾನಲ್ಲಿಯೇ ಇದ್ದು ಸೂಚನೆ ನೀಡುತ್ತಿದ್ದೆ. ಅದೇತಾನೆ ಜಾಗ ಬಿಟ್ಟೆ
ನೋಡಿ ಅಲ್ಲಿ ಬಿಸಿಯೆಂದರೆ ಬಿಸಿ' ಎಂದು ಸಿಬ್ಬಂದಿಯಧಿಕಾರಿ ಉತ್ತರಿಸಿದನು.

ಕಪ್ತಾನ್ ತೂಶಿನ್ ಆ ಹಳ್ಳಿಯ ಬಳಿ ಸದಾ ರಣಾಗಾರದಲ್ಲಿದ್ದುದಾಗಿ ನಡ
ಯಾರೊ ಬಾಯಿ ಹಾಕಿದರು.

'ನೀವಲ್ಲಿದ್ದಿರಾ?' ಎಂದು ಬಗ್ರೇಷನ್ ರಾಜಕುಮಾರ ಆಂಡ್ರೂವಿನ ಕಡ
ತಿರುಗಿದನು.

'ನಿಜ, ನಿಜ. ಆದರೆ ಸ್ವಲ್ಪದರಲ್ಲಿ ನಮ್ಮ ಭೇಟಿ ತಪ್ಪಿಹೋಯಿತು' ಎಂ
ಸಿಬ್ಬಂದಿಯಧಿಕಾರಿ ಬಲ್ಕೊನ್ಸ್ಕಿಯ ಮುಖ ನೋಡಿ ನಕ್ಕನು.

'ನಿಮ್ಮನ್ನು ಸಂಧಿಸುವ ಭಾಗ್ಯ ನನಗೆ ಸಿಗಲಿಲ್ಲ' ಎಂದು ರಾಜಕುಮಾರ ಆಂಡ
ಕೂಡಲೇ ನೀರಸವಾಗಿ ಉತ್ತರಿಸಿದನು.

ಎಲ್ಲರೂ ಮೌನಶಿಲೆಯಾದರು. ತೂಶಿನ್ ಹೊಸ್ತಿಲಲ್ಲಿ ಕಾಣಿಸಿಕೊಂಡು, ಅಂ
ತ್ತಂಜುತ್ತ ಸೇನಾನಾಯಕರ ಬೆಂಗಡೆಯಲ್ಲಿ ಹೆಜ್ಜೆ ಬೆಳೆಸಿದನು. ಕಟಿ ಜನದಿಂದ ತು
ದಿತ್ತು. ಸೇನಾಧಿಕಾರಿಗಳನ್ನು ಕಾಣುವುದೇ ತಡ, ಅವನು ಗಾಬರಿಗೊಳ್ಳುತ್ತಿದ್ದ

'ನಿಮಗೆ ಧನ್ಯವಾದಗಳು, ಮಿತ್ರರೆ. ನನ್ನನ್ನುಳಿಸಿದಿರಿ' ಎಂದು ತೂಷಿನ್ ನುಡಿದನು.

ರಾಜಕುಮಾರ ಆಂಡ್ರ್ಯೂ ಅವನ ಕಡೆಗೆ ದಿಟ್ಟಿ ಹಾಯಿಸಿದನೇ ಹೊರತು, ಮಾತಾಡಲಿಲ್ಲ. ಅವನ ಹೆಜ್ಜೆ ಮುಂದೆ ಬೆಳೆದುವು. ವ್ಯಾಕುಲ ನಿರಾಶೆಗಳು ಅವನ ಚಿತ್ತವನ್ನಾಕ್ರಮಿಸಿಕೊಂಡುವು. ಪರಿಸ್ಥಿತಿ ಅವನ ನಿರೀಕ್ಷೆಗಿಂತ ಭಿನ್ನವಾಗಿತ್ತು ವಿಚಿತ್ರ ವಾಗಿತ್ತು.

*　　*　　*　　*

'ಯಾರವರು ? ಏಕಿಲ್ಲಿದ್ದಾರೆ ? ಅವರಿಗೇನು ಬೇಕಾಗಿದೆ ? ಇದಕ್ಕೆಲ್ಲ ಕೊನೆ ಯೆಂದು ?' ಎಂದು ರೊಸ್ತೋವ್ ತನ್ನ ಮುಂದೆ ಸುಳಿದಾಡುತ್ತಿದ್ದ ನೆರಳುಗಳನ್ನು ನೋಡುತ್ತ, ಒಳಗೊಳಗೆ ಗುಣಿಸಿಕೊಳ್ಳುತ್ತಿದ್ದನು. ತೋಳಿನ ನೋವು ಕ್ರಮಕ್ರಮೇಣ ಉಲ್ಬಣಿಸುತ್ತಿತ್ತು. ಅವನು ನಿದ್ರಾಲಸ್ಯದ ಪ್ರಭಾವಕ್ಕೊಳಗಾದನು ; ಕೆಂಪು ತೆರೆಗಳು ಅವನ ಕಣ್ಣಮುಂದೆ ನರ್ತಿಸಿದುವು. ಆ ಧ್ವನಿಗಳ ಮತ್ತು ಮುಖಗಳ ಪ್ರಭಾವವೂ ಒಂಟಿತನದ ಭಾವನೆಯೂ ಅವನ ದೈಹಿಕ ಬಾಧೆಯಲ್ಲಿ ಕರಗಿಹೋಗಿತ್ತು. ಇವರೇ, ಈ ಕ್ಷತಾಕ್ಷತ ಸೈನಿಕರೇ ತನ್ನನ್ನು ತುಳಿದು ಬಜ್ಜಿಮಾಡುತ್ತಿದ್ದುದಾಗಿ, ತನ್ನ ಸ್ನಾಯುಗಳನ್ನು ತಿರುಚುತ್ತಿದ್ದುದಾಗಿ ಮತ್ತು ಉಳುಕಿದ ತೋಳು ಭುಜಗಳ ಮಾಂಸವನ್ನು ಸೀಯುತ್ತಿದ್ದು ದಾಗಿ ಅವನು ಭಾವಿಸಿದನು. ಅವರಿಂದ ಪಾರಾಗುವ ಸಲುವಾಗಿ ಅವನು ಕಣ್ಣು ಮುಚ್ಚಿಕೊಂಡನು.

ಒಂದೆರಡು ಕ್ಷಣಮಾತ್ರ ಅವನು ಮಂಪರಕ್ಕೊಳಗಾದನು. ಆ ಅಲ್ಪಾವಧಿಯಲ್ಲಿ ಅವನು ಕಂಡ ಕನಸಿನ ತೆರೆಯಮೇಲೆ ನಾನಾ ದೃಶ್ಯಗಳು ಸುಳಿದುವು : ಅವನ ತಾಯಿ ಮತ್ತು ಅವಳ ಸ್ಥೂಲಶ್ವೇತಹಸ್ತ, ಸೋನ್ಯಾಳ ಅಸಿಭುಜಗಳು, ನತಾಷಾಳ ಕಣ್ಣು ಮತ್ತು ನಗು, ಡೆನಿಸೋವ್‌ನ ಧ್ವನಿ ಮತ್ತು ಶ್ಮಶ್ರುಗಳು, ತೆಲ್ಯಾನಿನ್, ತೆಲ್ಯಾನಿನ್ ಮತ್ತು ಬೊಗ್ದಾನಿಶ್‌ರ ವ್ಯವಹಾರ.ಕರ್ಕಶ ಧ್ವನಿಯ ಈ ಸೈನಿಕನ ವ್ಯವಹಾರದಿಂದ ಇದು ಭಿನ್ನ ವಾಗಿರಲಿಲ್ಲ. ಆ ವ್ಯವಹಾರ ಮತ್ತು ಈ ಸೈನಿಕ ಎಡೆಬಿಡದೆ ಅವನ ತೋಳನ್ನೆಳೆಯುತ್ತ, ಹಿಸುಕುತ್ತ, ಸದಾ ಏಕಮುಖವಾಗಿ ಜಗ್ಗುತ್ತ, ಚಿತ್ರಹಿಂಸೆ ಕೊಡುತ್ತಿದ್ದರು. ಅವರಿಂದ ತಪ್ಪಿಸಿಕೊಳ್ಳಲು ಅವನು ಪ್ರಯತ್ನಿಸಿದನು. ಆದರೆ ಒಂದು ಕ್ಷಣವಾದರೂ ಕೂದಲೆಳೆ ಯಷ್ಟಾದರೂ ತನ್ನ ತೋಳನ್ನಲುಗಿಸಲಾಗಲಿಲ್ಲ. ಅವರು ಜಗ್ಗದಿದ್ದರೆ ಅದು ನೋಯು ತ್ತಿರಲಿಲ್ಲ; ಮಾತ್ರವಲ್ಲ ಅದು ಸರಿಯಾಗಿರುತ್ತಿತ್ತು. ಆದರೆ ಅವರಿಂದ ತಪ್ಪಿಸಿ ಕೊಳ್ಳುವುದೆ ಕಷ್ಟವಾಗಿತ್ತು.

ಅವನು ಕಣ್ಣು ತೆರೆದು, ಮೇಲೆ ನೋಡಿದನು. ಒಂದು ಗಜ ದೂರದೊಳಗೆ, ಕಲ್ಲಿದ್ದಲಿನ ಉರಿಯ ಮೇಲೆ ನಿಶೆಯ ಕೃಷ್ಣವಿತಾನ ತೂಗಾಡುತ್ತಿತ್ತು. ಆ ಬೆಳಕಿನಲ್ಲಿ ಹಿಮದ ಹಲ್ಲೆಗಳು ತೂರಾಡುತ್ತಿದ್ದುವು. ತೂಷಿನ್ ಹಿಂದಿರುಗಿರಲಿಲ್ಲ, ವೈದ್ಯ ಬಂದಿರಲಿಲ್ಲ. ಅವನೀಗ ಏಕಾಕಿಯಾಗಿದ್ದನೆಂದೇ ಹೇಳಬೇಕು. ಒಬ್ಬ ಸೈನಿಕ ಮಾತ್ರ ಬೆಂಕಿಯೆಡೆ ಬೆತ್ತಲೆಯಾಗಿ ಕುಳಿತು ಕೃಶ ಹಳದಿ ಮೈಯನ್ನು ಕಾಯಿಸಿಕೊಳ್ಳುತ್ತಿದ್ದನು.

'ಯಾರಿಗೂ ನಾನು ಬೇಕಾಗಿಲ್ಲ. ನನಗೆ ನೆರವು ನೀಡಲು ಅಥವಾ ಕರುಣೆ ದೋರಲು ನನ್ನ ಬಳಿ ಯಾರೂ ಇಲ್ಲ. ಒಂದಾನೊಂದು ಕಾಲದಲ್ಲಿ ನಾನು ಗಟ್ಟಿಮುಟ್ಟಾಗಿದ್ದೆ, ಸುಖವಾಗಿದ್ದೆ, ನಿರಾತಂಕವಾಗಿದ್ದೆ, ಎಲ್ಲರ ಪ್ರೀತಿಗೆ ಪಾತ್ರವಾಗಿದ್ದೆ' ಎಂದು ರೊಸ್ತೋವ್ ನಿಟ್ಟುಸಿರುಗರೆದನು. ಆ ನಿಟ್ಟುಸಿರಿನೊಡನೆ ಅನೈಚ್ಛಿಕವಾಗಿ ನರಳು ಮೇಳವಿಸಿತು.

'ಏನಯ್ಯ, ನಿನಗೆ ನೋವಾಗುತ್ತಿದೆಯೆ?' ಎಂದು ಬಳಿಯ ಸೈನಿಕ ಬೆಂಕಿಯ ಮೇಲೆ ಸರಟು ಕೊಡವುತ್ತ ಪ್ರಶ್ನಿಸಿದನು. ಅವನು ಉತ್ತರಕ್ಕೆ ಕಾಯದೆಯೆ 'ಇಂದು ಎಷ್ಟು ಜನ ಅಂಗವಿಕಲರಾಗಿದ್ದಾರೆ? ನೆನೆದರೆ ಎದೆಯೊಡೆಯುತ್ತದೆ' ಎಂದು ಗುರುಗುಟ್ಟಿದನು.

ರೊಸ್ತೋವ್ ಸೈನಿಕನ ಮಾತಿಗೆ ಕಿವಿಗೊಡಲಿಲ್ಲ. ಬೆಂಕಿಯ ಮೇಲೆ ತೂರಾಡುತ್ತಿದ್ದ ಹಿಮದ ಹಲ್ಲೆಗಳನ್ನೆ ನೋಡುತ್ತಿದ್ದನು. ಬೆಚ್ಚನೆಯ ಮನೆಯಲ್ಲಿ ಕಳೆಯುತ್ತಿದ್ದ ರಷ್ಯಾದ ಚಳಿಗಾಲವನ್ನು ಸ್ಮರಿಸಿಕೊಂಡನು. ತುಪ್ಪುಳುಳ್ಳ ಅವನ ಫರ್ ಕೋಟೂ, ಜಾರು ಬಂಡಿಯೂ, ಆರೋಗ ದೃಢಕಾಯವೂ, ಕುಟುಂಬದ ವಾತ್ಸಲ್ಯೋಪಚಾರಗಳೂ ಅವನ ನೆನಹುಗಣ್ಣಿನ ಮುಂದೆ ಸುಳಿದಾಡಿದುವು. 'ನಾನಿಲ್ಲಿಗೆ ಬಂದದ್ದೇಕೆ?' ಎಂದವನು ಸೋಜಿಗಗೊಂಡನು.

ಮಾರನೆಯ ದಿನ ಫ್ರೆಂಚರು ಧಾಳಿಯನ್ನು ಮರುಕೊಳಿಸಲಿಲ್ಲ. ಬಗ್ರೇಷನ್ ಸೈನ್ಯದ ಶೇಷಭಾಗ ಕುತುಜೋವನ ವಾಹಿನಿಯೊಡನೆ ಮತ್ತೆ ಸೇರಿಕೊಂಡಿತು.

ಪರ್ವ-೩

ಅಧ್ಯಾಯ ೧

ರಾಜಕುಮಾರ ವಸಿಲಿ ತನ್ನ ಯೋಜನೆಗಳನ್ನು ಜಾಗರೂಕತೆಯಿಂದ ರೂಪಿಸಿಕೊಂಡವನಲ್ಲ. ಯಾರನ್ನೇ ಆಗಲಿ ತನ್ನ ಪ್ರಯೋಜನಕ್ಕಾಗಿ ಪೀಡಿಸಬೇಕೆಂದು ಯೋಚಿಸಿದವನಲ್ಲ. ಅವನು ಈ ಪ್ರಪಂಚದಲ್ಲಿ ಹೊಂದಿಕೊಂಡು ಹೋಗಬಲ್ಲ ವ್ಯವಹಾರಜ್ಞ. ಹೊಂದಾಣಿಕೆ ಅವನ ಸ್ವಭಾವವಾಗಿ ಪರಿಣಮಿಸಿತ್ತು. ತಂತ್ರೋಪಾಯ ಯೋಜನೆಗಳು ಅವನ ಜೀವನದ ಮುಖ್ಯೋದ್ದೇಶವಾಗಿದ್ದರೂ ಅವುಗಳ ರೂಪಣಕ್ಕೆ ತಾನೇ ಸರ್ವಕಾರಣವೆಂದು ಬಗೆದವನಲ್ಲ. ಪರಿಸ್ಥಿತಿಯ ಒತ್ತಡ ಹಾಗೂ ಮಾನವರ ಸಂಪರ್ಕದ ಪರಿಣಾಮವಾಗಿ ಅವು ಸದಾ ಅವನ ಚಿತ್ತಕೋಶದಲ್ಲಿ ರೂಪುಗೊಳ್ಳುತ್ತಿದ್ದುವು. ಅವುಗಳಲ್ಲಿ ಕೆಲವು ಭ್ರೂಣಸ್ಥಿತಿಯಲ್ಲಿಯೂ, ಕೆಲವು ಪರಿಪಕ್ವಸ್ಥಿತಿಯಲ್ಲಿಯೂ, ಮತ್ತೆ ಕೆಲವು ಶಿಥಿಲಸ್ಥಿತಿಯಲ್ಲಿಯೂ ಇರುತ್ತಿದ್ದುವು. 'ಈ ವ್ಯಕ್ತಿ ಪ್ರಭಾವಶಾಲಿ. ನಾನೀಗ ಅವನ ಸ್ನೇಹ ವಿಶ್ವಾಸಗಳನ್ನು ಗಳಿಸಬೇಕು. ಅವನ ಮೂಲಕ ವಿಶೇಷ ಸವಲತ್ತುಗಳನ್ನು ಪಡೆಯಬೇಕು' ಎಂದುಕೊಂಡವನಲ್ಲ. 'ಪಿಯರಿ ಶ್ರೀಮಂತ. ಅವನು ನನ್ನ ಮಗಳನ್ನು ಮದುವೆಯಾಗುವಂತೆ, ನನಗೆ ಬೇಕಾದ ನಲವತ್ತು ಸಾವಿರ ರೂಬಲ್ಲುಗಳನ್ನು ಸಾಲವಾಗಿ ಕೊಡುವಂತೆ ಅವನನ್ನು ಮರುಳುಗೊಳಿಸಬೇಕು' ಎಂಬುದಾಗಿ ಆಲೋಚಿಸಿದವನೂ ಅಲ್ಲ. ಆದರೆ ಅಂತಸ್ತುಳ್ಳ ವ್ಯಕ್ತಿ ಎದುರಾದ ಕೂಡಲೇ, ಅವನಿಂದ ಲಾಭವಾಗುತ್ತದೆಂಬ ಸೂಚನೆ ಅವನ ಅಂತರಂಗಕ್ಕರಿವಾಗುತ್ತಿತ್ತು. ಪೂರ್ವಾಲೋಚನೆಯಿಲ್ಲದೆಯೆ, ಪ್ರಥಮಾವಕಾಶವನ್ನು ಬಳಸಿಕೊಂಡು ರಾಜಕುಮಾರ ವಸಿಲಿ ಅವನ ವಿಶ್ವಾಸವನ್ನು ಗಳಿಸಲು ಪ್ರಯತ್ನಿಸುತ್ತಿದ್ದನು; ಅವನನ್ನು ಹೊಗಳಿ, ಆತ್ಮೀಯತೆಯನ್ನು ಬೆಳೆಸಿ, ಕೊನೆಗೆ ತನ್ನ ಬೇಡಿಕೆಯನ್ನು ಅವನ ಮುಂದಿಡುತ್ತಿದ್ದನು.

ಪಿಯರಿ ಅವನಿಗೆ ತೀರ ಸನಿಹದಲ್ಲಿದ್ದ; ಅವನಿಗೆ ಮಾಸ್ಕೋದಲ್ಲಿ ಹಾಜರು ಭಾಷಿಯೆಂಬ ಹುದ್ದೆಯನ್ನು ಸಂಪಾದಿಸಿಕೊಟ್ಟಿದ್ದ. ಅದು ರಾಜ್ಯದ ಕೌನ್ಸಿಲರ್ ಪದವಿಗೆ ಸಮಾನವಾಗಿದ್ದು, ಹನ್ನೊಂದು ದರ್ಜೆಯ ಪದವಿಗಳಲ್ಲಿ ಐದನೆಯದಾಗಿತ್ತು. ಪೀಟರ್ಸ್‌ಬರ್ಗ್ ನಗರಕ್ಕೆ ತನ್ನೊಡನೆ ಬಂದು, ತನ್ನ ಮನೆಯಲ್ಲಿ ತಂಗಬೇಕೆಂದು ವಸಿಲಿ ಆ ತರುಣನನ್ನು ಒತ್ತಾಯಪಡಿಸುತ್ತಿದ್ದನು. ಶೂನ್ಯಮನಸ್ಕತೆಯಿಂದ, ಆದರೆ ತನ್ನ ಕೃತಿ ಅತ್ಯುತ್ತಮವಾದುದೆಂಬ ನಿಸ್ಸಂದಿಗ್ಧ ಭರವಸೆಯಿಂದ ಪಿಯರಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡುವ ಸಲುವಾಗಿ ರಾಜಕುಮಾರ ವಸಿಲಿ ಸರ್ವಪ್ರಯತ್ನಗಳನ್ನು ನಡಸಿದ್ದನು. ಮೊದಲೇ ಆ ಬಗ್ಗೆ ಅವನು ಆಲೋಚನೆ ನಡೆಸಿದ್ದರೆ, ಸಮಾಜದ ಭಿನ್ನ ಭಿನ್ನಸ್ತರಗಳ ಜನರೊಡನೆ ಸಹಜವಾಗಿ ಬೆರೆಯುವುದು ಸಾಧ್ಯವಾಗುತ್ತಿರಲಿಲ್ಲ. ತನಗಿಂತಲೂ ಹೆಚ್ಚು ಶ್ರೀಮಂತರಾದ ಹಾಗೂ ಪ್ರಭಾವಶಾಲಿಗಳಾದ ವ್ಯಕ್ತಿಗಳ ಕಡೆಗೆ

ಯಾವುದೋ ಶಕ್ತಿ ಅವನನ್ನು ನೂಕುತ್ತಿತ್ತು. ತನಗೆ ದೊರೆತ ಸದವಕಾಶವನ್ನು ಬಿಡದೆ ಜನರಿಂದ ಪ್ರಯೋಜನವನ್ನು ಪಡೆಯುವ ಅಪೂರ್ವ ಕೌಶಲ ಅವನಿಗೆ ವಶವಾಗಿತ್ತು.

ಈಚೀಚೆಗೆ ತಾನೆ ಒಂಟಿ ಬಾಳನ್ನನುಭವಿಸಿದ್ದ ಪಿಯರಿ ಶ್ರೀಮಂತ ಬೆಜುಕೋವ್ ಆಗಿ ಪರಿವರ್ತನೆ ಹೊಂದಿ, ಅನಿರೀಕ್ಷಿತವಾಗಿ ಶ್ರೀಮಂತನಾದ ನಂತರ, ಹಲವು ಬಗೆಯ ಹೊಣೆಗಾರಿಕೆಗಳಿಂದಾಗಿ ಅವನಿಗೆ ಸ್ವಲ್ಪವೂ ಬಿಡುವು ಸಿಗುತ್ತಿರಲಿಲ್ಲ. ಹಾಸುಗೆಯ ಮೇಲುರುಳಿಕೊಂಡಾಗ ಮಾತ್ರ ಅವನಿಗೆ ಆತ್ಮವಿಷಯಾಸಕ್ತಿಗವಕಾಶವಾಗುತ್ತಿತ್ತು. ಅವನು ಕಾಗದ ಪತ್ರಗಳಿಗೆ ರುಜುಹಾಕಬೇಕಿತ್ತು; ಉದ್ದೇಶ ಸ್ಪಷ್ಟವಾಗಿರದಿದ್ದರೂ, ಸರ್ಕಾರಿ ಕಚೇರಿಗಳಲ್ಲಿ ಆಗಾಗ್ಗೆ ಹಾಜರಿ ಹಾಕಬೇಕಿತ್ತು, ತನ್ನ ಪಾರುಪತ್ಯಗಾರನನ್ನು ಆಗಾಗ್ಗೆ ವಿಚಾರಿಸಿಕೊಳ್ಳಬೇಕಿತ್ತು, ಮಾಸ್ಕೋ ಬಳಿಯ ಕೃಷಿಕ್ಷೇತ್ರಕ್ಕೆ ಆಗಾಗ್ಗೆ ಹೋಗಬೇಕಿತ್ತು, ಹಿಂದೆ ತನ್ನ ಅಸ್ತಿತ್ವವನ್ನೇ ಗಮನಿಸಲಪೇಕ್ಷಿಸದ, ಆದರೆ ಈಚೀಚೆಗೆ ತಾವು ಮಾತಾಡಿಸದಿದ್ದರೆ ಅವಮಾನವಾದಂತೆ ವ್ಯಗ್ರರಾಗುತ್ತಿದ್ದ ಜನರನ್ನು ಸತ್ಕರಿಸಬೇಕಿತ್ತು. ವ್ಯಾಪಾರಿಗಳು, ಬಂಧುಗಳು, ಪರಿಚಯಸ್ಥರು ಇವರೇ ಮೊದಲಾದ ನಾನಾ ರೀತಿಯ ಜನ ತರುಣ ಉತ್ತರಾಧಿಕಾರಿಯನ್ನು ಅತ್ಯಂತ ಪ್ರೀತಿ ಪ್ರಶಂಸೆಗಳಿಂದ ಆದರಿಸಬೇಕೆಂದು ತವಕಿಸುತ್ತಿದ್ದರು. ಎಲ್ಲರೂ ಅವನ ಉದಾತ್ತ ಗುಣಶೀಲಗಳನ್ನು ಮೆಚ್ಚಿಕೊಂಡಿದ್ದರು. 'ತಮ್ಮ ಅಸಾಧಾರಣವಾದ ಕರುಣೆಯಿಂದಾಗಿ,' 'ತಮ್ಮ ಉದಾತ್ತ ಹೃದಯದಿಂದಾಗಿ,' 'ನಿಮ್ಮಷ್ಟಕ್ಕೆ ನೀವೇ ಗೌರವಾರ್ಹರಾಗಿದ್ದೀರಿ, ಶ್ರೀಮಂತರೆ,' 'ಅವರು ನಿಮ್ಮಷ್ಟು ಜಾಣರಾಗಿದ್ದರೆ' ಇವೇ ಮೊದಲಾದ ಪ್ರಶಸ್ತಿಗಳು ಸದಾ ಅವನ ಕಿವಿಯ ಮೇಲೆ ಬೀಳುತ್ತಿದ್ದುವು. ಆ ಹೊಗಳಿಕೆ ತನಗೆ ಅನ್ವಯಿಸುತ್ತದೆಯೆ, ತಾನು ದಯಾಳುವೆ, ಬುದ್ಧಿವಂತನೇ ಎಂಬ ಸಂಗತಿಯನ್ನರಿಯಲು ಅವನಿಗೆ ಕೆಲವು ದಿನ ಬೇಕಾದುವು. ಮೊದಮೊದಲು ಜಿದ್ದಿನಿಂದ ಹಾಗೂ ಅಮಿತ್ರತ್ವದಿಂದ ವರ್ತಿಸುತ್ತಿದ್ದ ಜನ ಈಚೀಚೆಗೆ ಸ್ನೇಹ ವಾತ್ಸಲ್ಯಗಳನ್ನು ಪ್ರದರ್ಶಿಸಲಸುವಾದರು. ನೀಳನಡುವಿನ, ಬೊಂಬೆಯ ಕೂದಲಂತೆ ಕೆಳಮುಖವಾಗಿ ತಿದ್ದಿದ ಕೂದಲುಳ್ಳ, ಸಿಡುಕಿನ ಹಿರಿಯ ರಾಜಕುಮಾರಿ ಶವಸಂಸ್ಕಾರಾನಂತರ ಪಿಯರಿಯ ಕೋಣೆಗೆ ಬಂದಿದ್ದಳು. ಹಿಂದಿನ ವಿರಸದ ಬಗ್ಗೆ ಕ್ಷಮೆ ಯಾಚಿಸುವಾಗ ಅವಳ ದೃಷ್ಟಿ ಕೆಳಮುಖವಾಗಿರುತ್ತಿತ್ತು, ಲಜ್ಜೆಯಿಂದ ಮುಖ ಕೆಂಪೇರುತ್ತಿತ್ತು. ಆಸ್ತಿಯುಲ್ಲಿ ಪಾಲು ಕೇಳುವ ಹಕ್ಕು ತನಗಿಲ್ಲವೆಂದು ಭಾವಿಸಿದ್ದಳು. ತಾನು ಬಹಳವಾಗಿ ಪ್ರೀತಿಸಿದ್ದ ಅಪಾರವಾಗಿ ತ್ಯಾಗಮಾಡಿದ್ದ ಮನೆಯಲ್ಲಿ ಕೆಲವು ವಾರ ಹೆಚ್ಚಿಗೆ ಉಳಿಯುವಂತಿದ್ದರೆ ಅವಳಿಗಷ್ಟೇ ತೃಪ್ತಿಯಾಗುತ್ತಿತ್ತು. ಅಂಥ ಮಾತುಗಳನ್ನುಸುರುವಾಗ ಅವಳ ಕಣ್ಣುಗಳಲ್ಲಿ ನೀರು ಹರಿಯುತ್ತಿತ್ತು. ಅಂಥ ಮೋಹಕ ಸೌಂದರ್ಯದ ಗಂಭೀರ ಸ್ವಭಾವದ ಮಹಿಳೆಯ ಮನಃಪರಿವರ್ತನೆಗೆ ಮನಕರಗಿದ ಪಿಯರಿ ಅವಳ ಕೈಹಿಡಿದುಕೊಂಡು, ಏಕೆಂಬುದರ ಪರಿವೆಯಿಲ್ಲದೆ, ಕ್ಷಮೆ ಯಾಚಿಸಿದನು. ಅಂದಿನಿಂದ ಪಿಯರಿಯ ಬಗೆಗೆ ಹಿರಿಯ ರಾಜಕುಮಾರಿಯ ನಿಲವು ಪೂರ್ಣ ಬದಲಾವಣೆಯಾಯಿತು; ಅಷ್ಟೇ ಅಲ್ಲ, ಅವನಿಗಾಗಿ ಪಟ್ಟೆಯ ಕೊರಳುಚೌಕವನ್ನು ಹೆಣೆಯಲಾರಂಭಿಸಿದಳು.

'ಪ್ರಿಯ ಮಿತ್ರರೆ, ನನಗಾಗಿ ಇದನ್ನು ನಡಸಿಕೊಡಿ. ಅವಳು ಮೃತವ್ಯಕ್ತಿಯಿಂದಾಗಿ ಬಹಳ ಕಷ್ಟವನ್ನನುಭವಿಸಬೇಕಾಯಿತು' ಎಂದು ರಾಜಕುಮಾರ ವಸಿಲಿ ನುಡಿಯುತ್ತ,

ರಾಜಕುಮಾರಿಯು ಕ್ರೂರವಾದ ದೃಷ್ಟಿಯಿಂದ ಪತ್ರಕ್ಕೆ ಬೀಳು ಹಾಕುವಂತೆ ಅವನ ಮುಖ ಹಿಡಿದನು.

ರಾಜಕುಮಾರಿಯು ಪಿಯರಿಗೆ ಮೂವತ್ತು ಸಾವಿರ ರೂಬಲ್ ಬೆಲೆಯ ಪತ್ರ ಬರೆದು ಕೊಡುವುದು ಅಗತ್ಯವೆಂದೂ, ಅದರಿಂದಾಗಿ ಅವಳು ಆಸ್ತಿಪಾಸ್ತಿಗಳ ಹಂಚಿಕೆಯ ಬಗ್ಗೆ ನಿರಾಕ್ಷೇಪವಾಗಿರುವುದೆಂದೂ ವಸಿಲಿ ನಿರ್ಧಾರ ಕೈಗೊಂಡಿದ್ದನು. ಪಿಯರಿ ಪತ್ರಕ್ಕೆ ಸಹಿ ಹಾಕಿದನು. ಆ ತರುವಾಯವಂತೂ ರಾಜಕುಮಾರಿಯು ನಯ ಮನಸ್ಸಿನ ಅಕ್ಕನಾದಳು. ಚಿಕ್ಕತಂಗಿಯರೂ ಅವನ ಬಗ್ಗೆ ಆದರ ತಳೆದರು. ಕೊನೆಯವಳಂತೂ ಅವನನ್ನು ಸಂಧಿಸಿದಾಗಲೆಲ್ಲ ನಿರಂತರ ನಗುವಿನಿಂದ ಗಾಬರಿಗೊಳಿಸುತ್ತಿದ್ದಳು.

ಪ್ರತಿಯೊಬ್ಬರೂ ತನ್ನನ್ನು ಪ್ರೀತಿಸುತ್ತಿದ್ದ ಸಂಗತಿ ಪಿಯರಿಗೆ ಎಷ್ಟು ಸಹಜವಾಗಿ ಕಂಡಿತೆಂದರೆ ತನ್ನ ಸುತ್ತಮುತ್ತಣ ಜನರ ಪ್ರಾಮಾಣಿಕತೆಯನ್ನವನು ಸಂದೇಹಿಸುವಂತಿಲ್ಲ. ಯಾರಾದರೂ ಅವನ ಬಗ್ಗೆ ಅನಾದರ ತೋರಿಸಿದ್ದರೆ ಅದು ಅವನಿಗೆ ಅಸಹಜವಾಗಿ ತೋರುತ್ತಿತ್ತು. ಮೇಲಾಗಿ, ಈ ಜನ ಪ್ರಾಮಾಣಿಕರೋ ಅಲ್ಲವೋ ಎಂದು ವಿಚಾರಿಸಲು ಕೂಡ ಅವನಿಗೆ ಸಮಯವಿರಲಿಲ್ಲ. ಅವನು ಯಾವಾಗಲೂ ಉದ್ಯೋಗನಿರತನಾಗಿರುತ್ತಿದ್ದನು. ಸದಾ ಉಲ್ಲಾಸಭರಿತನಾದ ಸೌಮ್ಯಾವೇಶದ ಸ್ಥಿತಿಯಲ್ಲಿರುವಂತೆ ಕಾಣುತ್ತಿದ್ದನು. ತಾನು ಪ್ರಮುಖ ಚಳುವಳಿಯೊಂದರ ಕೇಂದ್ರಸ್ಥಾನದಲ್ಲಿದ್ದಂತೆ ಅವನು ಭಾವಿಸಿದ್ದನು. ಯಾವ ಕಾರ್ಯವೇ ಆಗಲಿ ತನ್ನ ನೆರವು ಅನಿವಾರ್ಯವೆಂಬ, ತಾನು ನೆರವು ನೀಡದಿದ್ದಾಗ ಬಹುಜನರು ಸಂಕಟ ನಿರಾಶೆಗಳಿಗೊಳಗಾಗಬೇಕಾಗುತ್ತದೆಂಬ, ನೆರವು ನೀಡಿದ್ದಾದರೆ ಎಲ್ಲವೂ ಸರಿಯಾಗಿ ಜರುಗುತ್ತದೆಂಬ ಭಾವನೆ ಅವನ ಮನಸ್ಸನ್ನು ತುಂಬಿಕೊಂಡಿತ್ತು. ತನ್ನಿಂದ ಜನ ಏನು ನಿರೀಕ್ಷಿಸುತ್ತಿದ್ದರೋ ಅದನ್ನವನು ನೆರವೇರಿಸುತ್ತಿದ್ದನು. ಆದರೆ ಫಲಿತಾಂಶ ಮಾತ್ರ ಭವಿಷ್ಯದ ಬಸಿರಲ್ಲಿ ಹುದುಗಿಕೊಂಡಿತ್ತು.

ಪ್ರಾರಂಭದ ದಿನಗಳಲ್ಲಿ ಇತರರಿಗಿಂತ ಮಿಗಿಲಾಗಿ ರಾಜಕುಮಾರ ವಸಿಲಿಯೆ ಪಿಯರಿಯ ಮತ್ತು ಅವನ ವ್ಯವಹಾರಗಳ ಹೊಣೆಗಾರಿಕೆಯನ್ನು ಹೊತ್ತುಕೊಂಡಿದ್ದನು. ಶ್ರೀಮಂತ ಬೆಜುಹೋವ್ ತೀರಿಕೊಂಡ ನಂತರವೂ ಅವನ ಮೇಲಣ ಹಿಡಿತವನ್ನು ವಸಿಲಿ ಸಡಿಲಿಸಲಿಲ್ಲ. ಅವನು ವ್ಯವಹಾರದಂಧೆಗಳಲ್ಲಿ ಕೈ ಸಿಕ್ಕಿಸಿಕೊಂಡು ದಣಿದಿದ್ದನು. ಆದರೂ ಅಸಹಾಯಕ ಸ್ಥಿತಿಯಲ್ಲಿದ್ದ ಹಳೆಯ ಮಿತ್ರನ ಮಗನನ್ನು, ಅಪಾರ ಐಶ್ವರ್ಯಕ್ಕೆ ಒಡೆಯನಾಗಿದ್ದ ತರುಣನನ್ನು ಅವನ ವಿಧಿಯ ಕೈವಾಡಕ್ಕೂ ನೀಚ ಕುಟಿಲೋಪಾಯಗಳಿಗೂ ಬಲಿಗೊಡಲು ಅವನು ಸಿದ್ಧನಾಗಿರಲಿಲ್ಲ. ಶ್ರೀಮಂತ ಬೆಜುಹೋವನ ಮರಣ ನಂತರ ಅವನು ಕೆಲವು ದಿನ ಮಾಸ್ಕೋ ನಗರದಲ್ಲಿಯೇ ತಂಗಿದ್ದನು. ಆಗವನು ಆಗಾಗ ಪಿಯರಿಗೆ ಹೇಳಿ ಕಳಿಸುತ್ತಿದ್ದನು; ಅಥವಾ ತಾನಾಗಿಯೇ ಅವನಲ್ಲಿಗೆ ಹೋಗುತ್ತಿದ್ದನು. ದಣಿದ, ಆದರೆ ಭರವಸೆಯ ದನಿಯಲ್ಲಿ ಅವನು ಪೂರೈಸಬೇಕಾದ ಕರ್ತವ್ಯದ ಬಗ್ಗೆ ಸೂಚನೆ ನೀಡುತ್ತಿದ್ದನು. 'ನನಗೆ ನನ್ನ ವ್ಯವಹಾರವೇ ಸಾಕಾಗಿದೆ. ಕೇವಲ ದಾಕ್ಷಿಣ್ಯಕ್ಕಾಗಿ ನಿನ್ನ ಬಗ್ಗೆ ನಾನು ತೊಂದರೆ ತೆಗೆದುಕೊಳ್ಳಬೇಕಾಗಿದೆ. ನಿನಗೆ ನೆನಪಿರಲಿ, ನನ್ನ ಸಲಹೆಯೊಂದೇ ನೀನನುಸರಿಸಬೇಕಾಗಿರುವ ನೇರವಾದ ಮಾರ್ಗ' ಎಂದವನು ಪ್ರತಿಸಾರಿಯೂ ಪುನರುಕ್ತಿಸುತ್ತಿದ್ದನು.

ವಿದ್ಯಾರ್ಥಿದಶೆಯ ಪರಿಚಯದ ಮುಖಗಳು ಪೀಟರ್ಸ್‌ಬರ್ಗಿನಲ್ಲಿ ಕಾಣೆಯಾಗಿದ್ದುವು. ದಂಡಿನ ಜನ ಯುದ್ಧಭೂಮಿಗೆ ಹೋಗಿದ್ದರು; ದೋಲೊಖೋವನಿಗೆ ಹಿಂಬಡ್ತಿಯಾಗಿತ್ತು; ಅನತೋಲ್ ರಾಷ್ಟ್ರದ ಯಾವುದೋ ಮೂಲೆಯ ಸೈನ್ಯದಲ್ಲಿದ್ದನು; ರಾಜಕುಮಾರ ಆಂಡ್ರ್ಯೂ ವಿದೇಶದಲ್ಲಿದ್ದನು; ಆದ್ದರಿಂದ ಪಿಯರಿಗೆ ಹಿಂದಿನಂತೆ ಇರುಳುಗಳನ್ನು ಕಳೆಯುವ ಅವಕಾಶವಿರಲಿಲ್ಲ. ತನಗಿಂತ ಹಿರಿಯನಾದ ಮತ್ತು ತನ್ನ ಗೌರವಕ್ಕೆ ಪಾತ್ರನಾದ ಗೆಳೆಯನೊಡನೆ ಸಲುಗೆಯಿಂದ ವ್ಯವಹರಿಸುವಂತಿರಲಿಲ್ಲ. ಅವನ ವೇಳೆಯಲ್ಲಿ ಸ್ವಲ್ಪ ಭಾಗ ಭೋಜನಕೂಟ ಹಾಗೂ ನೃತ್ಯ ಮಂದಿರಗಳಲ್ಲಿ ಕಳೆದರೆ, ಬಹುಭಾಗ ರಾಜಕುಮಾರ ವಸಿಲಿಯ ಮನೆಯಲ್ಲಿ, ಅವನ ಸ್ಥೂಲಕಾಯದ ಮಡದಿಯ ಮತ್ತು ಲಾವಣ್ಯವತಿ ಪುತ್ರಿ ಹೆಲೆನ್ನಳ ಸಹವಾಸದಲ್ಲಿ ಹೋಗುತ್ತಿತ್ತು.

ಪಿಯರಿಯ ಬಗೆಗೆ ಅನ್ನಾಪಾವ್‌ಲೋವ್ನಳ ಮನೋಭಾವನೆ ಸಹ ಅಂದಿನ ಪರಿಸ್ಥಿತಿಗನುಗುಣವಾಗಿ ಬದಲಾಯಿಸಿತ್ತು. ಹಿಂದಿನ ಕಾಲದಲ್ಲಿ ಅನ್ನಾಪಾವ್‌ಲೋವ್ನಳ ಮುಂದೆ ತಾನಾಡುತ್ತಿದ್ದ ಮಾತು ಅನುಚಿತವೆಂದು, ಅಯೋಗ್ಯವೆಂದು, ಯುಕ್ತಿಶೂನ್ಯವೆಂದು ಪಿಯರಿ ಭಾವಿಸಿಕೊಳ್ಳುತ್ತಿದ್ದುದುಂಟು. ತಲೆಯಲ್ಲಿ ರೂಪುಗೊಳ್ಳುತ್ತಿದ್ದಾಗಲೇ ಯುಕ್ತಿಯುಕ್ತವಾಗಿ ತೋರುತ್ತಿದ್ದ ಹೇಳಿಕೆಗಳು ಮಾತಿನಲ್ಲಿ ಹೊರಹೊಮ್ಮುವಾಗ ಅವಿವೇಕದಿಂದ ಕೂಡಿದ್ದಂತೆ ಅವನಿಗೆ ಭಾಸವಾಗುತ್ತಿದ್ದುವು. ಹಿಪ್ಪೊಲೈಟ್‌ನ ಬಾಯಿಂದ ಬಿದ್ದದ್ದೆಲ್ಲ ವಿವೇಕೌಚಿತ್ಯಗಳಿಂದ ಕೂಡಿದ್ದಂತೆ ಪರಿಗಣಿತವಾಗಿತ್ತು. ಈಗಂತು ಪಿಯರಿಯ ಬಾಯಿಂದ ಬಿದ್ದದ್ದೆಲ್ಲ ಮೋಹಕವಾಗಿ ಕಾಣುತ್ತಿತ್ತು. ಪಿಯರಿಯ ವಿನಯಶೀಲತೆಯನ್ನು ಗಮನಿಸಿ, ಅನ್ನಾಪಾವ್‌ಲೋವ್ನ ಬಹಿರಂಗವಾಗಿ ತನ್ನ ಮೆಚ್ಚುಗೆ ವ್ಯಕ್ತಪಡಿಸದಿದ್ದರೂ, ಅವಳ ನಡತೆಯಲ್ಲಿ ಅದು ಹೊರಸೂಸುತ್ತಿತ್ತು.

೧೮೦೫–೦೬ರ ಚಳಿಗಾಲದ ಪ್ರಾರಂಭದಲ್ಲಿ ನಸುಕೆಂಪು ಬಣ್ಣದ ಆಹ್ವಾನ ಪತ್ರಿಕೆ ಎಂದಿನಂತೆ ಅನ್ನಾಪಾವ್‌ಲೋವ್ನಳ ಕಡೆಯಿಂದ ಪಿಯರಿಯ ಕೈಸೇರಿತು. 'ಸುಂದರಿ ಹೆಲೆನ್ನಳನ್ನಿಲ್ಲಿ ನೀವು ಭೇಟಿ ಮಾಡಬಹುದು. ಅವಳನ್ನು ನೋಡುವುದೇ ಒಂದು ಆನಂದ' ಎಂಬ ವಾಕ್ಯವನ್ನವಳು ಆಹ್ವಾನ ಪತ್ರದ ಕೊನೆಯಲ್ಲಿ ಸೇರಿಸಿದ್ದಳು.

ತನ್ನ ಮತ್ತು ಹೆಲೆನ್ನಳ ನಡುವೆ ಸಂಬಂಧ ಕುದುರುತ್ತಿದ್ದುದಾಗಿ ಆ ವಾಕ್ಯವನ್ನೋದುತ್ತಿದ್ದಂತೆ ಪ್ರಪ್ರಥಮವಾಗಿ ಅವನಿಗರಿವಾಯಿತು. ಕೆಲಬಲದ ಜನ ಸಹ ಆ ಸಂಬಂಧವನ್ನು ಗುರುತಿಸಿದ್ದರು. ತಾನು ಪೂರೈಸಲಾಗದ ಹೊಣೆಗಾರಿಕೆಯೊಂದು ತನ್ನ ಮೇಲೇರಗುತ್ತಿದ್ದುದಾಗಿ ಕಂಡದ್ದರಿಂದ ಅವನು ದಿಗ್ಭ್ರಾಂತನಾದನು. ಮನರಂಜಕ ವಿಷಯವಾಗಿ ಮಾತ್ರ ಅದು ಅವನಿಗೆ ಸಮಾಧಾನ ತರುವಂತಿತ್ತು.

ಅನ್ನಾಪಾವ್‌ಲೋವ್ನಳ ಸತ್ಕಾರಕೂಟದಲ್ಲಿ ಹಿಂದೆಂದೂ ಕಾಣದ ಹೊಸತನವಿರಲಿಲ್ಲ. ಬರ್ಲಿನ್ನಿನಿಂದ ಬಂದಿದ್ದ ನೂತನ ರಾಯಭಾರಿಯೇ ಅಂದಿನ ವೈಶಿಷ್ಟ್ಯ. ಅದರಿಂದಾಗಿ ಬಿಸಿಬಿಸಿಯಾದ ರಾಜತಾಂತ್ರಿಕ ಸಮಾಚಾರವನ್ನು ಅತಿಥಿಗಳು ತಿಳಿಯಲನುಕೂಲವಾಯಿತು. ಆ ಸಮಾಚಾರದ ಪ್ರಕಾರ ಚಕ್ರವರ್ತಿ ಅಲೆಕ್ಸಾಂಡರ್ ಪೋಟ್ಸ್‌ಡಮ್ ನಗರಕ್ಕೆ ಹೋಗಿದ್ದನು. ಮನುಕುಲದ ಶತ್ರುವಿಗೆ ವಿರುದ್ಧವಾಗಿ ನ್ಯಾಯವನ್ನೆತ್ತಿ ಹಿಡಿಯುವ ಸಲುವಾಗಿ ಅವನು ಪ್ರಷ್ಯದ ಸಾರ್ವಭೌಮನೊಡನೆ ಸುಭದ್ರ ಸ್ನೇಹ

ಬಾಂಧವ್ಯವನ್ನು ಕುದುರಿಸಲು ಕೃತಸಂಕಲ್ಪನಾಗಿದ್ದನು. ಪಿಯುರಿಯನ್ನು ಸ್ವಾಗತಿಸಿದಾಗ ಅನ್ನಾಳ ಮುಖದ ಮೇಲೆ ದುಮ್ಮಾನದ ನೆರಳು ಸುಳಿಯುತ್ತಿತ್ತು. ಅವನ ತಂದೆ ಶ್ರೀಮಂತ ಬೆಜುಖೋವನ ಮರಣವೇ ಅದಕ್ಕೆ ಕಾರಣವಾಗಿತ್ತು. ಅವಳು ಮಾತ್ರವಲ್ಲ, ಅತಿಥಿ ಗಳೆಲ್ಲರೂ ಅವನ ಬಳಿ ಹೋಗಿ ತಮ್ಮ ಸಂತಾಪವನ್ನು ವ್ಯಕ್ತಪಡಿಸುತ್ತಿದ್ದರು. ಇದರಿಂದ ಪಿಯುರಿ ಸಂತೃಪ್ತನಾದನು. ತನ್ನ ದಿವಾನಖಾನೆಯಲ್ಲಿ ಅನ್ನಾ ಬೇರೆಬೇರೆ ಗುಂಪುಗಳನ್ನು ವಿಶಿಷ್ಟ ಕೌಶಲದಿಂದ ವಿಂಗಡಿಸಿದಳು. ರಾಜಕುಮಾರ ವಸಿಲಿ ಮತ್ತು ಸೇನಾನಾಯಕ ರಿದ್ದ ದೊಡ್ಡ ಸಮೂಹಕ್ಕೆ ರಾಯಭಾರಿಯೊಡನೆ ಮಾತುಕತೆಯಾಡುವ ಅವಕಾಶವಿತ್ತು. ಮತ್ತೊಂದು ಗುಂಪು ಚಹ ಮೇಜಿನ ಸುತ್ತ ನೆರೆದಿತ್ತು. ದೊಡ್ಡ ಗುಂಪಿನಲ್ಲಿರಬೇಕೆಂಬುದು ಪಿಯುರಿಯ ಬಯಕೆ. ಆದರೆ ಅನ್ನಾ ಬಿಡಬೇಕಲ್ಲ. ಯುದ್ಧರಂಗದಲ್ಲಿ ಸಹಸ್ರ ಸಹಸ್ರ ನೂತನಾದ್ಭುತ ಭಾವನೆಗಳು ಮಿಂಚುತ್ತಿದ್ದರೂ ಅವುಗಳನ್ನು ಕಾರ್ಯಗತಗೊಳಿಸಲು ಸಮಯಸಾಲದೆ ಚಡಪಡಿಸುವ ಸೇನಾಪತಿಯ ಭಾವೋದ್ರಿಕ್ತ ಸ್ಥಿತಿಯಲ್ಲಿದ್ದಳು ಅನ್ನಾ ಆ ಕ್ಷಣದಲ್ಲಿ. ಅವಳು ತನ್ನ ಬೆರಳಿಂದ ಪಿಯುರಿಯ ತೋಳು ಮುಟ್ಟಿ, 'ಸ್ವಲ್ಪ ನಿಲ್ಲಿ. ನಿಮಗಾಗಿ ಬೇರೆ ಏರ್ಪಾಡು ನಡಸಿದ್ದೇನೆ' ಎಂದು ನುಡಿದಳು.

ಅನಂತರ ಅವಳು ಹೆಲಿನ್ನಳ ಕಡೆಗೆ ಕಣ್ಣು ಮಿಟುಕಿಸಿ, ಮುಗುಳುನಗೆ ಬೀರಿದಳು. 'ಮಗು ಹೆಲೆನ್, ನನ್ನ ಚಿಕ್ಕಮ್ಮನ ಮೇಲೆ ಕರುಣೆಯಿಡು. ನೀನೆಂದರೆ ಅವಳಿಗೆ ಅಚ್ಚು ಮೆಚ್ಚು. ಹತ್ತು ನಿಮಿಷ ಅವಳ ಜತೆಯಲ್ಲಿರು. ನಿನಗೆ ಬೇಸರವಾಗಲಿಕ್ಕಿಲ್ಲ. ಈ ಶ್ರೀಮಂತ ರನ್ನು ಕರೆದರೆ ಬೇಡವೆನ್ನುವುದಿಲ್ಲ' ಎಂದಳು.

ಚೆಲುವೆ ಚಿಕ್ಕಮ್ಮನ ಬಳಿಗೆ ಹೋದಳು. ಕೆಲವು ಅಗತ್ಯವಾದ ಸೂಚನೆಗಳನ್ನು ನೀಡಲೆನ್ನುವಂತೆ ನೋಡುತ್ತ ಅನ್ನಾ ಪಿಯುರಿಯನ್ನು ತಡೆದು ನಿಲ್ಲಿಸಿದಳು. ಚೆಲುವೆ ಜಾರಿದ ದಾರಿಯ ಕಡೆಗೆ ಕಣ್ಣಾಗಿ 'ಅವಳು ಮನೋಹರವಾಗಿಲ್ಲವೆ? ಅವಳ ನಡೆಯೆಷ್ಟು ಚೆನ್ನ! ವಯಸ್ಸಿನಲ್ಲಿ ಕಿರಿಯವಳಾದರೂ ನಡೆನುಡಿಗಳ ಸೌಂದರ್ಯ ಗಾಂಭೀರ್ಯಗಳು ಹೇಳ ತೀರವು. ಅವಳ ಸುಸಂಸ್ಕೃತ ಹೃದಯವೇ ಸ್ಫೂರ್ತಿಯ ನೆಲೆ. ಅವಳ ಕೈ ಹಿಡಿದವನೇ ಭಾಗ್ಯಶಾಲಿ! ಲೌಕಿಕವಿವೇಕವಿಲ್ಲದ ಜನ ಸಹ ಅವಳ ಕೈಹಿಡಿದದ್ದಾದರೆ ಅವರು ಸಮಾಜ ದಲ್ಲಿ ಅತ್ಯುನ್ನತ ಸ್ಥಾನವನ್ನು ಅಲಂಕರಿಸುತ್ತಾರೆ. ನಿನಗೆ ಹಾಗನ್ನಿಸುವುದಿಲ್ಲವೆ? ನಾನು ನಿಮ್ಮ ಅಭಿಪ್ರಾಯ ತಿಳಿಯಬೇಕಾಗಿದೆ' ಎಂದವಳು ನುಡಿದು, ಪಿಯುರಿಗೆ ದಾರಿ ಬಿಟ್ಟಳು.

ಹೆಲೆನ್ನಳ ರೀತಿ ನೀತಿಗಳು ನಿಷ್ಕಳಂಕವಾಗಿದ್ದುವೆನ್ನುವ ವಿಷಯದಲ್ಲಿ ಪಿಯುರಿಗೆ ಸಂದೇಹವಿರಲಿಲ್ಲ. ಅನ್ನಾಳಿಗೆ ನೀಡಿದ ಉತ್ತರದಲ್ಲಿ ಅವನು ತನ್ನ ಅಭಿಪ್ರಾಯವನ್ನು ಪ್ರಾಮಾಣಿಕವಾಗಿ ಸ್ಪಷ್ಟಪಡಿಸಿದ್ದನು. ಅವಳ ಅಸಾಧಾರಣ ಸೌಂದರ್ಯವೂ, ಸಮಾಜ ದಲ್ಲಿರುವಾಗ ಘನತೆ ಮಾನಗಳ ಮೂಲಕ ಪ್ರಕಟವಾಗುತ್ತಿದ್ದ ಅವಳ ಅಪೂರ್ವ ಕೌಶಲವೂ ಅವಳನ್ನು ನೆನೆದಾಗಲೆಲ್ಲ ಅವನ ಕಣ್ಣುಂದೆ ಪ್ರತ್ಯಕ್ಷವಾಗುತ್ತಿದ್ದುವು.

ಚಿಕ್ಕಮ್ಮ ಆ ಇಬ್ಬರು ತರುಣ ತರುಣಿಯರನ್ನು ಪ್ರೀತಿಯಿಂದ ತನ್ನೆಡೆಗೆ ಬರಮಾಡಿ ಕೊಂಡಳು. ತಾನು ಹೆಲೆನ್ನಳಲ್ಲಿಟ್ಟಿದ್ದ ಪ್ರೀತಿವಿಶ್ವಾಸಗಳನ್ನು ತೋರಿಸಿಕೊಳ್ಳಲು ಇಷ್ಟ ವಿಲ್ಲದವಳಂತೆ ಕಂಡಳು. ಅನ್ನಾಳ ಬಗ್ಗೆ ಅಂಜಿದವಳಂತೆ ತೋರ್ಪಡಿಸಿಕೊಂಡಳು. ಆ ಹಿರಿಯದವರ ನಡುವೆ ತಾನೇನು ಮಾಡುವುದಿದೆಯೆಂದು ವಿಚಾರಿಸುವವಳಂತೆ ಅವಳು

ತಮ್ಮ ವಯಸ್ಸಿನ ಪ್ರಸ್ತಾಪವೆತ್ತಿದಾಗ ಎದುರಿನವರಿಂದ ಪ್ರತಿಕ್ರಿಯೆ ನಿರೀಕ್ಷಿಸುವುದು ಹೆಂಗಸರ ವಾಡಿಕೆ. ಅದರಿಂದಾಗಿ ಅವಳು ಮಾತು ತಡೆದಳು. 'ನೀವು ಮದುವೆಯಾಗುವುದಾದರೆ ಆ ವಿಚಾರವೇ ಬೇರೆ' ಎಂದವಳು ಒಂದೇ ನೋಟದಲ್ಲಿ ಅವರಿಬ್ಬರನ್ನು ನೋಡಿದಳು. ಪಿಯರಿ ಹೆಲೆನ್ನಳ ಕಡೆ ನೋಡಲಿಲ್ಲ. ಹೆಲೆನ್ನಳೂ ಅಷ್ಟೇ. ಆದರೆ ಅವಳ ಸಾನ್ನಿಧ್ಯವೇ ಅವನಿಗೆ ಆತಂಕಕಾರಿಯಾಗಿತ್ತು. ಅವನು ತನ್ನೊಳಗೆ ತಾನೆ ಏನೋ ಗೊಣಗಿಕೊಂಡನು. ಮುಖ ವಿವರ್ಣವಾಯಿತು.

ಮನೆಗೆ ಹಿಂದಿರುಗಿದ ನಂತರ ಬಹಳ ಹೊತ್ತಿನ ತನಕ ಅವನ ಕಣ್ಣಿಗೆ ನಿದ್ದೆ ಹತ್ತಲಿಲ್ಲ. ಸತ್ಕಾರ ಕೂಟದ ಘಟನೆಗಳು ಅವನ ಚಿತ್ತವನ್ನು ಕಲಕುತ್ತಿದ್ದುವು. ಏನಾಗಿತ್ತು? ಏನೂ ಇಲ್ಲ. ಮಗುವಾಗಿದ್ದಾಗಿನಿಂದ ಅವನು ಈ ಹೆಣ್ಣನ್ನು ನೋಡಿದ್ದ. ಯಾರೋ ಅವಳ ಚೆಲುವನ್ನು ಕುರಿತು ಪ್ರಸ್ತಾಪಿಸಲಾಗಿ, ಅವನು ಯಾವುದೋ ಜ್ಞಾನದಲ್ಲಿ 'ನಿಜ. ಅವಳು ಚೆನ್ನಾಗಿದ್ದಾಳೆ' ಎಂದು ನುಡಿದಿದ್ದ. ಆ ಘಟನೆಯೀಗ ಅವನ ನೆನಪಿಗೆ ಬಂತು. ಅವಳು ತನ್ನವಳಾಗಬಹುದೆಂಬುದನ್ನೂ ಅವನು ಅರಿತಿದ್ದ.

'ಆದರೆ ಅವಳು ಪೆದ್ದು. ನಾನೇ ಹಾಗೆ ಹೇಳಿದ್ದುಂಟು. ಅವಳು ಪ್ರಚೋದಿಸುತ್ತಿರುವ ರಾಗಭಾವಗಳಲ್ಲಿ ಅಶ್ಲೀಲತೆಯಿದೆ, ಪ್ರಮಾದವಿದೆ. ಅವಳ ಸೋದರ ಅನತೋಲನೇ ಅವಳನ್ನು ಪ್ರೀತಿಸಿದ್ದನಂತೆ. ಅವಳು ಸಹ ಅಷ್ಟೇ ಗಾಢವಾಗಿ ಅವನನ್ನು ಪ್ರೀತಿಸಿದ್ದನಂತೆ. ಅದು ಎಲ್ಲೆಲ್ಲೂ ಪ್ರಚಾರವಾಗಿತ್ತು. ಆ ಗುಲ್ಲಿನಿಂದಾಗಿ ಅವನನ್ನು ದೂರ ಕಳಿಸಬೇಕಾಯಿತು. ಹಿಪ್ಪೊಲೈಟ್ ಅವಳ ಸೋದರ....ರಾಜಕುಮಾರ ವಸಿಲಿ ಅವಳ ತಂದೆ....ಅದು ತಪ್ಪು....' ಎಂದವನು ಗುಣಿಸಿದನು. ಅವನ ಈ ಗುಣಾಕಾರ ಅಪೂರ್ಣವಾಗಿರುವಾಗಲೇ ನಗು ಬಂತು; ಅವನ ಆಲೋಚನಾಸೂತ್ರ ಬೇರೆ ದಾರಿ ಹಿಡಿದಿತ್ತು. ಅವಳ ಅಯೋಗ್ಯತೆಯನ್ನು ಕುರಿತು ಚಿಂತಿಸುತ್ತಿರುವಾಗಲೇ, ಅವಳು ಒಳ್ಳೆಯ ಗೃಹಿಣಿಯಾಗಬಲ್ಲಳೆ, ತನ್ನನ್ನು ಹೇಗೆ ಪ್ರೀತಿಸಬಹುದು, ಅವಳ ವರ್ತನೆಯಲ್ಲಿ ಬದಲಾವಣೆಯಾಗಬಹುದೆ, ತಾನವಳ ಬಗ್ಗೆ ಕಟ್ಟಿಕೊಂಡಿದ್ದ ಆಲೋಚನೆಗಳು, ಕೇಳಿಸಿಕೊಂಡಿದ್ದ ಸುದ್ದಿಗಳು ಸುಳ್ಳಾಗುತ್ತವೆಯೆ ಎಂದು ಕನಸು ಕಾಣುತ್ತಿದ್ದನು. ಅವಳು ರಾಜಕುಮಾರ ವಸಿಲಿಯ ಮಗಳೆಂಬುದನ್ನು ಮರೆತು ಧವಳ ವಸ್ತ್ರ ಮುಸುಕಿದ ಅವಳ ಇಡೀ ಶರೀರವನ್ನು ಚಿತ್ರಿಸಿಕೊಂಡನು. 'ಈ ಆಲೋಚನೆ ಮೊದಲೇ ಏಕೆ ಹೊಳೆಯಲಿಲ್ಲ?' ಎಂದವನು ಮಣಗುಟ್ಟಿದನು. 'ಅದೆಲ್ಲ ಅಸಾಧ್ಯ. ಈ ಮದುವೆಯಲ್ಲಿ ಸಹಜತೆಯಿಲ್ಲ; ಅದರಿಂದ ಗೌರವ ಪ್ರಾಪ್ತವಾಗುವಂತಿಲ್ಲ.' ಅವನು ಅವಳ ಹಿಂದಿನ ಮಾತು ನೋಟಗಳನ್ನು ಸ್ಮರಿಸಿಕೊಂಡನು. ತನ್ನ ಮನೆಯ ವಿಷಯುವೆತ್ತಿದ ಸಂದರ್ಭದಲ್ಲಿ ಅನ್ನಾ ಆಡಿದ ಮಾತುಕತೆಗಳನ್ನೂ, ಅವಳು ಹರಿಸಿದ ನೋಟಗಳನ್ನೂ ನೆನೆದುಕೊಂಡನು: ವಸಿಲಿ ಮತ್ತು ಇತರರು ನೀಡಿದ್ದ ಸಾವಿರಾರು ಸೂಚನೆಗಳನ್ನು ಸ್ಮರಿಸಿಕೊಂಡನು. ತನಗೆ ಪ್ರಮಾದನೆಂದು ತೋರಿದ, ತಾನು ಮಾಡಬಾರದ ಕೃತ್ಯವೊಂದು ತನ್ನ ಬೆನ್ನಡರುತ್ತಿತ್ತೆಂಬ ಶಂಕೆಯಿಂದ ಅವನು ತತ್ತರಿಸುತ್ತಿದ್ದನು. ಈ ದೃಢನಂಬಿಕೆ ಅವನ ಮನಸ್ಸಿನಲ್ಲಿ ರೂಪುಗೊಳ್ಳುತ್ತಿರುವಾಗಲೇ, ಅದರ ಮತ್ತೊಂದು ಮೂಲೆಯಲ್ಲಿ ಜಗತ್ತಿನ ಸ್ತ್ರೀ ಸೌಂದರ್ಯವೆ ಮೂರ್ತಿವೆತ್ತಂತಿದ್ದ ಅವಳ ಪ್ರತಿಮೆ ಉದ್ಭವವಾಗುತ್ತಿತ್ತು.

ಅಧ್ಯಾಯ ೨

ರಾಜಕುಮಾರ ವಸಿಲಿ ೧೮೦೫ರ ನವೆಂಬರ್ ತಿಂಗಳಲ್ಲಿ ಪರೀಕ್ಷಾ ಪ್ರವಾಸಕ್ಕಾಗಿ ನಾಲ್ಕು ಬೇರೆ ಬೇರೆ ಪ್ರಾಂತಗಳಿಗೆ ಹೋಗಬೇಕಾಗಿತ್ತು. ಉಪೇಕ್ಷೆಗೊಳಗಾಗಿದ್ದ ಕೃಷಿ ಕ್ಷೇತ್ರಗಳ ಪರಿಶೀಲನೆ ಅವನ ಪ್ರವಾಸದ ಗುರಿಗಳಲ್ಲೊಂದು. ತನ್ನ ಮಗ ಅನತೋಲನ ತುಕಡಿಯಿದ್ದದ್ದೇ ಅಲ್ಲಿ. ಅವನಿಗೆ ಹೆಣ್ಣು ಗೊತ್ತುಮಾಡುವ ಸಲುವಾಗಿ ರಾಜಕುಮಾರ ನಿಕೊಲಾಸ್ ಬಲ್ಕೋನ್‌ಸ್ಕಿಯ ಬಳಿಗೆ ಅವನನ್ನು ಕರೆದೊಯ್ಯುವುದು ಎರಡನೆಯ ಉದ್ದೇಶವಾಗಿತ್ತು. ನೂತನ ವ್ಯವಹಾರಗಳಿಗಾಗಿ ಮನೆ ಬಿಡುವ ಮುನ್ನ ಪಿಯರಿಯ ಸಂಬಂಧವಾದ ವಿಚಾರಗಳನ್ನು ನಿರ್ಧರಿಸಬೇಕಿತ್ತು. ಪಿಯರಿ ವಸಿಲಿಯ ಮನೆಯಲ್ಲಿ ಹಲವು ದಿನ ತಂಗಿದ್ದನು. ತಂಗಣೆಯ ಕಾಲದಲ್ಲಿ ಅವನು ಹೆಲೆನ್ನಳೊಡನೆ ವಿಚಿತ್ರವಾಗಿ, ಭಾವೋದ್ರೇಕಯುಕ್ತನಾಗಿ, ಅವಿವೇಕದಿಂದ ವರ್ತಿಸಿದ್ದನು. ಆದರೂ ಅವನು ಮದುವೆಯ ವಿಷಯ ಎತ್ತಿರಲಿಲ್ಲ.

'ಇದೆಲ್ಲ ಸರಿಯೆ. ಆದರೆ ಈ ವಿಷಯ ನಿರ್ಣಯವಾಗಲೇಬೇಕು' ಎಂದು ವಸಿಲಿ ಒಂದು ದಿನ ಬೆಳಗಿನ ಜಾವ ದುಃಖದಿಂದ ನಿಡುಸುಯ್ದನು. ತನ್ನಿಂದ ಉಪಕೃತನಾಗಿಯೂ ಈ ವಿಷಯದಲ್ಲವನು ಸರಿಯಾಗಿ ವರ್ತಿಸದಿದ್ದುದಕ್ಕಾಗಿ ವಸಿಲಿ ತುಂಬ ಬೇಸರಗೊಂಡಿದ್ದನು. 'ಯೌವನ, ಹುಡುಗಾಟಿಕೆ....ದೇವರು ಅವನನ್ನು ಕಾಪಾಡಲಿ' ಎಂದವನು ತನ್ನ ಔದಾರ್ಯವನ್ನು ನೆನೆದು ಹರ್ಷಗೊಳ್ಳುತ್ತಿದ್ದನು. 'ಆದರೆ ಈ ವಿಷಯಕ್ಕೆ ನಾಂದಿ ಹಾಡಲೇ ಬೇಕು. ನಾಡಿದ್ದು ಲೇಲ್ಯಾ (ಹೆಲೆನ್ನಳ ಮುದ್ದು ಹೆಸರು)ಳ ನಾಮಕರಣದ ದಿನ. ಮೂರ್‍ನಾಲ್ಕು ಮಂದಿ ಗೆಳೆಯರನ್ನು ಆಹ್ವಾನಿಸುತ್ತೇನೆ. ತನ್ನ ಕರ್ತವ್ಯವನ್ನವನು ಅರ್ಥಮಾಡಿಕೊಳ್ಳಲಿಲ್ಲ, ಮುಂದೆ ನನ್ನದಾರಿ ಇದ್ದೇ ಇದೆ. ಮುಂದಿನ ವ್ಯವಹಾರ ನನಗೆ ಸಂಬಂಧಿಸಿದ್ದು. ನಾನವಳ ಅಪ್ಪ.'

ಅನ್ನಾ ಪಾಲ್‌ಲೋವ್ನಾಳ ಸತ್ಕಾರ ಕೂಟ ಮುಗಿದು ಆರು ವಾರಗಳಾಗಿದ್ದುವು. ಒಂದು ರಾತ್ರಿ ಪಿಯರಿಯ ಕಣ್ಣಿಗೆ ನಿದ್ದೆ ಹತ್ತಿರಲಿಲ್ಲ. ಹೆಲೆನ್ನಳನ್ನು ಮದುವೆಯಾಗುವುದರಿಂದ ವಿಪತ್ತೊದಗುತ್ತದೆಂದೂ, ಅವಳಿಂದ ಪಾರಾಗುವ ಸಲುವಾಗಿ ಬೇಗ ಹೊರಡಬೇಕೆಂದೂ ಅವನು ನಿರ್ಧರಿಸಿದನು. ನಿರ್ಧಾರ ತೆಗೆದುಕೊಂಡ ನಂತರವೂ ಅವನು ವಸಿಲಿಯ ಮನೆ ಬಿಟ್ಟಿರಲಿಲ್ಲ. ಆ ಹೊತ್ತಿಗಾಗಲೇ ಜನ ಅವರಿಬ್ಬರ ಸಂಬಂಧದ ಬಗ್ಗೆ ಆಡಿಕೊಳ್ಳಲಾರಂಭಿಸಿದ್ದರು. ಆ ಕಾರಣದಿಂದಾಗಿ ಅವನು ಅವಳಿಂದ ಬಿಡುಗಡೆ ಹೊಂದುವಂತಿರಲಿಲ್ಲ. ಅವಳ ಸಂಬಂಧ ಭೀಕರವಾಗಿ ಕಂಡರೂ ಅವಳೊಡನೆ ಕೂಡಿ ಬಾಳಬೇಕಾಗಿತ್ತು. ವಸಿಲಿ ಎಂದೂ ಸತ್ಕಾರ ಕೂಟಗಳನ್ನು ಏರ್ಪಡಿಸಿದವನಲ್ಲ. ಪಿಯರಿಯ ತಂಗಣೆ ಕಾಲದಲ್ಲಂತು ಅವನು ಹೆಚ್ಚುಕಡಮೆ ಪ್ರತಿ ದಿನವೂ ಸತ್ಕಾರ ಕೂಟಗಳನ್ನು ವ್ಯವಸ್ಥೆಗೊಳಿಸುತ್ತಿದ್ದನು. ಪಿಯರಿ ಆ ಕೂಟಗಳಿಂದ ದೂರವಿರುವಂತಿರಲಿಲ್ಲ. ದೂರವಿದ್ದಿದ್ದರೆ ಪ್ರತಿಯೊಬ್ಬರಿಗೂ ಅಸಮಾಧಾನವಾಗುತ್ತಿತ್ತು, ಸತ್ಕಾರಕೂಟದ ಸಂತೋಷ ನಷ್ಟವಾಗುತ್ತಿತ್ತು. ವಸಿಲಿ ಮನೆಯಲ್ಲಿದ್ದಾಗ ಬಹಳ ಅಪರೂಪವಾಗಿ ಪಿಯರಿಯ ಕೈಹಿಡಿದುಕೊಂಡು ಅಡ್ಡಾಡುತ್ತಿದ್ದನು; ಒಮ್ಮೊಮ್ಮೆ ಮುತ್ತಿಕ್ಕಲೆಂದು ತನ್ನ ಸುಕ್ಕುಗಟ್ಟಿದ, ನುಣುಪಾಗಿ ಹಜಾಮತಿಕೆ ಮಾಡಿದ ಕೆನ್ನೆಯನ್ನು ಅವನ ಮುಂದೆ

ಒಡ್ಡುತ್ತಿದ್ದನು. 'ನಾಳೆಯ ತನಕ' ಅಥವಾ, 'ರಾತ್ರಿ ಭೋಜನಕ್ಕೆ ಕೂಡೋಣ, ಇಲ್ಲ ವಾದರೆ ನಾನು ನಿಮ್ಮನ್ನು ನೋಡಲಿಕ್ಕಾಗುವುದಿಲ್ಲ.' ಅಥವಾ 'ನಾನು ನಿಮಗೋಸ್ಕರ ವಾಗಿಯೇ ನಿಂತಿದ್ದೇನೆ' ಎಂದು ತನಗೆ ತೋಚಿದಂತೆ ನುಡಿಯುತ್ತಿದ್ದನು. ಹಾಗೆಲ್ಲ ನುಡಿದಾಗ ಅವನನ್ನು ನಿರಾಶೆಗೊಳಿಸಬಾರದೆಂದು ಪಿಯರಿ ಯೋಚಿಸುತ್ತಿದ್ದನು. 'ನಾನವಳನ್ನು ಅರ್ಥಮಾಡಿಕೊಂಡು, ಒಂದು ನಿರ್ಧಾರಕ್ಕೆ ಬರಬೇಕಾಗಿದೆ. ನಾನವಳನ್ನು ಹಿಂದೆ ತಪ್ಪಾಗಿ ತಿಳಿದೆನೆ? ಇಂದೊ? ಅವಳು ಅವಿವೇಕಿಯಲ್ಲ. ಅವಳು ಬಹು 'ಸೊಗ ಸಾದ ಹೆಣ್ಣು' ಎಂದವನು ಪ್ರತಿನಿತ್ಯ ತನಗೆ ತಾನೆ ಹೇಳಿಕೊಳ್ಳುತ್ತಿದ್ದನು. 'ಅವ ಳೆಂದೂ ತಪ್ಪು ಮಾಡುವುದಿಲ್ಲ. ಯಾವಾಗಲೂ ತೂಕತಪ್ಪಿ ಮಾತಾಡುವುದಿಲ್ಲ. ಅವಳ ಮಾತು ಮಿತ, ಸರಳ, ಸುಸ್ಪಷ್ಟ. ಹೀಗಿರುವಾಗ ಅವಳು ಅವಿವೇಕಿ ಎನ್ನಲಾದೀತೆ? ಅವಳೆಂದೂ ಮುಖ ಗಂಟುಹಾಕಿಕೊಂಡವಳಲ್ಲ. ಆದ್ದರಿಂದ ಅವಳು ಕೆಟ್ಟವಳಲ್ಲ' ಎಂದು ತನ್ನಷ್ಟಕ್ಕೆ ತಾನೆ ಗೊಣಗಿಕೊಳ್ಳುತ್ತಿದ್ದನು. ಅವಳ ಜತೆಯಲ್ಲಿದ್ದಾಗಲೂ ಅವನಿಗೆ ಅದೇ ಯೋಚನೆ. ಅವನು ಮಾತಾಡಿಸಿದಾಗಲೆಲ್ಲ ಅವಳು ಚುಟಕದಲ್ಲಿ, ಆದರೆ ಉಚಿತವರಿತು ಉತ್ತರ ನೀಡುತ್ತಿದ್ದಳು. ಆ ಉತ್ತರದಲ್ಲಿ ಅವಳ ನಿರಾಸಕ್ತಿಯೂ ಎದ್ದುಕಾಣುತ್ತಿತ್ತು. ಎಲ್ಲಕ್ಕಿಂತ ಸ್ಪಷ್ಟವಾಗಿ ಅವಳ ಮೌನದೃಷ್ಟಿ ಮತ್ತು ಮಂದಹಾಸಗಳಲ್ಲಿ ಅವಳ ಸ್ವಪ್ರತಿಷ್ಠೆ ವಿಜೃಂಭಿಸುತ್ತಿದ್ದಂತೆ ಪಿಯರಿಗೆ ತೋರಿತು. ತನ್ನ ಮಂದಹಾಸದ ಮುಂದೆ ಸಕಲ ವಾದವಿವಾದಗಳು ನಿಷ್ಪ್ರಯೋಜಕವೆಂದವಳು ಬಗೆದಿದ್ದಳು.

ಅವಳು ನಕ್ಕಾಗ ಮುಖದಲ್ಲಿ ಕಾಂತಿ ಮುಕ್ಕುಳಿಸುತ್ತಿತ್ತು. ಆದರೆ ಪಿಯರಿಯ ಕಡೆಗೆ ಬೀರುತ್ತಿದ್ದ ಮಂದಹಾಸದಲ್ಲಿ ವಶೀಕರಣ ಶಕ್ತಿಯಿದ್ದಂತೆ ತೋರುತ್ತಿತ್ತು. ಪ್ರತಿ ಯೊಬ್ಬರೂ ಪಿಯರಿಯಿಂದ ಒಂದು ಮಾತನ್ನೋ, ಅಥವಾ ಪ್ರಣಯ ವ್ಯವಹಾರದಲ್ಲಿ ಒಂದು ಹೆಜ್ಜೆ ಪ್ರಗತಿಯನ್ನೋ ನಿರೀಕ್ಷಿಸುತ್ತಿದ್ದರು. ಇಂದಲ್ಲ ನಾಳೆ ಸೀಮಾರೇಖೆ ಯನ್ನು ದಾಟಬೇಕಾಗುತ್ತದೆನ್ನುವ ಅರಿವೂ ಅವನಿಗಿತ್ತು. ಆ ಅರಿವಿನ ಹಿಂದೆಯೇ ಘೋರ ಭೀಕರತೆ ಅವನ ಇಡೀ ವ್ಯಕ್ತಿತ್ವವನ್ನು ಹಿಡಿದಲುಗಿಸುತ್ತಿತ್ತು. ಆ ಒಂದೂವರೆ ತಿಂಗಳ ಅವಧಿಯಲ್ಲಿ ತಾನು ಭೀಕರ ರಸಾತಳದ ಕಡೆಗೆ ಜಾರುತ್ತಿದ್ದುದಾಗಿ ಸಾವಿರ ದೊಂದು ಸಲ ಅವನು ಭಾವಿಸಿಕೊಂಡಿರಬೇಕು. ಅಂಥ ಸಂದರ್ಭದಲ್ಲಿ 'ನಾನೇನು ಮಾಡುತ್ತಿದ್ದೇನೆ? ನನಗೀಗ ಬೇಕಾಗಿರುವುದು ಸ್ಥಿರ ಸಂಕಲ್ಪ. ಅದು ನನ್ನಲ್ಲಿಲ್ಲವೆ?' ಎಂದವನು ಒಳಗೊಳಗೆ ಗೊಣಗಿಕೊಳ್ಳುತ್ತಿದ್ದನು.

ಯಾವುದಾದರೂ ಒಂದು ತೀರ್ಮಾನಕ್ಕೆ ಬರಬೇಕೆಂದು ಅವನು ಆಶಿಸಿದ್ದುದು ನಿಜ. ಅವನಿಗೆ ಸಂಕಲ್ಪ ಸಾಮರ್ಥ್ಯವೂ ಇತ್ತು. ಆದರೆ ಪ್ರಕೃತ ವಿಷಯದಲ್ಲಿ ಮಾತ್ರ ಅವನ ಮನಸ್ಸು ಹಿಂಜರಿಯುತ್ತಿತ್ತು. ತಾವು ಮುಗ್ಧರೆಂಬ ಹಾಗೂ ದೋಷದೂರರೆಂಬ ಆತ್ಮಪ್ರತ್ಯಯವನ್ನು ಹೊಂದಿದ್ದಾಗ ಕೆಲವರು ತಮ್ಮ ಸಾಮರ್ಥ್ಯವನ್ನು ಪ್ರಕಟಪಡಿಸು ತ್ತಾರೆ. ಪಿಯರಿ ಆ ಗುಂಪಿಗೆ ಸೇರಿದವನು. ಅನ್ನಾಪಾವ್‌ಲೋವ್ನಾಳ ನಶ್ಯದ ಭರಣಿಯ ಪ್ರಸಂಗದಲ್ಲಿ ತಾನು ಕಪ್ಪಿತಸ್ಥನೆಂಬ ಭಾವನೆ ಅವನ ಸಂಕಲ್ಪಶಕ್ತಿಯನ್ನು ಉಡುಗಿಸಿತ್ತು.

ಹೆಲೆನ್ನಳ ನಾಮಕರಣೋತ್ಸವದ ದಿನ ಏರ್ಪಡಿಸಿದ್ದ ಸತ್ಕಾರ ಕೂಟ ತುಂಬ ಸಣ್ಣದಾಗಿತ್ತು. ಆ ಕೂಟದಲ್ಲಿದ್ದವರೆಲ್ಲ ಸ್ವಂತ ಜನರೇ. ಆ ತರುಣಿಯ ಹಣೆಬರಹ ಅಂದು ನಿಶ್ಚಯವಾಗುತ್ತದೆಂದು ನೆರೆದಿದ್ದವರೆಲ್ಲ ಬಗೆದರು. ಹಿಂದೆ ಬಹುರೂಪವತಿಯಾಗಿದ್ದಿರಬೇಕೆಂದು ತೋರುತ್ತಿದ್ದ, ಸ್ಥೂಲ ದೇಹಿಯೂ ಪ್ರಭಾವಶಾಲಿಯೂ ಆದ ರಾಜಕುಮಾರಿ ಕುರಾಗಿನ್ ಮೇಜಿನ ಅಗ್ರಭಾಗದಲ್ಲಿ ಕುಳಿತಿದ್ದಳು. ಅವಳ ಎರಡು ಪಾರ್ಶ್ವಗಳಲ್ಲಿ ಪ್ರಮುಖ ಅತಿಥಿಗಳಾದ ಅನ್ನಾಪಾವ್‌ಲೋವ್ನಾ ಶೇರರ್, ಒಬ್ಬ ವಯಸ್ಕ ಸೇನಾನಿ ಮತ್ತು ಅವನ ಹೆಂಡತಿ ಆಸೀನರಾಗಿದ್ದರು. ಮತ್ತೊಂದು ತುದಿಯಲ್ಲಿ ಅಪ್ರಮುಖ ಅತಿಥಿಗಳೂ ಕಿರಿಯರೂ ಮಂಡಿಸಿದ್ದರು. ಅವರ ಜತೆಯಲ್ಲಿ ಕುಟುಂಬದ ಇತರ ಜನರು ಪಿಯರಿ ಮತ್ತು ಹೆಲೆನ್ ಅಕ್ಕಪಕ್ಕದಲ್ಲಿ ಕುಳಿತಿದ್ದರು. ವಸಿಲಿ ಊಟ ಮಾಡುತ್ತಿರಲಿಲ್ಲ. ಅವನು ಹರ್ಷಚಿತ್ತನಾಗಿ, ಮೇಜಿನ ಸುತ್ತ ಅಡ್ಡಾಡುತ್ತ, ಸರದಿಯ ಮೇಲೆ ಅತಿಥಿಗಳ ಬಳಿ ಕುಳಿತಿರುತ್ತಿದ್ದನು. ಪಿಯರಿ ಮತ್ತು ಹೆಲೆನ್ನಳ ಕಡೆಗೆ ಲಕ್ಷ್ಯ ವಿಟ್ಟಂತೆ ತೋರ್ಪಡಿಸಿಕೊಳ್ಳದೆ, ಉಳಿದವರೊಡನೆ ಅವನು ಚಕ್ಕಂದವಾಡುತ್ತಿದ್ದನು. ಅವನ ಚಕ್ಕಂದದಿಂದಾಗಿ ಇಡೀ ಸಮೂಹ ಉತ್ಸಾಹದ ಊಟೆಯಾಗಿತ್ತು. ಮೋಂಬತ್ತಿಗಳು ಪ್ರಕಾಶಮಾನವಾಗಿ ಪ್ರಜ್ವಲಿಸುತ್ತಿದ್ದವು; ಬೆಳ್ಳಿಯ ಮತ್ತು ಸ್ಫಟಿಕದ ಪದಾರ್ಥಗಳಲ್ಲಿ ದೀಪ ಪ್ರತಿಫಲಿಸುತ್ತಿದ್ದುವು; ಸ್ತ್ರೀಯರ ವೇಷ ಭೂಷಣಗಳು ಹಾಗೂ ಗಂಡಸರ ಭುಜಕೀರ್ತಿಗಳು ಮಿರುಗುತ್ತಿದ್ದುವು. ಕಡುಗೆಂಪು ಬಣ್ಣದ ಪೋಷಾಕು ಧರಿಸಿದ ಮಾಣಿಗಳು ಸಡಗರದಿಂದ ಓಡಾಡುತ್ತಿದ್ದರು. ತಟ್ಟೆ, ಚಾಕು ಮತ್ತು ಗಳಾಸುಗಳ ಧಣ ಧಣ ಧ್ವನಿ ಹುರುಪಿನ ಸಂಭಾಷಣೆಯ ಅಸ್ಪಷ್ಟ ನಿಸ್ವನದಲ್ಲಿ ಬೆರಕೆಗೊಂಡಿತ್ತು. ಮೇಜಿನ ಒಂದು ತುದಿಯಲ್ಲಿದ್ದ ಮುಪ್ಪಿನ ಗೃಹಮಹತ್ತರನೊಬ್ಬ ಶ್ರೀಮಂತ ಮನೆತನದ ಮುದುಕಿಯೊಡನೆ ಸರಸವಾಡುತ್ತಿದ್ದನು; ತಾನವಳನ್ನು ಗಾಢವಾಗಿ ಪ್ರೀತಿಸುತ್ತಿದ್ದುದಾಗಿ ದೃಢಪಡಿಸುತ್ತಿದ್ದನು. ಮುದುಕಿ ಗಟ್ಟಿಯಾಗಿ ನಗುತ್ತಿದ್ದಳು. ಮತ್ತೊಂದು ತುದಿಯಲ್ಲಿ ಮೇರಿ ವಿಕ್ಟೊರೊವ್ನಾ ಎಂಬೊಬ್ಬ ಹೆಣ್ಣಿನ ದುರ್ದೈವೀ ಜೀವನದ ಕತೆ ಕೇಳಿಸುತ್ತಿತ್ತು. ಮಧ್ಯಬಿಂದುವಿನಲ್ಲಿದ್ದ ವಸಿಲಿಯಂತು ಪ್ರತಿಯೊಬ್ಬರ ಗಮನವನ್ನು ಸೆಳೆದಿದ್ದ. ಅವನು ವಿನೋದದ ಮಂದಹಾಸದಿಂದ ಹಿಂದಿನ ಬುಧವಾರ ನಡೆದ ಸಾರ್ವಭೌಮ ಸಚಿವಸಂಪುಟದ ಸಭೆಯ ನಡೆವಳಿಯನ್ನು ವಿವರಿಸುತ್ತಿದ್ದನು. ತನಗೆ ಚಕ್ರವರ್ತಿ ಅಲೆಕ್ಸಾಂಡರ್‌ನಿಂದ ಬಂದಿದ್ದ ಪ್ರಸಿದ್ಧ ಘೋಷಣೆಯನ್ನು ಪೀಟರ್ಸ್‌ಬರ್ಗಿನ ನೂತನ ಮಿಲಿಟರಿ ಆಡಳಿತಾಧಿಕಾರಿ ಸರ್ಜಿಯಸ್ ಕುಜ್‌ಮಿಚ್ ವ್ಯಾಜ್‌ಮೀತಿನೋವ್ ಸಂಪುಟದ ಮುಂದೆ ಓದಿದ್ದನು. ತಾನು ಎಲ್ಲ ಕಡೆಯ ಜನರಿಂದ ನಿಷ್ಠೆಯ ವಚನ ಪಡೆಯುತ್ತಿದ್ದುದಾಗಿಯೂ, ಪೀಟರ್ಸ್‌ಬರ್ಗ್ ಜನರ ನಿಷ್ಠೆಯ ಅಭಿವ್ಯಕ್ತಿಯಂತು ತನಗೆ ವಿಶೇಷ ಹರ್ಷವನ್ನುಂಟು ಮಾಡಿದ್ದುದಾಗಿಯೂ, ಅಂಥ ರಾಷ್ಟ್ರದ ನಾಯಕನಾಗಿರಲು ತನಗೆ ಹೆಮ್ಮೆಯಾಗಿದ್ದುದಾಗಿಯೂ, ಪ್ರಜೆಗಳ ಗೌರವಾದರಗಳನ್ನುಳಿಸಿಕೊಳ್ಳಲು ತಾನು ಪ್ರಯತ್ನಿಸುವುದಾಗಿಯೂ ಚಕ್ರವರ್ತಿ ತನ್ನ ಘೋಷಣೆಯಲ್ಲಿ ತಿಳಿಸಿದ್ದನು. 'ಸರ್ಜೀಯಸ್ ಕುಜ್‌ಮಿಚ್, ಎಲ್ಲ ಕಡೆಗಳಿಂದಲೂ ನನಗೆ ವರದಿ ಬರುತ್ತಿವೆ' ಎಂಬ ಮಾತುಗಳಿಂದ ಆ ಘೋಷಣೆ ಪ್ರಾರಂಭವಾಗಿತ್ತು.

'"ಸರ್ಜೆಯರ್ ಕುಜ್‌ಮಿಚ್" ಎಂದಿಷ್ಟೇ ಹೇಳಿ ಮುಗಿಸಿದರೋ ಅಥವಾ ಮುಂದೇ ನಾದರೂ ನಡೆಯಿತೋ ?' ಎಂದು ಮಹಿಳೆಯೊಬ್ಬಳು ಪ್ರಶ್ನಿಸಿದರು.

'ನಿಜ, ನಿಜ-ಕೂದಲಷ್ಟು ಮುಂದೆ ಅಲುಗಲಿಲ್ಲ' ಎಂದು ರಾಜಕುಮಾರ ವಸಿಲಿ ಉತ್ತರಿಸಿದನು. '"ಸರ್‌ಜೆಯರ್ ಕುಜ್‌ಮಿಚ್....ಎಲ್ಲ ಕಡೆಗಳಿಂದ....ಎಲ್ಲ ಕಡೆಗಳಿಂದ ....ಸರ್‌ಜೆಯರ್ ಕುಜ್‌ಮಿಚ್...." ಪಾಪ, ಆ ಬಡಪಾಯಿ ವ್ಯಾಜ್‌ಮೀತಿನೋವ್ ಮುಂದೆ ಒಂದಿಷ್ಟು ಜರುಗಲಿಲ್ಲ. ಅವನು ಘೋಷಣೆಯನ್ನು ಮತ್ತೆ ಮತ್ತೆ ಮೊದಲಿಂದ ಓದುತ್ತಿದ್ದನು. ಆದರೆ "ಸರ್‌ಜೇಯರ್" ಎಂಬ ಪದವನ್ನು ಉಚ್ಚರಿಸುವಾಗ ಅವನು ಬಿಕ್ಕಿ ಬಿಕ್ಕಿ ಅಳುತ್ತಿದ್ದನು, "ಕುಜ್‌ಮಿಚ್" ಎನ್ನುವಾಗ ಕಣ್ಣೀರು ಸುರಿಸುತ್ತಿದ್ದನು, "ಎಲ್ಲ ಕಡೆಗಳಿಂದ" ಎನ್ನುವಾಗ ಅವನಿಗೆ ಉಸಿರು ಕಟ್ಟಿದಂತಾಗುತ್ತಿತ್ತು. ಅಲ್ಲಿಂದ ಮುಂದೆ ಮಾತೇ ಹೊರಡುತ್ತಿರಲಿಲ್ಲ, ತನ್ನ ಕರವಸ್ತ್ರವನ್ನು ಕಣ್ಣಿಗೊತ್ತಿಕೊಳ್ಳುತ್ತಿದ್ದನು. ಮತ್ತೆ "ಸರ್‌ಜೆಯರ್ ಕುಜ್‌ಮಿಚ್ ಎಲ್ಲ ಕಡೆಗಳಿಂದ" ಎನ್ನುವಾಗ ಕಣ್ಣೀರು ಹರಿಯುತ್ತಿತ್ತು. ಕೊನೆಗೆ ಬೇರೆ ಯಾರಾದರೂ ಓದುವಂತೆ ಕೇಳಿಕೊಳ್ಳಲಾಗುತ್ತಿತ್ತು.

'ಕುಜ್‌ಮಿಚ್....ಎಲ್ಲ ಕಡೆಗಳಿಂದ....ಅನಂತರ ಕಣ್ಣೀರು' ಎಂದು ಯಾರೊ ಒಬ್ಬ ನಗುನಗುತ್ತ ಪುನರುಕ್ತಿಸಿದನು.

ಮತ್ತೊಂದು ತುದಿಯಲ್ಲಿದ್ದ ಅನ್ನಾಪಾವ್‌ಲೋವ್ನಾ, ತರ್ಜನೀ ಬೆರಳನ್ನೆತ್ತಿ ಸನ್ನೆಗೆಯ್ಯುತ್ತ 'ನಿರ್ದಯರಾಗಬೇಡಿ. ನಮ್ಮ ವ್ಯಾಜ್ ಮೀತಿನೋವ್ ಇದ್ದಾರಲ್ಲ, ಅವರು ತುಂಬ ಯೋಗ್ಯರು, ಶ್ರೇಷ್ಠ ವ್ಯಕ್ತಿ' ಎಂದು ಕೂಗಿಕೊಂಡಳು.

ಹೊಟ್ಟೆ ಬಿರಿಯುವ ತನಕ ಪ್ರತಿಯೊಬ್ಬರೂ ನಕ್ಕರು. ಅತಿಥಿಗಳು ಆಸೀನರಾಗಿದ್ದ ಮೇಜಿನ ಅಗ್ರಭಾಗದಲ್ಲಿ ಪ್ರತಿಯೊಬ್ಬರೂ ಅತ್ಯುತ್ಸಾಹದಲ್ಲಿದ್ದಂತೆ, ಹಲವಾರು ಭಾವೋದ್ರೇಕಗಳ ಪ್ರಭಾವಕ್ಕೊಳಗಾಗಿದ್ದಂತೆ ಕಾಣುತ್ತಿದ್ದರು. ಪಿಯುರಿ ಮತ್ತು ಹೆಲೆನ್ ಮಾತ್ರ ಮೇಜಿನ ಕೆಳಗೆ ಕುಸಿದರೋ ಎನ್ನುವಂತೆ, ಮೌನವಾಗಿ ಕುಳಿತಿದ್ದರು. ದಮನಿತ ಮಂದಹಾಸ ಅವರ ಮುಖಗಳ ಮೇಲೆ ಪ್ರಭಾವಳಿಯನ್ನು ನಿರ್ಮಿಸಿತ್ತು. ಅದು ಅವರ ಅಂತರ್ಭಾವನೆಗಳ ಹಾಗೂ ಲಜ್ಜೆಯ ಪ್ರತಿಬಿಂಬವಾಗಿತ್ತೇ ಹೊರತು, ಕುಜ್‌ಮಿಚ್‌ನ ಪ್ರಕರಣಕ್ಕೂ ಅದಕ್ಕೂ ಏನೇನೂ ಸಂಬಂಧವಿರಲಿಲ್ಲ. ಉಳಿದವರು ತಮ್ಮಷ್ಟಕ್ಕೆ ತಾವೆ ನಗುತ್ತಿದ್ದಂತೆ, ಗಳಹುತ್ತಿದ್ದಂತೆ, ತಮಾಷೆ ಮಾಡುತ್ತಿದ್ದಂತೆ ಕಂಡು ಬಂದರೂ, ಅವರು ವೈನ್‌ಅನ್ನೂ, ಭಕ್ಷ್ಯಗಳನ್ನೂ ಶೀತಲ ಪದಾರ್ಥಗಳನ್ನೂ ತಲ್ಲೀನತೆಯಿಂದ ಸವಿಯುತ್ತಿದ್ದಂತೆ ತೋರುತ್ತಿದ್ದರೂ, ಭಾವೀ ತರುಣ ದಂಪತಿಗಳ ಕಡೆಗೆ ಅವರು ನಿರ್ಲಕ್ಷ್ಯವಾಗಿದ್ದಂತೆ ಭಾಸವಾಗುತ್ತಿದ್ದರೂ ಸರ್‌ಜೆಯರ್ ಕುಜ್‌ಮಿಚ್‌ನ ಕತೆ, ನಗು, ತಿಂಡಿಗಳೆಲ್ಲ ಬರಿಯ ನೆವವೆಂದೂ, ಎಲ್ಲ ಅತಿಥಿಗಳ ಗಮನ ಪಿಯುರಿ ಮತ್ತು ಹೆಲೆನ್ನರ ಕಡೆಗೆ ಹರಿದಿತ್ತೆಂದೂ ಅವರ ಪ್ರಾಸಂಗಿಕ ದೃಷ್ಟಿಗಳಿಂದ ಅಭಿವ್ಯಕ್ತವಾಗುತ್ತಿತ್ತು. ಸರ್‌ಜೆಯರ್ ಕುಜ್‌ಮಿಚ್‌ನ ಗದ್ಗದವನ್ನು ವಸಿಲಿ ಅಣಕಿಸುತ್ತಿದ್ದಾಗಲೇ ಅವನ ದೃಷ್ಟಿ ಮಗಳ ಕಡೆಗೆ ಹರಿಯುತ್ತಿತ್ತು. ಅವನು ನಕ್ಕಾಗ ಅವನ ಮುಖಚರ್ಯೆಯಲ್ಲಿ 'ಅಹುದು....ಎಲ್ಲ ಸರಿಯಾಗಿದೆ. ಈ ದಿನ ನಿರ್ಣಯ ಅನಿವಾರ್ಯವಾಗಿದೆ' ಎಂಬ ಭಾವನೆ ಹುದುಗಿದ್ದಂತೆ ತೋರುತ್ತಿತ್ತು. 'ನಮ್ಮ ಪ್ರೀತಿಯ ವ್ಯಾಜ್‌ಮೀತಿನೋವ್'ನನ್ನು ಹಾಗೆಲ್ಲಾ ಅಣಕಿಸಕೂಡದೆಂದು

ಅನ್ನಾ ಪಾವ್‌ಲೋವ್ನಾ ವಸಿಲಿಗೆ ಎಚ್ಚರಿಕೆ ನೀಡಿದಳು ; ಪಿಯರಿಯ ಕಡೆಗೆ ಒಂದು ಕ್ಷಣ ದಿಟ್ಟಿ ಹರಿಸಿದಳು. ತನ್ನ ಭಾವೀ ಅಳಿಯನ ಮತ್ತು ಮಗಳ ಭವಿಷ್ಯ ಸುಖಮಯ ವಾಗಿರುತ್ತದೆಂಬ ಕಾರಣಕ್ಕಾಗಿ ಅವಳು ಕಣ್ಣುಗಳ ಮೂಲಕವೇ ತನ್ನನ್ನು ಅಭಿನಂದಿಸು ತ್ತಿದ್ದುದಾಗಿ ವಸಿಲಿ ಭಾವಿಸಿದನು. ತನ್ನ ಪಕ್ಕದಲ್ಲಿ ಕುಳಿತಿದ್ದ ಮುದುಕಿಯ ಗಳಾಸಿಗೆ ವೈನು ಸುರಿಯುತ್ತ ಹಿರಿಯ ರಾಜಕುಮಾರಿ ವ್ಯಥೆಯ ನಿಟ್ಟುಸಿರೆಳೆದಳು ; ತನ್ನ ಮಗಳ ಕಡೆಗೆ ಸಿಡುಕುನೋಟ ಹರಿಸಿದಳು. 'ಈ ತರುಣ ತರುಣಿಯರು ಶಾರೀರಕವಾಗಿ ಹಾಗೂ ಮಾನಸಿಕವಾಗಿ ಒಂದಾಗುವ ಸಮಯ ಸನ್ನಿಹಿತವಾಗಿರುವುದರಿಂದ, ನಮಗುಳಿದಿರುವ ಸುಖವೊಂದೇ ಒಂದು ; ಸಿಹಿ ವೈನನ್ನು ಸವಿಯುವುದೇ ಅದು. ಹೌದಲ್ಲವೆ ? ಗೆಳತಿ' ಎಂಬ ಭಾವನೆ ಅವಳ ನಿಟ್ಟುಸಿರಿನಲ್ಲಿ ಅಭಿವ್ಯಕ್ತವಾಗುತ್ತಿತ್ತು. ಪ್ರೇಮಿಗಳ ಹರ್ಷದೀಪ್ತ ಮುಖಗಳ ಕಡೆಗೆ ಕಣ್ಣು ಹಾರಿಸುತ್ತಿದ್ದ ರಾಜತಂತ್ರ ನಿಪುಣನೊಬ್ಬ 'ನಾನು ಮಾತಾಡುತ್ತಿರುವುದೆಲ್ಲ ಬರಿಯ ಹುಸಿ. ಸುಖವೆಂದರೆ ಅದು' ಎಂದು ಮನದಲ್ಲಿಯೆ ಮೆಲುಕುಹಾಕಿದನು.

ಕ್ಷುದ್ರವೂ ಅಮುಖ್ಯವೂ ಕೃತಕವೂ ಆದ ಮಾತುಕತೆಗಳ ನಡುವೆ ಸುಂದರ ಯುವಯುವತಿಯ ಪರಸ್ಪರಾಕರ್ಷಣೆಯ ಸರಳ ಮೋಹಕತೆಯೊಂದೇ ಪ್ರಧಾನವಾಗಿ ಕಾಣುತ್ತಿತ್ತು. ಈ ಮಾನವೀಯ ಭಾವನೆಯ ಮುಂದೆ ತಮಾಷೆಯ ಮಾತುಗಳು ಹುಸಿಯಾದುವು, ಸುದ್ದಿಗಳು ನೀರಸವಾದುವು, ಅವರ ಉತ್ಸಾಹ ಕೃತಕವಾಗಿ ಕಂಡಿತು. ಅತಿಥಿಗಳಲ್ಲಿ ಮಾತ್ರವಲ್ಲ, ಸೇವಕರಲ್ಲಿಯೂ ಇಂಥದೇ ಭಾವನೆ ಉದಯವಾಯಿತು. ಚೆಲುವೆ ಹೆಲೆನ್ನಳ ಆಕರ್ಷಕ ವದನದ ಕಡೆಗೆ ಹಾಗೂ ಕಾಂತಿಯುಕ್ತವೂ, ವಿಶಾಲವೂ, ಸಂತುಷ್ಟವೂ, ಆದರೆ ಚಿಂತಾಭರಿತವೂ ಆದ ಪಿಯರಿಯ ಮುಖದ ಕಡೆಗೆ ನೋಡುವಾಗ ಅವರು ತಂತಮ್ಮ ಕರ್ತವ್ಯಗಳನ್ನು ಮರೆಯುತ್ತಿದ್ದರು. ಎಲ್ಲ ಮೋಂಬತ್ತಿಗಳ ಬೆಳಕು ಆ ಎರಡು ಸಂತೃಪ್ತ ಮುಖಗಳಲ್ಲಿ ಕೇಂದ್ರೀಕೃತಗೊಂಡಂತೆ ಕಾಣುತ್ತಿತ್ತು.

ತಾನೊಬ್ಬನೇ ಆ ಇಡೀ ಕೂಟದ ಕೇಂದ್ರವಾಗಿದ್ದಂತೆ ಪಿಯರಿ ಭಾವಿಸಿದನು. ಇದರಿಂದಾಗಿ ತೃಪ್ತಿಯ ಜತೆಗೆ ವ್ಯಗ್ರತೆಯೂ ಅವನ ಮನವನ್ನಾಕ್ರಮಿಸಿಕೊಂಡಿತು. ಯಾವುದೋ ಉದ್ಯೋಗದಲ್ಲಿ ಪೂರ್ಣ ತಲ್ಲೀನನಾದವನಂತೆ ಅವನು ಕಾಣುತ್ತಿದ್ದನು. ಅವನಿಗೆ ಯಾವುದೂ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ, ಯಾವುದೂ ಸರಿಯಾಗಿ ಅರ್ಥ ವಾಗುತ್ತಿರಲಿಲ್ಲ. ಆಗೊಮ್ಮೆ ಈಗೊಮ್ಮೆ ವಾಸ್ತವ ಜಗತ್ತಿನ ಅಸಂಬದ್ಧವಾದ ಭಾವನಾನುಭವಗಳು ಅವನ ಮನಸ್ಸಿನಲ್ಲಿ ಅನಿರೀಕ್ಷಿತವಾಗಿ ಚಿಮ್ಮುತ್ತಿದ್ದುವು.

'ಈಗ ಎಲ್ಲ ಮುಗಿದಂತಾಗಿದೆ. ಇದೆಲ್ಲ ನಡೆದದ್ದು ಹೇಗೆ ? ಎಷ್ಟು ಬೇಗ ? ನನಗೀಗ ಹೊಳೆದಿದೆ, ಅವಳಿಗಾಗಿ ಅಲ್ಲ, ನನಗಾಗಿ ಮಾತ್ರವಲ್ಲ, ಇಲ್ಲಿರುವ ಪ್ರತಿ ಯೊಬ್ಬರೂ ಕಾರಣವಾಗಿ ಅದು ಅನಿವಾರ್ಯವಾಗಿ ಘಟಿಸಬೇಕಾಗಿದೆ. ಅದು ನಡೆದೇ ನಡೆಯುತ್ತದೆಂದು ಎಲ್ಲರೂ ಭರವಸೆಯಿಂದಿದ್ದಾರೆ. ನಾನವರನ್ನು ನಿರಾಶೆಗೊಳಿಸಲಾರೆ. ಅದು ಹೇಗಾಗಬಹುದು ? ನನಗೆ ಗೊತ್ತಿಲ್ಲ. ಅದಂತು ನಡೆದೇ ನಡೆಯುತ್ತದೆ' ಎಂದು ಪಿಯರಿ ತನ್ನ ಕಣ್ಣಿನ ಬಳಿಯಲ್ಲಿ ಕೋರೈಸುತ್ತಿದ್ದ ಬಾಹುಗಳ ಕಡೆಗೆ ದಿಟ್ಟಿ ಹರಿಸಿದನು.

ಅವನು ಇದ್ದಕ್ಕಿದ್ದಂತೆ ನಾಚಿಕೆಯಿಂದ ತಲೆತಗ್ಗಿಸಿದನು. ಕಾರಣವಂತು ಗೊತ್ತಿಲ್ಲ. ಪ್ರತಿಯೊಬ್ಬರ ಗಮನವನ್ನು ಸೆಳೆಯುವುದಾಗಲೀ, ಅದೃಷ್ಟವಂತನೆಂದು ಕರೆಸಿಕೊಳ್ಳುವುದಾಗಲೀ, ಹೆಲೆನ್ನಳನ್ನು ಪಡೆದ ಪ್ಯಾರಿಸ್ಸಿನೊಂದಿಗೆ ಸಮಮಾಡಿ ತನ್ನನ್ನು ಕಾಣುವುದಾಗಲೀ ಅವನ ಮನಸ್ಸಿಗೆ ಮುಜುಗರವುಂಟುಮಾಡುವ ಸಂಗತಿಗಳಾಗಿದ್ದುವು. 'ಇದೆಲ್ಲ ನಡೆಯುವಂಥದೇ' ಎಂದವನು ಸಮಾಧಾನ ತಂದುಕೊಂಡದ್ದೂ ಉಂಟು. 'ಮೇಲಾಗಿ ಈ ಘಟನೆ ನಡೆಯಲು ನಾನು ಹೊಣೆಗಾರನೆ? ಅದು ಪ್ರಾರಂಭವಾದದ್ದು ಹೇಗೆ? ನಾನು ಮಾಸ್ಕೋದಿಂದ ರಾಜಕುಮಾರ ವಸಿಲಿಯೊಡನೆ ಬಂದೆ. ಆಗ ವಿಚಾರದ ಸುಳಿವೂ ಇರಲಿಲ್ಲ. ಅಂದಮೇಲೆ ನಾನವರ ಮನೆಯಲ್ಲೇಕೆ ತಂಗಬಾರದು? ಅನಂತರ ಅವಳೊಡನೆ ಇಸ್ಪೀಟ್ ಆಡಿದೆ, ಅವಳ ಕೈಚೀಲ ಹಿಡಿದುಕೊಂಡು, ಅವಳೊಡನೆ ಹೊರಗೆ ಸುತ್ತಾಡಿದ್ದೂ ಉಂಟು. ಇದಿಷ್ಟೇ ಈ ಘಟನೆಗೆ ಕಾರಣವಾಯಿತೆ?' ಅವನೀಗ ನಿಶ್ಚಿತಾರ್ಥಕ್ಕೆ ಸಿದ್ಧವಾಗಿರುವ ಗಂಡಿನಂತೆ ಅವಳನ್ನು ನೋಡುತ್ತ, ಅವಳ ಇನಿದನಿಯನ್ನು ಕೇಳಿಸಿಕೊಳ್ಳುತ್ತ, ಅವಳ ಸಾನ್ನಿಧ್ಯಸುಖವನ್ನನುಭವಿಸುತ್ತ, ಅವಳ ಉಸಿರಿನ ಗಂಧವನ್ನು ಆಘ್ರಾಣಿಸುತ್ತ, ಅವಳ ಚಲನವಲನಗಳನ್ನೂ ಸೌಂದರ್ಯವನ್ನೂ ಕಣ್ಣಿಂದೀಂಟುತ್ತ, ಅವಳ ಬಳಿ ಕುಳಿತಿದ್ದಾನೆ. ಅಲ್ಲಿದ್ದವರೆಲ್ಲ ತನ್ನನ್ನೇ ನೋಡುತ್ತಿರಬೇಕಾದರೆ, ಅವಳಿಗಿಂತ ತಾನು ಅನುಪಮ ಸುಂದರನಾಗಿರಬೇಕೆಂದು ಇದ್ದಕ್ಕಿದ್ದಂತೆ ಅವನು ಭಾವಿಸಿಕೊಳ್ಳುತ್ತಾನೆ. ಸರ್ವಪ್ರಶಂಸೆಗೊಳಗಾಗಿರುವಾಗ ಎದೆಯುಬ್ಬಿದಂತೆ, ತಲೆ ನೆಟ್ಟಗೆ ನಿಂತಂತೆ, ತನ್ನ ಅದೃಷ್ಟಕ್ಕಾಗಿ ಆನಂದವುಕ್ಕಿದಂತೆ ಅವನಿಗೆ ಭಾಸವಾಗುತ್ತದೆ. ಎರಡನೆ ಸಾರಿ ತನ್ನನ್ನು ಸಂಬೋಧಿಸಿ ಏನನ್ನೋ ಪುನರುಕ್ತಿಸಿದಂತೆ ಪರಿಚಿತ ಧ್ವನಿ ಕೇಳಿಸುತ್ತದೆ. ಅನ್ಯಮನಸ್ಕನಾಗಿದ್ದ ಪಿಯರಿಗೆ ಅದೇನೂ ಅರ್ಥವಾಗುವುದಿಲ್ಲ.

'ಏನಪ್ಪ, ನೀವೆಷ್ಟು ಮರೆಗುಳಿಯಾಗಿದ್ದೀರಿ? ನಾನು ಕೇಳಿದ್ದು ನಿಮ್ಮನ್ನೇ. ಬಲ್ಕೋನ್‌ಸ್ಕಿಯಿಂದೇನಾದರೂ ಪತ್ರ ಬಂದಿತ್ತೆ?' ಎಂದು ವಸಿಲಿ ಮೂರನೆಯ ಸಾರಿ ಅದೇ ಪ್ರಶ್ನೆ ಉಕ್ತಿಸಿದನು.

ವಸಿಲಿ ನಕ್ಕ. ತನ್ನ ಮತ್ತು ಹೆಲೆನ್ನಳ ಕಡೆಗೆ ತಿರುಗಿಕೊಂಡು ಎಲ್ಲರೂ ನಗುತ್ತಿದ್ದುದನ್ನು ಪಿಯರಿ ಗಮನಿಸಿದ. 'ನಿಮಗೆಲ್ಲರಿಗೂ ಅದು ತಿಳಿದಿದ್ದರೆ ಏನಾಯ್ತು? ಪ್ರಪಂಚ ಮುಳುಗಿಹೋಗುವುದಿಲ್ಲ. ಅದು ನಿಜ ತಾನೆ' ಎಂದವನು ಹಸುಗೂಸಿನಂತೆ ನಕ್ಕನು. ಹೆಲೆನ್ ಸಹ ನಕ್ಕಳು.

'ನಿಮಗೆ ಅವರಿಂದ ಕಾಗದ ಬಂದದ್ದು ಯಾವಾಗ? ಅಲ್‌ಮೂತ್ಸ್‌ನಿಂದಲೆ?' ಎಂದು ವಸಿಲಿ ಮತ್ತೆ ಪ್ರಶ್ನಿಸಿದನು. ಯಾವುದೋ ವಿವಾದದ ಪರಿಹಾರಕ್ಕಾಗಿ ಆ ವಿಷಯ ಬೇಕೆಂಬಂತೆ ಅವನು ನಟಿಸಿದ್ದನು.

'ಅಂಥ ಕ್ಷುಲ್ಲಕ ವಿಷಯಗಳ ಬಗ್ಗೆ ಮಾತಾಡುವುದಿರಲಿ, ಆಲೋಚಿಸುವುದಾದರೂ ಹೇಗೆ?' ಎಂದು ಪಿಯರಿ ಒಳಗೊಳಗೆ ಗೊಣಗಿಕೊಂಡು, 'ಹೌದು, ಅಲ್‌ಮೂತ್ಸ್‌ನಿಂದ' ಎಂದು ನಿಟ್ಟುಸಿರೆಳೆದನು.

ಭೋಜನ ಮುಗಿದನಂತರ ಎಲ್ಲರೂ ದಿವಾನಖಾನೆಗೆ ನಡೆದರು. ಪಿಯರಿ ತನ್ನ ಜತೆಗಾತಿಯೊಂದಿಗೆ ಅವರನ್ನು ಹಿಂಬಾಲಿಸಿದನು. ಅತಿಥಿಗಳು ಬೀಳ್ಕೊಳ್ಳಲನುವಾದರು.

(ಮುಂದುವರಿಯುವುದು)

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಪ್ರೊ॥ ಪೋಲಂಕಿ ರಾಮಮೂರ್ತಿ
ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು
ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

2. ಡಾ॥ ಆರ್. ರಾಮಚಂದ್ರ, ಅಧ್ಯಾಪಕರು
ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

3. ದಿ॥ ಎಸ್. ವೆಂಕಟರಾವ್
C/o ಸರೋಜ ವೆಂಕಟರಾವ್
ಉಪ-ಮೇಯರ್, ಬೆಂಗಳೂರು ನಗರ ಕಾರ್ಪೊರೇಷನ್, ಬೆಂಗಳೂರು–೧

4. ಪ್ರೊ॥ ಸುಜನಾ, ಪ್ರಾಚಾರ್ಯರು
ಯುವರಾಜ ಕಾಲೇಜು, ಮೈಸೂರು–೫೭೦ ೦೦೫

5. ಕೆ. ವೆಂಕಟರಾಮಪ್ಪ
ಸಿ. ಎಚ್. 29, ಬಾಲಕೃಷ್ಣರಾವ್ ರಸ್ತೆ, ಚಾಮರಾಜಪುರಂ
ಮೈಸೂರು–೫೭೦ ೦೦೪

6. ಜಿ. ಬ್ರಹ್ಮಪ್ಪ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

7. ರಾ. ವೆಂ. ಶ್ರೀನಿವಾಸಮೂರ್ತಿ
ನಂ. 183, 13ನೇ ತಿರುವು, ಜಯನಗರ, ಮೈಸೂರು–೫೭೦ ೦೧೪

8. ಸುಮತೀಂದ್ರ ನಾಡಿಗ
ನಂ. 523, ಪದ್ಮನಾಭನಗರ, ಬೆಂಗಳೂರು–೫೬೦ ೦೭೦

9. ಜಿ. ಟಿ. ನಾರಾಯಣರಾವ್
"ಅತ್ರಿ", ನಂ. 8, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ,
ಮೈಸೂರು–೫೭೦ ೦೦೯


10. ಶಂಸ ಐತಾಳ
ನಂ. 616, 'ಚಂದನ', ಪಿ ಮತ್ತು ಟಿ ಬ್ಲಾಕ್, ಕುವೆಂಪುನಗರ,
ಮೈಸೂರು–೫೭೦ ೦೨೩

11. ಮಾಧವರಾವ್ ಮುಧೋಳ್
ನಂ. 1474, 7ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು–೫೭೦ ೦೦೪

12. ನಾಗರಾಜೇಗೌಡ
ಕಾರ್ಯಕ್ರಮ ಸಮನ್ವಯಾಧಿಕಾರಿ (ತರಬೇತಿ)
ರಾಜ್ಯ ಸಂಪನ್ಮೂಲ ಕೇಂದ್ರ, ಕೃಷ್ಣಮೂರ್ತಿಪುರಂ, ಮೈಸೂರು–೫೭೦ ೦೦೪

13. ಪ್ರೊ॥ ಎ. ಎನ್. ಮೂರ್ತಿರಾವ್
25, ಕಾಳಿದಾಸ ರಸ್ತೆ, ವಿ. ವಿ. ಮೊಹಲ್ಲ, ಮೈಸೂರು–೫೭೦ ೦೦೨

14. ಪ್ರೊ॥ ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨


ನಾ. ಕಸ್ತೂ